ಸಂವಾದ

ಮಾರ್ಚ್-೨೦೦೬

ರೂ.೨೦

ಗೇಣಿದಾರರ ಏಣಿಯಾಟ

ನೈಸರ್ಗಿಕ ಕೃಷಿಯ ಇತಿಮಿತಿಗಳು

ಚಳವಳಿಗಳ ಬಲಿಕೇಳುವ

ಜಾತಿ ಕಾರಣ!

ಸಂವಾದ

ಮಾಸ ಪತ್ರಿಕೆ

ಸಂಪುಟ ೪ ಸಂಚಿಕೆ ೫
ಮಾರ್ಚ್ ೨೦೦೬

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು.ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧
✆ ೨೩೨೮೭೯೪೩/೯೪೪೮೦ ೪೮೩೦೬
ಇ-ಮೇಲ್ : samvaada@hotmail.com

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ 080-23287943, 94480 48306
e- mail : samvaada@hotmail.com

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೩
❑ ಸಂಪಾದಕರೊಂದಿಗೆ ಸಂವಾದ ೪
❑ ಅಂತರಂಗ ೫
❑ ಬರುತ್ತಿದ್ದಾನೆ ಬುಷ್ ಎಂಬ ಭಯೋತ್ಪಾದಕ! ೬
○ ಶಿವಸುಂದರ್
❑ ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷಾ ಸ್ಥಾನ -ಒಂದು ಅವಲೋಕನ ೧೦
○ ನಾ.ದಿವಾಕರ್





❑ ಒಳಮೀಸಲಾತಿಯ ಒಳಗುಟ್ಟು ೧೫
○ ಡಾ॥ ಮ. ಪು. ಪೂರ್ಣಾನಂದ
❑ ನೈಸರ್ಗಿಕ ಕೃಷಿಯ ಇತಿ-ಮಿತಿಗಳು ೧೭
○ ಜಿ. ಶಿವನಂಜಯ್ಯ ಬಾಳೆಕಾಯಿ
❑ ಚಳುವಳಿಗಳ ಬಲಿಕೇಳುವ ಜಾತಿಕಾರಣ ೨೨
○ ಡಿ. ಎಸ್. ನಾಗಭೂಷಣ್
❑ ದಲಿತ ಸಾಹಿತ್ಯ: ಒಂದು ಹಿನ್ನೋಟ ೨೫
○ ಡಾ॥ ಮುಡ್ನಾಕೂಡು ಚಿನ್ನಸ್ವಾಮಿ
❑ ಗೇಣಿದಾರರ ಏಣಿಯಾಟ ೨೭
○ ಡಾ॥ ಎಚ್. ನಾಗವೇಣಿ



❑ ದೇವರಾಯ ೩೩
○ ಡಾ॥ ಸರಜೂ ಕಾಟ್ಕರ್
❑ ದಲಿತ್ ಡೈರಿ ೩೬
○ ಚಂದ್ರಭಾನ್ ಪ್ರಸಾದ್
❑ ಬುದ್ಧಾಯಣ ೪೨
○ ಸಿ.ಎಚ್.ರಾಜಶೇಖರ್

ಕವನಗಳು : ❑ ದೀಪಾಧಾರಿ ೧೨ ❑ ಎಲ್ಲಿ? ೧೬ ❑ ಕಸಬರಿಗೆ ೧೬ ❑ ಯುಗಾದಿ ೩೫
❑ ಗುಣಮುಖ ೪೦ ❑ ರತಿಗರಡಿ ಮುದುಕರ ಜೊತೆ ೪೧

ಮುಖಪುಟ ಕಲೆ: ಡೇವಿಡ್ ಗುಡೆ ಅವರ ಒಂದು ಶಿಲ್ಪ - ವಿನ್ಯಾಸ: ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)



ಹೊಸ ಭರವಸೆ

ಗೌರವಾನ್ವಿತ ಹೊನ್ನಾಪುರ ರವರಿಗೆ,

ಸಂಪಾದಕೀಯ, ವೈಚಾರಿಕ ಲೇಖನಗಳಿಂದ ಕೂಡಿದ 'ಸಂವಾದ' ಮಾಸ ಪತ್ರಿಕೆಯು ಜ್ಞಾನ ದೀವಿಗೆಯಾಗಿ ಮೂಡಿ ಬರುತ್ತಿದೆ. ರೋಗಸ್ತ ಸಮಾಜದ ಬಗ್ಗೆ ಚಿಂತಿಸುವಂತೆ ಪ್ರೇರೇಪಿಸುತ್ತ ನವ ಸಮಾಜದ ನಿರ್ಮಾಣಕ್ಕೆ ತನ್ನದೆ ಆದ ಕೊಡಿಗೆಯನ್ನು ನೀಡುತ್ತ ಸಾಗಿದೆ. ಲೇಖನಗಳು ಸಂಗ್ರಹಿಸಲು ಯೋಗ್ಯವಾಗಿದ್ದು ಹೊಸ ಹೊಸ ಭರವಸೆಗಳನ್ನು ಮೂಡಿಸಿ ಕನಸುಗಳ ಸಾಕಾರಕ್ಕೆ ದಾರಿ ದೀಪವಾಗಿದೆ.

–ಸುಭಾಷ್ ಮಾಡ್ರಹಳ್ಳಿ
ಚಾಮರಾಜನಗರ

ಶಾಸ್ತ್ರೀಯ ನಿರುದ್ಯೋಗಿಗಳ ಬಡಬಡಿಕೆ!

ಮಾನ್ಯರೇ,

ಶಿವಸುಂದರ್ ಅವರ 'ಕನ್ನಡ ಶಾಸ್ತ್ರೀಯ ಭಾಷೆ: ಪಟ್ಟವೋ? ಚಟ್ಟವೋ?' ಅತ್ಯಂತ ಸಮಯೋಚಿತ ಹಾಗೂ ಸಮರ್ಥ ವಿಶ್ಲೇಷಣೆಯ ಲೇಖನವಾಗಿದೆ. (ಸಂವಾದ ಫೆಬ್ರವರಿ ೨೦೦೬)

ಕನ್ನಡ ಭಾಷೆ ಸಂಸ್ಕೃತಿ ಹಾಗೂ ಇದೆಲ್ಲಕ್ಕಿಂತ ಮಿಗಿಲಾಗಿ ಕನ್ನಡ ಬದುಕನ್ನು ರೂಪಿಸುವಲ್ಲಿ ಏನೂ ಕೆಲಸ ಮಾಡದೆ ಕೇವಲ ಶಾಸ್ತ್ರೀಯ ಭಾಷೆ ಪಟ್ಟದಿಂದ ಮಾತ್ರ ಕನ್ನಡ ಉದ್ಧಾರವಾಗುತ್ತದೆ ಎಂದು ಬಡಬಡಾಯಿಸುತ್ತಿರುವ ನಿವೃತ್ತ ಸಾಹಿತಿಗಳ ನಿರುದ್ಯೋಗ ಮಾತ್ರ ಇದರಿಂದ ತಾತ್ಕಾಲಿಕವಾಗಿ ಪರಿಹಾರವಾಗಬಹುದೇ ವಿನಾ ಬೇರಾವುದೇ ಉಪಯೋಗವಿಲ್ಲ.

ಕನ್ನಡ ಜನರ ಭಾಷೆ ಮತ್ತು ಬದುಕಿ ಬೆಳೆಯುತ್ತಿರುವ ಭಾಷೆ. ಅದನ್ನು ಪೋಷಿಸಿ ಕಾಪಾಡುವ, ಹಾಗೂ ಅದು ಬದುಕಿನ ಅವಿಭಾಜ್ಯ ಅಂಗವಾಗುವಂತೆ–ಹೊಟ್ಟೆ–ಬಟ್ಟೆಗೆ ನೆರವಾಗುವಂತೆ ಮಾಡಬೇಕಾದ್ದು, ಈಗ ಮಾಡಬೇಕಾದ ಕೆಲಸ. ಇದರತ್ತ ಈ ನಮ್ಮ 'ಹೋರಾಟ'ಗಾರರೇಕೋ ತಲೆಯೇ ಕೆಡಿಸಿಕೊಳ್ಳುತ್ತಿಲ್ಲ.

ಯಾವುದೇ ಭಾಷೆ ತನ್ನ ಅಸ್ತಿತ್ವ ಕಳೆದು ಕೊಳ್ಳುವುದು ಅದು ಬದುಕಿಗೆ ಅನಗತ್ಯವಾದಾಗ ಮಾತ್ರ. ಇದು ಅತ್ಯಂತ ಸರಳವೂ–ಸ್ಪಷ್ಟವೂ ಆದಂತ ವಿಚಾರ. ಶಿವಸುಂದರ್ ಅವರೇ ಹೇಳುವಂತೆ ಕನ್ನಡ ಈಗ ಬದುಕಿಗೆ ಅನಿವಾರ್ಯವಾದಂತ ಭಾಷೆಯ ಸ್ಥಾನದಿಂದ ಪದಚ್ಯುತಿಯಾಗುವ ಅಪಾಯ ಎದುರಿಸುತ್ತಿದೆ. ಈ ಅಪಾಯದಿಂದ ಕನ್ನಡವನ್ನು ಪಾರು ಮಾಡಲು ಏನು ಮಾಡಬೇಕು ಎಂಬುದು ಮಾತ್ರ ಈಗ ಮುಖ್ಯವೇ ಹೊರತು ಶಾಸ್ತ್ರೀಯ ಅಶಾಸ್ತ್ರೀಯ ಎಂಬ ಕೂದಲು ಸೀಳುವ ಕೆಲಸವಲ್ಲ.

ತಮಿಳು, ಅಲ್ಲಿನ ಜನರ ಬದುಕಿಗೆ ಅನ್ನ ಒದಗಿಸುವ ಭಾಷೆಯಾಗಿದೆ. ಹಾಗಾಗಿಯೇ ಅಲ್ಲಿನ ರಾಜಕಾರಣಿಗಳು ಅದರ ಬೆಳವಣಿಗೆಗಾಗಿ ಏನೇನೋ ತಿಪ್ಪರಲಾಗ ಹಾಕುತ್ತಾರೆ. ಭಾಷೆ ಅಲ್ಲಿ ಓಟು ಕೊಡಿಸುತ್ತದೆ. ಅನ್ನ ನೀಡುತ್ತದೆ. ಆದರೆ ಕನ್ನಡ! ಪ್ರಾಮಾಣಿಕವಾಗಿ ಎದೆಮುಟ್ಟಿ ಹೇಳುವುದಾದರೆ, ಕನ್ನಡದ ಹೆಸರು ಹೇಳಿದರೆ ಇಲ್ಲಿ ಕರ್ನಾಟಕದಲ್ಲಿ ಓಟು ಸಿಕ್ಕುವುದಿಲ್ಲ. ಇನ್ನು ಹೊಟ್ಟೆಪಾಡಿನ ಗತಿ ಏನು? ಯಾವ ರಾಜಕಾರಣಿ ಯಾವ ಲಾಭಕ್ಕಾಗಿ ಕನ್ನಡದ ಏಳಿಗೆಗೆ ವಕಾಲತ್ತು ವಹಿಸುತ್ತಾನೆ? ಇದು ಅತ್ಯಂತ ಕ್ರೂರವೂ ಅಪಮಾನಕರವೂ ಆದ ವಿಚಾರ. ಆದರೆ ಸತ್ಯ! ಉಡಾಫೆಗಾಗಿ ಈ ಮಾತು ಬರೆಯುತ್ತಿಲ್ಲ.

ಸಂಪಾದಕರು ಜನವರಿ ಸಂಚಿಕೆಯಲ್ಲಿ ಬರೆದಂತೆ ಚಳುವಳಿಗಳಿಗೆ ತಮ್ಮ ಆದ್ಯತೆಗಳೇ ಗೊತ್ತಿಲ್ಲ. ಕನ್ನಡ ಚಳುವಳಿ ಕನ್ನಡಿಗರ ಬದುಕಿನ ಚಳುವಳಿಯಾದಾಗ ಮಾತ್ರ ಅದು ಬೆಳೆಯುತ್ತದೆ, ಬದುಕುತ್ತದೆ. ಆದರೆ ಸದ್ಯದ ಚಳುವಳಿ ಕನ್ನಡ ಜನರ ಚಳುವಳಿಯಾಗುತ್ತಿಲ್ಲ. ಕೆಲವೇ ಜನರ ಅನುಕೂಲ ಸಿಂಧು ಚಳುವಳಿಯಾಗಿ ಮಾತ್ರ ಕಾಣಿಸಿಕೊಳ್ಳುತ್ತಿದೆ. ಅದನ್ನು ಜನರ ಚಳುವಳಿಯನ್ನಾಗಿ ರೂಪಿಸಿದಾಗ ಮಾತ್ರ ಕನ್ನಡ ಉಳಿಯುತ್ತದೆ. ಇಲ್ಲದಿದ್ದರೆ ಅದು ಕೇವಲ 'ಶಾಸ್ತ್ರೀಯ ನಿರುದ್ಯೋಗಿಗಳ' ಬಡಬಡಿಕೆಯಾಗುತ್ತದೆ!

ಮಾನ್ಯ ದೇಜಗೌ, ಚಂಪಾ, ಮುಂತಾದ ಕನ್ನಡದ ಕ(ಇ)ಲಿಗಳು ಇದನ್ನು ಬೇಗ ಅರ್ಥ ಮಾಡಿಕೊಳ್ಳುವಂತಾಗಲೆಂದು ಹಾರೈಸುತ್ತೇನೆ.

–ಶಿವಕುಮಾರ ಆರಾಧ್ಯ,
ತುಮಕೂರು.

ಪತ್ರಗಳು

ಸಂಪಾದಕೀಯ ಎಂಬ ಚಾಟಿ!

ಮಾನ್ಯ ಇಂದೂಧರರೇ,

ನಿಮ್ಮ ಸಂಪಾದಕೀಯದ ಚಾಟಿ ಏಟಿಗೆ ನನಗಂತೂ ರೋಮಾಂಚನವಾಗುತ್ತಿದೆ. ಜಾತ್ಯತೀತ ಜನತಾದಳವೆಂಬ ದೇವೇಗೌಡರ ಪಕ್ಷ ಹಿಡಿದ ಅಧೋಗತಿ, ಮಗನನ್ನು ಮುಖ್ಯಮಂತ್ರಿ ಮಾಡಲು ದೇವೇಗೌಡ, ಹೆಣೆದ ವಂಚನೆಯ ಜಾಲ ಇವೆಲ್ಲವನ್ನು ಸಂಕ್ಷಿಪ್ತವಾಗಿ ಅತ್ಯಂತ ಸಮರ್ಥವಾಗಿ ಬಯಲು ಮಾಡಿದ್ದೀರಿ. ಅಧಿಕಾರ ಲಾಲಸೆ ಮತ್ತು ಅವಕಾಶವಾದಿತ್ವದ ಪರಮ ನೀಚತನಕ್ಕೆ ದೇವೇಗೌಡ–ಕುಮಾರಸ್ವಾಮಿ ಅವರಿಗಿಂತ ಬೇರೆ ಉತ್ತಮ ಉದಾಹರಣೆ ಸಿಗಲಾರದು ಎಂಬ ನಿಮ್ಮ ಮಾತು ಅಕ್ಷರಶಃ ಸತ್ಯ.

'ಸಂವಾದ' ತನ್ನ ಕೆಲಸವನ್ನು ಸಮರ್ಥವಾಗಿ ಮಾಡುತ್ತಿದೆ. ವೈಚಾರಿಕ ಸ್ಪಷ್ಟತೆಯೊಂದಿಗೆ ಮುನ್ನಡೆಯುತ್ತಿದೆ. ನನ್ನಂಥ ಸಾವಿರಾರು ಜನರಿಗೆ ಮಾರ್ಗ ದರ್ಶನ ನೀಡುತ್ತಿದೆ. ನಿಮಗೆ ಮತ್ತು ನಿಮ್ಮ ಪ್ರಯತ್ನಕ್ಕೆ ಬೆಂಬಲವಾಗಿ ನಿಂತಿರುವ 'ಸ್ಫೂರ್ತಿಧಾಮ'ಕ್ಕೆ ನನ್ನ ಅನಂತ ಧನ್ಯವಾದಗಳು.

–ಅರವಿಂದ ಕೆ,
ಬೆಂಗಳೂರು

ವಿನೂತನ ಪತ್ರಿಕೆ

ಮಾನ್ಯರೆ,

ಹೊಸ ವಿಷಯ, ವಿಚಾರಗಳನ್ನು ಹೊತ್ತ 'ಸಂವಾದ' ಮನೆಗೆ ಬಂದ ದಿನ ಟಿ.ವಿ. ಮಾತಿಗೆ ಪೂರ್ಣವಿರಾಮವೇ ಸರಿ. ಹೊಸ ಚಿಂತನೆಗಳು ಪತ್ರಿಕೆಯನ್ನು ವಿನೂತನವಾಗಿಸಿವೆ.

–ಜ.ನಾ. ತೇಜಶ್ರೀ, ಹಾಸನ

ಕಣ್ಣು ತೆರೆಸುವ 'ಡೈರಿ'

ಮಾನ್ಯ ಸಂಪಾದಕರೇ,

ಚಂದ್ರಭಾನ್ ಪ್ರಸಾದ್ ಅವರ ದಲಿತ ಡೈರಿ ಆಳವಾದ ಚಿಂತನೆ ಮತ್ತು ವಿಶ್ಲೇಷಣೆಗಳನ್ನು ಒಳಗೊಂಡು ಎಲ್ಲರ ಕಣ್ಣು ತೆರೆಸುವಂತಿದೆ. ಮೀಸಲಾತಿ ಮತ್ತು ಸರ್ಕಾರಿ ಸವಲತ್ತಿನ ಮೇಲಾಟದಲ್ಲಿ ಅತ್ಯಂತ ಹಿಂದುಳಿದ ವರ್ಗಗಳು (ಎಂ.ಬಿ.ಸಿ.-Most Backward Classes) ಅನುಭವಿಸುತ್ತಿರುವ ಸಂಕಷ್ಟವನ್ನು ಸಿಬಿಪಿ ಅತ್ಯಂತ ಸಮರ್ಥವಾಗಿ ಬಿಡಿಸಿಟ್ಟಿದ್ದಾರೆ. ಮಂಡಲ್ ವರದಿ ಜಾರಿಯಾದಾಗಿನಿಂದಲೂ ಉತ್ತರ ಭಾರತದಲ್ಲಿ ಹಿಂದುಳಿದ ಬಲಾಢ್ಯ ಶೂದ್ರ ಜಾತಿಗಳ ಅಟ್ಟಹಾಸ ಮಿತಿ ಮೀರಿದೆ. ಅತಿ ಹಿಂದುಳಿದವರ ಬೆಂಬಲ ಪಡೆದು, ಪ್ರಭುತ್ವವನ್ನು ಬ್ರಾಹ್ಮಣರಿಂದ ತಮ್ಮ ಕೈವಶ ಮಾಡಿಕೊಂಡ ಈ ಬಲಾಢ್ಯ ಹಿಂದುಳಿದವರು, ಅತಿ ಹಿಂದುಳಿದವರು ಮತ್ತು ದಲಿತರಿಗೆ ಅದರ ಪಾಲು ನೀಡುವಲ್ಲಿ ಅನುಸರಿಸುತ್ತಿರುವ ನೀತಿ ಮಾತ್ರ ಅತ್ಯಂತ ಘೋರವಾದದು. ಬಿಹಾರದ ಲಾಲು–ನಿತೀಶ್ ಮತ್ತು ಉ.ಪ್ರದೇಶದ ಮುಲಾಯಂ ಅವರುಗಳು ಈ ಘೋರ ಅತ್ಯಾಚಾರದ ಮುಂಚೂಣಿ ನಾಯಕರಾಗಿದ್ದಾರೆ. ಇಂಥವರ ದ್ರೋಹಕ್ಕೆ ಅತ್ಯಂತ ಹಿಂದುಳಿದವರು ಹಾಗೂ ದಲಿತರು ಸರಿಯಾದ ಪಾಠ ಕಲಿಸಲೇಬೇಕಾಗಿದೆ. ಬಿ.ಎಸ್.ಪಿ ನಾಯಕಿ ಮಾಯಾವತಿ ಈ ಕಾರ್ಯಕ್ಕೆ ಮುಂದಾಗಿದ್ದು, ನಿಶ್ಚಯವಾಗಿಯೂ ಈ ಕೆಲಸದಲ್ಲಿ ಯಶಸ್ವಿಯಾಗಲಿದ್ದಾರೆ.

ಚಂದ್ರ ಭಾನ್ ಪ್ರಸಾದರ ಅಂಕಣ ಇಡೀ ದೇಶದ ರಾಜಕೀಯ ಚಿಂತಕರಿಗೆ ಮಾರ್ಗದರ್ಶನವಾಗಲಿದೆ. ದಯವಿಟ್ಟು ಅವರನ್ನು ಬೆಂಗಳೂರಿಗೆ ಕರೆಸಿ, ಎಲ್ಲ ಜನಪರ ಸಂಘಟನೆಗಳಿಗೆ ಮಾರ್ಗದರ್ಶನ ಮಾಡಿಸಬೇಕೆಂದು ಕಳಕಳಿಯಿಂದ ವಿನಂತಿಸುತ್ತೇನೆ.

–ಸುರೇಶ ಕುಮಾರ್. ಆರ್,
ಮೈಸೂರು.

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ		
ರೂ.೧೦೦/-	ರೂ.೩೦೦/-	ರೂ.೫೦೦/-
ನೌಕರರು ಮತ್ತು ವೃತ್ತಿಪರರಿಗೆ		
ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ–ಸಂಸ್ಥೆಗಳು/ಉದ್ಯಮಿಗಳಿಗೆ		
ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಅಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಮಹಿಳಾ ಸಬಲೀಕರಣ: ಅಂಬೇಡ್ಕರ್ ದೃಷ್ಟಿಕೋನ
ಲೇ: ಡಾ॥ ಬಾಬುರಾವ್ ಮುಡಬಿ
ಬೆಲೆ: ರೂ.೧೪೦/-

ಹಿರಿಯ ಐ.ಎ.ಎಸ್ ಅಧಿಕಾರಿ ಬಾಬುರಾವ್ ಮುಡಬಿ ಅವರು ಮೈಸೂರು ವಿಶ್ವ ವಿದ್ಯಾಲಯ ಪಿ.ಎಚ್.ಡಿ ಪದವಿಗಾಗಿ ಸಿದ್ದಪಡಿಸಿದ ಸಂಶೋಧನಾ ಪ್ರಬಂಧ ವಿದು. ಮಹಿಳೆಯರ ಸಬಲೀಕರಣಕ್ಕಾಗಿ ಅಂಬೇಡ್ಕರ್ ಮಾಡಿದ ಪ್ರಯತ್ನಗಳ ವ್ಯಾಪಕ ಹುಡುಕಾಟ ಈ ಕೃತಿಯಲ್ಲಿದೆ. ಮಹಿಳಾ ಸಂಬಂಧ ಸಮಸ್ಯೆಗಳಿಗಾಗಿ ಅಂಬೇಡ್ಕರ್ ವ್ಯಕ್ತ ಪಡಿಸಿದ ಖಚಿತ ಅಭಿಪ್ರಾಯ, ವೈಚಾರಿಕ ದೃಷ್ಟಿಕೋನ ಹಾಗೂ ಅದಕ್ಕಾಗಿ ಅವರು ಹಾಕಿಕೊಳ್ಳಲು ಉದ್ದೇಶಿಸಿದ್ದ ಕಾರ್ಯಕ್ರಮಗಳನ್ನು ಕುರಿತು ವ್ಯಾಪಕವಾಗಿ ಇಲ್ಲಿ ಅಧ್ಯಯನ ಕೈಗೊಳ್ಳ ಲಾಗಿದೆ. ಅಂಬೇಡ್ಕರ್ ಅವರ ವೈವಿದ್ಯ ಮಯ ವ್ಯಕ್ತಿತ್ವ ತಿಳಿದುಕೊಳ್ಳಲು ಈ ಕೃತಿ ಸಹಕಾರಿ.

ಪ್ರಕಾಶಕರು: ಲಕ್ಷ್ಮಿ ಪ್ರಕಾಶನ,
ಸಂಜಯ ನಗರ, ಬೆಂಗಳೂರು-೯೪

ಹೆಜ್ಜೆ ಗುರುತು
ಲೇ: ವ್ಯಾಸರಾಯ ಬಲ್ಲಾಳ
ಬೆಲೆ: ರೂ, ೧೭೫/-

ಕನ್ನಡದ ಮಹತ್ವದ ಕಾದಂಬರಿಕಾರರಾದ ವ್ಯಾಸರಾಯ ಬಲ್ಲಾಳರ ಕಾದಂಬರಿ ಇದು. ಈ ಹಿಂದೆ ಪ್ರಕಟವಾದ ಅವರದೇ ಆದ 'ಹೆಜ್ಜೆ' ಕಾದಂಬರಿಯ ಮುಂದುವರೆದ ಭಾಗವೆಂಬಂತೆ ಹೆಜ್ಜೆ ಗುರುತು ಮೂಡಿಬಂದಿದೆ. ಲೇಖಕರೇ ಹೇಳುವಂತೆ "ಹೆಜ್ಜೆ ಕಾದಂಬರಿಯಲ್ಲಿ ಗಾಂಧೀಜಿ ಕಳೆದ ಶತಮಾನದ ಮೂವತ್ತರ ದಶಕದಲ್ಲಿ ದಕ್ಷಿಣ ಭಾರತಕ್ಕೆ ಬಂದ ನಂತರ ಘಟಿಸಿದ ಸಾಮಾಜಿಕ ಪರಿವರ್ತನೆಯ ಸನ್ನಿವೇಶಗಳು, ಮುಂದೆ ೧೯೪೮ ರಲ್ಲಿ ಅವರ ಹತ್ಯೆಯಾಗುವ ತನಕದ ರಾಜಕೀಯ ಇತಿಹಾಸ ಇಲ್ಲಿ ಚಿತ್ರಿಸಲ್ಪಟ್ಟಿವೆ.

ಪ್ರಕಾಶಕರು: ನವಕರ್ನಾಟಕ ಪ್ರಕಾಶನ ,
ಎಂಬೆಸಿ ಸೆಂಟರ್, ಬೆಂಗಳೂರು – ೧



ಕೆರ ಹೊತ್ತ ಬಸವ
ಲೇ: ರಾಮಪ್ಪ ಮಾದರ
ಬೆಲೆ: ರೂ.೨೫/-

ದಲಿತರ ಕೆರವನ್ನು ತಲೆಯ ಮೇಲೆ ಹೊತ್ತುಕೊಳ್ಳುವ ಮೂಲಕ ಸಾಂಸ್ಕೃತಿಕ ಬದಲಾವಣೆಗೆ ಕಾರಣನಾದ ಬಸವಣ್ಣನ ಆಶಯ ಬಿಂಬಿಸುವ ಸಂಕಲನ ಬೆಳೆಯುತ್ತಿರುವ ದಲಿತ ಕವಿಯೊಬ್ಬನ ಅಂತರಂಗದ ಕೂಗು. ಮೊದಲನೇ ಸಂಕಲನ ಎನ್ನುವ ಮಿತಿ ಇದ್ದರೂ, ಕವಿಗೆ ತನ್ನೊಳಗಿನ ಕಾವ್ಯ ಕಸುವನ್ನು ಕಲೆಯಾಗಿಸುವ ಇರಾದೆ ಇರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ದಲಿತ ಕಾವ್ಯದ ಸಿದ್ಧಮಾದರಿಯ ನಕಲಾಗುವ ಅಪಾಯ ಇಲ್ಲಿನ ಕವಿತೆಗಳಲ್ಲಿದ್ದರೂ, ಅದನ್ನು ಮೀರುವ ಆಶಯ ಕೂಡ ಎದ್ದು ಕಾಣುತ್ತದೆ.

ಪ್ರಕಶಕರು: ಜನವಿದ್ಯಾ ಪ್ರಸಾರಾಂಗ
ಹೂವಿನ ಹಡಗಲಿ.

ನೆನಪಿನ ಅಲೆಗಳು
ಲೇ: ಪ್ರೊ॥ ಜೆ.ಆರ್. ಲಕ್ಷ್ಮಣರಾವ್
ಬೆಲೆ: ರು, ೧೨೫/-

ಖ್ಯಾತ ವಿಜ್ಞಾನ ಲೇಖಕರಾದ ಲಕ್ಷ್ಮಣರಾವ್ ಅವರ ಜೀವನ ವೃತ್ತಾಂತ ಇದು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ರಸಾಯನಶಾಸ್ತ್ರದ ಪ್ರಧ್ಯಾಪಕರಾಗಿ ನಿವೃತ್ತಿಯಾಗಿರುವ ಲೇಖಕರ ಬದುಕಿನ ವಿವಿಧ ಹಂತಗಳನ್ನು ಇಲ್ಲಿ ವಿವರಿಸಲಾಗಿದೆ. ಎಂಟು ದಶಕಗಳಿಗೂ ಹೆಚ್ಚುಕಾಲದ ಜೀವನಾನುಭವಗಳನ್ನು ಪ್ರಾಮಾಣಿಕವಾಗಿ ಬದುಕಬೇಕೆಂಬ ಅಚಲ ವಿಶ್ವಾಸ-ಇವೆಲ್ಲವನ್ನೂ ಓದುಗರೊಂದಿಗೆ ಇಲ್ಲಿ ಹಂಚಿಕೊಳ್ಳಲಾಗಿದೆ. ಗೆಳೆಯರ, ಒಡನಾಡಿಗಳ ಸ್ನೇಹ-ಔದಾರ್ಯದ ಸವಿಯನ್ನು ಓದುಗರಿಗೂ ಉಣಬಡಿಸಿದ್ದಾರೆ.

ಪ್ರಕಾಶಕರು: ನವಕರ್ನಾಟಕ
ಎಂಬೆಸಿ ಸೆಂಟರ್, ಬೆಂಗಳೂರು – ೧

ಮುಳ್ಳಿನ ಬಾಯಿಯಲ್ಲಿ ಹೂ ನಾಲಿಗೆ
ಲೇ: ಜಂಬಣ್ಣ ಅಮರಚಿಂತ
ಬೆಲೆ: ರೂ.೩೩/-

ದಲಿತ-ಬಂಡಾಯ ಸಾಹಿತ್ಯ ಚಳವಳಿಯಲ್ಲಿ ಮೂಡಿಬಂದ ಕೆಲವೇ ಪ್ರಮುಖ ಕವಿಗಳಲ್ಲಿ ಜಂಬಣ್ಣ ಮುಖ್ಯರು. ಶುದ್ಧ ವಾಸ್ತವಿಕ ನೆಲೆಯಲ್ಲಿ ಕಾವ್ಯ ಸೃಷ್ಟಿಸುವ ಜಂಬಣ್ಣ ಗಜಲು ಕಾವ್ಯ ಸಂಪ್ರದಾಯವನ್ನು ಕನ್ನಡಕ್ಕೆ ಪರಿಚಯಿಸಿದ ಕೆಲವೇ ಮಂದಿಯಲ್ಲೂ ಒಬ್ಬರು. ಹಾಗಾಗಿ ಈ ಗಜಲುಗಳ ಸಂಕಲನ ಸದ್ಯದ ಕನ್ನಡ ಕಾವ್ಯ ಸಂದರ್ಭಕ್ಕೆ ಉತ್ತಮ ಕೊಡುಗೆಯಾಗಿದೆ. ಸಮಾಜ ನಿಷ್ಠ ಕವಿಯ ಲೇಖನಿಯಲ್ಲಿ ನೊಂದವರ ಕೊರಳ ದನಿಯಾಗಿ ಮೂಡಿಬಂದಿದೆ. ಆ ಮೂಲಕ ಕವಿ ಬಂಡಾಯ ಕಾವ್ಯದ ಮಾನ ಉಳಿಸಿದ್ದಾರೆ.

ಪ್ರಕಾಶಕರು: ಸುಮುಖ ಪ್ರಕಾಶನ
ಮಾಗಡಿ ರಸ್ತೆ, ಬೆಂಗಳೂರು -೫೬೦೦೨೩



ಹೊಸ ಪುಸ್ತಕ

ಮಾದಾರ ಸಂಸ್ಕೃತಿ ಮತ್ತು ಸಾಹಿತ್ಯ
ಲೇ: ಡಾ॥ ಮೈಲಹಳ್ಳಿ ರೇವಣ್ಣ
ಬೆಲೆ: ರೂ.೩೦೦/-

ನಾಡಿನ ಪ್ರಾಚೀನ ಜನಾಂಗವಾದ ಮಾದಾರ ಜನಾಂಗ ಸಂಸ್ಕೃತಿ-ಸಾಹಿತ್ಯ ಕುರಿತ ಸಂಶೋಧನ ಕೃತಿ ಇದಾಗಿದ್ದು, ಇಡೀ ಜನಾಂಗದ ಬಗ್ಗೆ ಅಧಿಕೃತ ಎನ್ನಬಹುದಾದಷ್ಟು ನಿಖರವಾಗಿ ಮೂಡಿಬಂದಿದೆ. ಅವಿಭಜಿತ ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಸಂಶೋಧನೆ ನಡೆಸಲಾಗಿದ್ದು, ಮಾದಾರ ಜನಾಂಗದ ಮೂಲ ಬೇರುಗಳನ್ನು ಇಲ್ಲಿ ಗುರುತಿಸಲಾಗಿದೆ. ಅಸ್ಪೃಶ್ಯ ಜನಾಂಗದಲ್ಲಿ ಅತ್ಯಂತ ಹಿಂದುಳಿದ ಮಾದಿಗ ಸಮುದಾಯದ ಕಲೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಬದುಕಿನ ದಾಖಲೆಯಾಗಿ ಇದು ಉತ್ತಮ ಕೊಡಗೆ.

ಪ್ರಕಾಶಕರು: ರಾಜ್ ಪ್ರಕಾಶನ,
ಬನ್ನಿ ಮಂಟಪ, ಮೈಸೂರು-೫೭೦೦೧೫.



ಸಂಪಾದಕೀಯ

ಪಾಳೇಗಾರಿಕೆ, ಪುರೋಹಿತ ಶಾಹಿ...

ಕರ್ನಾಟಕದಲ್ಲೀಗ ಜಾತ್ಯತೀತ ಜನತಾದಳ ಮತ್ತು ಭಾರತೀಯ ಜನತಾ ಪಕ್ಷದ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಎಲ್ಲೆಂದರಲ್ಲಿ ಪೂಜೆ-ಹೋಮಗಳು ನಡೆಯುತ್ತಿವೆ. ಪುರೋಹಿತರಿಗಂತೂ ಕೈ ತುಂಬಾ ಕೆಲಸ, ಜತೆಗೆ ಜೋತಿಷಿಗಳು-ಮಂತ್ರವಾದಿಗಳು-ಮಾಟ ಮಾಡುವವರು ಎಲ್ಲರಿಗೂ ಹಬ್ಬ. ಎಲ್ಲ ಮಠ-ಮಂದಿರಗಳಲ್ಲಿ ವಿಶೇಷ ಪೂಜೆ, ಪ್ರಾರ್ಥನೆ. ಒಟ್ಟಾರೆ ಹಿಂದೆಂದೂ ಅಧಿಕಾರ ರಾಜಕಾರಣದಲ್ಲಿ ಕಾಣದ ಸಮೂಹ ಸನ್ನಿ ಈಗ ಆರಂಭವಾಗಿದೆ.

ಹಿಂದೆ ಆಡಳಿತಾರೂಢರಿಗೆ ಇಂಥ ಆಚರಣೆಗಳಲ್ಲಿ ನಂಬಿಕೆ ಇರಲಿಲ್ಲವೆಂದಲ್ಲ. ಅವರಿಗೆ ಕೆಲವಾದರೂ ಸಾರ್ವಜನಿಕ ಜವಾಬ್ದಾರಿಗಳಿದ್ದವು. ಭಾರತದ ಸಾರ್ವಭೌಮತ್ವಕ್ಕೆ, ಸಂವಿಧಾನಕ್ಕೆ, ಸಾರ್ವಜನಿಕ ಹಿತಕ್ಕೆ ವಿರುದ್ಧವಾದ ಕೆಲಸವನ್ನು ಮಾಡಲು ಕನಿಷ್ಠ ಬಹಿರಂಗವಾಗಿಯಾದರೂ ಹಿಂಜರಿಯುತ್ತಿದ್ದರು. ಪೂಜೆ-ಆಚರಣೆ ಇವುಗಳನ್ನೆಲ್ಲ ಖಾಸಗಿಯಾಗಿ ಮಾಡಿಕೊಳ್ಳುತ್ತಿದ್ದರು. ಭಾರತದಲ್ಲಿ ಕೇವಲ ಹಿಂದುಗಳು ಮಾತ್ರವಲ್ಲ ಎಲ್ಲ ನಂಬಿಕೆಯ-ಎಲ್ಲ ಧರ್ಮಗಳ ಜನರು ವಾಸಿಸುವುದು ಅವರಿಗೆ ತಿಳಿದಿತ್ತು. ಇದೆಲ್ಲಕ್ಕಿಂತ ಮಿಗಿಲಾಗಿ ವೈಚಾರಿಕ ಹಾಗೂ ವೈಜ್ಞಾನಿಕ ಆಲೋಚನೆಗಳ ಪ್ರಭಾವ ಸ್ವಲ್ಪ ಮಟ್ಟಿಗಾದರೂ ಅವರ ಮೇಲೆ ಇರುತ್ತಿತ್ತು. ಸಂವಿಧಾನದ ಆಶಯಗಳನ್ನು ಕನಿಷ್ಠ ಪ್ರಮಾಣದಲ್ಲಾದರೂ ಪಾಲಿಸಬೇಕೆಂಬ ಜವಾಬ್ದಾರಿ ಕಾಡಿಸುತ್ತಿತ್ತು.

ಆದರೆ ಈಗ ಕಾಲ ಬದಲಾಗಿದೆ. ಸಾರ್ವಜನಿಕ ನಡವಳಿಕೆಗಳ ಮೇಲಿನ 'ಸಂಹಿತೆ' ಕಾಣೆಯಾಗಿದೆ. ಸಂವಿಧಾನದ ಜಾತ್ಯತೀತ ನೆಲೆಗಟ್ಟಿನ ಮೇಲೆ ಪ್ರಮಾಣ ವಚನ ಸ್ವೀಕರಿಸಿದ ಮುಖ್ಯಮಂತ್ರಿಯೊಬ್ಬ ಮೈಮೇಲೆಲ್ಲ ಮಾಂತ್ರಿಕನಂತೆ ವಿಭೂತಿ-ಕುಂಕುಮ ಧರಿಸಿ ಬಹಿರಂಗವಾಗಿ ಪೂಜಾರಿ - ಪುರೋಹಿತರ ಕಾಲಿಗೆರಗುವ ಮೂಲಕ ತಾನು ಕೇವಲ ಒಂದು ನಿರ್ದಿಷ್ಟ ಧಾರ್ಮಿಕ ನಡವಳಿಕೆಯ ಮನುಷ್ಯ ಮಾತ್ರ ಎಂದು ಸಾರುತ್ತಿದ್ದಾನೆ! ಧಾರ್ಮಿಕ ಸ್ವಾತಂತ್ರ್ಯದ ಹೆಸರಿನಲ್ಲಿ ಅಲ್ಪ ಸಂಖ್ಯಾತ ಅನ್ಯ ಧರ್ಮೀಯರಲ್ಲಿ ಭಯ-ಆತಂಕದ ವಾತಾವರಣ ಸೃಷ್ಟಿಸುತ್ತಿದ್ದಾನೆ! ಅಸಹಾಯಕತೆ ಮತ್ತು ಆತಂಕ ಸೃಷ್ಟಿಸುವ ಮೂಲಕ ಸಂವಿಧಾನದ ಮೂಲ ಆಶಯಕ್ಕೇ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾನೆ!

ಬಹುಶಃ ಸಂಘ ಪರಿವಾರ ತನ್ನ ನಿರಂತರ ಪ್ರಯತ್ನದ ಮೂಲಕ ಏನೆಲ್ಲ ಮಾಡಲು ಬಯಸಿತ್ತೋ, ಅದನ್ನು ಜಾತ್ಯತೀತ ಸೋಗಿನ ಜನತಾದಳದ ಅವಿವೇಕಿ ರಾಜಕಾರಣಿಗಳ ಮೂಲಕ ಜಾರಿಗೆ ತರುತ್ತಿದೆ! ಈ ದೇವೇಗೌಡರಿಗಾಗಲಿ, ಆಡ್ವಾಣಿ-ಯಡಿಯೂರಪ್ಪನವರಿಗಾಗಲಿ ಏನಾದರೂ ವ್ಯತ್ಯಾಸ ಕಾಣಿಸುತ್ತಿದೆಯೇ ಅಂತ ದುರ್ಬೀನು ಹಾಕಿ ಹುಡುಕುವ ಸ್ಥಿತಿ ಈಗ ಬಂದಿದೆ. ಹಾಗೆ ನೋಡಿದರೆ ಸಂಘ ಪರಿವಾರ ಎಲ್ಲವನ್ನು ಹೇಳಿಕೊಂಡೇ ಮಾಡುತ್ತಿದೆ. ಆದರೆ ದೇವೇಗೌಡ ಮತ್ತವರ ಪಟಾಲಂ ಸಂಘ ಪರಿವಾರಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ತನ್ನ ಗೌಪ್ಯ ಕಾರ್ಯಸೂಚಿಯನ್ನು ಜಾರಿಗೆ ತರುತ್ತಿದೆ.

ಪಾಳೇಗಾರಿಕೆಯ ಪ್ರತೀಕದಂತಿರುವ ಕುಮಾರಸ್ವಾಮಿ, ಪುರೋಹಿತ ಶಾಹಿಯ ಅಪರಾವತಾರದಂತಿರುವ ಯಡಿಯೂರಪ್ಪ ದೇಶವನ್ನು ಎಲ್ಲಿಗೆ ಕೊಂಡೊಯ್ಯಬಹುದೆನ್ನುವುದನ್ನು ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಸಾಬೀತು ಮಾಡಿದ್ದಾರೆ. ಅಧಿಕಾರದ ಪ್ರಮಾಣವಚನ ಸ್ವೀಕರಿಸಿದ ಕೆಲವೇ ಗಂಟೆಗಳಲ್ಲಿ, ಯಾವ ಸಂವಿಧಾನದ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರೋ, ಆ ಸಂವಿಧಾನದ ಕರ್ತೃವಿನ ಭಾವಚಿತ್ರವನ್ನೇ ಹೊರಹಾಕುವ ಮೂಲಕ ಯಡಿಯೂರಪ್ಪ ವಿಷ ಕಾರಿದ್ದಾರೆ. ಇಂಥ ಉದ್ಧಟ ಜಾತಿವಾದಿ ಮತ್ತು ದೇಶ ದ್ರೋಹಿಯನ್ನು ಸಮರ್ಥಿಸಿಕೊಳ್ಳುವ ಮೂಲಕ ಕುಮಾರಸ್ವಾಮಿ ತನ್ನ ಪಾಳೆಗಾರಿಕೆಯನ್ನು ಪ್ರದರ್ಶಿಸಿದ್ದಾರೆ. ಅಧಿಕಾರದ ಕೇಂದ್ರ ಸ್ಥಾನದಲ್ಲೇ ಸಂವಿಧಾನದ ಮೂಲ ಆಶಯಗಳನ್ನೇ ಗಾಳಿಗೆ ತೂರಿದರೆ ಇನ್ನು ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಪರಿಸ್ಥಿತಿ ಹೇಗಿರಬಹುದು?

ಅಧಿಕಾರಕ್ಕಾಗಿ ನಡೆದ ದೊಂಬರಾಟದ ಸಮಯದಲ್ಲಿ ಕುಮಾರಸ್ವಾಮಿ ಪದೇ ಪದೇ 'ನನಗೆ ಜಾತ್ಯತೀತತೆ ಅಂದರೇನು ಅಂತ ಗೊತ್ತಿಲ್ಲ, ಅದನ್ನು ಗೊತ್ತು ಮಾಡಿಕೊಳ್ಳಬೇಕಾದ ಅಗತ್ಯವೂ ಇಲ್ಲ. ನನ್ನ ಆದ್ಯತೆ ಏನಿದ್ದರೂ ಅಭಿವೃದ್ಧಿ' ಎಂದು ಹೇಳುತ್ತಿದ್ದರು. ಆದರೆ 'ಅಭಿವೃದ್ಧಿ' ಎಂದರೇನು ಅನ್ನುವುದಾದರೂ ಕುಮಾರಸ್ವಾಮಿ ಅವರಿಗೆ ಗೊತ್ತಿದೆಯೇ? ಎಂದು ನಾವೀಗ ಪ್ರಶ್ನಿಸಬೇಕಾಗಿದೆ. ಸಾವಿರಾರು ಕೋಟಿ ರೂಪಾಯಿಗಳ ಯೋಜನೆ ಸಿದ್ಧಪಡಿಸಿ 'ಕಿಕ್‌ಬ್ಯಾಕ್' ಪಡೆಯುವುದಷ್ಟೇ 'ಅಭಿವೃದ್ಧಿ' ಎಂದು ಅವರು ತಿಳಿದಂತಿದೆ. ಅವರು ನೀಡುತ್ತಿರುವ ಆಶ್ವಾಸನೆಗಳಿಗೆ ಹಣ ಎಲ್ಲಿಂದ ಬರುತ್ತದೆ? ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಬಗೆ ಹೇಗೆ? ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಅದರ ಪೂರ್ಣ ಪ್ರಯೋಜನ ಜನರಿಗೆ ಸಿಕ್ಕುತ್ತದೆ? ಎಂಬ ಬಗ್ಗೆ ಎಳ್ಳಷ್ಟೂ ಪರಿಜ್ಞಾನ ಇದ್ದಂತಿಲ್ಲ. ಆಡಳಿತಾತ್ಮಕ ವಿವೇಚನೆಯಾಗಲಿ, ತಾಳ್ಮೆಯಾಗಲಿ, ಜಾಣ್ಮೆಯಾಗಲಿ ಅವರ ನಡಾವಳಿಕೆಯಲ್ಲಿ ಕಾಣುತ್ತಿಲ್ಲ. ತೋರಿಕೆಯ ವಿನಯದ ಹಿಂದಿನ ಧೂರ್ತತೆ ಮತ್ತು ಅಹಂಕಾರಗಳು ಮಾತ್ರ ಆಳದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತಿವೆ. ಇಂಥವರಿಂದ ನಾಡಿನ ಜನ ಏನನ್ನು ತಾನೆ ನಿರೀಕ್ಷಿಸಲು ಸಾಧ್ಯ.

ಕುಮಾರಸ್ವಾಮಿ-ಯಡಿಯೂರಪ್ಪನಂಥವರಿಗೆ ಕೇವಲ ಅಧಿಕಾರ ಮುಖ್ಯವೇ ಹೊರತು ಜನರ ಅಭಿವೃದ್ಧಿಯಲ್ಲ. ಅಭಿವೃದ್ಧಿಯ ಮಾತು ಮತ್ತೆ ಜನರನ್ನು ದಾರಿ ತಪ್ಪಿಸುವ ತಂತ್ರ. ಅಪ್ಪ ದೇವೇಗೌಡ ಮಗನನ್ನು ಮುಖ್ಯಮಂತ್ರಿ ಮಾಡುವ ಏಕೈಕ ಉದ್ದೇಶದಿಂದ ಯಾವ್ಯಾವ ಹುನ್ನಾರ ಮಾಡಿದರು ಎಂಬುದು ಈಗ ನಾಡಿನ ಹಸುಗೂಸಿಗೂ ತಿಳಿದು ಹೋಗಿದೆ. ಆದರೂ ಅವರ ನಾಟಕ ಇನ್ನೂ ಮುಗಿದಂತಿಲ್ಲ. ಅಪ್ಪನ ಪ್ರತಿ ನಡೆಯನ್ನು ಆರ್ಶೀವಾದ ಎಂದು ಸ್ವೀಕರಿಸುತ್ತಿರುವ ಮಗನ ಮಾತು ಕೇಳಿದರೆ ಇದರ ಮರ್ಮ ಅರಿವಾಗುತ್ತದೆ! ದೇಶಾದ್ಯಂತ ಹರಾಜಾಗಿರುವ ಮಾನ ಉಳಿಸಿಕೊಳ್ಳಲು ದೇವೇಗೌಡರು ಹೂಡಿರುವ ಆಟಗಳೆಲ್ಲ ಕುಮಾರಸ್ವಾಮಿಗೆ ಆರ್ಶೀವಾದವೇ!

ಕುಮಾರಸ್ವಾಮಿ ಕೋಮುವಾದಿಗಳೊಂದಿಗೆ ಸೇರಿ ಸರ್ಕಾರ ಮಾಡುವ ಪ್ರಯತ್ನವನ್ನು ದೇವೇಗೌಡ ಪ್ರಾಮಾಣಿಕವಾಗಿ ಮನಸ್ಸು ಮಾಡಿದ್ದರೆ ಚಿಟಿಕೆ ಹೊಡೆಯುವಷ್ಟರಲ್ಲಿ ತಡೆಯಬಹುದಾಗಿತ್ತು. ಸಿದ್ಧರಾಮಯ್ಯನವರು ಅಹಿಂದ ಸಮಾವೇಶದಲ್ಲಿ ಭಾಗವಹಿಸಿದರೆಂಬ ಕಾರಣಕ್ಕಾಗಿ ಅವರ ಮೇಲೆ ಬೆಳಗಾಗುವಷ್ಟರಲ್ಲಿ ಕ್ರಮಕ್ಕೆ ಮುಂದಾದ ದೇವೇಗೌಡ ಪಕ್ಷದ ತತ್ವ ಸಿದ್ಧಾಂತಗಳನ್ನೆಲ್ಲ ಗಾಳಿಗೆ ತೂರಿದ ಮಗನ ಮೇಲೆ ಕ್ರಮ ಕೈಗೊಳ್ಳಲು ತಿಂಗಳುಗಟ್ಟಲೆ ತೆಗೆದುಕೊಂಡರು. ಮಗನ ಪಟ್ಟಾಭಿಷೇಕ ಸಾಂಗವಾಗಿ ನೆರವೇರಲು ಸಮಯಾವಕಾಶ ನೀಡಿ ಈಗ ಅಮಾನತ್ತಿನ ಹೊಸ ನಾಟಕವಾಡುತ್ತಿದ್ದಾರೆ. ಅವರ ನಾಟಕದಲ್ಲಿ ಇಂಥ ಇನ್ನೂ ಎಷ್ಟು ಅಧ್ಯಾಯಗಳಿವೆಯೋ ಕಾದು ನೋಡಬೇಕಾಗಿದೆ!

○ ಇಂದೂಧರ ಹೊನ್ನಾಪುರ

ಬರುತ್ತಿದ್ದಾನೆ ಬುಷ್ ಎಂಬ ಭಯೋತ್ಪಾದಕ !

ವರ್ತಮಾನ

ಬುಷ್ ಭಾರತಕ್ಕೆ ಭೇಟಿ ನೀಡುತ್ತಿರುವುದರ ಹಿಂದೆ ಒಂದು ಸ್ಪಷ್ಟ ಸಾಮ್ರಾಜ್ಯ ಶಾಹಿ ಉದ್ದೇಶವಿದೆ. ಭಾರತ ಸರ್ಕಾರ ಬುಷ್‌ನನ್ನು ಆಹ್ವಾನಿಸುವ ಹಿಂದೆಯೂ ಒಂದು ಸ್ಪಷ್ಟ ಸಾಮಂತಶಾಹಿ ಉದ್ದೇಶವಿದೆ. ಎರಡರ ಹಿಂದೆಯೂ ಜಗತ್ತಿನ ಅದರಲ್ಲೂ ನಿರ್ದಿಷ್ಟವಾಗಿ ಭಾರತದ ಜನತೆಯ ಬದುಕು ಹಾಗೂ ಭವಿಷ್ಯವನ್ನೂ ಮತ್ತು ದೇಶದ ಸಂಪತ್ತನ್ನೂ, ಸಮಗ್ರತೆಯನ್ನೂ ಹಾಗೂ ಸಾರ್ವಭೌಮತೆಯನ್ನೂ ಪರಾಧೀನ ಮಾಡುವ ಒಂದು ದೊಡ್ಡ ಷಡ್ಯಂತ್ರವಿದೆ. ಎಲ್ಲಕ್ಕಿಂತ ಹೆಚ್ಚಾಗಿ ಭಾರತವನ್ನು ಅಮೆರಿಕದ ದ್ವೇಷಕ್ಕೆ ಕಾರಣವಾಗುವ ವಿಪತ್ತನ್ನು ಭಾರತದ ಜನತೆ ಬುಷ್ ಭೇಟಿಯಲ್ಲಿ ಎದುರಿಸುತ್ತಿದ್ದಾರೆ.

❍ ಶಿವಸುಂದರ್

ಇಂದು ಇಡೀ ಮನುಕುಲದ ಉಳಿವಿಗೆ ಮಾತ್ರವಲ್ಲ ಈ ಭೂಗ್ರಹದ ಉಳಿವಿಗೇ ಮಾರಕವಾಗಿರುವ ಅಮೆರಿಕ ಸಾಮ್ರಾಜ್ಯಶಾಹಿಯ ನೇತಾರ, ವಿಶ್ವದ ನಂ.೧ ಭಯೋತ್ಪಾದಕ, ವಿಶ್ವ ಕಂಡರಿಯದ ಯುದ್ಧಕೋರ ಬುಷ್ ಭಾರತಕ್ಕೆ ಮೂರು ದಿನಗಳ ಭೇಟಿಗಾಗಿ ಮಾರ್ಚ್ ೧ ರಂದು ಬರುತ್ತಿದ್ದಾನೆ. ವಿಶ್ವದ ಜನತೆಯ ಶಾಂತಿ, ನೆಮ್ಮದಿಯ ಬಾಳನ್ನು ಬಲಿ ತೆಗೆದುಕೊಂಡಿರುವ, ಸ್ವಾತಂತ್ರ್ಯ ಹಾಗೂ ನಿಜವಾದ ಸಾರ್ವಭೌಮತೆ ಹೊಂದಿರುವ ರಾಷ್ಟ್ರಗಳ ಮೇಲೆ ಬಹಿರಂಗ ಯುದ್ಧ ಸಾರಿ ಅಲ್ಲಿ ಅತ್ಯಂತ ಸರ್ವಾಧಿಕಾರಿ ಪ್ರಭುತ್ವಗಳನ್ನು ಸ್ಥಾಪಿಸುವ ಈ ಪ್ರಜಾತಂತ್ರ ವಿರೋಧಿ ಸರ್ವಾಧಿಕಾರಿಗೆ ವಿಶ್ವದ ಅತಿದೊಡ್ಡ ಪ್ರಜಾಸತ್ತೆ ಕೀರ್ತಿಯ ಹೆಗ್ಗಳಿಕೆ ಹೊಂದಿರುವ ಭಾರತ ಸರ್ಕಾರ ಆಹ್ವಾನ ನೀಡಿರುವುದೇ ಭಾರತದ ಜನತೆಗೆ ಮಾಡಿರುವ ಅತಿ ದೊಡ್ಡ ಅಪಮಾನ. ಸಾಮ್ರಾಜ್ಯಶಾಹಿಯ ವಿರುದ್ಧದ ಅದರಲ್ಲೂ ಅಮೆರಿಕ ವಿರುದ್ಧದ ಎಡ ಪದಪುಂಜಗಳನ್ನು ಧಾರಾಕಾರವಾಗಿ ಉದುರಿಸುವ ಎಡಪಕ್ಷಗಳ ಬೆಂಬಲವಿಲ್ಲದೆ ಯು.ಪಿ.ಎ.ಸರ್ಕಾರ ಉಳಿಯುವುದೇ ಇಲ್ಲವಾದರೂ, ಎಡಪಕ್ಷಗಳು ಬುಷ್ ಭೇಟಿಯ ವಿರುದ್ಧ ಬೃಹತ್ ಚಳವಳಿ ಕಟ್ಟುವ ಮಾತಾಡುತ್ತಿದ್ದರೂ ಎಡಪಕ್ಷಗಳು ಬೆಂಬಲಿಸುವ ಸರ್ಕಾರ ಮಾತ್ರ ಬುಷ್ ಭೇಟಿಗೆ ಅಧಿಕೃತ ಆಮಂತ್ರಣ ನೀಡಿರುವುದು ಪ್ರಾಯಶಃ ಭಾರತದಲ್ಲಿ ಮಾತ್ರ ಸಂಭವಿಸಬಹುದಾದ ಪವಾಡಗಳಲ್ಲಿ ಮತ್ತೊಂದು.

ಅಮೆರಿಕ ಪ್ರಜಾಸತ್ತೆಯ ಶತ್ರು. ಇರಾಕ್ ಹಾಗೂ ಅಫ್ಘಾನಿಸ್ಥಾನಗಳ ಮೇಲೆ ವಿನಾ ಕಾರಣ ಯುದ್ಧ ನಡೆಸಿ ಆ ದೇಶಗಳನ್ನು ಹಾಗೂ ಜನತೆಯ ಬದುಕನ್ನು ಬೀದಿ ಪಾಲು ಮಾಡಿದೆ. ಈಗ ತನ್ನ ಆದೇಶ ಪಾಲಿಸುತ್ತಿಲ್ಲವೆಂದು ಇರಾನ್, ಉ.ಕೊರಿಯ ಇತ್ಯಾದಿಗಳ ಮೇಲೆ ಯುದ್ಧ ಸಾರುವ ಎಲ್ಲಾ ಹುನ್ನಾರಗಳನ್ನು ನಡೆಸುತ್ತಿದೆ. ಪ್ಯಾಲೆಸ್ತೀನ್ ಹಾಗೂ ಮ.ಏಷಿಯಾದಲ್ಲಿ ಇರುವ ಅಪಾರ ತೈಲ ಸಂಪತ್ತನ್ನು ಲೂಟಿ ಮಾಡಲು ಹಾಗೂ ಆ ಪ್ರಾಂತ್ಯವನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳಲು ಇಸ್ರೇಲ್ ನಡೆಸುವ ಭಯೋತ್ಪಾದನೆಗೆ ಸಕಲ ಸೈನಿಕ ಹಾಗೂ ರಾಜತಾಂತ್ರಿಕ ಬೆಂಬಲವನ್ನು ನೀಡುತ್ತಿದೆ. ದ. ಅಮೆರಿಕದಲ್ಲಿ ಸಿ.ಐ.ಎ.ಯ ನೇರ ಹಸ್ತಕ್ಷೇಪ ಹಾಗೂ ಪರೋಕ್ಷ ಸೈನಿಕ ಕಾರ್ಯಾಚರಣೆಯ ಮೂಲಕ ಅಲ್ಲಿನ ಜನತೆ ಹಾಗೂ ದೇಶಗಳಿಗೆ ಕಂಟಕವಾಗಿದೆ. ಇಂತಹ ಸಾಮ್ರಾಜ್ಯಶಾಹಿ ಅಮೆರಿಕದ ಅಧ್ಯಕ್ಷ ಬುಷ್‌ನನ್ನು ವಿರೋಧಿಸಲು ಒಂದು ಪ್ರಜಾಸತ್ತಾತ್ಮಕ ದೇಶಕ್ಕೆ ಇದಕ್ಕಿಂತ ವಿಶೇಷವಾದ ಯಾವುದೇ ರಾಜಕೀಯ, ಪ್ರಜಾತಾಂತ್ರಿಕ ಹಾಗೂ ರಾಜತಾಂತ್ರಿಕ ಕಾರಣಗಳೂ ಬೇಕಾಗಿಲ್ಲ. ಆದರೂ ಅಂತಹ ಬುಷ್‌ನನ್ನು ಒಂದು ಪ್ರಜಾಸತ್ತಾತ್ಮಕ ದೇಶವಾದ ಭಾರತ ಆಹ್ವಾನಿಸುತ್ತಿರುವುದಕ್ಕೆ ಭಾರತದ ಜನತೆಯನ್ನು ಆತಂಕಕ್ಕೀಡು ಮಾಡುವಂತ ಹಾಗೂ ಭಾರತದ ಆಳುವ ವರ್ಗದವರ ದಾಸ್ಯವನ್ನು ಎತ್ತಿತೋರಿಸುವಂತ ಪ್ರಮುಖ ಕಾರಣಗಳಿವೆ.

ಬುಷ್ ಭಾರತಕ್ಕೆ ಭೇಟಿ ನೀಡುತ್ತಿರುವುದರ ಹಿಂದೆ ಒಂದು ಸ್ಪಷ್ಟ ಸಾಮ್ರಾಜ್ಯಶಾಹಿ ಉದ್ದೇಶವಿದೆ. ಭಾರತ ಸರ್ಕಾರ ಬುಷ್‌ನನ್ನು ಆಹ್ವಾನಿಸುವ ಹಿಂದೆಯೂ ಒಂದು ಸ್ಪಷ್ಟ ಸಾಮಂತಶಾಹಿ ಉದ್ದೇಶವಿದೆ. ಎರಡರ ಹಿಂದೆಯೂ ಜಗತ್ತಿನ ಅದರಲ್ಲೂ ನಿರ್ದಿಷ್ಟವಾಗಿ ಭಾರತದ ಜನತೆಯ ಬದುಕು ಹಾಗೂ ಭವಿಷ್ಯವನ್ನೂ ಮತ್ತು



ಯುದ್ಧಕೋರ ಜಾಗತಿಕ ಭಯೋತ್ಪಾದಕ ಬುಷ್

ದೇಶದ ಸಂಪತ್ತನ್ನೂ, ಸಮಗ್ರತೆಯನ್ನೂ ಹಾಗೂ ಸಾರ್ವಭೌಮತೆಯನ್ನೂ ಪರಾಧೀನ ಮಾಡುವ ಒಂದು ದೊಡ್ಡ ಷಡ್ಯಂತ್ರವಿದೆ. ಎಲ್ಲಕ್ಕಿಂತ ಹೆಚ್ಚಾಗಿ ಭಾರತವನ್ನು ಅಮೆರಿಕದ ಯುದ್ಧಕೋರ ಸಾಮ್ರಾಜ್ಯಶಾಹಿ ವಿಸ್ತರಣಾ ವ್ಯೂಹತಂತ್ರದ ಭಾಗವಾಗಿ ಬಳಸಿಕೊಳ್ಳುವ ಹಾಗೂ ಆ ಮೂಲಕ ಭಾರತವನ್ನು ಅಮೆರಿಕದ ಯುದ್ಧಗಳಿಗೆ ಅದರಿಂದಾಗಿ ಭಾರತದ ಜನತೆಯ ಹೆಚ್ಚುವ ಬವಣೆಗಳಿಗೆ, ನೆರೆಹೊರೆಯವರ ಶಾಶ್ವತ ದ್ವೇಷಕ್ಕೆ ಕಾರಣವಾಗುವ ವಿಪತ್ತನ್ನು ಭಾರತದ ಜನತೆ ಬುಷ್ ಭೇಟಿಯಲ್ಲಿ ಎದುರಿಸುತ್ತಿದ್ದಾರೆ. ಅಭಿವೃದ್ಧಿಯಾದರೆ ಸಾಕು, ಸಿದ್ಧಾಂತದ ಅಗತ್ಯವಿಲ್ಲ ಹಾಗೆಯೇ ಇತಿಹಾಸದಿಂದ ಪಾಠ ಕಲಿಯಬೇಕೇ ವಿನಃ ಅದಕ್ಕೇ ಅಂಟಿಕೊಂಡು ಕೂರಬಾರದು ಮತ್ತು ಇಂದಿನ ನವ ವಿಶ್ವ ವ್ಯವಸ್ಥೆಯಲ್ಲಿ ಅಮೆರಿಕಕ್ಕೆ ಅನುಕೂಲಕರವಾದಂತ ನೀತಿ ಅನುಸರಿಸಬೇಕೇ ವಿನಃ ಪ್ರಜಾತಂತ್ರ, ವಿಶ್ವಶಾಂತಿ, ಸ್ವಾತಂತ್ರ್ಯ ಇತ್ಯಾದಿ ಕಾಲಬಾಹಿರ ಸಿದ್ಧಾಂತಗಳಿಗೆ ಜೋತು ಬೀಳಬಾರದೆಂಬುದೇ ಯು.ಪಿ.ಎ ಸರ್ಕಾರದ ಹಾಗೂ ವಿರೋಧಿ ಎನ್.ಡಿ.ಎ. ಕೂಟದ ಅಧಿಕೃತ ವಿದೇಶಾಂಗ ನೀತಿಯಾಗಿಬಿಟ್ಟಿರುವಾಗ ಈ ದೇಶವನ್ನು, ಇಲ್ಲಿನ ಜನತೆಯ ಹಾಗೂ ದೇಶದ ಬದುಕು ಹಾಗೂ ಭವಿಷ್ಯಗಳನ್ನು ಉಳಿಸಿಕೊಳ್ಳುವ ಜವಾಬ್ದಾರಿ ಈ ದೇಶದ ಪ್ರಜ್ಞಾವಂತ ಜನತೆಯ ಮೇಲೆ ಬಿದ್ದಿದೆ. ಆದ್ದರಿಂದಲೇ ಬುಷ್ ಭೇಟಿಯನ್ನು ಏಕೆ ವಿರೋಧಿಸಬೇಕೆಂದು ಭಾರತದ ಜನತೆಯೇ ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ.

ಬುಷ್ ಭಾರತದ ಜನತೆಯ ಶತ್ರು:

ಇಂದು ಭಾರತದ ಬಡ ಜನತೆ, ರೈತಾಪಿ, ಕಾರ್ಮಿಕ ವರ್ಗ, ಮಧ್ಯಮ ವರ್ಗ, ಎದುರಿಸುತ್ತಿರುವ ಬಹುಪಾಲು ಬವಣೆಗಳಿಗೆ ನೇರವಾಗಿ ಈ ದೇಶದ ಪರಾವಲಂಬಿ ಆಳುವ ವರ್ಗಗಳ ನೀತಿಗಳೇ ಕಾರಣವಾಗಿದ್ದರೂ ಅದರ ಹಿಂದೆ ಪ್ರತ್ಯಕ್ಷವಾಗಿ ಅಮೆರಿಕ ಸಾಮ್ರಾಜ್ಯಶಾಹಿಯ ನೇರ ಮಾರ್ಗದರ್ಶನ, ನಿರ್ದೇಶನ ಮತ್ತು ನಿಯಂತ್ರಣ

ಗಳಿವೆ. ಭಾರತದ ಶೆ. ೭೦ ರಷ್ಟು ಜನ ಅವಲಂಬಿಸಿರುವ ಬೇಸಾಯ ರೈತರಿಗೆ ನಾ ಸಾಯ, ನೀ ಸಾಯ -ಬೇಸಾಯ ಎನ್ನುವಂತಾಗಿರಲು ೧೯೪೭ರಿಂದಲೂ ಭಾರತದ ಕೃಷಿ ಅಮೆರಿಕದ ಒಕ್ಕಲಾಗಿರುವುದೇ ಕಾರಣ. ಭಾರತದ ಕೃಷಿ ನೀತಿಯನ್ನು ಅಮೆರಿಕದ ಪರಿಣಿತರು ತಾಂತ್ರಿಕವಾಗಿ, ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ತಮ್ಮ ದೇಶದ ಹಿತಾಸಕ್ತಿಗೆ ಅನುಗುಣವಾಗಿ ನಿಯಂತ್ರಿಸುತ್ತಾ ಬಂದಿರುವುದರಿಂದಲೇ ಭಾರತದ ಪಾರಂಪರಿಕ ಕೃಷಿ ಪದ್ಧತಿಗಳು ನಾಶವಾದವು. ೧೯೬೫ರಲ್ಲಿ ಭಾರತ ಎದುರಿಸುತ್ತಿದ್ದ ಆಹಾರ ಕೊರತೆಯನ್ನು ಬಳಸಿಕೊಂಡು ಬಲವಂತದ ತಂತ್ರದ ಮೂಲಕ ಇಲ್ಲಿ ಹಸಿರು ಕ್ರಾಂತಿಯನ್ನು ಪರಿಚಯಿಸಲಾಯಿತು. ಅದರ ಉದ್ದೇಶ ಅಮೆರಿಕದ ರಾಸಯನಿಕ ಹಾಗೂ ಕೃಷಿ ಕಂಪನಿಗಳಿಗೆ ಭಾರತದಂತಹ ಬೃಹತ್ ಮಾರುಕಟ್ಟೆ ಒದಗಿಸಿಕೊಡುವುದೇ ಆಗಿತ್ತೆಂದು ಈಗ ಹೆಚ್ಚು ಕಡಿಮೆ ಅಮೆರಿಕದ ಪರ ವಕ್ತಾರರು ಒಪ್ಪಿಕೊಳ್ಳುತ್ತಿದ್ದಾರೆ. ಈಗ ಮತ್ತೊಮ್ಮೆ ಭಾರತ ಎರಡನೇ ಹಸಿರು ಕ್ರಾಂತಿ ಜಾರಿಗೆ ತರಬೇಕೆಂದು, ರೈತರಿಗೆ ಕೊಡುತ್ತಿರುವ ಸಬ್ಸಿಡಿಯನ್ನು ಕಡಿತಗೊಳಿಸಬೇಕೆಂದು ಹಾಗೂ ಆಹಾರ ಧಾನ್ಯಗಳನ್ನು ಬಿಟ್ಟು ಅಮೆರಿಕದ ಅಥವಾ ಪಾಶ್ಚಿಮಾತ್ಯ ರಾಷ್ಟ್ರಗಳು ಬೇಡುವ ಸರಕನ್ನು ಉತ್ಪಾದನೆ ಮಾಡಬೇಕೆಂದು ಒತ್ತಡ ಹಾಕುತ್ತಿದೆ. ಅಲ್ಲದೆ ತಮ್ಮ ಕೃಷಿ ಸರಕುಗಳ ಸರಾಗ ಆಮದಿಗೆ ಹಾಗೂ ಅದರ ಮೇಲೆ ಕಡಿಮೆ ಸುಂಕಕ್ಕೆ ಭಾರತ ಸರ್ಕಾರದಿಂದ ಅನುಮತಿ ಗಿಟ್ಟಿಸಿಕೊಂಡಿದೆ. ಇದರಿಂದಾಗಿಯೇ ಕಳೆದ ಹತ್ತು ವರ್ಷಗಳಲ್ಲಿ ಕರ್ನಾಟಕವೊಂದರಲ್ಲೇ ಹತ್ತು ಸಾವಿರಕ್ಕೂ ಹೆಚ್ಚು ಸಣ್ಣ ಹಾಗೂ ಬಡ ರೈತರು ಆತ್ಮಹತ್ಯೆಗಳನ್ನು ಮಾಡಿಕೊಂಡಿದ್ದಾರೆ. ಅಷ್ಟು ಮಾತ್ರವಲ್ಲ. ಇನ್ನು ಮುಂದೆ ಸಣ್ಣ ಹಾಗೂ ಅತಿ ಸಣ್ಣ ರೈತರು ಬೇಸಾಯದಲ್ಲಿ ಬದುಕುವುದು ಕಷ್ಟ. ಆದ್ದರಿಂದ ಅವರನ್ನು ಕೃಷಿಯಿಂದ ಹೊರಹಾಕಬೇಕೆಂದು ಅಮೆರಿಕವೇ ಭಾರತ ಸರ್ಕಾರಕ್ಕೆ ಆದೇಶ ನೀಡಿದೆ. ಅದೇ ನೀತಿಯನ್ನೇ ಭಾರತ ಸರ್ಕಾರ ಎರಡನೇ ಹಸಿರು ಕ್ರಾಂತಿಯೆಂಬ ಹೆಸರಲ್ಲಿ ಜಾರಿಗೆ ತರುತ್ತಿದೆ. ಹೀಗಾಗಿ ಇಂದು ಈ ದೇಶದ ರೈತಾಪಿಯ ಬವಣೆಗೆ ಬುಷ್‌ನ ಅಮೆರಿಕ ಸಾಮ್ರಾಜ್ಯಶಾಹಿ ನೀತಿಗಳೆ ನೇರವಾಗಿ ಕಾರಣವಾಗಿವೆ.

ಅದೇ ರೀತಿ ೧೯೪೭ ರಿಂದಲೂ ಭಾರತದ ಕೈಗಾರಿಕೆಗಳ ಬೆಳವಣಿಗೆಗಳ ಬಗ್ಗೆಯೂ ವಸಾಹತು ಧೋರಣೆಯನ್ನೇ ಅನುಸರಿಸಿಕೊಂಡು ಬಂದ ಅಮೆರಿಕ ಭಾರತದ ಕೈಗಾರಿಕಾ ಸಂಪನ್ಮೂಲಗಳನ್ನೆಲ್ಲಾ ವಸಾಹತುಶಾಹಿ ಬ್ರಿಟಿಷರಂತೆ ತಾನೇ ಲೂಟಿ ಹೊಡೆದ ಅಮೆರಿಕ ಬ್ರಿಟಿಷರಂತೆ ಭಾರತವನ್ನು ಒಂದು ಕಚ್ಚಾವಸ್ತುಗಳನ್ನು ರಫ್ತು ಮಾಡುವ ವಸಾಹತುವಾಗಿಯೇ ಉಳಿಯುವಂತೆ ಅಂತರರಾಷ್ಟ್ರೀಯ ರಾಜಕೀಯ, ಆರ್ಥಿಕ ವ್ಯೂಹ ರಚಿಸಿತು. ನಮ್ಮ ಬೆನ್ನು ಮೂಳೆಯಿಲ್ಲದ ಟಾಟಾ, ಬಿರ್ಲಾ, ಮಫತ್‌ಲಾಲ್, ಈಗ ರಿಲೈಯನ್ಸ್‌ನಂತ ಕೈಗಾರಿಕೋದ್ಯಮಿಗಳು, ರಾಜಕಾರಣಿಗಳು ಆ ವ್ಯೂಹದಲ್ಲಿ ತಮ್ಮ ಮುಕ್ತಿಯನ್ನು ಕಂಡರೇ ವಿನಃ ಭಾರತವನ್ನು ಒಂದು ಸ್ವಾವಲಂಬಿ ಸಶಕ್ತ ಕೈಗಾರಿಕಾ ರಾಷ್ಟ್ರವನ್ನಾಗಿಸಲು ಅಮೆರಿಕದೊಡನೆ ಸಂಘರ್ಷ ನಡೆಸುವ ಗೋಜಿಗೆ ಹೋಗಲಿಲ್ಲ. ವಿಶಾಲ ಅಮೆರಿಕನ್ ಸಾಮ್ರಾಜ್ಯದಲ್ಲಿ ದಕ್ಷಿಣ ಏಷಿಯದಲ್ಲಿ ಸಾಮಂತನ ಸ್ಥಾನ ಸಿಕ್ಕರೆ ಸಾಕೆನ್ನುವುದು ಅವರ ಪರಮೋಚ್ಚ ದೇಶಪ್ರೇಮವಾಗಿತ್ತು, ಆಗಿದೆ! ಆದ್ದರಿಂದಲೇ ೧೯೯೧ರಿಂದ ಪ್ರಾರಂಭವಾದ ಖಾಸಗೀಕರಣ, ಜಾಗತೀಕರಣ, ಉದಾರಿಕರಣದ ನೀತಿಗಳು ಭಾರತದ ಕೈಗಾರಿಕೆಗಳಿಗೆ ಮಾರಕವೆಂದು ಗೊತ್ತಿದ್ದರೂ ಅದನ್ನು ಮೊದಲು ಸ್ವಾಗತಿಸಿದ್ದು ಇದೇ ಕೈಗಾರಿಕೋದ್ಯಮಿಗಳೇ! ಆದರೆ ಈ ಜಾಗತೀಕರಣವೆಂಬ ಹೊಸ ವಸಾಹತೀಕರಣದ ಯುಗದಲ್ಲಿ ೪೭ರ ನಂತರ ಈ ದೇಶದ ಸಾಮಾನ್ಯ ದುಡಿಯುವ ಜನತೆ ಕಟ್ಟಿದ್ದ ಸಂಪತ್ತೆಲ್ಲಾ ಅಮೆರಿಕದ ಕಂಪನಿಗಳ ಪಾಲಾಗುವಂತ ಕಡ್ಡಾಯ ಷರತ್ತುಗಳನ್ನು ತನ್ನದೇ ನಿಯಂತ್ರಣದಲ್ಲಿರುವ ವರ್ಲ್ಡ್‌ಬ್ಯಾಂಕ್, ಐ.ಎಮ್.ಎಫ್, ಡಬ್ಲ್ಯೂ.ಟಿ.ಓ.ದಂತ ನವ ವಸಾಹತುವಾದ ಉಪಕರಣಗಳ ಮೂಲಕ ಸಾಧಿಸಿಕೊಂಡರು. ಇಂದು ಲಕ್ಷಾಂತರ ಕಾರ್ಮಿಕರು ಬೀದಿಪಾಲಾಗುತ್ತಿರುವುದಕ್ಕೆ ಬುಷ್‌ನ ಅಮೆರಿಕದ ಈ ನೀತಿಗಳೇ ಕಾರಣ,

ಭಾರತದ ಕೃಷಿ ಅಮೆರಿಕದ ಒಕ್ಕಲಾಗಿರುವುದೇ ಕಾರಣ. ಭಾರತದ ಕೃಷಿ ನೀತಿಯನ್ನು ಅಮೆರಿಕದ ಪರಿಣಿತರು ತಾಂತ್ರಿಕವಾಗಿ, ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ತಮ್ಮ ದೇಶದ ಹಿತಾಸಕ್ತಿಗೆ ಅನುಗುಣವಾಗಿ ನಿಯಂತ್ರಿಸುತ್ತಾ ಬಂದಿರುವುದರಿಂದಲೇ ಭಾರತದ ಪಾರಂಪರಿಕ ಕೃಷಿ ಪದ್ಧತಿಗಳು ನಾಶವಾದವು. ೧೯೬೫ರಲ್ಲಿ ಭಾರತ ಎದುರಿಸುತ್ತಿದ್ದ ಆಹಾರ ಕೊರತೆಯನ್ನು ಬಳಸಿ ಕೊಂಡು ಇಲ್ಲಿ ಹಸಿರು ಕ್ರಾಂತಿಯನ್ನು ಪರಿಚಯಿಸಲಾಯಿತು. ಅದರ ಉದ್ದೇಶ ಅಮೆರಿಕದ ರಾಸಯನಿಕ ಹಾಗೂ ಕೃಷಿ ಕಂಪನಿಗಳಿಗೆ ಭಾರತದಂತಹ ಬೃಹತ್ ಮಾರುಕಟ್ಟೆ ಒದಗಿಸಿಕೊಡುವುದೇ ಆಗಿತ್ತೆಂಬುದು ಈಗ ನಿರ್ವಿವಾದ.

ಅಷ್ಟು ಮಾತ್ರವಲ್ಲ. ಭಾರತದ ಆಳುವ ವರ್ಗಗಳು ಹೀಗೆ ಬಗ್ಗು ಎಂದರೆ ತೆವಳಲು ತಯಾರಿರುವುದನ್ನು ಕಂಡೂ ಬುಷ್‌ನ ಅಮೆರಿಕ ಸಾಮ್ರಾಜ್ಯಶಾಹಿ ಭಾರತವನ್ನು ತನ್ನ ಜಾಗತಿಕ ದಾಳದ ಪಗಡೆಕಾಯಿಯನ್ನಾಗಿ ಬಳಸಿಕೊಳ್ಳಲು ಪ್ರಾರಂಭಿಸಿದೆ.

ಭಾರತವನ್ನು ಯುದ್ಧಕ್ಕೆ ದೂಡುತ್ತಿರುವ ಅಮೆರಿಕ:

ಎರಡನೇ ಯುದ್ಧದ ನಂತರ ಪ್ರಾರಂಭವಾದ ಅಮೆರಿಕ-ಸೋವಿಯತ್ ಒಕ್ಕೂಟಗಳ ನಡುವಿನ ಶೀತಲ ಸಮರದಲ್ಲಿ ಭಾರತ ಒಮ್ಮೆ ಸೋವಿಯತ್ ಒಕ್ಕೂಟದ ಪರವಾಗಿಯೂ ಒಮ್ಮೆ ಅಮೆರಿಕದ ಪರವಾಗಿಯೂ ಹೊಯ್ದಾಡುತ್ತಲೇ ಬಂದಿತು. ಆದರೆ ೧೯೯೧ರಲ್ಲಿ ಸೋವಿಯತ್ ಒಕ್ಕೂಟ ಪತನಗೊಂಡು ಅಮೆರಿಕ ಮಾತ್ರ ಏಕೈಕ ಶಕ್ತ ರಾಷ್ಟ್ರವಾಗಿ ಹೊರಹೊಮ್ಮಿದ ನಂತರ ಭಾರತ ಬಡ ರಾಷ್ಟ್ರಗಳ ಪರವಾಗಿದ್ದ ಅಲಿಪ್ತ ರಾಷ್ಟ್ರನೀತಿಗಳನ್ನೆಲ್ಲಾಗಾಳಿಗೆ ತೂರಿ ಸಂಪೂರ್ಣವಾಗಿ ಅಮೆರಿಕ ಪರವಾದ ನೀತಿಗಳನ್ನೇ ಅನುಸರಿಸುತ್ತಿದೆ. ೧೯೯೯ರ ನಂತರ ಈ ರಾಜತಾಂತ್ರಿಕ ಸಹಯೋಗ ನಿಧಾನವಾಗಿ ಸೈನಿಕ ಸಹ ಯೋಗವಾಗಿಯೂ ಪರಿವರ್ತನೆಯಾಗುತ್ತಿದೆ.

ಕಳೆದ ೧೦ ವರ್ಷಗಳಲ್ಲಿ ಅದರಲ್ಲೂ ಕಳೆದ ಐದು ವರ್ಷಗಳಲ್ಲಿ ಭಾರತ ಹಾಗೂ ಅಮೆರಿಕದ ನಡುವೆ ಶಾಶ್ವತ ಸೈನಿಕ ಸಂಬಂಧಗಳು ರೂಪು ಪಡೆದುಕೊಳ್ಳುತ್ತಿವೆ. ಈ ನಿಟ್ಟಿನಲ್ಲಿ ೨೦೦೦ನೇ ಇಸವಿಯಲ್ಲಿ ಅಂದಿನ ಅಧ್ಯಕ್ಷ ಕ್ಲಿಂಟನ್ ಭಾರತಕ್ಕೆ ಬಂದಿದ್ದಾಗ ಭಾರತ ಹಾಗೂ ಅಮೆರಿಕ "ವಿಷನ್ ಸ್ಟೇಟ್ಮೆಂಟ್" ಒಂದಕ್ಕೆ ಸಹಿ ಮಾಡಿದವು. ಅದರಂತೆ ಭಾರತ ಹಾಗೂ ಅಮೆರಿಕ ಜಂಟಿಯಾಗಿ ಒಡಗೂಡಿ ವಿಶ್ವದ ಈ ಭಾಗದಲ್ಲಿ ಸೈನಿಕ ಉಸ್ತುವಾರಿ ನೋಡಿಕೊಳ್ಳುವ ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಈ ನೀತಿಯ ಭಾಗವಾಗಿ ಅಮೆರಿಕ-ಭಾರತ ಜಂಟಿ ರಕ್ಷಣ ಕೂಟವನ್ನು ರಚಿಸಿಕೊಳ್ಳಲಾಗಿದೆ. ಹೀಗಾಗಿ ಇನ್ನು ಮುಂದೆ ಅಮೆರಿಕದ ಶತೃಗಳೆಲ್ಲರೂ ಭಾರತದ ಶತ್ರುಗಳು ಆಗ

ಬುಷ್ ವಿರುದ್ಧ ಜಗತ್ತಿನಾದ್ಯಂತ ಭುಗಿಲೆದ್ದ ಆಕ್ರೋಶ

ಅಮೆರಿಕಾದ ಪುಂಡಾಟ: ಕೆಲ ಸ್ಯಾಂಪಲ್ಲುಗಳು

೧.ಜಾಗತೀಕರಣವೆಂದರೆ ಅಮೆರಿಕೀಕರಣವೇ –ಹೆನ್ರಿ ಕಿಸಿಂಜರ್,ಅಮೆರಿಕದ ಮಾಜಿ ರಕ್ಷಣಾ ಮಂತ್ರಿ

೨.ಚಿಲಿಯ ಜನ ಸಾಲ್ವಡಾರ್ ಅಲೆಂಡೆಯನ್ನು ಆಯ್ಕೆ ಮಾಡಿ ತಪ್ಪು ಮಾಡಿದ್ದರು. ಆದ್ದರಿಂದ ನಾವು ಜನ ಮಾಡಿದ್ದ ತಪ್ಪನ್ನು ಸರಿಪಡಿಸಲು ಚಿಲಿಯ ಮೇಲೆ ದಾಳಿ ಮಾಡಲೇ ಬೇಕಾಗಿತ್ತು –ಹೆನ್ರಿ ಕಿಸಿಂಜರ್,೧೯೭೩

೩.ಪ್ಯಾಲೆಸ್ತೀನ್ ಜನ ಹಮಾಸ್ ಪಕ್ಷವನ್ನು ಆಯ್ಕೆ ಮಾಡಿ ತಪ್ಪು ಮಾಡಿದ್ದಾರೆ ಹಾಗೂ ಅದಕ್ಕಾಗಿ ತಕ್ಕ ಬೆಲೆ ತೆರುತ್ತಾರೆ –ಡಿಕ್ ಚೆನಿ,೨೦೦೬

೪.ಪ್ರಪಂಚವನ್ನು ನಾಶ ಮಾಡಲು ೩೦೦ ಅಣು ಬಾಂಬ್‌ಗಳು ಸಾಕು. ಆದರೆ ಅಮೆರಿಕದ ಬಳಿ ಅಂತಹ ೪,೦೦,೦೦೦ ಬಾಂಬ್‌ಗಳ ದಾಸ್ತಾನೇ ಇದೆ. ಆದರೂ ಅದು, ಇತರೆ ದೇಶಗಳು ಮಾತ್ರ ಅಣು ಬಾಂಬ್ ಉತ್ಪಾದನೆಯ ಯೋಚನೆಯನ್ನೂ ಮಾಡಬಾರದೆಂದು ಬೆದರಿಕೆ ಹಾಕುತ್ತಿದೆ.

೫.ಅಮೆರಿಕದ ಇತಿಹಾಸವೇ ದಮನ, ಆಕ್ರಮಣಗಳ ಇತಿಹಾಸ. ಮೊದಲು ಬ್ರಿಟನ್‌ನಿಂದ ಹೋದ ಬಿಳಿಯರು ೧೧೭ನೇ ಶತಮಾನದಲ್ಲಿ ೪೦ ಲಕ್ಷಕ್ಕೂ ಹೆಚ್ಚು 'ಸ್ಥಳೀಯ ಮೂಲನಿವಾಸಿಗಳಾದ ರೆಡ್ ಇಂಡಿಯನ್ನರನ್ನು ಕೊಂದುಹಾಕಿದರು. ಆ ನಂತರದಲ್ಲಿ ಈವರೆಗೆ ಅಮೆರಿಕ ಸಾಮ್ರಾಜ್ಯಶಾಹಿಗಳು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಲು ಕೊಂದಿರುವ ಪ್ರಪಂಚದ ಜನರ ಸಂಖ್ಯೆ ೨ ಕೋಟಿ ೯೦ ಲಕ್ಷ. ಇದು ಎರಡನೇ ಯುದ್ಧದಲ್ಲಿ ಕೊಲ್ಲಲ್ಪಟ್ಟವರಲ್ಲಿ ಅರ್ಧದಷ್ಟಾಗುತ್ತದೆ. ಅದರ ಒಂದು ಸಣ್ಣ ವಿವರ ಕೆಳಗಿದೆ.

ದೇಶ	ಕೊಲ್ಲಲ್ಪಟ್ಟವರ ಸಂಖ್ಯೆ
ಪ. ಆಫ್ರಿಕ(೧೭೭೬-೧೮೬೫)	೪೦ ಲಕ್ಷ
ಫಿಲಿಫೈನ್ಸ್ (೧೮೯೮-೧೯೦೪)	೬ ಲಕ್ಷ
ಗ್ವಾಟೆಮಾಲ(೧೯೫೪-೨೦೦೨)	೩ ಲಕ್ಷ
ವಿಯೆಟ್ನಾಮ್ (೧೯೬೦-೭೫)	೨೦ ಲಕ್ಷ
ಕೊಲಂಬಿಯಾ (೧೯೬೬-೨೦೦೨)	೫ ಲಕ್ಷ(ಹತ್ಯಾಕಾಂಡ ಮುಂದುವರೆದಿದೆ..)
ಚಿಲಿ (೧೯೭೩-೧೯೯೦)	೨೦ಸಾವಿರ
ಅಫ್ಘಾನಿಸ್ತಾನ (೧೯೭೮-೨೦೦೨)	೧೦ ಲಕ್ಷ(ಇನ್ನೂ ಮುಂದುವರೆದೇ ಇದೆ)
ಎಲ್ ಸಾಲ್ವಡಾರ್(೧೯೮೦-೯೫)	೧ ಲಕ್ಷ
ಸೊಮಾಲಿಯ(೧೯೯೧-೧೯೯೪)	೩ ಲಕ್ಷ
ಇರಾಕ್ (೧೯೯೦- ಈವರೆಗೂ..)	೧೦ ಲಕ್ಷ.(ಇದರಲ್ಲಿ ೬ ಲಕ್ಷ ಜನ ಮಕ್ಕಳು)

ಪಟ್ಟಿ ಅಪೂರ್ಣ..ಕೇವಲ ಕೆಲವು ಉದಾಹರಣೆಗಳನ್ನಷ್ಟೇ ಇಲ್ಲಿ ನೀಡಲಾಗಿದೆ.

೬. ಪ್ರಪಂಚದಾದ್ಯಂತ ಅಮೆರಿಕಕ್ಕೆ ೧೨೦ ದೇಶಗಳಲ್ಲಿ ಸೇನಾನೆಲೆಗಳಿವೆ. ದಕ್ಷಿಣ ಅದರ ನೌಕಾ ನೆಲೆಯೊಂದು ಹಿಂದೂ ಮಹಾಸಾಗರದಲ್ಲಿರುವ ಡಿಯಾಗೊ ಗಾರ್ಸಿಯ ಎಂಬ ದ್ವೀಪದಲ್ಲಿದೆ. ಈಗ ಭಾರತದೊಂದಿಗೆ ಸೇನಾ ಸಂಬಂಧಗಳನ್ನು ಕುದುರಿಸಿಕೊಳ್ಳುತ್ತಿರುವ ಅಮೆರಿಕ ಪ. ಬಂಗಾಳದ ಕಲೈಕೊಂಡದಲ್ಲಿ ತನ್ನ ನೆಲೆಯೊಂದನ್ನು ಸ್ಥಾಪಿಸಿಕೊಳ್ಳುವ ಹುನ್ನಾರವನ್ನು ನಡೆಸುತ್ತಿದೆ. ಹಾಗಾದಲ್ಲಿ ಅಮೆರಿಕಕ್ಕೆ ದ.ಏಷಿಯಾದಲ್ಲಿ ಒಂದು ಸುಸ್ಥಿರ ವೈಮಾನಿಕಾ ಸೇನಾ ನೆಲೆಯೊಂದು ಸಿಕ್ಕಂತಾಗುತ್ತದೆ.

೭. ೧೯೪೫ ರಿಂದಾಚೆಗೆ ಅಮೆರಿಕ ೫೦ ದೇಶಗಳ ಸರ್ಕಾರವನ್ನು ಉರುಳಿಸಲು ಹಾಗೂ ೩೦ಕ್ಕೂ ಹೆಚ್ಚು ರಾಷ್ಟ್ರೀಯ ವಿಮೋಚನಾ ಹೋರಾಟಗಳನ್ನು ದಮನ ಮಾಡಲು ಯತ್ನಿಸಿದೆ. ಅದರಲ್ಲಿ ಭಾರತದ ಹಲವರು ಹೋರಾಟಗಳೂ ಸೇರಿವೆ.

೮. ವಿಶ್ವದ ಅತಿದೊಡ್ಡ ಪ್ರಜಾತಂತ್ರವೆಂದು ಕೊಚ್ಚಿಕೊಳ್ಳುವ ಅಮೆರಿಕದ ಪರಮಾಪ್ತ ಮಿತ್ರರೆಲ್ಲರೂ ಸರ್ವಾಧಿಕಾರಿಗಳೇ.ಅಮೆರಿಕವು ಬೆಂಬಲಿಸಿದ–ಬೆಂಬಲಿಸುತ್ತಿರುವ ಕೆಲವು ವಿಶ್ವದ ಅತಿಕ್ರೂರಿ ಸರ್ವಾಧಿಕಾರಿಗಳ ಪಟ್ಟಿ ಇದು.

ದೇಶ	ಸರ್ವಾಧಿಕಾರಿ
ನೈಜೀರಿಯಾ	ಜನರಲ್ ಸಾನಿ ಅಬಚ
ಬೊಲಿವಿಯಾ	ಕರ್ನಲ್ ಹ್ಯುಗೊ ಬನ್ಜೆರ್
ಕ್ಯೂಬಾ	ಬಟಿಸ್ಟ
ದ. ಆಫ್ರಿಕ	ಬೋಥಾ
ಹೈಟಿ	ಡುವಲಿಯರ್
ಜೈರೆ	ಮೋಬುಟು
ಫಿಲಿಫೈನ್ಸ್	ಮರ್ಕೋಸ್

ಇದಲ್ಲದೆ ಅಮೆರಿಕ ಈಗಲೂ ಅತ್ಯಂತ ಸರ್ವಾಧಿಕಾರಿಗಳಾದ ಬರ್ಮಾದ ಸೇನಾಧಿಕಾರಿಗಳನ್ನೂ, ಪಾಕಿಸ್ತಾನದ ಮಿಲಿಟರಿ ಸರ್ವಾಧಿಕಾರವನ್ನೂ ಹಾಗೂ ಭಾರತದಲ್ಲಿ ಪ್ರತಿಗಾಮಿ ಸರ್ಕಾರಗಳನ್ನೂ, ಲ್ಯಾಟಿನ್ ಅಮೆರಿಕ ದೇಶಗಳಲ್ಲೂ ಅತ್ಯಂತ ಪ್ರತಿಗಾಮಿ ವಿರೋಧಿ ಪಕ್ಷಗಳನ್ನೂ ಬೆಂಬಲಿಸುತ್ತಾ ಸರಿಯಾದ ಸಮಯದಲ್ಲಿ ಅಲ್ಲಿ ಅಧಿಕಾರದಲ್ಲಿರುವ ಅಮೆರಿಕ ವಿರೋಧಿ ಜನಪರ ಸರ್ಕಾರಗಳನ್ನು ಕಿತ್ತು ಹಾಕುವ ಯತ್ನ ನಡೆಸಿದೆ.

೯. ವಿಶ್ವದ ಎಲ್ಲ ದೇಶಗಳ ಆರ್ಥಿಕ ನೀತಿಗಳನ್ನು ಬದಲಾಯಿಸಲು ಆರ್ಥಿಕ ಬೆದರಿಕೆ ಹಾಕುವ ಮೂಲಕ ಬದಲಾಯಿಸುವ ವಿಶ್ವ ಸಂಸ್ಥೆಯಲ್ಲಿ ಪ್ರಪಂಚದ ೧೨೦ಕ್ಕೂ ಹೆಚ್ಚು ದೇಶಗಳು ಸದಸ್ಯ ರಾಷ್ಟ್ರಗಳಾಗಿದ್ದರೂ ಅಲ್ಲಿ ಅಮೆರಿಕದ್ದೇ ಮೇಲಾಧಿಪತ್ಯ! ಏಕೆಂದರೆ ಅಲ್ಲಿ ನಿರ್ಧಾರಗಳು ತೀರ್ಮಾನವಾಗುವುದು ಒಂದು ದೇಶಕ್ಕೆ ಒಂದು ಓಟು ಎಂಬ ಆಧಾರದಲ್ಲಲ್ಲ. ಬದಲಿಗೆ ಅದರಲ್ಲಿ ಅಮೆರಿಕದಂತ ಒಂದೇ ದೇಶಕ್ಕೆ ೧೮ % ರಷ್ಟು ಮತದ ಪಾಲಿದೆ. ಉಳಿದಂತೆ ಪ್ರಪಂಚದ ೧೦೦ ಬಡ ದೇಶಗಳ ಒಟ್ಟು ಓಟಿನ ಶಕ್ತಿ ಕೇವಲ ೧೪ %. ಇದು ಅಮೆರಿಕದ ನವ ವಿಶ್ವ ವ್ಯವಸ್ಥೆಯಲ್ಲಿರುವ ವ್ಯವಸ್ಥಿತ ಅಸಮಾನ ಆರ್ಥಿಕ ಅಂತರಗಳು.

ಬೇಕಿದೆ. ೨೦೦೨ರಿಂದ ಭಾರತ ಹಾಗೂ ಅಮೆರಿಕ ಜಂಟಿಯಾಗಿ ಹಲವಾರು ಸೇನಾ, ನೌಕಾ ಹಾಗೂ ವೈಮಾನಿಕ ಕವಾಯಿತುಗಳನ್ನು ನೆಡೆಸಿದೆ. ಅದರಲ್ಲಿ ಇತ್ತೀಚಿನದು ಪ. ಬಂಗಾಳದ ಕಲೈಕುಂದಿಯಲ್ಲಿ ನಡೆದ ಬೃಹತ್ ವೈಮಾನಿಕ ಕವಾಯಿತು. ಎರಡು ದೇಶಗಳಿಗೂ ಕಲೈಕುಂದಿಯನ್ನು ಜಂಟಿ ಕವಾಯತಿಗೆ ಶಾಶ್ವತ ಸ್ಥಾವರವನ್ನಾಗಿ ಬಳಸಿಕೊಳ್ಳುವ ಉದ್ದೇಶವಿದೆ. ಇದು ಕ್ರಮೇಣ ಭಾರತದಲ್ಲಿ ಅಮೆರಿಕದ ವೈಮಾನಿಕ ನೆಲೆಯೂ ಆಗಿಬಿಡ ಬಹುದೆಂಬ ಆತಂಕವೂ ಇದೆ. ಹಾಗೆ ಆದಾಗ ಅಮೆರಿಕ ಭಾರತದಲ್ಲಿ ನೆಲೆಯೂರಿ ನೇಪಾಳ ಕ್ರಾಂತಿಯನ್ನೂ, ಚೀನಾದ ಬೆಳವಣಿಗೆಯನ್ನು ಹತ್ತಿಕ್ಕುವ ವ್ಯೂಹಾತ್ಮಕ ಉದ್ದೇಶವನ್ನು ಹೊಂದಿದೆ. ಅಮೆರಿಕ ಈ ಸಾಮ್ರಾಜ್ಯ ವಿಸ್ತರಣ ಯೋಜನೆಗಳಿಗೆ ಸಹಕರಿಸಿದ್ದಕ್ಕೆ ಭಾರತಕ್ಕೆ ಅಮೆರಿಕ ಕೆಲವು ಗ್ರಾಂಟ್‌ಗಳನ್ನು ಕೊಡಬಹುದು. ಆದರೆ ಆಗ ಭಾರತ ಹೇಗೆ ಮಧ್ಯ ಏಷಿಯಾದಲ್ಲಿ ಇಸ್ರೇಲ್ ಇಡೀ ಅರಬ್ ದೇಶಗಳ ದ್ವೇಷಕ್ಕೆ ಗುರಿಯಾಗಿದೆಯೋ ಅದೇ ರೀತಿ ದಕ್ಷಿಣ ಏಷಿಯದ ಎಲ್ಲಾ ಜನರ ದ್ವೇಷಕ್ಕೆ ಪಾತ್ರವಾಗುತ್ತದೆ.



ಅಮೆರಿಕಾಕ್ಕೆ ಶರಣುಹೋದ ಭಾರತದ ಪ್ರಧಾನಿ

ಅದೇ ರೀತಿ ಅದೇ ವಿಷನ್ನಿನ ಭಾಗವಾಗಿ ಅಮೆರಿಕ –ಭಾರತ ವಾಣಿಜ್ಯ ಕೂಟವೊಂದನ್ನು ಸಹ ರಚಿಸಿಕೊಳ್ಳಲಾಗಿದೆ. ೨೦೦೧ ರಿಂದ ಭಾರತ ವಾಣಿಜ್ಯ ನೀತಿಗಳನ್ನು ಭಾರತದ ಸಂಸತ್ತಿಗಿಂತ ಹೆಚ್ಚಾಗಿ ಈ ಕೂಟವೇ ರೂಪಿಸುತ್ತಿದೆ.

೨೦೦೪ರಲ್ಲಿ ಯು.ಪಿ.ಎ. ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸ್ವತಂತ್ರ ವಿದೇಶಾಂಗ ನೀತಿ ರೂಪಿಸುತ್ತೇವೆಂದು ಅವರ ಪ್ರಣಾಳಿಕೆಯಲ್ಲಿ ಭರವಸೆಯನ್ನು ಕೊಟ್ಟಿದ್ದರೂ ಅವರಿಗೆ ಬೆಂಬಲ ಕೊಟ್ಟಿರುವ ಎಡ ಪಕ್ಷಗಳು ಅಮೆರಿಕ ಪರವಾದ ನೀತಿಗಳಿಗೆ ತಾವು ವಿರುದ್ಧವೆಂದು ಹೇಳುತ್ತಿದ್ದರೂ ಪ್ರಾಯಶಃ ಸ್ವತಂತ್ರ ಭಾರತದ ಇತಿಹಾಸದಲ್ಲೇ ಈ ಹಿಂದೆ ಎಂದೂ ಇಲ್ಲದಂತ ರೀತಿಯಲ್ಲಿ ಭಾರತ ಅಮೆರಿಕದ ನೇರ ವಸಾಹತುವಾಗಿದೆಯೇನೋ ಎಂಬಂತ ನೀತಿಗಳನ್ನು ಅನುಸರಿಸುತ್ತಿದೆ.

ಇದು ಎಲ್ಲರ ಗಮನಕ್ಕೂ ಬಂದದ್ದು ೨೦೦೫ರ ಜುಲೈ ೧೮ ರಂದು ಪ್ರಧಾನಿ ಮನಮೋಹನ್ ಸಿಂಗ್ ಹಾಗೂ ಬುಷ್ ಹಲವಾರು ಒಡಂಬಡಿಕೆಗಳಿಗೆ ಸಹಿ ಹಾಕಿ

ದಾಗ. ಈ ಹೊಸ ಒಪ್ಪಂದದಿಂದಾಗಿ ಭಾರತ ಈವರೆಗೆ ತನ್ನ ಹಿತಾಸಕ್ತಿಯಿಂದ ಬೆಳೆಸಿಕೊಂಡು ಬಂದಿದ್ದ ಎಲ್ಲಾ ಮೈತ್ರಿಗಳಿಗೂ, ತನ್ನದೇ ಸ್ವತಂತ್ರ ನೀತಿಗಳಿಗೂ ದ್ರೋಹ ಬಗೆಯುತ್ತಿದೆ. ಈಗಾಗಲೇ ಇಸ್ರೇಲ್‌ನ ಅರಬ್ ವಿರೋಧಿ ನೀತಿಗಳನ್ನು ವಿರೋಧಿಸಿ ಆ ದೇಶದೊಂದಿಗೆ ತತ್ವಾಧಾರಿತ ವಾಗಿ ಮೈತ್ರಿ ಕಡಿದುಕೊಂಡಿದ್ದನ್ನು ಕೆಲ ವರ್ಷದ ಕೆಳಗೆ ಅಮೆರಿಕದ ಅಣತಿಯ ಮೇರೆಗೆ ರದ್ದು ಮಾಡಿ ಈಗ ಇಸ್ರೇಲ್‌ನೊಂದಿಗೆ ನಿಕಟ ಮೈತ್ರಿ ಸಾಧಿಸಿರುವುದಲ್ಲದೇ ದಕ್ಷಿಣ ಏಷಿಯಾದಲ್ಲಿ ತಾನೇ ಒಂದು ಇಸ್ರೇಲ್ ಆಗಲು ಅದರಿಂದಲೇ ತನ್ನ ಸೈನ್ಯಕ್ಕೆ ತರಬೇತಿ ಕೊಡಿಸುತ್ತಿದೆ! ಶತಶತಮಾನಗಳಿಂದ ಇರಾನ್‌ನೊಂದಿಗೆ ಇದ್ದ ಮೈತ್ರಿ ಯನ್ನು ಗಾಳಿಗೆ ತೂರಿ ಅಮೆರಿಕದ ಅಪ್ಪಣೆ ಮೇರೆಗೆ ಅತ್ಯಂತ ಅನ್ಯಾಯಯುತವಾಗಿ ಐ.ಎ.ಇ.ಎ. ಸಭೆಯಲ್ಲಿ ಅದರ ವಿರುದ್ಧ ಮತ ಹಾಕಿ ಅಮೆರಿಕ ನಡೆಸಲಿರುವ ಮತ್ತೊಂದು ಯುದ್ಧದಲ್ಲಿ ತಾನೂ ಪ್ರತ್ಯಕ್ಷವಾಗಿ ಭಾಗಿ ಯಾಗಿ ಭಾರತದ ಭದ್ರತೆಯನ್ನೇ ಅಪಾಯಕ್ಕೆ ಒಡ್ಡಲಾಗಿದೆ. ನೇಪಾಳದಲ್ಲಿ ಪ್ರಜಾತಂತ್ರಕ್ಕಾಗಿ ನಡೆಯುತ್ತಿರುವ ಹೋರಾ ಟವನ್ನು ದಮನ ಮಾಡಲು ಸೈನಿಕ ಸಹಾಯವನ್ನು ಮಾಡುತ್ತಿದೆ. ಹೀಗಾಗಿ ಬುಷ್‌ನೊಂದಿಗೆ ಭಾರತದ ಮೈತ್ರಿ ಭಾರತದ ದುಡಿಯುವ ಜನತೆಗೆ ಮಾತ್ರವಲ್ಲದೆ ಇಡೀ ದಕ್ಷಿಣ ಏಷಿಯದ ಜನತೆಗೆ ಅತಿ ದೊಡ್ಡ ಆತಂಕವನ್ನು ಉಂಟು ಮಾಡುವಂತದ್ದಾಗಿದೆ.

ಬುಷ್‌ನ ಅಮೆರಿಕ ಪ್ರಜಾತಂತ್ರದ ಶತೃ:

ವಿಶ್ವದ ಮಹಾನ್ ಪ್ರಜಾತಂತ್ರವೆಂದು ಹೆಗ್ಗಳಿಕೆ ಹೇಳಿಕೊಳ್ಳುವ ಅಮೆರಿಕ ಪ್ರಪಂಚದ ಪ್ರಜಾಸತ್ತೆಗೆ ಅತಿ ದೊಡ್ಡ ಶತೃವೂ ಅಗಿದೆ. ಎರಡನೇ ಪ್ರಪಂಚ ಯುದ್ಧದ ನಂತರ ಅಮೆರಿಕ ತನ್ನ ಬೇಹುಗಾರಿಕೆ ಸಂಸ್ಥೆಯಾದ ಸಿ.ಐ.ಎ. ಮೂಲಕ ಮೂಲೋತ್ಪಾಟನೆ ಮಾಡಿರದ, ಮಧ್ಯ ಪ್ರವೇಶ ಮಾಡಿ ಸ್ಥಳೀಯವಾಗಿ ಪ್ರಜಾತಾಂತ್ರಿಕವಾಗಿ ಆಯ್ಕೆಗೊಂಡ ಸರ್ಕಾರಗಳನ್ನು ಮೋಸದಿಂದ ಹಾಗೂ ಸೈನಿಕಬಲದ ಮೂಲಕ ಅಸ್ಥಿರಗೊಳಿಸದ ದೇಶಗಳೇ ಇಲ್ಲ. ೧೯೫೦ ರಲ್ಲಿ ಗ್ವಾಟೆಮಾಲದ ಅಧ್ಯಕ್ಷ ಎಲ್ಲಾ ಅಮೆರಿಕದ ಕಂಪನಿಗಳನ್ನು ರಾಷ್ಟ್ರೀಕರಣ ಮಾಡುವುದಾಗಿ ಘೋಷಿಸಿದ ಕೆಲವೇ ತಿಂಗಳಲ್ಲಿ ನೇರ ಸೈನಿಕ ಆಕ್ರಮಣ ಮಾಡಿ ಅಧ್ಯಕ್ಷ ಎಬರ್ನೇಜ್ಝ್ ಅವರನ್ನು ಕೊಂದುಹಾಕಿದ್ದರಿಂದ ಹಿಡಿದು ಇತ್ತೀಚೆಗೆ ಪ್ಯಾಲೆಸ್ತೀನ್‌ನಲ್ಲಿ ಅತ್ಯಂತ ಜನಪ್ರಿಯ ಹಾಗೂ ಅಮೆರಿಕದ ಕಟ್ಟಾ ವಿರೋಧಿ ಹಮಾಸ್ ಪಕ್ಷ ಗೆಲ್ಲದಂತೆ ಮಾಡಲು ಬಳಸಿದ ಹೀನಾಯ ಕುತಂತ್ರಗಳವರೆಗೆ ತನ್ನ ಹಿತಾಸಕ್ತಿಯ ವಿರುದ್ಧವಿರುವ ದೇಶಗಳ ಪ್ರಜಾತಂತ್ರವನ್ನು ಕಗ್ಗೊಲೆ ಮಾಡಲು ನೆಡೆಸಿದ ಪ್ರಯತ್ನಗಳ ದೊಡ್ಡ ಪಟ್ಟಿಯೇ ಇದೆ.

ವಿಶ್ವ ವ್ಯವಸ್ಥೆಯ ಶಾಂತಿಯನ್ನು ಕಾಪಾಡಿ ಕೊಂಡು ಬರಲು ಎರಡನೇ ಮಹಾ ಯುದ್ಧದ ನಂತರ ರಚಿಸಿಕೊಂಡಿರುವ ವಿಶ್ವ ಸಂಸ್ಥೆಯನ್ನೂ ಅಮೆರಿಕ ತನ್ನ ಕೈ ಗೊಂಬೆಯನ್ನಾಗಿಸಿಕೊಂಡಿದೆ. ವಿಶ್ವಸಂಸ್ಥೆ ಪ್ಯಾಲೆಸ್ತೀನ್ ಬಗ್ಗೆ, ಮಾಡಿರುವ ತೀರ್ಮಾನಗಳನ್ನು ಇಸ್ರೇಲ್ ಉಲ್ಲಂಘಿಸಿದರೆ ವಿಶ್ವಸಂಸ್ಥೆ ಇಸ್ರೇಲ್ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳದಂತೆ ಅಮೆರಿಕ ವಿಶ್ವಸಂಸ್ಥೆ ಯಲ್ಲಿ ವೀಟೋ ಚಲಾಯಿಸುತ್ತಾ ಬಂದಿದೆ. ಪ್ರಪಂಚದ ದೇಶಗಳೆಲ್ಲಾ ಚಿತ್ರ ಹಿಂಸೆ ಮಾಡುವುದರ ವಿರುದ್ಧದ ಸನ್ನದಿಗೆ ಸಹಿ ಹಾಕಿದ್ದರೆ ಅದಕ್ಕೆ ಸಹಿ ಮಾಡದಿರುವ ಏಕೈಕ ರಾಷ್ಟ್ರ ಅಮೆರಿಕ. ಇದಲ್ಲದೆ ಇರಾಕ್ ಮೇಲೆ ಹಾಗೂ ಅಫ್ಘಾನಿಸ್ಥಾನದ ಮೇಲಿನ ಆಕ್ರಮಣಗಳು ಸಂಪೂರ್ಣವಾಗಿ ವಿಶ್ವಸಂಸ್ಥೆಯ ಪರವಾನಗಿಯನ್ನೇನೂ ಪಡೆದುಕೊಂಡಿಲ್ಲ.

೪೯ರಲ್ಲಿ ಕೊರಿಯಾದ ವಿರೋಧ ಪಕ್ಷದ ನಾಯಕ ಕಮ್ಯುನಿಸ್ಟ್ ಹಿತೈಷಿ ಕಿಮ್ ಕೊ ಕೊಲೆ, ಪನಾಮ ಕಾಲುವೆ ಯನ್ನು ರಾಷ್ಟ್ರೀಕರಣ ಮಾಡುವ ಯೋಜನೆ ಹೊಂದಿದ್ದ ತಪ್ಪಿಗೆ ಪನಾಮದ ಅಧ್ಯಕ್ಷ ಅಂಟೋನಿಯೊ ಕಿಮಾನ್ ಕೊಲೆ, ಅಮೆರಿಕ ವಿರೋಧಿ ಹಾಗೂ ಸಮಾಜವಾದಿ ಅಭಿಪ್ರಾಯಗಳುಳ್ಳ ತಪ್ಪಿಗೆ ಕಾಂಬೋಡಿಯಾದ ರಾಜ ಸಿಹಾನುಕ್ ಕೊಲೆ, ಕಾಂಗೋ ದೇಶದಲ್ಲಿ ಅಲ್ಲಿನ ತೈಲ ಹಾಗೂ ವಜ್ರದ ಗಣಿಗಳನ್ನು ರಾಷ್ಟ್ರೀಕರಣ ಮಾಡಿದ ತಪ್ಪಿಗೆ ಪ್ಯಾಟ್ರಿಕ್ಸ್ ಲುಮುಂಬಾನ ಕೊಲೆ, ಕ್ಯೂಬದ ನಾಯಕ ಫಿಡೆಲ್ ಕ್ಯಾಸ್ಟ್ರೋನ ಕೊಲೆಗೆ ಈಗಲೂ ಮುಂದುವರೆದಿರುವ ಪ್ರಯತ್ನ, ೧೯೭೧ ರಲ್ಲಿ ಅಮೆರಿಕದ ವಿರೋಧಿ ನಿಲುವ ತೆಗೆದುಕೊಂಡಿದ್ದಕ್ಕಾಗಿ ಪ್ರಜಾತಾಂತ್ರಿಕ ವಾಗಿ ಅತಿ ಹೆಚ್ಚು ಬಹುಮತದಿಂದ ಆಯ್ಕೆ ಆಗಿದ್ದ ಸಾಲ್ವಡಾರ್ ಅಲೆಂಡೆಯ ಕೊಲೆ, ಇರಾನ್‌ನ ಅಧ್ಯಕ್ಷರ ಸತತ ಕೊಲೆ ಪ್ರಯತ್ನಗಳು ತೀರ, ಇತ್ತೀಚೆಗೆ ವೆನಿಜು ವೆಲದ ಅಧ್ಯಕ್ಷ ಶವೇಜ್ರನ್ನು ಪದಚ್ಯುತಗೊಳಿಸಲು ಸತತ ಪ್ರಯತ್ನಗಳು... ಇವೆಲ್ಲವೂ ಅಮೆರಿಕಕ್ಕೆ ಬೇಕಾಗಿರುವುದು ಅದರ ಸಾಮ್ರಾಜ್ಯದ ವಿಸ್ತರಣೆಯೇ ವಿನಃ ಪ್ರಜಾತಂತ್ರವಲ್ಲ.

ಇದಲ್ಲದೆ ವಿಶ್ವ ವ್ಯವಸ್ಥೆಯ ಶಾಂತಿಯನ್ನು ಕಾಪಾಡಿ ಕೊಂಡು ಬರಲು ಎರಡನೇ ಮಹಾಯುದ್ಧದ ನಂತರ ರಚಿಸಿಕೊಂಡಿರುವ ವಿಶ್ವ ಸಂಸ್ಥೆಯನ್ನೂ ಅಮೆರಿಕ ತನ್ನ ಕೈ ಗೊಂಬೆಯನ್ನಾಗಿಸಿಕೊಂಡಿದೆ. ವಿಶ್ವಸಂಸ್ಥೆ ಪ್ಯಾಲೆಸ್ತೀನ್ ಬಗ್ಗೆ, ಮಾಡಿರುವ ತೀರ್ಮಾನಗಳನ್ನು ಇಸ್ರೇಲ್ ಉಲ್ಲಂಘಿ ಸಿದರೆ ವಿಶ್ವಸಂಸ್ಥೆ ಇಸ್ರೇಲ್ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳದಂತೆ ಅಮೆರಿಕ ವಿಶ್ವ ಸಂಸ್ಥೆಯಲ್ಲಿ ವೀಟೋ ಚಲಾಯಿಸುತ್ತಾ ಬಂದಿದೆ. ಪ್ರಪಂಚದ ದೇಶಗಳೆಲ್ಲಾ ಚಿತ್ರ ಹಿಂಸೆ ಮಾಡುವುದರ ವಿರುದ್ಧದ ಸನ್ನದಿಗೆ ಸಹಿ ಹಾಕಿದ್ದರೆ ಅದಕ್ಕೆ ಸಹಿ ಮಾಡದಿರುವ ಏಕೈಕ ರಾಷ್ಟ್ರ ಅಮೆರಿಕ. ಇದ ಲ್ಲದೆ ಇರಾಕ್ ಮೇಲೆ ಹಾಗೂ ಅಫ್ಘಾನಿಸ್ಥಾನದ ಮೇಲೆ ಅಮೆರಿಕ ನಡೆಸಿದ ಹಾಗೂ ನಡೆಸುತ್ತಿರುವ ಎಲ್ಲಾ ಆಕ್ರಮ ಣಗಳು ಸಂಪೂರ್ಣವಾಗಿ ವಿಶ್ವಸಂಸ್ಥೆಯ ಪರವಾಗಿಯೆ ನ್ನೇನೂ ಪಡೆದುಕೊಂಡಿಲ್ಲ. ಇದಲ್ಲದೆ ಅಮೆರಿಕವೇ ಪ್ರಪಂಚದಾದ್ಯಂತ ಅಮೆರಿಕ ಫಿಲಿಫೈನ್ಸ್ ಅನ್ನು ಸರ್ವಾ ಧಿಕಾರಿ ಮಾರ್ಕೋಸ್, ಇಂಡೋನೇಷಿಯದ ಸರ್ವಾ ಧಿಕಾರಿ ಸುಹಾರ್ತೋ, ನೈಜೀರಿಯಾದ ಅಬಚ, ಅರಬ್ ರಾಷ್ಟ್ರಗಳ ತೈಲದೊರೆಗಳಾದ ಷಾಗಳನ್ನು ಇದೇ ಅಮೆರಿಕ ಪೋಷಿಸಿಕೊಂಡು ಬಂದಿದೆ.

ಈಗ ಸೆಪ್ಟೆಂಬರ್ ೧೧ರ ನಂತರ ತನ್ನ ದೇಶದಲ್ಲೇ ಈವರೆಗೆ ಉಳಿಸಿಕೊಂಡು ಬಂದಿದ್ದ ಎಲ್ಲಾ ಮಾನವ ಹಕ್ಕುಗಳನ್ನು ಉಲ್ಲಂಘಿಸುವ ಹೊಸಹೊಸ ತಂತ್ರಗಾರಿಕೆ ಕಂಡುಕೊಳ್ಳತ್ತಿದೆ.

ಇಂದು ಪ್ರಪಂಚದ ಮಾರುಕಟ್ಟೆ ಕಬಳಿಸುವ ರಾಕ್ಷಸ ಹಸಿವಿನಿಂದ ಇಡೀ ಪ್ರಪಂಚದ ಮೇಲೆ, ಇಲ್ಲಿನ ಶಾಂತಿ ಹಾಗೂ ನೆಮ್ಮದಿಯ ಬದುಕಿನ ಮೇಲೆ ದಾಳಿ ಮಾಡಲು ಬರುತ್ತಿರುವ ಬುಷ್ ಈ ರೀತಿಯಲ್ಲಿ ಭಾರತದ ಜನತೆಯ, ವಿಶ್ವದ ಜನತೆಯ ಶತೃವಾಗಿದ್ದಾನೆ. ಬುಷ್‌ನ ಭಾರತ ಭೇಟಿಯ ಹಿಂದೆ ಭಾರತವನ್ನು ತನ್ನ ಯುದ್ಧಕೋರ ನೀತಿ ಗಳಿಗೆ ಬಳಸಿಕೊಳ್ಳುವ ಹುನ್ನಾರವಿದೆ.

ಆದ್ದರಿಂದಲೇ ಇಡೀ ಭಾರತದ ಜನತೆ ಒಕ್ಕೊರಲಿ ನಿಂದ ಬುಷ್ ವಿರುದ್ಧ ಹಾಗೂ ಅವನ ಸಾಮ್ರಾಜ್ಯಶಾಹಿ ಯೋಜನೆಗಳಿಗೆ ಕೈಗೂಡಿಸಿ ಭಾರತವನ್ನು ಆತಂಕಗಳಿಗೆ ದೂಡುತ್ತಿರುವ ಭಾರತ ಸಾಮಂತಶಾಹಿ, ಅಮೆರಿಕದ ದಲ್ಲಾಳಿ ಆಳುವ ವರ್ಗಗಳ ವಿರುದ್ಧ ಪ್ರಜಾಪತಿಯುದ್ಧ ವನ್ನೇ ಸಾರಬೇಕಾಗಿದೆ.

ಬುಷ್ ಭಾರತದ ಅತಿಥಿಯಲ್ಲ.

ಬುಷ್ ಹಿಂತಿರುಗು. □



'ಸಂವಾದ' ದೊರೆಯುವ ಸ್ಥಳ

☞ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ

✢ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು- ೫೬೦ ೦೦೧, ☎ : ೨೨೨೦೩೫೮೦

✢ಗಾಂಧಿನಗರ, ಬೆಂಗಳೂರು-೫೬೦ ೦೦೯, ☎ : ೨೨೨೫೦೩೩೮೨, ✢ಸ್ಟೇಷನ್ ರಸ್ತೆ, ಗುಲ್ಬರ್ಗ-೨ ☎ : ೪೨೪೩೦೨

✢ಕೆ.ಎಸ್.ರಾವ್.ರಸ್ತೆ, ಮಂಗಳೂರು-೧, ☎ : ೨೪೪೧೧೦೧೬, ✢ರಾಮಸ್ವಾಮಿ ವೃತ್ತ ಮೈಸೂರು-೨೪, ☎ : ೨೪೨೪೯೪

☞ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಶೇಷಾದ್ರಿಪುರಂ ಅಂಚೆ ಕಛೇರಿ ಎದುರು, ಬೆಂಗಳೂರು – ೫೬೦೦೨೦

☞ಕೆ.ಎಸ್.ಅರ್.ಟಿ.ಸಿ. ಬುಕ್ ಸ್ಟಾಲ್, ಫ್ಲಾಟ್ ಫಾಮ್ ನಂ.೧, ಸ್ಟಾಲ್ ನಂ.೭, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು

ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷಾ ಸ್ಥಾನ-ಒಂದು ಅವಲೋಕನ

ವಿಶ್ಲೇಷಣೆ

ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನ ನೀಡುವುದು ಅವಶ್ಯವೇ ಎನ್ನುವುದಕ್ಕಿಂತಲೂ, ಈ ಶಾಸ್ತ್ರೀಯ ಭಾಷಾ ನೀತಿಯನ್ನೆ ಸೂಕ್ಷ್ಮವಾಗಿ ಪರಿಶೀಲಿಸುವುದು ಅಗತ್ಯವಾಗಿದೆ. ಕೇಂದ್ರ ಸರ್ಕಾರದ ನೀತಿಯ ಪ್ರಕಾರ ಯಾವುದೇ ಭಾಷೆಗೆ ಶಾಸ್ತ್ರೀಯ ಭಾಷೆ ನೀಡಲು ಕೆಲವು ನಿಯಮಗಳಿವೆ. ಆ ಭಾಷೆಗೆ ಕನಿಷ್ಟ ೩೦೦೦ ಇತಿಹಾಸವಿರಬೇಕು ಹಾಗೂ ಪ್ರಾಚೀನ ಪಠ್ಯ ಪುಸ್ತಕಗಳು, ದಾಖಲೆಯಾಗಿರುವ ಇತಿಹಾಸ ೧೦೦೦ ವರ್ಷಗಳದ್ದಾಗಿರಬೇಕು. ಮುಖ್ಯವಾಗಿ ಶಾಸ್ತ್ರೀಯ ಭಾಷೆಯ ಪಟ್ಟ ನೀಡುವ ಪರಂಪರೆಯೇ ಹೊಸದು ಮತ್ತು ಒಂದು ಆಡಳಿತಾರೂಢ ಪಕ್ಷ ಹುಟ್ಟು ಹಾಕಿದ್ದು. ಹಾಗಾಗಿ ಈ ನಿಟ್ಟಿನಲ್ಲಿ ರಾಜಕೀಯ ಪ್ರವೇಶಿಸುವುದು ಅಚ್ಚರಿಯ ಮಾತೇನಲ್ಲ.

ನಾ. ದಿವಾಕರ

ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷಾ ಸ್ಥಾನ ಪಾಲಿಸುವ ಬಗ್ಗೆ ಉದ್ಭವಿಸಿರುವ ವಿವಾದದಿಂದ ಕನ್ನಡ ಸಾಹಿತ್ಯ-ಸಾಂಸ್ಕೃತಿಕ ಲೋಕದಲ್ಲಿ ತೀವ್ರತರವಾದ ಭಿನ್ನಾಭಿಪ್ರಾಯಗಳು ತಲೆದೋರಿದ್ದು, ಕರ್ನಾಟಕ ರಾಜ್ಯೋತ್ಸವದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ, ರಾಜ್ಯದ ಸಾಹಿತಿ ಕಲಾವಿರು ಹಾಗೂ ಬುದ್ಧಿ ಜೀವಿಗಳ ನಡುವೆ ಐಕ್ಯತಾ ಮನೋಭಾವದ ಬದಲು, ತಿರಸ್ಕಾರ, ಅಸೂಯೆ ಹಾಗೂ ಪರಸ್ಪರ ದ್ವೇಷ ಭಾವನೆಗಳು ತಾಂಡವಾಡುತ್ತಿರುವುದು, ಪ್ರಜ್ಞಾವಂತ ಕನ್ನಡಿಗರಲ್ಲಿ ಆತಂಕ ಮೂಡಿಸಿದೆ. ಈ ವಿವಾದದಲ್ಲಿ ಕನ್ನಡದ ಸ್ಥಾನಮಾನಗಳಿಗಿಂತಲೂ ಹೆಚ್ಚಾಗಿ ವೈಯಕ್ತಿಕ ಪ್ರತಿಷ್ಠೆಗಳೇ ಪ್ರಮುಖ ಸ್ಥಾನ ಪಡೆದಿರುವುದು, ದುರದೃಷ್ಟಕರ ಎಂದು ಹೇಳಬಹುದು.

ಇತ್ತೀಚೆಗಷ್ಟೇ ಕೇಳಿಬರುತ್ತಿರುವ "ಶಾಸ್ತ್ರೀಯ ಭಾಷೆ" ಎಂಬ ಪದ ಪುಂಜ ಬಹುಶಃ, ಆಂಗ್ಲ ಭಾಷೆಯ "ಕ್ಲಾಸಿಕಲ್" ಎಂಬ ನೇರ ಅನುವಾದವಿರಬಹುದು. ಅರ್ಥಾತ್, ಸಾಮಾನ್ಯ ಭಾಷೆಯಲ್ಲಿ" ಪ್ರಾಚೀನವಾದ ಮತ್ತು ಉತ್ತಮ ಪರಂಪರೆಯುಳ್ಳ "ಭಾಷೆ ಎಂದೂ ಅರ್ಥೈಸಬಹುದು. ಕೇವಲ ಎರಡು ವರ್ಷಗಳ ಹಿಂದೆ ಈ ಶಾಸ್ತ್ರೀಯ ಭಾಷೆಯ ಬಗ್ಗೆ ಯಾವುದೇ ಚರ್ಚೆ ಇರಲಿಲ್ಲ. ಕೇಂದ್ರದಲ್ಲಿ ಯು.ಪಿ.ಎ. ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ೨೦೦೪ ರ ಜೂನ್ ನಲ್ಲಿ, "ಕ್ಲಾಸಿಕಲ್ ಭಾಷೆ" ಎಂಬ ವರ್ಗವೊಂದನ್ನು ಸೃಷ್ಟಿ ಸಿದ್ದು, ನಂತರದಲ್ಲಿ ಈ ಕ್ಲಾಸಿಕಲ್ ಭಾಷೆಗಳನ್ನು ನಿರ್ಧರಿಸಲು ಸಮಿ ತಿಯೊಂದನ್ನು ನೇಮಿಸಿದ್ದು, ಪ್ರಸ್ತುತ ವಿವಾದಗಳಿಗೆ ಎಡೆಮಾಡಿ ಕೊಟ್ಟಿದೆ. ಕರ್ನಾಟಕದ ಸುವರ್ಣ ರಾಜ್ಯೋತ್ಸವದ ಸಂದರ್ಭದಲ್ಲಿ, ಕನ್ನಡ ಭಾಷೆ, ಸಂಸ್ಕೃತಿ, ಸಾಮಾಜಿಕ ಸಮಸ್ಯೆಗಳು ಶಿಕ್ಷಣ ವ್ಯವಸ್ಥೆ, ಸಾಹಿತ್ಯ, ಕಲೆ ಮುಂತಾದ ವಿಷಯಗಳಲ್ಲಿ ಅವಲೋಕನ ಮಾಡುವ ಅಗತ್ಯವಿದೆ.



ಜಾಗತೀಕರಣ ಪ್ರಭಾವದಿಂದ ನಶಿಸಿ ಹೋಗುತ್ತಿರುವ ಸಾಂಸ್ಕೃತಿಕ ನೆಲೆಗಳು, ಸಂಪರ್ಕ ಮಾಧ್ಯಮದಲ್ಲಿನ ಕ್ರಾಂತಿಯಿಂದ ಕ್ರಮೇಣ ಮರೆಯಾಗುತ್ತಿರುವ ಸಾಹಿತ್ಯಾಧ್ಯಯನ, ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ಆಕ್ರಮಣದಿಂದ ಉದ್ಭವಿಸುತ್ತಿರುವ ಸಾಮಾಜಿಕ-ಆರ್ಥಿಕ ಸಮಸ್ಯೆಗಳು, ಶಾಂತಿ-ಸಹನೆ-ಸೃಜನಶೀಲತೆಗೆ ಹೆಸರಾದ ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿರುವ ಹಿಂಸಾತ್ಮಕ ಪ್ರವೃತ್ತಿ ಮತ್ತು ಬಂಡವಾಳಶಾಹಿ ಬೆಳವಣಿಗೆಯಿಂದ ಉಂಟಾಗುತ್ತಿರುವ ಪರಿಸರ ವಿನಾಶ, ಇತ್ಯಾದಿ ಗಂಭೀರ ವಿಷಯಗಳ ಬಗ್ಗೆ ಚರ್ಚೆಗಳಾಗಬೇಕಿದೆ.. ೫೦ ವರ್ಷಗಳ ಅವಧಿಯಲ್ಲಿ ಕರ್ನಾಟಕದ ಸಾಧನೆಗಳು, ವಿಕ್ರಮಗಳು, ವಿಫಲತೆಗಳನ್ನು ವಸ್ತುನಿಷ್ಠವಾಗಿ ವಿಮರ್ಶಿಸಿ, ವಾಸ್ತವತೆಗೆ ಒರೆ ಹಚ್ಚಿ ನೋಡಿ, ಆತ್ಮಾವಲೋಕನ ಮಾಡಿಕೊಳ್ಳುವುದು ಇಂದಿನ ಅಗತ್ಯತೆಯಾಗಿದೆ. ಆದರೆ ದುರದೃಷ್ಟವಶಾತ್ ನಾವು ಕಾಣುತ್ತಿರುವುದು ಕೇವಲ ಪರಸ್ಪರ ದ್ವೇಷಾರೋಪಗಳಾಗಿದೆ. ಸುವರ್ಣ ರಾಜ್ಯೋತ್ಸವದ ಸಂದರ್ಭದಲ್ಲಿ ಬೆಳಗಾವಿ ವಿವಾದ ಮತ್ತು ಶಾಸ್ತ್ರೀಯ ಭಾಷಾ ವಿವಾದಗಳು ಕಪ್ಪು ಚುಕ್ಕೆಗಳೆಂದರೂ ತಪ್ಪಾಗಲಾರದು. ಈ ಎರಡೂ ವಿವಾದಗಳ ಮೂಲಕ ಕರ್ನಾಟಕದ ಸಾಹಿತಿಗಳಲ್ಲಿನ ಅನೈಕ್ಯತೆ, ಕಲಾವಿದರಲ್ಲಿನ ನಿರ್ಲಕ್ಷ್ಯತೆ, ಹೋರಾಟಗಾರರಲ್ಲಿರುವ ಅಸಹನೆ ಹಾಗೂ ದುರಭಿಮಾನಗಳು ಸ್ಪಷ್ಟವಾಗಿ ವ್ಯಕ್ತವಾಗಿವೆ. ಈ ಲೇಖನದ ಪರಿದಿಯಿಂದ ಹೊರತಾದರೂ ಬೆಳಗಾವಿ ವಿವಾದ ಮತ್ತು ಅದರ ಸುತ್ತ ನಡೆದ ಗಲಭೆಗಳ ಬಗ್ಗೆ ಹೇಳುವುದು ಅಗತ್ಯವೆನಿಸುತ್ತದೆ.

ಬೆಳಗಾವಿ ಜಿಲ್ಲೆಯ ಕೆಲವು ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಸೇರಿಸುವ ನಗರ ಪಾಲಿಕೆಯ ನಿರ್ಣಯ, ಸಂವಿಧಾನ ವಿರೋಧಿಯಾಗಿದ್ದು, ಎಂ.ಇ.ಎಸ್. ಪಕ್ಷದ ಈ ಕೃತ್ಯವನ್ನು ಖಂಡಿಸಬೇಕಾದ್ದು ಪ್ರಜಾತಂತ್ರವಾದಿಗಳ ಕರ್ತವ್ಯವೇ. ಆದರೆ ವಿಧಾನ ಸೌಧದೊಳಗೆ ನುಗ್ಗಿ, ದಾಂಧಲೆ ನಡೆಸಿ, ಬೆಳಗಾವಿ ನಗರ ಪಾಲಿಕೆ ಸದಸ್ಯರಿಗೆ ಮಸಿ ಬಳೆಯುವ ಅಗತ್ಯತೆ ಇರಲಿಲ್ಲವೆನಿಸುತ್ತದೆ. ಇಲ್ಲಿ ಬೆಳಗಾವಿ ಸದಸ್ಯರ ನಿಲುವು ಖಂಡನಾರ್ಹ ತಪ್ಪಾದರೆ, ಅವರ ಮೇಲೆ ಅಮಾನವೀಯ ದಾಳಿ ನೆಡೆಸಿದ ಕನ್ನಡ ರಕ್ಷಣಾ ವೇದಿಕೆಯ ಕೃತ್ಯ ಶಿಕ್ಷಾರ್ಹ ಅಪರಾಧ ವಾಗುತ್ತದೆ. ಅದು ಕನ್ನಡಿಗರ ಸಂಸ್ಕೃತಿಯನ್ನು ಯಾವ ರೀತಿಯಲ್ಲೂ ಪ್ರತಿಬಿಂಬಿಸುವುದಿಲ್ಲ. ಬದಲಾಗಿ, ಕರ್ನಾಟಕದಲ್ಲಿ ಬೆಳೆಯುತ್ತಿರುವ ಹಿಂಸಾತ್ಮಕ ಪ್ರವೃತ್ತಿಯ ಸಂಕೇತವಾಗುತ್ತದೆ. ಆದಾಗ್ಯೂ ಆ ರೀತಿಯ ಆಕ್ರಮಣದ ಫಲವಾಗಿಯೇ ವಿವಾದವೂ ತಣ್ಣಗಾಗಿದ್ದು, ಸಾಮಾಜಿಕ ತುಮುಲತೆಯನ್ನು ತೋರುತ್ತದೆ. ಆದರೆ ಬೆಳಗಾವಿ ವಿವಾದದಲ್ಲಾ ಗಲೀ, ಶಾಸ್ತ್ರೀಯ ಭಾಷೆಯ ವಿಷಯದಲ್ಲಾಗಲೀ, ಕನ್ನಡ ಹೋರಾಟ ಗಾರರ ಮತ್ತು ಕನ್ನಡ ಸಾಹಿತಿ ಕಲಾವಿದರ ನಿಲುವುಗಳು, ವರ್ತನೆಗಳು ಪ್ರಶ್ನಾರ್ಹವಾಗಿವೆ.

ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನ ನೀಡುವುದು ಅವಶ್ಯವೇ ಎನ್ನುವುದಕ್ಕಿಂತಲೂ, ಈ ಶಾಸ್ತ್ರೀಯ ಭಾಷಾ ನೀತಿಯನ್ನೆ ಸೂಕ್ಷ್ಮವಾಗಿ ಪರಿಶೀಲಿಸುವುದು ಅಗತ್ಯವಾ ಗಿದೆ. ಕೇಂದ್ರ ಸರ್ಕಾರದ ನೀತಿಯ ಪ್ರಕಾರ ಯಾವುದೇ ಭಾಷೆಗೆ ಶಾಸ್ತ್ರೀಯ ಭಾಷೆ ನೀಡಲು ಕೆಲವು ನಿಯಮ ಗಳಿವೆ. ಆ ಭಾಷೆಗೆ ಕನಿಷ್ಟ ೩೦೦೦ ಇತಿಹಾಸವಿರಬೇಕು ಹಾಗೂ ಪ್ರಾಚೀನ ಪಠ್ಯ ಪುಸ್ತಕಗಳು, ದಾಖಲೆಯಾಗಿರುವ ಇತಿಹಾಸ ೧೦೦೦ ವರ್ಷಗಳದ್ದಾಗಿರಬೇಕು. ಈ ಪ್ರಾಚೀನ ಸಾಹಿತ್ಯವು ಒಂದು ಮೌಲಿಕ ಪರಂಪರೆಯಾಗಿ ಪ್ರಚಲಿತ ವಾಗಿರಬೇಕು. ಈ ಸಾಹಿತ್ಯ ಪರಂಪರೆಯು ಯಾವುದೇ ಜನಾಂಗೀಯ ಭಾಷೆಯಿಂದ ಬಂದಿರದೆ, ಸ್ವಂತ ಪರಂಪರೆ ಹೊಂದಿರಬೇಕು. ಜಾಗತಿಕ ಮಟ್ಟದಲ್ಲಿ ಸಾಹಿತ್ಯ ರೂಪದಲ್ಲಿ ಪ್ರಚಲಿತವಾಗಿರಬೇಕು. ಮುಖ್ಯವಾಗಿ ಶಾಸ್ತ್ರೀಯ ಭಾಷೆಯ ಪಟ್ಟ ನೀಡುವ ಪರಂಪರೆಯೇ ಹೊಸದು ಮತ್ತು ಒಂದು ಆಡಳಿತಾರೂಢ ಪಕ್ಷ ಹುಟ್ಟು ಹಾಕಿದ್ದು. ಹಾಗಾಗಿ ಈ ನಿಟ್ಟಿನಲ್ಲಿ ರಾಜಕೀಯ ಪ್ರವೇಶಿಸುವುದು ಅಚ್ಚರಿಯ ಮಾತೇನಲ್ಲ.

ಕಳೆದ ಲೋಕಸಭಾ ಚುನಾವಣೆಗಳಲ್ಲಿ, ತಮಿಳು ನಾಡಿನಲ್ಲಿ ಡಿ.ಎಂ.ಕೆ ಪಕ್ಷವು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ತಮಿಳು ಭಾಷೆಗೆ "ಕ್ಲಾಸಿಕಲ್" ಭಾಷೆಯ ಸ್ಥಾನ ನೀಡುವ ಆಶ್ವಾಸನೆ ನೀಡಿತ್ತು. ಕಾಕತಾಳೀಯವೆಂಬಂತೆ ಆ ಪಕ್ಷವು ಬೆಂಬಲಿಸಿದ್ದ ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದ್ದರಿಂದ, ಮಿತ್ರ ಪಕ್ಷವಾದ ಡಿ.ಎಂ.ಕೆಯ ಚುನಾವಣಾ ಆಶ್ವಾಸನೆಯನ್ನು ಪೂರೈಸುವುದು, ಸರ್ಕಾರದ ಅಳಿವು-ಉಳಿವಿನ ಪ್ರಶ್ನೆಯಾಗಿತ್ತು. ಹಾಗಾಗಿ ಕೇಂದ್ರ ಸರ್ಕಾರವು ಏಕಾಏಕಿಯಾಗಿ ತಮಿಳು ಭಾಷೆಯನ್ನು ಶಾಸ್ತ್ರೀಯ ಭಾಷೆ ಎಂದು ಘೋಷಿಸಿತು. ಇದು ಅಪ್ಪಟ ರಾಜಕೀಯ ನಿರ್ಧಾರ. ತದನಂತರದಲ್ಲಿ ಅನ್ಯ ಭಾಷೆಗಳಿಗೂ ಅನುಕೂಲವಾಗಲೆಂದು, ಕೇಂದ್ರ ಸರ್ಕಾರವು ಭಾಷಾ ವಿಜ್ಞಾನಿಗಳು ಮತ್ತು ಪ್ರಖ್ಯಾತ ಸಾಹಿತಿಗಳನ್ನೊಳಗೊಂಡ ಸಮಿತಿಯೊಂದನ್ನು ರಚಿಸಿ ತಮಿಳು ಹೊರತಾಗಿ ಇತರ ಭಾಷೆಗಳಿಗೆ ಶಾಸ್ತ್ರೀಯ ಪಟ್ಟ ನೀಡುವ ಬಗ್ಗೆ ಸಂಶೋಧನೆ ಕೈಗೊಳ್ಳಲು ತೀರ್ಮಾನಿಸಿತು. ನಂತರ ಈ ಸಮಿತಿಯು ಸಂಸ್ಕೃತವನ್ನೂ ಶಾಸ್ತ್ರೀಯ ಭಾಷೆ ಎಂದು ಘೋಷಿಸಿತು.

ಕರ್ನಾಟಕ ಸರ್ಕಾರ ಈ ನಿಟ್ಟಿನಲ್ಲಿ ನೇಮಿಸಿದ ಸಮಿತಿಯು ತನ್ನ ಶಿಫಾರಸುಗಳನ್ನು ನೀಡುವ ವೇಳೆಗೆ, ದಾಖಲಿತ ಇತಿಹಾಸದ ಅವಧಿ ೧೦೦೦ ವರ್ಷಗಳಿಂದ ೨೦೦೦ ವರ್ಷಗಳಾಗಿ ಮಾರ್ಪಡಿಸಲಾಗಿತ್ತು. ಈ ಬೆಳವಣಿಗೆಗಳಿಂದ ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಪಟ್ಟ ನೀಡುವ ಪ್ರಕ್ರಿಯೆ ಕೊಂಚ ತಡವಾಗಿರಬಹುದು ಅಥವಾ ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಮೇಲೆ ಯಾವುದೇ ರಾಜಕೀಯ ಒತ್ತಡ ಇಲ್ಲದಿರುವುದೂ ಕಾರಣವಿರಬಹುದು. ಈ ನಿಟ್ಟಿನಲ್ಲಿ ತಮಿಳು ಭಾಷೆಗೆ ಶಾಸ್ತ್ರೀಯ ಭಾಷಾ ಪಟ್ಟ ನೀಡುವ ಮುನ್ನ ಕ್ಯಾಲಿಫೋರ್ನಿಯ ವಿಶ್ವ ವಿದ್ಯಾಲಯದ ತಮಿಳು ಅಧ್ಯಯನ ಪೀಠದ ಪ್ರಾಧ್ಯಾಪಕ ಹಾರ್ಟ್ ಎಂದವರು, ತಮಿಳು ಭಾಷೆಯ ಇತಿಹಾಸವನ್ನು ಕುರಿತು ಆಂಗ್ಲ ಲೇಖನವೊಂದನ್ನು ಬರೆದು ವಿಶ್ವದಾದ್ಯಂತ ಪ್ರಚಾರ ಮಾಡಿದ್ದರು. ಗ್ರೀಕ್, ಲ್ಯಾಟಿನ್, ಪರ್ಷಿಯನ್, ಪಾಲಿ, ಅರೆಬಿಕ್, ಹಿಬ್ರೂ, ಸಂಸ್ಕೃತ ಮತ್ತು ಚೀನಿ ಭಾಷೆಗಳಂತೆ ತಮಿಳು ಭಾಷೆಯೂ ಸಹ ಕ್ರಿ.ಪೂ.೨೦೦ ರಿಂದಲೇ ಪ್ರಚಲಿತವಾಗಿದ್ದು ಸಂಸ್ಕೃತಕ್ಕಿಂತಲೂ ಪ್ರಾಚೀನ ಭಾಷೆ ಎಂದು ಆ ಲೇಖನದಲ್ಲಿ ಪ್ರತಿಪಾದಿಸಲಾಗಿದೆ. ಆದರೆ ಈ ರೀತಿಯ ಲೇಖನ ಕನ್ನಡದ ಬಗ್ಗೆ ಯಾರೂ ಬರೆದಿಲ್ಲವೆನ್ನುವುದು ವಿಪರ್ಯಾಸವಷ್ಟೆ. ಹಾಗೆ ಬರೆದಿದ್ದರೂ ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನ ದೊರೆಯುತ್ತಿತ್ತೆಂದು ಹೇಳಲಾಗುವುದಿಲ್ಲ. ಏಕೆಂದರೆ ಇಲ್ಲಿ ಭಾಷೆಗಿಂತಲೂ ಹೆಚ್ಚಾಗಿ, ರಾಜಕೀಯ ಹೆಚ್ಚು ಸಕ್ರಿಯವಾಗಿದೆ.

ಇನ್ನು ಒಂದು ವೇಳೆ ಕನ್ನಡವನ್ನು ಶಾಸ್ತ್ರೀಯ ಭಾಷೆ ಎಂದು ಪರಿಗಣಿಸಿದಲ್ಲಿ, ಉಂಟಾಗುವ ಅನುಕೂಲಗಳೇನು ಎಂಬ ಅಂಶವು ಮುಖ್ಯ ಪ್ರಶ್ನೆಯಾಗಿದೆ. ಮೊದಲನೆಯದಾಗಿ ಕನ್ನಡ ಭಾಷಾ ಅಧ್ಯಯನ ಪೀಠವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಯಾವುದಾದರೂ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಬಹುದು. ಕೇಂದ್ರ ಸರ್ಕಾರವು ರಾಷ್ಟ್ರದ ಯಾವುದಾದರೂ ಒಂದು ವಿದ್ಯಾ ಕೇಂದ್ರದಲ್ಲಿ "ಕನ್ನಡ ಸರ್ವೋತ್ತಮ ಅಧ್ಯಯನ ಕೇಂದ್ರ" ಸ್ಥಾಪಿಸಿ ಅದಕ್ಕೆ ಪೂರಕವಾದ ಧನ ಸಹಾಯ ನೀಡಬಹುದು. ಮೂರನೆಯದಾಗಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ನೆರವಿನಿಂದ ಕೇಂದ್ರೀಯ ವಿದ್ಯಾಲಯಗಳಲ್ಲಿ ಪೀಠಗಳನ್ನು

ಕನ್ನಡ ಸಾಹಿತ್ಯ ಜಾಗತಿಕ ಮಟ್ಟದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಅನೇಕ ಕೃತಿಗಳು, ವಿಶ್ವದ ಇತರ ಭಾಷೆಗಳಿಗೆ ಭಾಷಾಂತರ ಗೊಂಡು, ವಿಶ್ವ ಮಾನ್ಯತೆ ಪಡೆದಿವೆ. ಭಾರತದಲ್ಲೆ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ (ಏಳು) ಪಡೆದಿರುವ ಹೆಗ್ಗಳಿಕೆ ಕನ್ನಡ ಭಾಷೆಗಿದೆ. ಪುರಾಣ, ಇತಿಹಾಸ, ಸಮಕಾಲೀನ ಸಾಹಿತ್ಯ ಪ್ರಕಾರಗಳಲ್ಲಿ ಮತ್ತು ಕಾವ್ಯ-ಗದ್ಯ-ಮಹಾ ಕಾವ್ಯ-ವಿಮರ್ಶೆ-ನಾಟಕ ಹೀಗೆ ಎಲ್ಲಾ ರಂಗಗಳಲ್ಲಿಯೂ ಕನ್ನಡದ ಸಾಧನೆ ಅಪ್ರತಿಮವಾಗಿದೆ. ಕನ್ನಡಿಗರು ಮಾತ್ರ ವಲ್ಲದೆ, ದೇಶಾದ್ಯಂತ ಮತ್ತು ಜಾಗತಿಕ ಮಟ್ಟದಲ್ಲಿ ಕನ್ನಡ ಸಾಹಿತ್ಯ ತನ್ನದೇ ಆದ ಸ್ಥಾನ ಪಡೆದಿದೆ.

ಸ್ಥಾಪಿಸಬಹುದು. ಇದಲ್ಲದೆ ಕೇಂದ್ರ ಸರ್ಕಾರವು ಕನ್ನಡದ ಇಬ್ಬರು ವಿದ್ವಾಂಸರಿಗೆ ಅಂತಾರಾಷ್ಟ್ರೀಯ ಮಟ್ಟದ ಪ್ರಶಸ್ತಿ ನೀಡುತ್ತದೆ. ಎಲ್ಲಕ್ಕಿಂತಲೂ ಮುಖ್ಯವಾದ ಅಂಶವೆಂದರೆ ಕನ್ನಡ ಭಾಷಾಭಿವೃದ್ಧಿಗಾಗಿ ಮತ್ತು ಸಂಶೋಧನೆಗಳಿಗಾಗಿ ಕೇಂದ್ರ ಸರ್ಕಾರವು ಪ್ರತಿವರ್ಷ ಮೂವತ್ತು ಕೋಟಿ ರೂ.ಗಳ ಧನ ಸಹಾಯ ನೀಡುತ್ತದೆ.

ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನ ಪಡೆಯುವ ಅಗತ್ಯವಿದೆಯೇ ಎಂದು ಯೋಚಿಸಬೇಕಾಗುತ್ತದೆ. ಮೇಲೆ ಹೇಳಿದ ಒಂಭತ್ತು ಭಾಷೆಗೆಳಿಗೆ ತುಲನೆ ಮಾಡಿದರೆ ಕನ್ನಡ ಭಾಷೆ ಯಾವುದೇ ರೀತಿಯಲ್ಲೂ ಕಡಿಮೆಯಿಲ್ಲ. ಶಾಸ್ತ್ರೀಯ ಭಾಷಾ ಸ್ಥಾನ ದೊರೆಯದಿದ್ದರೂ ಸಹ, ಕನ್ನಡ ಭಾಷೆಗೆ ೫೦೦೦ ವರ್ಷಗಳ ಇತಿಹಾಸವಿದೆ. ತನ್ನದೆ ಆದ ಪಗಂಪರೆ ಇದೆ. ಭವ್ಯ ಇತಿಹಾಸವಿದೆ. ರನ್ನ ಪಂಪರಿಂದ ಹಿಡಿದು, ಇತ್ತೀಚಿನ ಸಾಹಿತ್ಯದವರೆಗೆ ಬೆಳೆದಿರುವ ಕನ್ನಡ ಸಾಹಿತ್ಯ ಜಾಗತಿಕ ಮಟ್ಟದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಅನೇಕ ಕೃತಿಗಳು, ವಿಶ್ವದ ಇತರ ಭಾಷೆಗಳಿಗೆ ಭಾಷಾಂತರಗೊಂಡು, ವಿಶ್ವ ಮಾನ್ಯತೆ ಪಡೆದಿವೆ. ಭಾರತದಲ್ಲೆ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ (ಏಳು) ಪಡೆದಿರುವ ಹೆಗ್ಗಳಿಕೆ ಕನ್ನಡ ಭಾಷೆಗಿದೆ. ಪುರಾಣ, ಇತಿಹಾಸ, ಸಮಕಾಲೀನ ಸಾಹಿತ್ಯ ಪ್ರಕಾರಗಳಲ್ಲಿ ಮತ್ತು ಕಾವ್ಯ-ಗದ್ಯ-ಮಹಾಕಾವ್ಯ-ವಿಮರ್ಶೆ-ನಾಟಕ ಹೀಗೆ ಎಲ್ಲಾ ರಂಗಗಳಲ್ಲಿಯೂ ಕನ್ನಡದ ಸಾಧನೆ ಅಪ್ರತಿಮವಾಗಿದೆ. ಕನ್ನಡಿಗರು ಮಾತ್ರವಲ್ಲದೆ, ದೇಶಾದ್ಯಂತ ಮತ್ತು ಜಾಗತಿಕ ಮಟ್ಟದಲ್ಲಿ ಕನ್ನಡ ಸಾಹಿತ್ಯ ತನ್ನದೇ ಆದ ಸ್ಥಾನ ಪಡೆದಿದೆ. ಇದಕ್ಕಿಂತಲೂ ಹೆಚ್ಚಿನ ಪ್ರಶಸ್ತಿ ಅಗತ್ಯವಿಲ್ಲ ಎನ್ನಿಸುತ್ತದೆ. ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಚುನಾಯಿತ ಸರ್ಕಾರವು ಅಥವಾ ಸಂಸತ್ತಿನಲ್ಲಿ ಕುಳಿತ ೫೪೦ ಸಂಸತ್ ಸದಸ್ಯರು ಕನ್ನಡ ಭಾಷೆಗೆ ನೀಡುವ "ಶಾಸ್ತ್ರೀಯ ಭಾಷೆ" ಎಂಬ ಹಣೆ ಪಟ್ಟಿಗಿಂತಲೂ, ಉನ್ನತ ಸ್ಥಾನವನ್ನು ಕನ್ನಡ ಭಾಷೆ ತನ್ನ ಸಾಹಿತ್ಯ-ಪರಂಪರೆಯ ಮೂಲಕ ಗಳಿಸಿದೆ. ರಾಜಕೀಯ ಉದ್ದೇಶಗಳಿಂದ, ಒಂದು ಸರ್ಕಾರ ನೀಡುವ ಸ್ಥಾನಮಾನಗಳಿಗಾಗಿ ಅಂಗಲಾಚುವ ಪರಿಸ್ಥಿತಿ ಕನ್ನಡ ಭಾಷೆಗೆ ಬಂದಿಲ್ಲ ಎಂಬ ಹೆಮ್ಮೆ ಕನ್ನಡಿಗರಿಗಿದ್ದರೆ ಈ ನಿಟ್ಟಿನಲ್ಲಿ ಹೋರಾಟ ನಡೆಸುವುದು ಅನಗತ್ಯವಾಗುತ್ತದೆ.



ಕನ್ನಡ ಶಾಸ್ತ್ರೀಯ ಭಾಷೆ

ಶಾಸ್ತ್ರೀಯ ಭಾಷೆಯಾಗಿ ಪರಿಗಣಿಸಲ್ಪಟ್ಟಿರುವ ಲ್ಯಾಟಿನ್, ಸಂಸ್ಕೃತ, ಹಿಬ್ರೂ ಪಾಲಿ ಮುಂತಾದ ಭಾಷೆಗಳು ಇಂದು ಜನಮನದಿಂದ ದೂರಾಗಿದ್ದು, "ಸತ್ತ ಭಾಷೆ"ಗಳೆಂದೇ ಕರೆಯಲ್ಪಡುತ್ತವೆ. ಅಂದರೆ ಸಾಮಾನ್ಯ ಜನರು ಈ ಭಾಷೆಗಳನ್ನು ಆಡುಭಾಷೆಯಾಗಿ ಉಪಯೋಗಿಸುವುದಿಲ್ಲ. ಈ ಭಾಷೆಗಳ ಪಟ್ಟಿಗೆ ಕನ್ನಡವನ್ನು ಸೇರಿಸುವುದು ವಿಪರ್ಯಾಸವಾಗುತ್ತದೆ, ನಾಡೋಜ ದೇಜಗೌರವರು ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನ ಗಳಿಸಲು ಉಪವಾಸ ಸತ್ಯಾಗ್ರಹ ಕೈಗೊಂಡಿದ್ದು, ಹಲವಾರು ವಿವಾದಗಳಿಗೆ ಎಡೆ ಮಾಡಿಕೊಟ್ಟಿದ್ದು, ಸಾಹಿತಿಗಳಲ್ಲಿನ ಭಿನ್ನಾಭಿಪ್ರಾಯ ದ್ವೇಷ, ಅಸೂಯೆಗಳು ಬಯಲಾದವು. ಈ ನಿಟ್ಟಿನಲ್ಲಿ ದೇಜಗೌರವರು ಉಪವಾಸ ಸತ್ಯಾಗ್ರಹ ಕೈಗೊಳ್ಳುವ ಅಗತ್ಯ ಇರಲಿಲ್ಲವೆಂದೇ ಹೇಳಬಹುದು. ಮೊದಲೇ ಹೇಳಿದಂತೆ ದೆಹಲಿಯಲ್ಲಿ ಆಡಳಿತಾರೂಢವಾಗಿರುವ ಪಕ್ಷವು ನೀಡುವ ಶಾಸ್ತ್ರೀಯ ಸ್ಥಾನಕ್ಕಾಗಿ ಹೋರಾಡುವ ಅಗತ್ಯವಿದೆಯೇ ಎಂದು ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳುವುದು ಒಳಿತು. ಒಂದು ವೇಳೆ ಹೋರಾಟ ಕೈಗೊಳ್ಳುವುದೇ ಅದರೆ, ಕರ್ನಾಟಕದ ಎಲ್ಲಾ ಸಾಹಿತಿ-ಕಲಾವಿದರು, ಬುದ್ಧಿ ಜೀವಿಗಳು, ರಾಜಕೀಯ ನಾಯಕರು ಒಂದಾಗಿ ಸೇರಿ ವ್ಯವಸ್ಥಿತವಾದ ಹೋರಾಟ ಮಾಡಬಹುದಿತ್ತು. ಏಕಾಏಕಿ ಉಪವಾಸ ಸತ್ಯಾಗ್ರಹ ಆರಂಭಿಸಿ, ತಮಗೆ ಬೆಂಬಲಿಸದವರನ್ನು ಮತ್ತು ಶಾಸ್ತ್ರೀಯ ಭಾಷೆಯ ವಿಚಾರದಲ್ಲಿ ಭಿನ್ನಾಭಿಪ್ರಾಯ ಉಳ್ಳವರನ್ನು ಶಿಖಂಡಿಗಳು, ಮೂರ್ಖರು, ಮುಠ್ಠಾಳರು, ಕನ್ನಡ ವಿರೋಧಿಗಳು, ಅಭಿಮಾನ ಶೂನ್ಯರು, ಎಂದೆಲ್ಲಾ ಹೀಗಳೆದಿರುವುದು, ವಿಷಾದನೀಯವಷ್ಟೇ ಅಲ್ಲ, ದೇಜಗೌರವರಂಥಹ ವ್ಯಕ್ತಿಗೆ ಶೋಭೆ ತರುವುದಲ್ಲ. ಭಾಷಾ ಸೌಜನ್ಯತೆಯನ್ನು ಕಾಪಾಡಿಕೊಳ್ಳದಿದ್ದರೆ, ಎಂತಹ ವ್ಯಕ್ತಿಯಾದರೂ ಸಹ ಸಾಮಾನ್ಯ ಜನರ ದೃಷ್ಟಿಯಲ್ಲಿ ನಿಕೃಷ್ಟರಾಗಿಬಿಡುತ್ತಾರೆ. ಯಾವುದೇ ವಿಚಾರದಲ್ಲಿ ಭಿನ್ನಾಭಿಪ್ರಾಯವಿರುವುದು ಪ್ರಜಾತಂತ್ರಿಕ ದೃಷ್ಟಿಯಿಂದ ಸ್ವಾಗತಾರ್ಹವಲ್ಲವೇ?

ಶಾಸ್ತ್ರೀಯ ಭಾಷೆಯ ವಿಚಾರದಲ್ಲೂ ಅನೇಕ ಭಿನ್ನಾಭಿಪ್ರಾಯಗಳಿವೆ ಎಂಬ ಅಂಶವನ್ನು ವಸ್ತು ನಿಷ್ಠವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಕನ್ನಡ ಭಾಷೆಗೆ ತನ್ನದೇ ಆದ ಇತಿಹಾಸ, ಪರಂಪರೆ ಇದ್ದು, ಶಾಸ್ತ್ರೀಯ ಭಾಷೆ ಎಂಬ ಹಣೆ ಪಟ್ಟಿಗಾಗಿ ಯಾರ ಮುಂದೆಯೂ ಅಂಗಲಾಚುವ

ಅವಶ್ಯಕತೆ ಇಲ್ಲ ಎಂದು ಅನೇಕ ಸಾಹಿತಿ ಕಲಾವಿದರು ಪ್ರತಿಪಾದಿಸುತ್ತಾರೆ. ಹಾಗೊಂದು ವೇಳೆ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ದೊರಕಿದರೂ, ಭಾಷಾ ಬೆಳವಣಿಗೆ ದೃಷ್ಟಿಯಿಂದ ಯಾವ ರೀತಿ ಪ್ರಯೋಜನವಾಗುತ್ತದೆ. ಕೇಂದ್ರದಿಂದ ಒದಗಿಬರುವ ೩೦ ಕೋಟಿ ರೂಗಳ ಸಹಾಯ ಧನ ಹೇಗೆ ವಿನಿಯೋಗಿಸಲ್ಪಡುತ್ತದೆ? ಈ ಧನ ಸಹಾಯವಿಲ್ಲದಿದ್ದಲ್ಲಿ ಕನ್ನಡ ಸಾಹಿತ್ಯದ ಉದ್ಧಾರ ಸಾಧ್ಯವಿಲ್ಲವೇ? ಪ್ರಸ್ತುತ ಕನ್ನಡ ಭಾಷೆ, ಸಾಹಿತ್ಯ ಎದುರಿಸುತ್ತಿರುವ ಬಿಕ್ಕಟ್ಟು, ಕನ್ನಡಿಗರಲ್ಲಿ ಕುಂದುತ್ತಿರುವ ಸಾಹಿತ್ಯಾಭಿರುಚಿ, ಕ್ಷೀಣಿಸುತ್ತಿರುವ ಕನ್ನಡ ಕಾದಂಬರಿ ಕ್ಷೇತ್ರ, ಸಾಹಿತ್ಯದ ಸೊಗಡು ಕಳೆದುಕೊಳ್ಳುತ್ತಿರುವ ಕಾವ್ಯ ಕ್ಷೇತ್ರ, ಸಾಹಿತ್ಯವನ್ನು ಸಂಪೂರ್ಣ ನಿರ್ಲಕ್ಷಿಸಿ ಅಧೋಗತಿಗಿಳಿಯುತ್ತಿರುವ ಕನ್ನಡ ಚಿತ್ರರಂಗ, ಇವುಗಳ ಬಗ್ಗೆ ಯಾವ ರೀತಿಯ ಸೈದ್ಧಾಂತಿಕ ಹೋರಾಟಗಳನ್ನು ಹಮ್ಮಿಕೊಳ್ಳಲಾಗುತ್ತಿದೆ? ಕನ್ನಡ ಭಾಷಾ ರಕ್ಷಣೆಗಾಗಿ ಟೊಂಕ ಕಟ್ಟಿ ನಿಂತಿರುವ ಸಂಘಟನೆಗಳು ಕ್ರಮಿಸುತ್ತಿರುವ ಹಿಂಸಾತ್ಮಕ ಮಾರ್ಗದ ಬಗ್ಗೆ ಹಿರಿಯ ಸಾಹಿತಿಗಳು ಯಾವ ನಿಲುವು ತಾಳಿದ್ದಾರೆ ಎಂಬ ಅಂಶ ಬೆಳಗಾವಿ ವಿವಾದದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿದೆ. ಬೆಳಗಾವಿ ಪಾಲಿಕೆ ಸದಸ್ಯರ ಮುಖಕ್ಕೆ ಮಸಿ ಬಳಿಯುವವರು, ಮುಂದೊಂದು ದಿನ, ತಮ್ಮ ಅಭಿಪ್ರಾಯಗಳನ್ನು ವಿರೋಧಿಸುವವರೆಲ್ಲರಿಗೂ ಮಸಿ ಬಳಿಯಬಹುದಲ್ಲವೇ? ಇಂಥ ಹೋರಾಟಗಾರರನ್ನು ಸಮರ್ಥಿಸಿಕೊಳ್ಳುವುದು ಕನ್ನಡ ಸಂಸ್ಕೃತಿಯೇ? ತಮಿಳು ಭಾಷೆಗೆ ಶಾಸ್ತ್ರೀಯ ಸ್ಥಾನ ದೊರೆತ ನಂತರದಲ್ಲಿ ಹೋರಾಟ ಆರಂಭಿಸಿದ ಹೋರಾಟಗಾರರು, ಮುಂಚೆಯೇ ಏಕೆ ಹೋರಾಡಲಿಲ್ಲ? ಒಂದು ವೇಳೆ ತಮಿಳು ಭಾಷೆಗೆ ಕೇಂದ್ರ ಸರ್ಕಾರ ಶಾಸ್ತ್ರೀಯ ಸ್ಥಾನ ನೀಡಿರದಿದ್ದರೆ, ಕನ್ನಡ ಹೋರಾಟಗಾರರು, ದೇಜಗೌರವರು ಉಪವಾಸ ಸತ್ಯಾಗ್ರಹ ಕೈಗೊಳ್ಳುತ್ತಿದ್ದರೇ? ಈ ಎಲ್ಲಾ ಪ್ರಶ್ನೆಗಳಿಗೂ ಕನ್ನಡ ಪರ ಹೋರಾಟಗಾರರು ಆತ್ಮಾವಲೋಕನದ ಮೂಲಕ ಉತ್ತರ ಕಂಡುಕೊಳ್ಳಬೇಕಾಗಿದೆ.

ಸುವರ್ಣ ರಾಜ್ಯೋತ್ಸವದ ಸಂದರ್ಭದಲ್ಲಿ, ಕನ್ನಡ ಪರ ಹೋರಾಟಗಾರರು, ಸಾಹಿತಿ ಕಲಾವಿದರು, ಪ್ರಜ್ಞಾವಂತರು ಕೈಗೊಳ್ಳಬೇಕಾದ ಕಾರ್ಯಕ್ರಮಗಳು ಹೇರಳವಾಗಿವೆ. ದೇಜಗೌರವರಂಥಹ ಹಿರಿಯ ಮುತ್ಸದ್ದಿಗಳು ಈ ನಿಟ್ಟಿನಲ್ಲಿ ನೇತೃತ್ವ ವಹಿಸಬೇಕಾಗಿದೆ. ಪ್ರಸ್ತುತ ಕನ್ನಡ ಪರ ಹೋರಾಟಗಾರರ ಪ್ರವೃತ್ತಿ ನೋಡಿದರೆ ಬಹುಶಃ ಪರ ಭಾಷಾ ದ್ವೇಷವೇ ಪ್ರಮುಖ ಸ್ಥಾನ ವಹಿಸಿದಂತಿದೆ. ಈ ಪ್ರವೃತ್ತಿಯನ್ನು ಹೋಗಲಾಡಿಸುವತ್ತ ಗಮನ ನೀಡುವುದು ಅವಶ್ಯವಾಗಿದೆ. ಭಾಷಾ ಅಲ್ಪ ಸಂಖ್ಯಾತರ ವಿರುದ್ಧ ಕಿಡಿಕಾರುವುದರಿಂದ ಕನ್ನಡ ಭಾಷೆ ಅಭಿವೃದ್ಧಿ ಹೊಂದುವುದಿಲ್ಲ. ಬದಲಾಗಿ ಕನ್ನಡಿಗರಲ್ಲಿ ಮತ್ತು ಅನ್ಯ ಭಾಷಿಕರಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸುವುದು ಇಂದಿನ ಆದ್ಯತೆಯಾಗಬೇಕಾಗಿದೆ. ಬೆಂಗಳೂರು ಕೇಂದ್ರಿತ ಮತ್ತು ಸಿನಿಮಾ ಕೇಂದ್ರಿತ ದೃಷ್ಟಿಕೋನವನ್ನು ಬದಲಿಸಿ, ಜನಪರ ದೃಷ್ಟಿಯಿಂದ ಯೋಚಿಸುವುದು ಇಂದು ಅವಶ್ಯವಾಗಿದೆ.

ಪ್ರಾಥಮಿಕ ಹಂತದಲ್ಲಿ ಆಂಗ್ಲ ಭಾಷೆ ಕಲಿಸುವ ಬಗ್ಗೆಯೂ ಸಹ ಸಾಕಷ್ಟು ವಾದ ವಿವಾದ ಚರ್ಚೆಗಳಾಗಿದ್ದು, ಈ ವಿಚಾರದಲ್ಲಿ, ಪ್ರಜಾತಾಂತ್ರಿಕ ದೃಷ್ಟಿಯಿಂದ ಒಂದು ನಿರ್ಧಾರ ಕೈಗೊಳ್ಳುವಲ್ಲಿ, ಕನ್ನಡ ಪರ ಸಂಘಟನೆಗಳು, ಹಿರಿಯ ಸಾಹಿತಿ ಕಲಾವಿದರು ಆಸಕ್ತಿ ವಹಿಸಬೇಕಾಗಿದೆ. ಜಾಗತೀಕರಣದ ದಾಳಿಯಿಂದ ತತ್ತರಿಸುತ್ತಿರುವ ಸಾಂಸ್ಕೃತಿಕ ನೆಲೆಗಳನ್ನು ಸಾಹಿತ್ಯ, ಕಲೆ, ಸಂಗೀತ, ನಾಟಕ ಪರಂಪರೆಗಳನ್ನು ರಕ್ಷಿಸುವ ನಿಟ್ಟಿನಲ್ಲಿ ನೇತೃತ್ವ ವಹಿಸುವುದು, ಸುವರ್ಣ ರಾಜ್ಯೋತ್ಸವದ ಸಂದರ್ಭದಲ್ಲಿ ಅವಶ್ಯವಾಗಿದೆ. ಎಲ್ಲಕ್ಕಿಂತಲೂ ಮಿಗಿಲಾಗಿ ಬಂಡವಾಳ ಶಾಹೀ ಆರ್ಥಿಕ ನೀತಿಗಳಿಂದ ಉಂಟಾಗಿರುವ ಆರ್ಥಿಕ–ಸಾಮಾಜಿಕ ಅಸಮತೋಲನಗಳಿಂದ ಕರ್ನಾಟಕದ ಹಲವು ಭಾಗಗಳಲ್ಲಿ ಪ್ರತ್ಯೇಕತೆಯ ಕೂಗು ಕೇಳಿ ಬರುತ್ತಿದೆ. ಹೈದರಾಬಾದ್ ಕರ್ನಾಟಕ, ಕೊಡಗು, ಪ್ರಾಂತ್ಯಗಳಲ್ಲಿ ಈಗಾಗಲೇ ಈ ಕುರಿತು ಚಳುವಳಿ ಆರಂಭವಾಗಿರುವುದು, ಉತ್ತರ ಕರ್ನಾಟಕದಲ್ಲಿ ಪ್ರತ್ಯೇಕ ಧ್ವಜಾರೋಹಣ ಮಾಡಿರುವುದು ಗಂಭೀರವಾದ ಸಮಸ್ಯೆಗಳಾಗಿವೆ. ೫೦ ವರ್ಷಗಳ ರಾಜ್ಯದ ಇತಿಹಾಸದಲ್ಲಿ, ಎಷ್ಟೇ ಸಾಧನೆಗಳನ್ನು ಮಾಡಿದ್ದರೂ, ಪರಿಹಾರ ಕಾಣದ ಅನೇಕ ಸಮಸ್ಯೆಗಳು ಜನರನ್ನು ಕಾಡುತ್ತಿವೆ. ಕೋಲಾರ ಚಿನ್ನದ ಗಣಿ, ಕುದುರೆ ಮುಖ ಅದಿರು ಕಂಪನಿ, ಇತರ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳು ಮುಚ್ಚಲ್ಪಟ್ಟಿದ್ದು, ಸಾವಿರಾರು ಕಾರ್ಮಿಕರು, ಲಕ್ಷಾಂತರ ಜನರು ಬೀದಿ ಪಾಲಾಗಿದ್ದಾರೆ. ಜಾತಿ ರಾಜಕಾರಣ ಗಟ್ಟಿಗೊಳ್ಳುತ್ತಿರುವ ಸಂದರ್ಭದಲ್ಲಿ, ಜಾತಿ ವೈಷಮ್ಯಗಳೂ ಪರಾಕಾಷ್ಠೆ ತಲುಪಿದ್ದು, ಜಾಗತೀಕರಣದ ಪರಿಣಾಮವಾಗಿ ಉದ್ಯೋಗಾವಕಾಶ ಕಳೆದುಕೊಳ್ಳುತ್ತಿರುವ ದಲಿತ, ಹಿಂದುಳಿದ ವರ್ಗಗಳು, ಹೆಚ್ಚು ಶೋಷಣೆಗೊಳಗಾಗುತ್ತಿವೆ. ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನ ದೊರೆಯುವುದರಿಂದ ಈ ಎಲ್ಲಾ ಸಮಸ್ಯೆಗಳು ಬಗೆಹರಿಯುವುದಿಲ್ಲ. ಹಾಗಾಗಿಯೇ ಈ ವಿವಾದದಲ್ಲಿ ಜನಸಾಮಾನ್ಯರು ಆಸಕ್ತಿ ವಹಿಸಲಿಲ್ಲವೆಂಬ ಅಂಶವನ್ನು ಪ್ರಜ್ಞಾವಂತರು ಗಮನಿಸಬೇಕಾಗಿದೆ.

ದೇಜಗೌ, ಅನಂತಮೂರ್ತಿ, ಚಂಪಾ, ಮುಂತಾದ ಹಿರಿಯರು, ಕನ್ನಡ ಜನತೆ ಎದುರಿಸುತ್ತಿರುವ ಈ ಗಂಭೀರ ಸಮಸ್ಯೆಗಳಿಗೆ ಸ್ಪಂದಿಸಿ, ಜನಪರ ಹೋರಾಟ ನಡೆಸಿದಲ್ಲಿ, ಸುವರ್ಣ ರಾಜ್ಯೋತ್ಸವವು ಸಾರ್ಥಕವಾಗುತ್ತದೆ. ಪರಸ್ಪರ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ವೈಯಕ್ತಿಕ ಪ್ರತಿಷ್ಠೆಗಳನ್ನು ಲೆಕ್ಕಿಸದೆ. ನಾಡಿನ ಹಿರಿಯ ಸಾಹಿತಿ ಕಲಾವಿದರು ಕನ್ನಡಕ್ಕಾಗಿ ಹೋರಾಡುವ ಪಣ ತೊಟ್ಟರೆ, ಕನ್ನಡ ಭಾಷೆ ಮತ್ತು ಕರ್ನಾಟಕ ಉನ್ನತಿ ಹೊಂದಬಹುದು. ಇಲ್ಲವಾದಲ್ಲಿ ಇಡೀ ಕನ್ನಡ ಚಳುವಳಿ ಮಸಿ ಬಳಿಯುವವರ ಕೈವಶವಾಗುವ ಸಾಧ್ಯತೆಗಳಿವೆ. □

○ ಸ. ರಘುನಾಥ್

ದೀಪನಾರಿ

ನೋಡಿದ ಮೊದಲ ದಿನ ಅಂದುಕೊಂಡೆ
ಸೂತಕ ಕಳೆದ ಮನೆಯವರಾರೊ
ಎಸೆದು ಹೋದದ್ದೆಂದು.

ಮಾರನೆಯ ದಿನವೂ ಅಲ್ಲೆ
ಹಾಗೆಯೆ ಇದ್ದದ್ದು ನೋಡಿ ಅಂದುಕೊಂಡೆ
ಗುಡಿಗೆ ಬೇಡದೆ ತಂದು ಹಾಕಿದ್ದು ಎಂದು.

ಮೂರನೇ ದಿನ
ಎಂಥದೋ ಆಸಕ್ತಿ
ಬದಲಾದ ದೃಷ್ಟಿ.

ದೋಚಿ ಹೋದ ಬದುಕಿನಂತೆ
ಬಹಿಷ್ಕೃತನ ಮುಖದಂತೆ
ಚುಕ್ಕಿಗಳ ಕಿತ್ತೆಸೆದ ಬಾನಿನಂತೆ

ನಾಲ್ಕನೇ ದಿನ
ಬತ್ತ ತಂದಿಟ್ಟೆ
ಹೂ ಮುಡಿದಿತ್ತು ಹಣತೆ.

ಐದನೆಯ ದಿನ
ಬೇಕಾದವರು ಮುಡಿಸಿಕೊಳ್ಳಲಿ ಎಂದು
ಎಣ್ಣೆ ಸುರಿದೆ.

ದೀಪವಿಲ್ಲದ ದಾರಿ
ತಿಳಿಯದು
ಹಿಂದು ಮುಂದಿನ ದೂರ.

ನೆರಳು ಮೂಡಿಸಿದತ್ತ ಹೊರಳಿದ
ಕಣ್ಣಿಗೆ ಮುಖ ಕಾಣಿಸದ
ಮುಡಿಸಿದ ಹಣತೆ ಹಿಡಿದೆರಡು ಕೈ.

ಒಳ ಮೀಸಲಾತಿಯ ಒಳಗುಟ್ಟು

೧ಡಾ|| ಮ.ಪು. ಪೂರ್ಣಾನಂದ

ಅಭಿಮತ

ಒಳಮೀಸಲಾತಿ ಬಗ್ಗೆ ಗಟ್ಟಿಯಾದ ಧ್ವನಿ ಕೇಳಿ ಬಂದದ್ದು ಮೊದಲಿಗೆ SC ವರ್ಗದಲ್ಲಿ. ಒಳ ಮೀಸಲಾತಿ ಅಥವಾ ಮರು ವರ್ಗೀಕರಣವಾಗ ಬೇಕು ಎಂದು ಮಾದಿಗ ದಂಡೋರ ಸಮಿತಿ ಆಗ್ರಹಿಸಿತು. ಇದು ಎಡಗೈ-ಬಲಗೈ ವಿವಾದವೆಂದು ಸುದ್ದಿಯಾಯಿತು. ಇದಕ್ಕೆ ಮೂಲ ಪ್ರೇರಣೆ ಪಕ್ಕದ ಆಂಧ್ರ ಪ್ರದೇಶ ರಾಜ್ಯದಲ್ಲಿ SC ವರ್ಗದಲ್ಲಿ ಚಂದ್ರಬಾಬು ನಾಯ್ಡು ಸರ್ಕಾರ A,B,C,D ಯೆಂದು ವರ್ಗೀಕರಣ ಮಾಡಿ ಸರ್ಕಾರಿ ಆದೇಶ ಹೊರಡಿಸಿತ್ತು. ಆದರೆ ಈ ಆದೇಶವನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಲಾಗಿ, ಈ ವರ್ಗೀಕರಣ ಆಯೋಗದಿಂದ ವೈಜ್ಞಾನಿಕವಾಗಿ ಮಾಡಿಲ್ಲ ಎಂದು ವಜಾ ಮಾಡಲಾಯಿತು.

ಒಳಮೀಸಲಾತಿ ಬಗ್ಗೆ ಮತ್ತೊಮ್ಮೆ ಚರ್ಚೆ ಹುಟ್ಟುಹಾಕಿರುವ ಮಾನ್ಯ ದೇವೇಗೌಡರು, ಹಿಂದುಳಿದ ವರ್ಗಗಳಿಗೆ ನೀಡಿರುವ ಪ್ರವರ್ಗ ೨A ನಲ್ಲಿ ಒಳಮೀಸಲಾತಿಗಾಗಿ ಆಗ್ರಹಿಸುವ ಮೂಲಕ ತೀವ್ರ ಚರ್ಚೆಯ ಬೆಂಕಿಗೆ ಗಾಳಿ ಹಾಕಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಶೈಕ್ಷಣಿಕ ಮತ್ತು ಔದ್ಯೋಗಿಕವಾಗಿ ಒಟ್ಟು ಶೇಕಡಾ ೫೦ ಮೀಸಲಾತಿಯಿದೆ. ಅದರ ವಿಗಂಡಣೆ ಹೀಗಿದೆ.

ಪ.ಜಾ-15%, ಪ.ವ-3%, ಪ್ರವರ್ಗ I-4%, ಪ್ರವರ್ಗ IIA-15%, ಪ್ರವರ್ಗ IIB-4%, ಪ್ರವರ್ಗ IIIA-4%, ಮತ್ತು ಪ್ರವರ್ಗ IIIB-5%,

ಪರಿಶಿಷ್ಟಜಾತಿ ಪಟ್ಟಿಯಲ್ಲಿ ಸೇರ್ಪಡೆಗೊಂಡಿರುವ ಜಾಡಮಾಲಿ, ಭಂಗೀ, ದಕ್ಕಲಿಗ, ಹೊಲೆಯ, ಕೊರಮ, ಲಂಬಾಣಿ, ಬೋವಿ ಹೀಗೆ ಮುಂತಾದ ೧೦೧ ಜಾತಿಗಳು ಹಾಗು ೭೯ ಉಪ ಜಾತಿ/ಪರ್ಯಾಯ ಜಾತಿಗಳಿವೆ.

ಪರಿಶಿಷ್ಠ ವರ್ಗದಲ್ಲಿ ಸೋಲಿಗ ಕಾಡುಕುರುಬ, ಜೇನು ಕುರುಬ, ಹಕಿಪಿಕ್ಕಿ, ಕಣಿಯರು, ಕುಡಿಯರು, ಕೊರಗ, ಹಸಲ, ಇರುಳ, ಯರವ, ತೋಡ, ನಾಯಕ, ಬೇಡ. ಹೀಗೆ ಮುಂತಾದ ೪೯ ಜಾತಿಗಳು ಹಾಗು ೫೧ ಉಪಜಾತಿ/ಪರ್ಯಾಯ ಜಾತಿಗಳಿವೆ.

ಪ್ರವರ್ಗ ೧ರಲ್ಲಿ ಬೆಸ್ತ, ಬುಡುಬುಡುಕಿ, ದೊಂಬಿದಾಸ, ಪರಿವಾರ, ಉಪ್ಪಾರ, ಕುಡುಬಿ, ಸಿದ್ಧಿ, ಗೊಲ್ಲ, ದಲಿತ ಕ್ರಿಶ್ಚಿಯನ್ ಮುಂತಾದ ೯೫ ಜಾತಿಗಳು ಮತ್ತು ೨೯ ಉಪಜಾತಿ/ಪರ್ಯಾಯ ಜಾತಿಗಳಿವೆ.

ಪ್ರವರ್ಗ ೨ ಎ ನಲ್ಲಿ ಕುರುಬ, ಈಡಿಗ, ಸವಿತಾಸಮಾಜ, ಗಾಣಿಗ, ಮಡಿವಾಳ, ವಿಶ್ವಕರ್ಮ, ಜೆಟ್ಟಿ, ತಿಗಳ, ಗೆಜ್ಜಗಾರ, ಕುಂಬಾರ, ಕಮ್ಮಾರ ಹೀಗೆ ಇನ್ನೂ ಮುಂತಾದ ೧೦೨ ಜಾತಿಗಳು ಹಾಗೂ ೩೦೨ ಉಪಜಾತಿ/ಪರ್ಯಾಯ ಜಾತಿಗಳಿವೆ.

ಪ್ರವರ್ಗ ೨ಬಿ ನಲ್ಲಿ ಮುಸ್ಲಿಮರು ಮಾತ್ರ ಇದ್ದಾರೆ.

ಅಥವ ಪ್ರವರ್ಗ ೩ಎ ನಲ್ಲಿ ಒಕ್ಕಲಿಗ, ಬಲಿಜ, ಕೊಡವ ಹೀಗೆ ಕೇವಲ ೩ ಜಾತಿಗಳು ಮತ್ತು ೪೭ ಉಪಜಾತಿ/ಪರ್ಯಾಯ ಜಾತಿಗಳಿವೆ.

ಪ್ರವರ್ಗ ೩ಬಿ ನಲ್ಲಿ ಲಿಂಗಾಮತ, ವೀರಶೈವ, ಬಂಟ, ಮರಾಠಿ, ಜೈನ, ಕ್ರಿಶ್ಚಿಯನ್ ಹೀಗೆ ೬ ಜಾತಿಗಳು ಮತ್ತು ೪೧ ಉಪಜಾತಿ/ಪರ್ಯಾಯ ಜಾತಿಗಳಿವೆ.

ಹೀಗೆ ಒಟ್ಟು ಶೇಕಡಾ ೫೦ ಮೀಸಲಾತಿಗಾಗಿ ಶೇಕಡಾ ೯೭ ಜನಸಂಖ್ಯೆಯಿರುವ ೩೫೭ ಜಾತಿಗಳು ಮತ್ತು ೮೧೯ ಉಪ ಜಾತಿ ಪರ್ಯಾಯ ಜಾತಿಗಳು ೭ವರ್ಗಗಳಲ್ಲಿ ಪರಸ್ಪರ ಪೈಪೋಟಿ ನಡೆಸಬೇಕಾದ ವಸ್ತುಸ್ಥಿತಿಯಿದೆ.

ಒಳಮೀಸಲಾತಿ ಬಗ್ಗೆ ಹಾವನೂರು ವರದಿ ೧೯೭೫ ರಲ್ಲಿ ಮಂಡನೆಯಾದ ದಿನದಿಂದಲೂ ಅವಕಾಶ ವಂಚಿತ ಸಣ್ಣ ಮತ್ತು ಅಸಂಘಟಿತ ಜಾತಿಗಳು ಆದರೆ ಸಣ್ಣ ಜಾತಿಗಳ ಕ್ಷೀಣದನಿಯ ಕೂಗು ಅರಣ್ಯರೋಧನವಾಗಿ ನಿರ್ಲಕ್ಷ್ಯಕ್ಕೊಳಗಾಗಿದೆ.

ಹನ್ನೆರಡು ವರ್ಷಗಳ ಹಿಂದೆ ಒಳಮೀಸಲಾತಿ ಬಗ್ಗೆ ಗಟ್ಟಿಯಾದ ಧ್ವನಿ ಕೇಳಿ ಬಂದದ್ದು ಮೊದಲಿಗೆ SC ವರ್ಗದಲ್ಲಿ. ಒಳಮೀಸಲಾತಿ ಅಥವ ಮರು ವರ್ಗೀಕರಣವಾಗಬೇಕು ಎಂದು ಮಾದಿಗ ದಂಡೋರ ಸಮಿತಿ ಆಗ್ರಹಿಸಿತು. ಇದು ಎಡಗೈ-ಬಲಗೈ ವಿವಾದವೆಂದು ಸುದ್ದಿಯಾಯಿತು. ಇದಕ್ಕೆ ಮೂಲ ಪ್ರೇರಣೆ ಪಕ್ಕದ ಆಂಧ್ರ ಪ್ರದೇಶ ರಾಜ್ಯದಲ್ಲಿ SC ವರ್ಗದಲ್ಲಿ ಚಂದ್ರಬಾಬು ನಾಯ್ಡು ಸರ್ಕಾರ A,B,C,D ಯೆಂದು ವರ್ಗೀಕರಣ ಮಾಡಿ ಸರ್ಕಾರಿ ಆದೇಶ ಹೊರಡಿಸಿತ್ತು. ಆದರೆ ಈ ಆದೇಶವನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಲಾಗಿ, ಈ ವರ್ಗೀಕರಣ ಆಯೋಗದಿಂದ ವೈಜ್ಞಾನಿಕವಾಗಿ ಮಾಡಿಲ್ಲ ಎಂದು ವಜಾ ಮಾಡಲಾಯಿತು. ಈ ಎಲ್ಲಾ ಬೆಳವಣಿಗೆಯ ಹಿನ್ನಲೆಯಲ್ಲಿ ಕರ್ನಾಟಕದಲ್ಲಿ ಜಸ್ಟೀಸ್ ಎನ್. ವೈ. ಹನುಮಂತಪ್ಪನವರ ಅಧ್ಯಕ್ಷತೆಯಲ್ಲಿ ಆಯೋಗ ರಚಿಸಿ, SC ವರ್ಗದಲ್ಲಿ ವರ್ಗೀಕರಣ ಮಾಡಬೇಕು ಎಂಬುದರ ಬಗ್ಗೆ ಮಾರ್ಗದರ್ಶನ ಮಾಡಲು ರಾಜ್ಯ ಸರ್ಕಾರ ಕೋರಿತು. ಅವರು ಸ್ವಲ್ಪಕಾಲ ಕಾರ್ಯ ನಿರ್ವಹಿಸಿ, ಮಧ್ಯದಲ್ಲಿ ಲೋಕಸಭಾ ಸದಸ್ಯರಾಗಿ ಆಯ್ಕೆ ಹೊಂದಿದ ನಂತರ, ಅವರು ಆಯೋಗಕ್ಕೆ ರಾಜೀನಾಮೆ ನೀಡಿದ್ದರಿಂದ ಹೊಸಬರ ನೇಮಕವಾಗದೆ ಕೆಲಸ ಸ್ಥಗಿತಗೊಂಡಿದೆ. ಇವತ್ತಿನವರೆಗೂ SC ವರ್ಗದೊಳಗಿನ ವರ್ಗೀಕರಣ ಕಗ್ಗಂಟಾಗಿ ಉಳಿದಿದೆ. ಇದು ಅತ್ಯಂತ ದುರಂತ ಮತ್ತು ಶೋಚನೀಯ ಸಂಗತಿಯಾಗಿದೆ.

SC ಮರು ವರ್ಗೀಕರಣ ವಿವಾದ ಕರ್ನಾಟಕದ ಮಾನವೀಯ ಮತ್ತು ಸಾಮಾಜಿಕ ನ್ಯಾಯದ ಚಳವಳಿಗೆ ಕಾರಣವಾದ ದಲಿತ ಸಂಘರ್ಷ ಸಮಿತಿ ಪ್ರಧಾನವಾಗಿ ಮತ್ತು ತುರ್ತಾಗಿ ತನ್ನ ತೆಕ್ಕೆಗೆ ತೆಗೆದುಕೊಂಡು ಬಗೆಹರಿಸಬಹುದಾಗಿದ್ದ ಎಡಗೈ-ಬಲಗೈ ವಿವಾದ, ಇಂದು ಒಂದೆಡೆ ಕೂತು ಚರ್ಚೆ ಮಾಡಲಾರದ ಮಟ್ಟಿಗೆ ಕ್ಲಿಷ್ಟವಾಗಿದೆ. ಸುಮಾರು ನಾಲ್ಕು ವರ್ಷಗಳ ಹಿಂದೆ 21.2.2001 ರಂದು ಮೈಸೂರಿನ "ಸಂಕುಲ"ದ ಕುಕ್ಕರಹಳ್ಳಿ ಬಸವರಾಜ ಮತ್ತು ಗೆಳೆಯರು SC ವರ್ಗದೊಳಗೆ ಒಳಮೀಸಲಾತಿ ಬಗ್ಗೆ "ಜಾತಿವಿನಾಶ ಮತ್ತು ಮೀಸಲಾತಿ ಹಾಗು ದಲಿತರೊಳಗಿನ ಪ್ರತ್ಯೇಕ ಮೀಸಲಾತಿ" ಎಂಬ ಹೆಸರಿನಲ್ಲಿ ಒಂದು ದಿನದ ತೀವ್ರ ಚರ್ಚೆಯನ್ನು ಇಟ್ಟುಕೊಂಡಿದ್ದರು.

ಇಡೀ ಚರ್ಚೆಯ ಫಲಿತಾಂಶವೆಂಬಂತೆ ಒಳಮೀಸಲಾತಿಯನ್ನು ದಲಿತ ಚಳವಳಿಯಿಂದ ಹೊರತಾದ ಯಾವ ಸಂಘಟನೆ, ಸರ್ಕಾರಗಳ ಮಧ್ಯಸ್ಥಿಕೆಯಿಲ್ಲದೆ ನಾವೇ ಹಂಚಿ ಕೊಳ್ಳುವ ಕೆಲಸವಾಗ ಬೇಕು ಎಂದು ಸಮಿತಿಗಳನ್ನು ರಚಿಸಲು

ತೀರ್ಮಾನಿಸಿದರು. ಹಾಗು ದಲಿತ ಮೀಸಲಾತಿಯಿಂದುಟಾದ ಕರುಳ ಬಳ್ಳಿಯ ಸಂಬಂಧದಂತಹ ಅನನ್ಯತೆ ಗಾಢವಾಗಿಸಿಕೊಂಡಿರುವ ಅಸ್ಪೃಶ್ಯ ಜಾತಿಗಳು ಒಳಮೀಸಲಾತಿ ಕಾರಣಕ್ಕಾಗಿ ನಂಟು ಕಿತ್ತು ಕೊಳ್ಳವಂತಾದರೆ ಅದರಂತಹ ದುರಂತ ಮತ್ತೊಂದಿಲ್ಲವೆಂದು ಭಾವಿಸಿದರು.

ಈ ವಿಚಾರವನ್ನಿಟ್ಟುಕೊಂಡು ದಲಿತರೊಳಗೆ ಒಡಕು ಮೂಡಿಸುವ ಕಾಣದ ಕೈಗಳ ಬಗ್ಗೆ ಎಚ್ಚರಿಕೆಯನ್ನಿಟ್ಟುಕೊಳ್ಳಲು ತೀರ್ಮಾನಿಸಿದರು. ಆದರೆ ಮತ್ತೆಂದೂ, ಇವತ್ತಿನವರೆಗೂ ಈ ಗಣ್ಯರು ಪುನ: ಒಂದೆಡೆ ಸೇರಿ SC ಒಳಮೀಸಲಾತಿ ಬಗ್ಗೆ ಚರ್ಚೆ ಮಾಡಲೇ ಇಲ್ಲ. ಅತ್ಯಂತ ನೋವಿನ ಸಂಗತಿಯೆಂದರೆ SC ಒಳಮೀಸಲಾತಿಯಂತಹ ಚರ್ಚೆಯನ್ನು ಒಗ್ಗಟ್ಟಾಗಿ ದಲಿತ ಸಂಘರ್ಷ ಸಮಿತಿಯ ವಿವಿಧ ಬಣಗಳು ಮಾಡಲಿಲ್ಲ ಎನ್ನುವುದು. ಈಗಲೂ **"ಸಂಬಂಜ ಅನ್ನಾದು ದೊಡ್ಡುಕನ"** ಎಂಬ ದೊಡ್ಡಮನಸು ಮಾಡಿ ಒಂದೆಡೆ ಕಲೆತು, ಪೂರ್ವಾಗ್ರಹ ಮನಸ್ಸಿಲ್ಲದೆ, ಯಾವುದೇ ಒತ್ತಡ ಮತ್ತು ಮುಲಾಜುಗಳಿಗೆ ಮಣಿಯದೆ ಚರ್ಚಿಸಿ, ವಸ್ತುನಿಷ್ಠವಾಗಿ ವಿಶ್ಲೇಷಿಸಿದರೆ, SC ವರ್ಗದೊಳಗೆ ಸಾಮಾಜಿಕ ನ್ಯಾಯ ವನ್ನು ಕೊಡಮಾಡಬಹುದು. ಇಲ್ಲದಿದ್ದಲ್ಲಿ ಮುಂದಿನ ಪೀಳಿಗೆ ನಮ್ಮನ್ನು ಕ್ಷಮಿಸಲಾರದು ಹಾಗು ಎಲ್ಲರ ಆತ್ಮ ವಂಚನೆಯೂ ಆಗಬಹುದು.

ಸುಳ್ಳುಜಾತಿ ಪ್ರಮಾಣ ಪತ್ರ ಪಡೆದು ಮೀಸಲಾತಿಯನ್ನು ಕಬಳಿಸುವಂತ ಅಪರಾಧಗಳು ಬಹಳ ಹೆಚ್ಚಾಗಿದೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಕಠಿಣ ಕ್ರಮ ಕೈಗೊಂಡು ಸುಳ್ಳು ಜಾತಿ ಪ್ರಮಾಣ ಪತ್ರದ ಹಾವಳಿ ತಡೆಯಬೇಕಿದೆ. ಮೀಸಲಾತಿಯಂತಹ ಸವಲತ್ತು ಯಾವುದೇ ಜಾತಿ ವ್ಯಕ್ತಿಯ ಎರಡು ತಲೆಮಾರಿಗೆ ಮಾತ್ರ ಅನ್ವಯವಾಗಬೇಕಿದೆ. ಮೂರನೇ ತಲೆಮಾರಿನಿಂದ ಮೀಸಲಾತಿ ನಿರಾಕರಣೆಯಾಗ ಬೇಕಿದೆ. ಹಾಗೂ ಮೀಸಲಾತಿಯಡಿ ಯಲ್ಲಿ ಬರುವ ಎಲ್ಲಾ ಜಾತಿಗಳಿಗೂ ಕೆನೆಪದರದಂತಹ ಅಂಶ ಜಾರಿಯಾಗ ಬೇಕಿದೆ. ಹಾಗಾದಾಗ ಮಾತ್ರ ಅದೇ ಜಾತಿಯ ಇನ್ನಿತರ ಅವಕಾಶ ವಂಚಿತ ಕಡು ಬಡವರಿಗೆ ಸಾಮಾಜಿಕ ನ್ಯಾಯದ ಸವಲತ್ತು ಹಂಚಿಕೆಯಾಗುತ್ತವೆ.

ಇತ್ತೀಚಿನ ದಿನಗಳಲ್ಲಿ ಸಿದ್ಧರಾಮಯ್ಯ, ವಿಶ್ವನಾಥ, ಜಾಲಪ್ಪ ಮುಂತಾದವರ ನಾಯಕತ್ವದಲ್ಲಿ ಮರುಜೀವ ಪಡೆದ "ಅಹಿಂದ" ಚಳವಳಿ, ಇಡೀ ರಾಜ್ಯ ವ್ಯಾಪಿಸಿಕೊಂಡು ಸಶಕ್ತ ಜನ ಚಳವಳಿಯಾಗಿ ರೂಪಾಂತರಗೊಳ್ಳುತ್ತಿರುವಾಗ, ಈ ತಳಸಮುದಾಯಗಳ ಒಗ್ಗಟ್ಟು ಮತ್ತು ಸಾಂಘಿಕ ಉತ್ಸಾಹವನ್ನು ನೋಡಿ ಕಂಗೆಟ್ಟ ಮಾನ್ಯ ದೇವೇಗೌಡರು, "ಅಹಿಂದ" ಒಗ್ಗಟ್ಟನ್ನು ಮುರಿಯಲು ಮತ್ತು ಚಳವಳಿಯನ್ನು ದಿಕ್ಕು ತಪ್ಪಿಸಲು, ಹಿಂದುಳಿದ ವರ್ಗದ ಪ್ರವರ್ಗ 2A ನಲ್ಲಿ ಕುರುಬ, ಈಡಿಗ ಜಾತಿಗಳೆರಡನ್ನೂ ಬೇರ್ಪಡಿಸಿ 2A ನಲ್ಲಿ ಮರು ವರ್ಗೀಕರಣವಾಗಬೇಕು ಎಂದು ಆಗ್ರಹಿಸಿದರು. ಮಾನ್ಯ ದೇವೇಗೌಡರ ಔಚಿತ್ಯ ಗಮನಿಸಿದರೆ ಅವರ ಪ್ರಾಮಾಣಿಕತೆ ಪ್ರಶ್ನಾರ್ಹವಾಗುತ್ತೆ. ಆದರೆ ಹಾಗೆಂದು ಒಳಮೀಸಲಾತಿ ಬಗ್ಗೆ ಚರ್ಚೆ ಬೇಡವೆಂದು ಯಾವ ಪ್ರಾಮಾಣಿಕ, ಸಾಮಾಜಿಕ ನ್ಯಾಯದ ಮನಸ್ಸೂ ಹೇಳುವುದಿಲ್ಲ. ಮೀಸಲಾತಿಗೆ ಒಳಪಟ್ಟ ಎಲ್ಲಾ ವರ್ಗಗಳಲ್ಲೂ ಒಳಮೀಸಲಾತಿಯಂತಹ ತಾರತಮ್ಯವಿದೆ.

SC ವರ್ಗದೊಳಗೆ ಜಾಡಮಾಲಿ, ಭಂಗೀ, ಮಾದಿಗ, ದಕ್ಕಲಿಗ, ಚಾಂಡಾಲ ಮುಂತಾದ ಜಾತಿಗಳು ಸಿಗಬೇಕಾದ ನ್ಯಾಯ ಬದ್ಧ ಸವಲತ್ತುಗಳಿಂದ ವಂಚಿತವಾಗಿವೆ. ಕಾರಣ ಕೆಲವು ಸ್ಪರ್ಶ ಜಾತಿಗಳು ಮತ್ತು ಭೂ ಒಡೆತನದ ಜಾತಿಗಳು SC ವರ್ಗದೊಳಗೆ ಸೇರ್ಪಡೆಗೊಂಡಿವೆ.

ST ವರ್ಗದೊಳಗೆ ನಿಜವಾದ ಬುಡಕಟ್ಟು ಮತ್ತು ಅರಣ್ಯವಾಸಿಗಳಾದ ಸೋಲಿಗ, ಹಸಲ, ಜೇನುಕುರುಬ, ಕಾಡುಕುರುಬ, ಹಕ್ಕಿಪಿಕ್ಕಿ, ಕೊರಗ, ಇರುಳ, ಯರವ, ತೋಡ ಮುಂತಾದ ಜಾತಿಗಳು ಸಾಮಾಜಿಕ ನ್ಯಾಯದ ಅವಕಾಶಗಳಿಂದ ವಂಚಿತವಾಗಿವೆ. ಕಾಡಿನ ಗೊಡವೆಯಿಲ್ಲದೇ ಊರೊಳಗಿರುವ ಕೆಲ ಜಾತಿಗಳು ST ವರ್ಗದಲ್ಲಿ ಬೆರಕೆಯಾಗಿವೆ. ಪ್ರವರ್ಗ ೧ರಲ್ಲಿ ದೊಂಬಿದಾಸ, ಮೇದಾರ, ಬುಡು ಬುಡುಕಿ, ಜೋಗಿ, ಕುಣಬಿ, ಸಿದ್ಧಿ, ಉಪ್ಪಾರ ಅಂತಹ ಜಾತಿಗಳು ಇನ್ನಿತರ ಸ್ವಲ್ಪ ಮುಂದುವರಿದ ಜಾತಿಗಳೊಟ್ಟಿಗೆ ಸ್ಪರ್ಧಿಸಲಾರದೆ ಅವಕಾಶ ವಂಚಿತವಾಗಿವೆ.

ST ವರ್ಗದೊಳಗೆ ನಿಜವಾದ ಬುಡಕಟ್ಟು ಮತ್ತು ಅರಣ್ಯವಾಸಿಗಳಾದ ಸೋಲಿಗ, ಹಸಲ, ಜೇನುಕುರುಬ, ಕಾಡುಕುರುಬ, ಹಕ್ಕಿಪಿಕ್ಕಿ, ಕೊರಗ, ಇರುಳ, ಯರವ, ತೋಡ ಮುಂತಾದ ಜಾತಿಗಳು ಸಾಮಾಜಿಕ ನ್ಯಾಯದ ಅವಕಾಶಗಳಿಂದ ವಂಚಿತವಾಗಿವೆ. ಕಾಡಿನ ಗೊಡವೆಯಿಲ್ಲದೇ ಊರೊಳಗಿರುವ ಕೆಲ ಜಾತಿಗಳು ST ವರ್ಗದಲ್ಲಿ ಬೆರಕೆಯಾಗಿವೆ.

ಪ್ರವರ್ಗ ೧ರಲ್ಲಿ ದೊಂಬಿದಾಸ, ಮೇದಾರ, ಬುಡುಬುಡುಕಿ, ಜೋಗಿ, ಕುಣಬಿ, ಸಿದ್ಧಿ, ಉಪ್ಪಾರ ಅಂತಹ ಜಾತಿಗಳು ಇನ್ನಿತರ ಸ್ವಲ್ಪ ಮುಂದುವರಿದ ಜಾತಿಗಳೊಟ್ಟಿಗೆ ಸ್ಪರ್ಧಿಸಲಾರದೆ ಅವಕಾಶ ವಂಚಿತವಾಗಿವೆ.

ಇಡೀ ಮೀಸಲಾತಿ ಜಾತಿಗಳ ಬಗ್ಗೆಯೇ ಬಹುದೊಡ್ಡ ಚರ್ಚೆಯಾಗಬೇಕಿದೆ. ಇದಕ್ಕೆ ಸಮಷ್ಠಿ ಪ್ರಜ್ಞೆಯ ಮನಸ್ಸು ಮೂಲಾಧಾರವಾಗಬೇಕಾಗಿದೆ. SC ಯಿಂದ ಹಿಡಿದು ಪ್ರವರ್ಗ ೩ಬಿ ವರೆಗೆ ಒಳಮೀಸಲಾತಿಯಂತಹ ಪ್ರಶ್ನೆಗಳು ಸಹಜವಾಗಿ ಎದುರಾಗುತ್ತವೆ. ಇದು ಯಾವ ಹಂತ ತಲುಪಬಹುದೆಂದರೆ ಜಾತಿಜಾತಿಗಳ ಮಧ್ಯೆ ಸಾಮರಸ್ಯ ಅಪಾಯವಿದೆ. ಈ ಎಲ್ಲಾ ಗಂಡಾಂತರಗಳನ್ನು ಪರಿಹರಿಸಿಕೊಳ್ಳಲು ಈ ಕೆಳಕಂಡ ಸಮೀಕ್ಷೆ, ಕಾನೂನು, ಕಾಯಿದೆ, ವಿಚಾರಗಳನ್ನು ಸರ್ಕಾರಗಳು ಜಾರಿಗೊಳಿಸಿದರೆ ಕಪ್ಪು ಮೋಡದಲ್ಲಿನ ಬೆಳ್ಳಿಗೆರೆಯಂತೆ ಆಶಾಕಿರಣ ಬೆಳಗಬಹುದು.

ಪ್ರವರ್ಗ ೨ಎ ನಲ್ಲಿ ಅಗಸ, ಕ್ಷೌರಿಕ, ಕುಂಬಾರ, ಗಾಣಿಗ, ಗೆಜ್ಜಗಾರ, ತಿಗಳ, ಜೆಟ್ಟಿ, ನೇಕಾರ ದರ್ಜಿ, ಕಮ್ಮಾರ ಜಾತಿಗಳು ಇನ್ನಿತರ ಸಮಾನ ಜಾತಿಗಳಿಗೆ ಹೋಲಿಸಿದಾಗ ಸಾಮಾಜಿಕ ನ್ಯಾಯದಡಿಯಲ್ಲಿ ಸಿಗಬೇಕಾದ ಸವಲತ್ತುಗಳಿಂದ ವಂಚಿತವಾಗಿವೆ.

ಪ್ರವರ್ಗ ೨ಬಿ ನಲ್ಲಿ ಮುಸ್ಲಿಂ ಜನಾಂಗ ಮಾತ್ರವಿದೆ. ಆದರೆ ಅವರೊಳಗೇ ಇರುವ ಲಬ್ಬೆ, ಫಕೀರ, ದರ್ಜಿ, ದರ್ವೇಸಿ, ಧೋಬಿ, ದಯಿರೆ ಸೋಫಿ ಮುಂತಾದ ಜಾತಿಗಳು ಸಾಮಾಜಿಕ ನ್ಯಾಯದ ಸವಲತ್ತುಗಳಿಂದ ದೂರವಾಗಿವೆ.

ಪ್ರವರ್ಗ ೩ಎ ನಲ್ಲಿ ಬಲಿಜ, ಕೊಡುವ ಜಾತಿಗಳು ಸಮಾನವಾದ ಅವಕಾಶಗಳಿಲ್ಲದೆ ಬಲಾಢ್ಯವಾದ ಒಕ್ಕಲಿಗ ಜಾತಿಯೊಟ್ಟಿಗೆ ಸ್ಪರ್ಧಿಸಲಾರದೆ ಸವಲತ್ತುಗಳಿಂದ ವಂಚಿತವಾಗಿವೆ.

ಪ್ರವರ್ಗ ೩ಬಿ ನಲ್ಲಿ ಲಿಂಗಾಯಿತ ಉಪಜಾತಿಗಳಾಗಿರುವ ಹೆಳವ, ಅಂಬಿಗ ಮಡಿವಾಳ, ಕುಂಬಾರ, ಕ್ಷೌರಿಕ, ಕಮ್ಮಾರ, ಮೇದಾರ, ಗೌಳಿಗ ಮತ್ತು ಕ್ರಿಶ್ಚಿಯನ್ ಜಾತಿಗಳು ಇನ್ನಿತರ ಲಿಂಗಾಯಿತರ ಬಲಾಢ್ಯ ಉಪಜಾತಿಗಳಾಗಿರುವ ಸಾದರ, ರೆಡ್ಡಿ, ಬಣಜಿಗ, ಗೌಡ ಜಾತಿಗಳೊಟ್ಟಿಗೆ ಸ್ಪರ್ಧಿಸಲಾರದೆ ಅವಕಾಶಗಳಿಂದ ವಂಚಿತವಾಗಿವೆ.

ಆದ್ದರಿಂದ ಇಡೀ ಮೀಸಲಾತಿ ಜಾತಿಗಳ ಬಗ್ಗೆಯೇ ಬಹುದೊಡ್ಡ ಚರ್ಚೆಯಾಗಬೇಕಿದೆ. ಇದಕ್ಕೆ ಸಮಷ್ಠಿ ಪ್ರಜ್ಞೆಯ ಮನಸ್ಸು ಮೂಲಾಧಾರವಾಗಬೇಕಾಗಿದೆ. SC ಯಿಂದ ಹಿಡಿದು ಪ್ರವರ್ಗ ೩ಬಿ ವರೆಗೆ ಒಳಮೀಸಲಾತಿಯಂತಹ ಪ್ರಶ್ನೆಗಳು ಸಹಜವಾಗಿ ಎದುರಾಗುತ್ತವೆ. ಇದು ಯಾವ ಹಂತ ತಲುಪಬಹುದೆಂದರೆ ಜಾತಿಜಾತಿಗಳ ಮಧ್ಯೆ ಸಾಮರಸ್ಯ ಅಪಾಯವಿದೆ. ಈ ಎಲ್ಲಾ ಗಂಡಾಂತರಗಳನ್ನು ಪರಿಹರಿಸಿಕೊಳ್ಳಲು ಈ ಕೆಳಕಂಡ ಸಮೀಕ್ಷೆ, ಕಾನೂನು, ಕಾಯಿದೆ, ವಿಚಾರಗಳನ್ನು ಸರ್ಕಾರಗಳು ಜಾರಿಗೊಳಿಸಿದರೆ ಕಪ್ಪು ಮೋಡದಲ್ಲಿನ ಬೆಳ್ಳಿಗೆರೆಯಂತೆ ಆಶಾಕಿರಣ ಬೆಳಗಬಹುದು.

೧. ಜಾತಿಯಾಧಾರಿತ ಜನಗಣತಿ ನಡೆಯಬೇಕು:

ಏಕೆಂದರೆ ರಾಜ್ಯದ ಪ್ರತಿಯೊಂದು ಜಾತಿಗಳು ಪ್ರತಿಪಾದಿಸುವ ಅವರವರ ಜಾತಿ ಸಂಖ್ಯೆಯನ್ನು ಒಟ್ಟಾಗಿ ಕೂಡಿದರೆ ೭-೮ ಕೋಟಿಗೂ ಮೀರುತ್ತದೆ. ಆದರೆ ವಾಸ್ತವವಾಗಿ ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆ ೫ಕೋಟಿ ಮಾತ್ರ. ಸತ್ಯ ಎಲ್ಲೊ ಅಡಗಿದೆ. ಅದನ್ನು ಬಹಿರಂಗ ಮಾಡಬೇಕಾದರೆ ಜಾತಿಯಾಧಾರಿತ ಜನಗಣತಿ ನಡೆಯ ಬೇಕಾಗಿದೆ.

೨. ಈಗಿರುವ ಶೇಕಡಾ ೫೦ ಮೀಸಲಾತಿಯನ್ನು ಶೇ.೬೨ ಕ್ಕೂ ಮಿಗಿಲಾಗಿ ಜಾತಿ ಸಂಖ್ಯೆಗೆ ಅನುಗುಣವಾಗಿ ಹೆಚ್ಚಿಸ ಬೇಕಿದೆ:

ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಮೀಸಲಾತಿ ಶೇ.೫೦ ಮೀರಬಾರದು. ಆದರೆ ಪಕ್ಕದ ತಮಿಳ ನಾಡಿನಲ್ಲಿ ಶೇ.೬೭ ಮೀಸಲಾತಿಯಿದೆ. ಹಾಗಾದರೆ ಇದು ನಮ್ಮ ಕರ್ನಾಟಕ ರಾಜ್ಯಕ್ಕೂ ಏಕೆ ಅನ್ವಯವಾಗಬಾರದು ಆದ್ದರಿಂದ ಕೂಡಲೇ ರಾಜ್ಯ ಸರ್ಕಾರ ಸಾಮಾಜಿ ನ್ಯಾಯ ಸಿದ್ಧಾಂತದ ಕಾನೂನು ಪಂಡಿತರ ಒಂದು ಪ ಯನ್ನು ತಮಿಳುನಾಡಿಗೆ ಕಳುಹಿಸಿ ಕೂಲಂಕಷವಾಗಿ ವಿಚ ರಮಾಡಿ, ಮಾಹಿತಿ ಸಂಗ್ರಹಿಸಿ ಮೀಸಲಾತಿ ಶೇ.೫೦ಕ್ಕೂ ಹೆಚ್ಚಾಗುವಂತೆ ಕಾರ್ಯಶೀಲವಾಗಬೇಕಿದೆ.

೩.ಖಾಸಗಿ ಮತ್ತು ಸಹಕಾರಿ ರಂಗದಲ್ಲೂ ಮೀಸಲಾತಿ ಅಳವಡಿಸಬೇಕಿದೆ:

ಈಗಾಗಲೇ ಸಂವಿಧಾನದಲ್ಲಿ ೧೯೭೪ರಲ್ಲಿ ತಿದ್ದುಪಡಿಯಾಗಿ ೩೧೭/೧-ಡಿ ಅಡಿಯಲ್ಲಿ ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ಅಳವಡಿಸಲು ಅವಕಾಶ ಕಲ್ಪಿಸಿದೆ. ಇದನ್ನು ಕಾನೂನು ಮಾಡಿ ಶೀಘ್ರ ಜಾರಿ ಮಾಡಬೇಕಿದೆ. ಜಾಗತೀಕರಣ, ಖಾಸಗೀಕರಣ, ಉದಾರೀಕರಣಗಳಿಗೆ ಇದು ಉತ್ತರವಾಗಲಿದೆ.

೪. ಅಲ್ಪಸಂಖ್ಯಾತ ಹಾಗೂ ಹಿಂದುಳಿದ ವರ್ಗದವರಿಗೂ ದಲಿತರಿಗೆ ಇರುವ ಹಾಗೇ ನೌಕರಿಗಳಲ್ಲಿ ಬ್ಯಾಕ್‌ಲಾಗ್ ಮತ್ತು ಬಡ್ತಿ ಮೀಸಲಾತಿ ಸೌಲಭ್ಯ ಅಳವಡಿಸಬೇಕಿದೆ:

ಈ ಬಗ್ಗೆ ಹತ್ತಾರು ವರ್ಷಗಳಿಂದ ಕೂಗಿದ್ದರೂ ಸಂಕಲ್ಪಶಕ್ತಿಯ ಕೊರತೆಯಿಂದ ನೆನೆಗುದಿಗೆ ಬಿದ್ದಿದೆ. ಇತ್ತೀಚಿನ "ಅಹಿಂದ" ಚಳವಳಿ ನಂತರ ಈ ಬಗ್ಗೆ ಮಾನ್ಯ ಎಂ.ಪಿ. ಪ್ರಕಾಶರು ಮಾತನಾಡುತ್ತಿದ್ದಾರೆ. ಬರೀ ಮಾತೇ ಆಗದೆ ಕಾಯಿದೆಯಾಗಬೇಕಿದೆ.

೫.ವಿಧಾನಸಭೆ, ವಿಧಾನಪರಿಷತ್, ಲೋಕಸಭೆ, ರಾಜ್ಯಸಭೆ, ನಿಗಮ, ಮಂಡಳಿಗಳಲ್ಲಿ ಮೀಸಲಾತಿ ನೀಡಬೇಕಿದೆ:

ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಗ್ರಾಮಪಂಚಾಯಿತಿ, ತಾಲ್ಲೂಕ ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಲ್ಲಿ ಮೀಸಲಾತಿ ಅಳವಡಿಸಿದೆ. ಇದೇ ಮಾದರಿಯಲ್ಲಿ ಎಲ್ಲಾ ಚುನಾವಣಾರಂಗ ಮತ್ತು ನೇಮಕಗಳಲ್ಲಿ ಜಾರಿಯಾಗಬೇಕಿದೆ. ಇದು ಸಾಧ್ಯವಾದರೆ ಚುನಾಯಿತರಾದ "ಅಹಿಂದ" ವರ್ಗಗಳಿಂದ, ಆ ವರ್ಗಗಳ ಅಭ್ಯುದಯ ಮತ್ತು ಏಳಿಗೆಗೆ ಕಾನೂನು ಕಟ್ಟಳೆ ರೂಪಿಸುವುದು ಸಹಜವಾಗಿ, ತನ್ನಷ್ಟಕ್ಕೆ ತಾನೇ ಸಾಮಾಜಿಕ ಸಮಾನತೆ ಎಲ್ಲಾ ಹಂತದಲ್ಲೂ ಜಾರಿಯಾಗುತ್ತದೆ.

೬.ರಾಜಕೀಯ ರಂಗದ ಮಹಿಳಾ ಮೀಸಲಾತಿಯಲ್ಲಿ "ಅಹಿಂದ" ವರ್ಗಗಳಿಗೆ ಒಳಮೀಸಲಾತಿ ಅಲವಡಿಸಬೇಕಾಗಿದೆ:

ಬಹಳ ವರ್ಷಗಳಿಂದ ಶೇ.೩೩ ರಷ್ಟು ಮಹಿಳಾ ಮೀಸಲಾತಿ ಜಾರಿಗಾಗಿ ಪಕ್ಷಾತೀತವಾಗಿ ಒತ್ತಡವಿದೆ. ಇದು ಶೇ.೫೦ ರಷ್ಟು ಮೀಸಲಾತಿಯಾಗಿ ಜಾರಿಯಾಗಬೇಕಿದೆ. ಆದರೆ ತಳಸಮುದಾಯಗಳಿಂದ ಬಂದ ಮಹಿಳೆಯರಿಗೆ ಒಳಮೀಸಲಾತಿ ಅಳವಡಿಸುವ ಕುರಿತು ದೊಡ್ಡ ಪಕ್ಷಗಳು ಜಾಣ ಮೌನಕ್ಕೆ ಶರಣಾಗಿವೆ. ಇವರಲ್ಲಿ ಬಿ.ಎಸ್.ಪಿ, ಆರ್.ಜೆ. ಡಿ, ಎಸ್.ಪಿ ಯಂತಹ ಸಾಮಾಜಿಕ ನ್ಯಾಯ ಪರ ಮನೋಭೂಮಿಕೆ ಪಕ್ಷಗಳು ಬಹಿರಂಗವಾಗಿ ಮಹಿಳಾ ಒಳಮೀಸಲಾತಿಗಾಗಿ ಆಗ್ರಹಿಸುತ್ತಿವೆ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಗ್ರಾಮಪಂಚಾಯಿತಿ, ತಾಲ್ಲೂಕ ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಲ್ಲಿ ಶೇ.೩೩ ರಷ್ಟು ಮಹಿಳಾ ಒಳಮೀಸಲಾತಿ ಜಾರಿಯಲ್ಲಿದೆ. ಇದೇ ಮಾದರಿಯನ್ನು ಮೇಲ್ಮಟ್ಟದ ಶಾಸನ ಸಭೆಗಳಿಗೂ ವಿಸ್ತರಿಸಬೇಕಿದೆ.

೭. ಮಂಡಲ್ ವರದಿಯ ಶಿಫಾರಸ್ಸು ಸಂಪೂರ್ಣ ಜಾರಿ ಹಾಗು ಶೈಕ್ಷಣಿಕ ಮತ್ತು ಉದ್ಯೋಗ ಮೀಸಲಾತಿಯಲ್ಲಿ ವರ್ಗೀಕರಣವಾಗಬೇಕಿದೆ:

ಇಡೀ ಇಂಡಿಯಾ ದೇಶದಲ್ಲಿ ಏಕರೂಪವಾಗಿ ಓಬಿಸಿ ಜಾತಿಗಳು ಇನ್ನಿತರ ಹಿಂದುಳಿದ ಜಾತಿಗಳೆಂದು [OTHER BACKWARD CLASSES] ಒಂದೇ ಗುಂಪಾಗಿಸಿದೆ. ಕರ್ನಾಟಕ ರಾಜ್ಯದ ವಿಷಯದಲ್ಲಿ ೩೩೩ ಜಾತಿಗಳು ಒಂದೇ ವರ್ಗದಲ್ಲಿ ಸ್ಪರ್ಧಿಸಬೇಕಿದೆ. ಗ್ರಾಮೀಣ ಒಕ್ಕಲಿಗರು ಮತ್ತು ಲಿಂಗಾಯಿತ ಉಪಜಾತಿಗಳೊಟ್ಟಿಗೆ ಮೇದಾರ, ಬೆಸ್ತ, ಉಪ್ಪಾರ, ಬುಡುಬುಡುಕಿ, ದೊಂಬಿದಾಸ, ಅಗಸ, ಕ್ಷೌರಿಕ, ತಿಗಳ, ಗಾಣಿಗ, ನೇಕಾರ, ಕಮ್ಮಾರ, ದರ್ಜಿ ಮುಂತಾದ ದನಿ ಇಲ್ಲದ ಜಾತಿಗಳು ಪೈಪೋಟಿ ನಡೆಸಬೇಕಿದೆ. ಇದು ಕುಂಟ, ಕುರುಡ, ಹೆಳವರಂತಹ ಬಲಹೀನ ಜನರು, ಶಕ್ತಿ ಮತ್ತು ಯುಕ್ತಿವಂತ ಸದೃಢ, ಬಲಾಢ್ಯ ಜನರೊಂದಿಗೆ ರನ್ನಿಂಗ್ ರೇಸ್‌ನಲ್ಲಿ ಓಡುವಂತಾಗಿದೆ. ಈ ತಾರತಮ್ಯ ನಿವಾರಿಸಲು, ಮಂಡಲ್ ವರದಿಯ ಶೈಕ್ಷಣಿಕ ಮತ್ತು ಔದ್ಯೋಗಿಕ ಮೀಸಲಾತಿಯಲ್ಲೂ ವರ್ಗೀಕರಣವಾಗ ಬೇಕಾಗಿದೆ. ಮಂಡಲ್ ಆಯೋಗದ ಸದಸ್ಯರಾಗಿದ್ದ ಕರ್ನಾಟಕದವರಾದ ಎಲ್.ಆರ್.ನಾಯಕ್ ಮೀಸಲಾತಿಯಲ್ಲಿ ವರ್ಗೀಕರಣಕ್ಕಾಗಿ ಒತ್ತಾಯಿಸಿದ್ದರು.

ಹಲವಾರು ವೈಜ್ಞಾನಿಕ ಅಂಶಗಳನ್ನಿಟ್ಟುಕೊಂಡು ಯಾವುದೇ ಸರ್ಕಾರ ಸಾಮಾಜಿಕ ನ್ಯಾಯ ಸಿದ್ಧಾಂತ ಜಾರಿಗೆ ತರಲು ಹೊರಟರೆ, ಸ್ವತಂತ್ರ ನಂತರದ ೫೮ ವರ್ಷಗಳಿಂದ ಸಾಧಿಸಲಾರದ್ದನ್ನು ಕೇವಲ ೧೦ ವರ್ಷಗಳಲ್ಲಿ ಸಾಧಿಸಬಹುದಾದ ಆಶಾದಾಯಕ ಅಂಶ ಗೋಚರಿಸುತ್ತದೆ. ಇದಕ್ಕೆ ಸಂಕಲ್ಪ ಶಕ್ತಿ ಹೊಂದಿರುವ ಸದೃಢ ಸರ್ಕಾರಬೇಕಿದೆ. ಅದು "ಅಹಿಂದ" ಚಳವಳಿಯಿಂದ ಹೊರ ಹೊಮ್ಮುವ ಸಾಧ್ಯತೆಯಿದೆ. ಅಥವಾ ಮಾನ್ಯ ದೇವೇಗೌಡರು "ಅಹಿಂದ" ವಿರೋಧಿ ಎಂಬ ಆರೋಪದಿಂದ ಮುಕ್ತಿಗೊಳ್ಳಲು ಈ ಎಲ್ಲಾ ಸಾಮಾಜಿಕ ನ್ಯಾಯ ಸಿದ್ಧಾಂತಗಳ ಜಾರಿಗಾಗಿ ಹೋರಾಟ ಮಾಡಲು ಸಾರಥ್ಯ ವಹಿಸಿದರೆ ಇಡೀ "ಅಹಿಂದ" ಸಮೂಹವೇ ಕಿಂದರಿ ಜೋಗಿಯ ಹಿಂದೆ ಹೊರಟ ಮಕ್ಕಳಂತೆ ಗೌಡರ ಬೆನ್ನಿಗೆ ನಿಲ್ಲುತ್ತವೆ. ಅಲ್ಲಿಯವರೆಗೆ ನಮ್ಮ ಆಶಯಗಳು ಆಕಾಶದುದ್ದಗಲಕ್ಕೂ ನಿಂತ ಆಲವೇ ಆಗಲಿದೆ.

೮.ಸಮಾನ ಭೂ ಹಂಚಿಕೆಯಾಗ ಬೇಕಿದೆ:

ಇದು ಈಡೇರಲು ಬಹುಶಃ ಅಗಾಧವಾದ ಸಂಕಲ್ಪ ಶಕ್ತಿ ಹೊಂದಿದ ಸದೃಢ ಸರ್ಕಾರ ಬೇಕಿದೆ. ಮೂಲಭೂತವಾಗಿ ಇದು ಈಡೇರಿದರೆ, ಸಾಮಾಜಿಕ ನ್ಯಾಯ ಜಾರಿಗೆ ತರಲು ಅಳವಡಿಸಿಕೊಂಡಿರುವ ಇನ್ನಿತರ ಎಲ್ಲಾ ಮಾರ್ಗಗಳು ಸಲೀಸಾಗಿ ತೆರೆದುಕೊಳ್ಳುತ್ತವೆ.

೯.ಉಚಿತ ಶಿಕ್ಷಣ ಕಡ್ಡಾಯವಾಗಬೇಕು:

ಇಂದು ಶಿಕ್ಷಣ, ಸೇವೆಯೆಂಬ ವರ್ಗದಿಂದ ಹೊರ ದೂಡಲ್ಪಟ್ಟು ವ್ಯಾಪಾರೀಕರಣಗೊಂಡಿದೆ. ಇದರ ಪರಿಣಾಮವಾಗಿ ಶಿಕ್ಷಣದಿಂದ ವಂಚಿತರಾಗುತ್ತಿರುವವರು ತಳಸಮುದಾಯಗಳೇ ಆಗಿವೆ. ಎಲ್ಲಾ ಶಿಕ್ಷಣ ಸಂಸ್ಥೆಗಳು ರಾಷ್ಟ್ರೀಕರಣಗೊಳ್ಳಬೇಕಿದೆ. ಉನ್ನತ ಶಿಕ್ಷಣದವರೆಗೂ ಉಚಿತವಾಗಿ ಭೋದಿಸುವ ಕಾರ್ಯವಾಗಬೇಕಿದೆ. ಈ ಎಲ್ಲಾ ಅಂಶಗಳಿಗೂ ನಮ್ಮ ಸಂವಿಧಾನ ಜಾರಿಗೊಳಿಸಬೇಕಾದ ಬೃಹಸ್ಪತಿಗಳಾಗಿರುವ ಅಧಿಕಾರಿ ವರ್ಗದವರು ಮೇಲ್ಜಾತಿ ಜನಗಳಾಗಿರುವುದರಿಂದ ಸಂವಿಧಾನದ ಆಶಯಗಳಿಗೆ ಕಂಟಕರಾಗಿ ಪರಿಣಮಿಸಿದ್ದಾರೆ.

೧೦.ಎಲ್ಲಾ ಮೀಸಲಾತಿ ವರ್ಗದಲ್ಲೂ ಒಳಮೀಸಲಾತಿ ನ್ಯಾಯ ಬದ್ಧವಾಗಿ ಸಿಗಬೇಕಿದೆ:

ಇದು ಸಾಧ್ಯವಾಗಬೇಕಾದರೆ ಪ್ರತಿ ಐದು ವರ್ಷಗಳಿಗೊಮ್ಮೆ ಮೀಸಲಾತಿ ವರ್ಗೀಕರಣ ಪರಿಷ್ಕರಣೆಯಾಗಬೇಕಿದೆ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಶಾಶ್ವತ ಹಿಂದುಳಿದ ವರ್ಗಗಳ ಆಯೋಗವಿದ್ದು, ಶಾಸನಬದ್ಧ ಅಧಿಕಾರ ದತ್ತವಾಗಿದೆ ಔದ್ಯೋಗಿಕ, ಸಾಂಸ್ಕೃತಿಕ, ಸಾಮಾಜಿಕ ಮತ್ತು ರಾಜಕೀಯ ಅಂಶಗಳನ್ನೊಳಗೊಂಡ ಸಮೀಕ್ಷೆಗಳ ಅಂಕಿಅಂಶಗಳನ್ನು ಕಣ್ಣಾಲು ರೀತಿಯಲ್ಲಿ ಕ್ರೋಢೀಕರಿಸುತ್ತಿರಬೇಕಿದೆ. ಈ ಮೂಲಕ ಅವಕಾಶ ವಂಚಿತ ಜಾತಿಗಳಿಗೆ ಹೆಚ್ಚಿನ ಸವಲತ್ತು ನೀಡಬೇಕಿದೆ. ಅವಕಾಶ ಸದುಪಯೋಗಪಡಿಸಿಕೊಂಡು ಮುಂದುವರಿದ ಜಾತಿಗಳನ್ನು ಮೀಸಲಾತಿ ಪಟ್ಟಿಯಿಂದ ಕೈ ಬಿಡಬೇಕಿದೆ.

ನವೆಂಬರ್ ೨೦೦೩ ರಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಹಣಕಾಸು ಇಲಾಖೆ HUMAN RESOURCE DATA BASE ಎಂಬ ಹೆಸರಿನಲ್ಲಿ ರಾಜ್ಯ ಸರ್ಕಾರದ "ಡಿ" ದರ್ಜೆ ನೌಕರರಿಂದ ಹಿಡಿದು ಮುಖ್ಯ ಕಾರ್ಯದರ್ಶಿವರೆಗೆ ಅಮೂಲಾಗ್ರವಾಗಿ ಮಾಹಿತಿ ಸಂಗ್ರಹಿಸಿ ಕಂಪ್ಯೂಟರೀಕರಣಗೊಳಿಸಲು ಮುಂದಾಗಿತ್ತು. ಆದರೆ ಅದರ ಮುಖ್ಯ ಲೋಪವಾಗಿ ಜಾತಿಯ ಪ್ರಶ್ನೆ ಬಂದಾಗ ಕೇವಲ ಒಕ್ಕಲಿಗ, ಲಿಂಗಾಯಿತ, ಬ್ರಾಹ್ಮಣ ಎಂಬ ಮೂರು ಜಾತಿಗಳನ್ನು ಕೇಳಲಾಗಿತ್ತು. ಹಾಗೇ ಧರ್ಮದ ಪ್ರಶ್ನೆ ಬಂದಾಗ ಕೆಲವೇ ಧರ್ಮಗಳನ್ನು ಕೇಳಿ ಇನ್ನಿತರ ಧರ್ಮಗಳನ್ನು ಕೈಬಿಟ್ಟಿತ್ತು. ಈ ಲೋಪಗಳನ್ನು ಸರಿಪಡಿಸಿ ಧರ್ಮ ಮತ್ತು ಜಾತಿಗಳನ್ನು ನೇರವಾಗಿ ನಮೂದಿಸಿ ವಿಷಯ ಸಂಗ್ರಹಿಸಿದ್ದರೆ, ಇವತ್ತು ಎದ್ದಿರುವ ಒಳಮೀಸಲಾತಿ ವಿವಾದಕ್ಕೆ ಕೈಗನ್ನಡಿಯಂತೆ ಉತ್ತರ ಬಹುಸುಲಭವಾಗಿ ದೊರೆಯುತ್ತಿತ್ತು. ಈಗಲಾದರೂ ರಾಜ್ಯ ಸರಕಾರ ಲೋಪ ಸರಿಪಡಿಸಿಕೊಂಡು HUMAN RESOURCE DATA BASE ಅನ್ನು ಮರುಮಾಹಿತಿ ಸಂಗ್ರಹಣೆ ಮಾಡಿದರೆ ಸಾಮಾಜಿಕ ನ್ಯಾಯ ಸಿದ್ಧಾಂತ ಜಾರಿಗೆ ತರಲು ಮತ್ತಷ್ಟು ಹಗುರ ಮತ್ತು ಕಾರ್ಯಸಾಧ್ಯವಾಗುತ್ತದೆ.

ಹೀಗೆ ಹಲವಾರು ವೈಜ್ಞಾನಿಕ ಅಂಶಗಳನ್ನಿಟ್ಟುಕೊಂಡು ಯಾವುದೇ ಸರ್ಕಾರ ಸಾಮಾಜಿಕ ನ್ಯಾಯ ಸಿದ್ಧಾಂತ ಜಾರಿಗೆ ತರಲು ಹೊರಟರೆ, ಸ್ವತಂತ್ರ ನಂತರದ ೫೮ ವರ್ಷಗಳಿಂದ ಸಾಧಿಸಲಾರದ್ದನ್ನು ಕೇವಲ ೧೦ ವರ್ಷಗಳಲ್ಲಿ ಸಾಧಿಸಬಹುದಾದ ಆಶಾದಾಯಕ ಅಂಶ ಗೋಚರಿಸುತ್ತದೆ. ಇದಕ್ಕೆ ಸಂಕಲ್ಪ ಶಕ್ತಿ ಹೊಂದಿರುವ ಸದೃಢ ಸರ್ಕಾರ ಬೇಕಿದೆ. ಅದು "ಅಹಿಂದ" ಚಳವಳಿಯಿಂದ ಹೊರ ಹೊಮ್ಮುವ ಸಾಧ್ಯತೆಯಿದೆ. ಅಥವಾ ಮಾನ್ಯ ದೇವೇಗೌಡರು "ಅಹಿಂದ" ವಿರೋಧಿ ಎಂಬ ಆರೋಪದಿಂದ ಮುಕ್ತಿಗೊಳ್ಳಲು ಈ ಎಲ್ಲಾ ಸಾಮಾಜಿಕ ನ್ಯಾಯ ಸಿದ್ಧಾಂತಗಳ ಜಾರಿಗಾಗಿ ಹೋರಾಟ ಮಾಡಲು ಸಾರಥ್ಯ ವಹಿಸಿದರೆ ಇಡೀ "ಅಹಿಂದ" ಸಮೂಹವೇ ಕಿಂದರಿ ಜೋಗಿಯ ಹಿಂದೆ ಹೊರಟ ಮಕ್ಕಳಂತೆ ಗೌಡರ ಬೆನ್ನಿಗೆ ನಿಲ್ಲುತ್ತವೆ. ಅಲ್ಲಿಯವರೆಗೆ ನಮ್ಮ ಆಶಯಗಳು ಆಕಾಶದುದ್ದಗಲಕ್ಕೂ ನಿಂತ ಆಲವೇ ಆಗಲಿದೆ. □

ಎಲ್ಲಿ?

ಹೇಗಿರಬಹುದು
ತನಗೆ ತಾನು ಶಾಂತಿ?
ರಸ್ಕಿನ್, ವಾಲ್ಟೇರ್, ಟಾಲ್‌ಸ್ಟಾಯ್.....
ಮಹಾನ್ ಕವಿ ಪುಂಗವರ ಕಾದಂಬರಿಗಳ
ಶಬ್ದಾರ್ಥಗಳಲ್ಲಡಗಿಹುದೇ?
ಇವರ ನಿಜ ಬದುಕಿನ ಜಿಗುಪ್ಸೆಯಲ್ಲಿ?
ಲಕ್ಷ್ಮಿಪತಿ ಕೋಲಾರರ ನೀಲಿ ತತ್ತಿಯಲ್ಲಿ
ಪಿಂಡೋತ್ಪತ್ತಿ ಯಾಗುತಿಹುದೇ? ಅಲ್ಲಿ....
ಇಲ್ಲಿ.... ಎಲ್ಲೆಲ್ಲೋ.....?!
ಅಂತರಂಗದ ವಿಸ್ತಾರದ ಸ್ತರಗಳನ್ನು ದಾಟಿ...
ಬೌತಿಕ ಬೌದ್ಧಿಕಗಳ ಆಚೀಚೆ?
ವಸ್ತು-ನಿರ್ವಸ್ತುಗಳೆಂಬ ತರ್ಕ-ಕುತರ್ಕ
ಗಳ ತಂತ್ರಗಳ ನೇಯ್ದ ಬಲೆಯಲ್ಲಿ?
ವಿಫಲ ಆಲೋಚನೆಗಳ ಅಕ್ಕ ಪಕ್ಕ...?
ಜೀಸಸ್.... ಬುದ್ಧನ ಮಂದಗಮನ ಧ್ಯಾನ
ಮುದ್ರೆಯಲ್ಲಿ? ಇಲ್ಲವೇ?!
ಅಂಬೇಡ್ಕರರ ನೀಲಿ ಕೋಟಿನಂತಿಹುದೇ?
ನಿಷ್ಕಲ್ಮಷ ನೀಲಾಕಾಶದಂತಿಹುದೇ?
ಹಾಗಾದರೆ!!! ಇವು ಬರೀ ಮೌನವಾಗಿ...
ಮಾತನಾಡಲಾರವೇಕೆ? ಮೌನವು ಉಸಿರೆತ್ತದಿದ್ದರೆ
ಮಾತಲ್ಲದ್ದು ಶಾಂತಿಯೆ?



ಈ ಬಾಯ್ ಬಿಡದ ಶಾಂತಿ...!!!
ಬುದ್ಧನ ಬೇಕು ಬೇಡಗಳಿಂದಾಚೆಗೇನಾದರೂ
ಅಡಗಿ ಕುಳಿತಿಹುದೇ?
ಬೇಕುಗಳು ಹೃದಯ-ಹೃದಯಗಳನು ಸ್ಫೋಟಿಸುತ್ತಿರಲು
ಬೇಡಗಳು ಮನುಜನನು ಈ ಜಗದಿಂದಿ ಹೊರದೂಡುತ್ತಿರಲು
ಇವೆರಡರ....
ಸತ್ವಾ ಸತ್ವಗಳಲ್ಲೇನಾದರೂ...

○ ಪದ್ಮಾಲಯ ನಾಗರಾಜ್



ಕಸಬರಿಗೆ



ಮೊದಲು ಹಿಡಿದದ್ದು
ಸುಮ್ಮನೆ ಕುತೂಹಲಕ್ಕೆ

ಅಪ್ಪನ ಕಣ್ಣಲ್ಲಿ
ಅಮ್ಮನ ಬಾಯಲ್ಲಿ ಮೆಚ್ಚುಗೆಗೆ ಮರುಳಾಗಿ
ಬಿಗಿದ ಹಿಡಿತಕ್ಕೆ
ಕಾಯವೇ ಕಸಬರಿಗೆ.

ನಡೆದ ದಾರಿಯ ಕುರುಹು
ಸವೆದು ಉದುರಿದ ಕಡ್ಡಿ

ನಿಮ್ಮ ನಡೆಮಡಿಗೆ
ಹಾದಿ ಹಸನಾಗಿಸಲು
ಕಸವ ಉಡಿಯಲ್ಲಿಡುವೆ
ನಿರಂಬಳವಾಗಿ ಹೆಜ್ಜೆಯಿಡಿ
ನನ್ನ ಚಿಂತೆಬಿಡಿ.

ನೆನೆವಿರಾದರೆ
ಸಂಭೋಳಿ ನಾಗಿದೇವನ
ಮನೆಯ ಮಗಳೆನ್ನಿ

○ ಡಾ|| ವಿನಯಾ ಒಕ್ಕುಂದ

ಪುಸ್ತಕ ಅವಲೋಕನ

'ನೈಸರ್ಗಿಕ ಕೃಷಿ'ಯ ಇತಿ–ಮಿತಿಗಳು

ಜಿ.ಶಿವನಂಜಯ್ಯ ಬಾಳೆಕಾಯಿ

ಸಹಜ ಕೃಷಿಯ 'ಉಳುಮೆ ಬೇಡ' ಎಂಬ ನಿಲುವಿನಿಂದಾಗಿ ನಾವು ಹೊಲಗಳು, ತರಕಾರಿ, ಹೂ ಕೃಷಿಯತ್ತ ಹೋಗಲಾಗಲಿಲ್ಲ. ಈ ನಿಟ್ಟಿನಲ್ಲಿ ಅನೇಕ ಪ್ರಯತ್ನಗಳು ವಿಫಲವಾದವು. ಒಮ್ಮೆ ಶ್ರೀ ಪೂರ್ಣಚಂದ್ರ ತೇಜಸ್ವಿಯವರ ಜೊತೆ ಮಾತನಾಡುವ ಅವಕಾಶ ದೊರೆಯಿತು. ನಾನಾಗ ಸಹಜ ಕೃಷಿ ಪ್ರಸ್ತಾಪ ಮಾಡಿ ಹೊಲದಲ್ಲಿ ಸೋತಿದ್ದರ ಬಗ್ಗೆ ಹೇಳಿದೆ. ಆಗ ಅವರು, "ಅದೆಲ್ಲಾ ಆಗಲ್ಲ, ಕಣ್ರೀ" ಎಂದು. (ಇವರ ಪುಸ್ತಕ 'ಸಹಜ ಕೃಷಿ ಒಂದು ಪರಿಚಯ' ನೋಡಿ). ಹೀಗಾಗಿ ಇಂದೂ ಕೂಡ ಸಹಜ ಕೃಷಿ ಬೆರಳೆಣಿಕೆಯಷ್ಟು ಜನರ ತೋಟದ ಬೆಳೆಗಳಿಗೆ ಸೀಮಿತವಾಗಿರುವುದು ವಾಸ್ತವದ ಸಂಗತಿ.

೬೦ ರ ದಶಕದಲ್ಲಿ ಜಾರಿಗೆ ಬಂದ ರಾಸಾಯನಿಕ ಕೃಷಿ ಇಂದು ನಮ್ಮ ರೈತನನ್ನೂ ನೈಸರ್ಗಿಕ ಸಂಪನ್ಮೂಲಗಳನ್ನೂ ಆತ್ಮಹತ್ಯೆಗೆ ದೂಡಿದ್ದು ಎಲ್ಲರಿಗೂ ಗೊತ್ತು.

ಕರ್ನಾಟಕದಲ್ಲಿ ಕಳೆದ ಎರಡು ಮೂರು ದಶಕಗಳ ಹಿಂದೆಯೇ ಇದನ್ನು ಮನಗಂಡಿದ್ದ ಚೇರ್ಕಾಡಿ ರಾಮಚಂದ್ರರಾಯರು, ತೀರ್ಥಹಳ್ಳಿಯ ದಿ. ಪುರುಷೋತ್ತಮರಾವ್, ವರ್ತೂರಿನ ನಾರಾಯಣರೆಡ್ಡಿ, ತುಮಕೂರಿನ ಜಿ. ಶಿವನಂಜಯ್ಯ ಬಾಳೆಕಾಯಿ ಮತ್ತು ಇನ್ನೂ ಮುಂತಾದ ಅನೇಕ ಮಹನೀಯರು, ವಿಷರಾಸಾಯನಿಕ ಕೃಷಿ ವಿರುದ್ಧ ದನಿ ಎತ್ತಿ ಪರ್ಯಾಯವಾದ ಸಹಜ, ಸಾವಯವದ ಕಡೆಗೆ ನಡೆದದ್ದು ಈಗ ಇತಿಹಾಸ. ಇಲ್ಲಿ ಅಜ್ಜ ಫುಕುವೋಕ (ಜಾಗತಿಕಮಟ್ಟದಲ್ಲಿ) ಇವರ ಬೆನ್ನಿಗಿದ್ದ ಎನ್ನುವುದನ್ನು ಮರೆಯು ವಂತಿಲ್ಲ.

ಇವರ ಕೃಷಿಯ ಜೀವಾಳ ಉಳುಮೆ ಬೇಡ, ಬೆಳೆಗೆ ಸಜೀವ ಮತ್ತು ನಿರ್ಜೀವ ಸಾವಯವ "ಮಲ್ಚಿಂಗ್" ಎನ್ನುವುದು ಅಗತ್ಯ. ಕಾಳನ್ನುಳಿದು ಉಳಿಕೆ ಎಲ್ಲವನ್ನೂ ಮರಳಿ ಅದೇ ಭೂಮಿಗೆ ಮರಳಿಸಿದರೆ ನಿಸರ್ಗ ಉಳಿದದ್ದೆನ್ನೆಲ್ಲವನ್ನೂ ತಾನೇ ಮಾಡುತ್ತದೆ ಎಂದು ಮಾಡಿ ತೋರಿಸಿದರು. ಈ ಕಾರಣಕ್ಕಾಗಿಯೇ ಅವರದ್ದು ಏನೂ ಮಾಡದ ಬೇಸಯ.

ಇವರ ಜಾಡು ಹಿಡಿದು ಅತಿ ಉತ್ಸಾಹದಿಂದ ಕೃಷಿಗಿಳಿದ ನನ್ನಂಥವರು, ತೋಟದ ಬೆಳೆಗಳಲ್ಲಿ ಮಾತ್ರ ಬೆಳಕು ಕಂಡದ್ದು ನಿಜ. ಅಲ್ಲಿಯವರೆಗೆ ಕೆಂಪು ರಂಪಾಗಿದ್ದ ನಮ್ಮ ತೋಟಗಳು ವೈವಿಧ್ಯಮಯವಾದ ಮಿಶ್ರ ಬೆಳೆಗಳಿಂದ ಸಿಂಗರಿಸಿಕೊಂಡದ್ದು ಸತ್ಯ.

ಸಹಜ ಕೃಷಿಯ 'ಉಳುಮೆ ಬೇಡ' ಎಂಬ ನಿಲುವಿನಿಂದಾಗಿ ನಾವು ಹೊಲಗಳು, ತರಕಾರಿ, ಹೂ ಕೃಷಿಯತ್ತ ಹೋಗಲಾಗಲಿಲ್ಲ. ಈ ನಿಟ್ಟಿನಲ್ಲಿ ಅನೇಕ ಪ್ರಯತ್ನಗಳು ವಿಫಲವಾದವು. ಎಷ್ಟು ಪ್ರಯತ್ನಿಸಿದರೂ ಕಳೆಗಳೂ ಬೆಳೆಯನ್ನು ನುಂಗಿ ಹಾಕುತ್ತಿದ್ದವು. ಒಮ್ಮೆ ಶ್ರೀ ಪೂರ್ಣಚಂದ್ರ ತೇಜಸ್ವಿಯವರ ಜೊತೆ ಮಾತನಾಡುವ ಅವಕಾಶ ದೊರೆಯಿತು. ನಾನಾಗ ಸಹಜ ಕೃಷಿ ಪ್ರಸ್ತಾಪ ಮಾಡಿ ಹೊಲದಲ್ಲಿ ಸೋತಿದ್ದರ ಬಗ್ಗೆ ಹೇಳಿದೆ. ಆಗ ಅವರು, "ಅದೆಲ್ಲಾ ಆಗಲ್ಲ, ಕಣ್ರೀ" ಎಂದು. (ಇವರ ಪುಸ್ತಕ 'ಸಹಜ ಕೃಷಿ ಒಂದು ಪರಿಚಯ' ನೋಡಿ).

ಹೀಗಾಗಿ ಇಂದೂ ಕೂಡ ಸಹಜ ಕೃಷಿ ಬೆರಳೆಣಿಕೆಯಷ್ಟು ಜನರ ತೋಟದ ಬೆಳೆಗಳಿಗೆ ಸೀಮಿತವಾಗಿರುವುದು ವಾಸ್ತವದ ಸಂಗತಿ. ಹಿರಿಯ ಕೃಷಿಕ ಮಾನ್ಯ ನಾರಾಯಣ ರೆಡ್ಡಿಯವರು ಎಲ್ಲಾ ಗೌರವಗಳೊಂದಿಗೆ ಉಳುಮೆ ಇಲ್ಲದ "ಫುಕುವೋಕರ" ಸಹಜ ಕೃಷಿಯನ್ನು ವಿನಯದಿಂದ ತಿರಸ್ಕರಿಸಿ ಉಳುಮೆ ಮಾಡುತ್ತಾ ಸಾವಯವ ಕೃಷಿ ಮಾಡಿ ಎಲ್ಲವನ್ನೂ ಬೆಳೆದರು. ಇತ್ತೀಚೆಗೆ ಅವರು ರೀಡಿಸ್ಕವರ್ ಮಾಡಿದ 'ಮಡಗಾಸ್ಕರ್' ವಿಧಾನ ಭತ್ತದ ಬೆಳೆಯಲ್ಲಿ ಕ್ರಾಂತಿ ಮಾಡಿತು. ಇದು ರಾಗಿಯ ನಮ್ಮದೇ ಪಗಡೇಸಾಲು ಪದ್ಧತಿ.

ಸುಭಾಷ್ ಪಾಳೇಕರರ ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ

ಲೇ: ಸ್ವಾಮಿ ಆನಂದ್. ಆರ್

ಬೆಲೆ: ರೂ.60/-

ಪ್ರಕಾಶಕರು: ಅಗ್ನಿ ಪ್ರಕಾಶನ

ಇಸ್ರೋ ಲೇಔಟ್, ಬೆಂಗಳೂರು-560078

ಇನ್ನು ಪುರುಷೋತ್ತಮರಾಯರು ತೋಟಗಾರಿಕೆಯಲ್ಲಿ "ಫುಕುವೋಕ" ಮಾದರಿ ಅಳವಡಿಸಿ ಜೊತೆಗೆ ಹಿಂದು-ಬ್ರಾಹ್ಮಣ ಸಂಸ್ಕೃತಿಯ. ಪೌಷ್ಟಿಕ ಗೊಬ್ಬರ, ಪಂಚಗವ್ಯ, ಮುಂತಾದ ಪರಿಕರಗಳ ಸಹಾಯದಿಂದ ವೆನಿಲ್ಲಾದಂತಹ ಬೆಳೆ ಬೆಳೆದು ನಾಡಿಗೆ ಕೀರ್ತಿ, ಜೇಬಿಗೆ ಹಣ ತುಂಬಿಕೊಂಡರು. ಉಳುಮೆ ಮಾಡಿ ಕಬ್ಬು ಮತ್ತು ಭತ್ತ ಬೆಳೆದು ಬೇರೆಯವರು ಉಬ್ಬೇರಿಸುವಂತೆ ಮಾಡಿದರು.

ಇದೇ ರಾಯರು ಅನಂತರದಲ್ಲಿ ಕೃಷಿಗೆ ಅಗ್ನಿಹೋತ್ರದಂತ ಮಂತ್ರ ಬೆಸೆದು ಅವರ ಕೃಷಿ ಪದ್ಧತಿಯ ಪ್ರಚಾರದಲ್ಲಿ ನಿರತರಾದರು. ಬರುಬರುತ್ತಾ ಮೊದಲು ಸರಳವಾಗಿದ್ದ ಅವರ ಕೃಷಿ ನೂರೆಂಟು ರಗಳೆಗಳ ಗೂಡಾಯಿತು. ಇದನ್ನು ನಾನು ಕೆ. ಶಿವರಾಮಕಾರಂತರು ಇದ್ದ ಸಭೆಯೊಂದರಲ್ಲಿ ವಿರೋಧಿಸುತ್ತಾ, ನಿಮ್ಮ ಸಾವಯವ ಕೃಷಿ ಹೀಗೇ ಮುಂದುವರಿದರೆ ಸಂಸ್ಕೃತ ಭಾಷೆಗೊದಗಿದ ಗತಿಯೇ ಒಂದು ದಿನ ಇದಕ್ಕೂ ಬರುತ್ತದೆ" ಎಂದೆ. ಇದನ್ನು ಕಾರಂತರು ಸಮರ್ಥಿಸಿದರು. ಇದು ನಡೆದದ್ದು ಸುಮಾರು ೧೯೯೩ ಆಸುಪಾಸಿನಲ್ಲಿ. ಅಷ್ಟರೊಳಗೆ ನನ್ನ ಸಹಜ ಕೃಷಿಗೆ ಹತ್ತು ವರ್ಷ ತುಂಬಿತ್ತು.

ಈ ಕರ್ನಾಟಕದಲ್ಲಿ ನಮ್ಮ ಒಂದಷ್ಟು ಚಿಂತಕರು ಮತ್ತು ರೈತರು ಹೀನಾಮಾನವಾಗಿ ಬಯ್ಯುತ್ತಿರುವುದು ಕಗ್ಗಂಟಾಗಿರುವ ಈ ಬಗೆಯ ಸಾವಯವ ಕೃಷಿಯನ್ನು, ಏಕೆಂದರೆ ಈಗ ಅವರಿಗೆ ಶ್ರೀ ಪಾಳೇಕರರ ಶೂನ್ಯಬಂಡವ್ಹಾಳದ ಕೃಷಿ ಸಿಕ್ಕಿದೆ.

ಪಾಳೇಕರರ ಬೀಜಾಮೃತ, ಜೀವಾಮೃತ

ನಾನು ೧೯೯೩ ರಲ್ಲಿ ತೀರ್ಥಹಳ್ಳಿಯ ಸಭೆಗೆ ಹೋಗಿದ್ದೆನೆಂದು ಮೇಲೆ ಹೇಳಿದ್ದೇನೆ. ಆಗ ತಾನೆ ರಾಯರು ಒಂದಿಪ್ಪತ್ತು ವೆನಿಲ್ಲಾ ಬಳ್ಳಿಗಳನ್ನು ತಮ್ಮ ತೋಟದಲ್ಲಿ ನೆಟ್ಟಿದ್ದರು. ಒಂದು ಬಳ್ಳಿಯಂತೂ ನುಗ್ಗೇಮರ ತಬ್ಬಿ ಮೂವತ್ತು ಅಡಿಯವರೆಗೂ ಮೇಲೆ ಬೆಳೆದಿತ್ತು. ಇದು ಹೇಗೆ? ಎಂದೆ. ಅದಕ್ಕವರು, "ನಾನು ವೃಕ್ಷಾಯುರ್ವೇದ ಓದಿ ಒಂದು ಟಾನಿಕ್ ತಯಾರಿಸಿದ್ದೇನೆ" ಎಂದರು. ಅದರ ವಿವರ ಹೀಗಿತ್ತು. ೧೦ ಕೆ.ಜಿ. ನಾಟಿ ಆಕಳಿನ ಹಸಿ ಸಗಣಿ+ಒಂದು ಕೆ.ಜಿ. ಕಡಲೆ ಹಿಂಡಿ+೧೦ ಎಂ.ಎಲ್. ಶುದ್ಧ ಜೇನು ತುಪ್ಪ+೧೦೦ ಗ್ರಾಂ ಶುದ್ಧ ಅರಿಶಿನ ಪುಡಿ. ಇವಿಷ್ಟನ್ನೂ ೫೦ ಲೀಟರ್ ನೀರಿನಲ್ಲಿ ನೆನೆಹಾಕಿ ೨೪ ಗಂಟೆ ಬಿಟ್ಟು ೧:೧೦ರ ಪ್ರಮಾಣದಲ್ಲಿ ನೀರು ಬೆರೆಸಿ ಯಾವ ಗಿಡಗಳಿಗಾದರೂ ಕೊಡಿ ಎಂದು, ಆಕಾಶಕ್ಕೆ ಏಣಿ ಹಾಕುತ್ತಿದ್ದ ವೆನಿಲ್ಲಾ ತೋರಿಸಿ ಹೇಳಿದರು. ಜೊತೆಗೆ ಸಾವಯವ ಹೊದಿಕೆ ಪೌಷ್ಟಿಕ ಗೊಬ್ಬರವನ್ನು ಬಳಸಬೇಕು ಎಂದರು. ಅನಂತರದ ದಿನಗಳಲ್ಲಿ ನಾನು ಅವರಲ್ಲಿದ್ದ ಜೇನಿನ ಬದಲಾಗಿ (ಸಿಕ್ಕಲಿಲ್ಲ ಎನ್ನುವ ಕಾರಣಕ್ಕೆ ಬೆಲ್ಲ ಸೇರಿಸಿ ಅಡಕೆ ನರ್ಸರಿ ಬೆಳೆಸಿದೆ. ಫಲಿತಾಂಶ ಚೆನ್ನಾಗಿತ್ತು. ಇದನ್ನು ಮುಂದು ವರಿಸಲು ತೊಟ್ಟಿ ಕಟ್ಟಿದೆ ನಾದರೂ ಇದು ಮುಂದುವರಿಯಲಿಲ್ಲ. ೨೦೦೦ ಇಸವಿಯಲ್ಲಿ ನಾನು "ಫುಕುವೋಕ'ನ ಹಾದಿಯಲ್ಲಿ" "ಪುಸ್ತಕ ಬರೆದಾಗ ಆಸಕ್ತರ ಉಪಯೋಗಕ್ಕಿರಲೆಂದು ದ್ರಾವಣ ಸೇರಿಸಿದೆ. ರೈತರ ಸಭೆಗಳಲ್ಲಿ ಇದರ ಮಾಹಿತಿ ನೀಡುತ್ತಾ ಹೋದೆ. ನಮ್ಮ ಸಿರಿಸಂವೃದ್ಧಿ ಬಳಗದ ಹಿರಿಯರಾದ ಮಾರಗೊಂಡುನ ಹಳ್ಳಿಯ ಸದಾಶಿವಪ್ಪನವರು ಈ

ರಾಸಾಯನವನ್ನು ತಮ್ಮ ಸಾವಯವ ಕೃಷಿಯಲ್ಲಿ ಈಗಲೂ ಬಳಸುತ್ತಿದ್ದು ಉತ್ತಮ ಫಲಿತಾಂಶ ಪಡೆಯುತ್ತಿದ್ದಾರೆ.

ರಾಯರು ನನಗೆ ಅಂದು ತಿಳಿಸಿದ್ದ ಈ ರಾಸಾಯನಕ್ಕೆ ಪಾಳೇಕರರು ಒಂದಿಷ್ಟು ಸೇರಿಸಿ, ಒಂದಷ್ಟು ಬಿಟ್ಟು 'ಜೀವಾಮೃತ' ಎಂದು ಕರೆದಿದ್ದಾರೆ. ಮಣ್ಣು ಮತ್ತು ಗಂಜಳವನ್ನು ಸೇರಿಸಿದ್ದದರಿಂದ ಇದರ ಮೌಲ್ಯವರ್ಧನೆಯಾಗಿರಲೂಬಹುದು. ರಾಯರು ಇದನ್ನು ನನಗೆ ಹೇಳಿದಾಗ, "ಅದೇಕೆ ಆಕಳುವಿನ ಸಗಣಿಯೇ ಬೇಕು, ಎಮ್ಮೆಯದ್ದು, ಹೋರಿಯದ್ದು, ಆಗುವುದಿಲ್ಲವೇ?" ಎಂದು ತಮಾಷೆ ಮಾಡಿದ್ದೆ. ಪಾಳೇಕರರು ಇಲ್ಲಿ ಎಮ್ಮೆಗೂ ಜಾಗ ನೀಡಿದ್ದಾರೆ ಸಂತೋಷ.

ಸ್ವಾಮಿ ಆನಂದ್ ತಮ್ಮ ಪುಸ್ತಕದಲ್ಲಿ ಪಾಳೇಕರರ ಕೃಷಿವಿಧಾನವನ್ನು ತಿಳಿಸಲು ಪ್ರಾರಂಭಿಸುವುದೇ 'ಜೀವಾಮೃತ' ತಯಾರಿಕಾ ವಿಧಾನದಿಂದ, ಇಲ್ಲಿ ಪಾಳೇಕರರ 'ನೈಸರ್ಗಿಕ ಕೃಷಿಗೂ' ರಾಯರ 'ಸಾವಯವ ಕೃಷಿಗೂ' ಇರುವ ಒಂದೇ ಒಂದು ವ್ಯತ್ಯಾಸವೆಂದರೆ, ಈ ಪುಸ್ತಕ ತಿಳಿಸುವಂತೆ **ಪಾಳೇಕರರಿಗೆ ಯಾವುದೇ ಕೃಷಿ ಮಾಡಲು ಬೀಜಾಮೃತ ಜೀವಾಮೃತವೇ ಸಾಕು. ಪುರುಷೋತ್ತಮ ರಾಯರಿಗೆ ಇದರ ಜೊತೆಗೆ ದಂಡಿಯಾಗಿ ಸಾವಯವ ಗೊಬ್ಬರವೂ ಬೇಕು**. ಕೀಟ ರೋಗ ನಿಯಂತ್ರಿಸಲು ಇವರಿಬ್ಬರಿಗೂ ಸಾವಯವ ಬ್ರಹ್ಮಾಸ್ತ್ರಗಳೇ ಬೇಕು. ಸಾವಯವ ಔಷಧ, ಕೀಟಗಳನ್ನು ಕೊಲ್ಲುವುದಿಲ್ಲ, ಬದಲಿಗೆ ಅವುಗಳಿಗಿರುವ ಘಾಟುವಾಸನೆ, ಅವನ್ನು ಬೆಳೆಯಿಂದ ದೂರ ಓಡಿಸುತ್ತದೆ) 'ಬ್ರಹ್ಮಾಸ್ತ್ರ' ಓಡಿಸುವುದಿಲ್ಲ, ಕೊಲ್ಲುತ್ತದೆ. ಜೊತೆಗೆ ಸಾವಯವ ಹೊದಿಕೆ ಇಬ್ಬರಿಗೂ ಬೇಕು.

ಇನ್ನು ಪಾಳೇಕರರಿಗೆ ಹೊದಿಕೆ ಆರ್ದ್ರತೆ ಉಳಿಸಲಷ್ಟೇ ಬೇಕಾದರೆ, ನಮಗೆಲ್ಲಾ ಇದು ಆರ್ದ್ರತೆಯ ಜೊತೆಗೆ, ಕಳೆ ನಿಯಂತ್ರಿಸಿ, ಮುಂದೆ ಗೊಬ್ಬರಕ್ಕೂ ಬೇಕು.

ನಾನು ಏನು ಹೇಳಲು ಪ್ರಯತ್ನಿಸುತ್ತಿದ್ದೇನೆಂದರೆ ಪಾಳೇಕರರು ಫುಕುವೋಕ ಪ್ರತಿಪಾದಿಸಿದ, ಹೊದಿಕೆ ಬೆಳೆ ವೈವಿಧ್ಯ, ಜೀವವೈವಿಧ್ಯ, ಉಳುಮೆ ಮಾಡದೆಯೇ ಬೆಳೆ ತೆಗೆಯುವುದು, ಪ್ರಕೃತಿಯ ನಾಡಿಮಿಡಿತಕ್ಕೆ ಅನುಗುಣವಾಗಿ ಕೃಷಿ ಮಾಡುವುದು ಮುಂತಾದ ಮೂಲತತ್ವಗಳನ್ನೂ ಮತ್ತು ಸಾವಯವ ಕೃಷಿಯ ಜೀವಾಮೃತವನ್ನೂ ಬೆಸೆದು, ತಮ್ಮದೇ ಆದ ವಿಧಾನವನ್ನು ಹೇಳುತ್ತಿದ್ದಾರೆ, ಮಾಡುತ್ತಿದ್ದಾರೆ.

ಜೊತೆಗೆ ಪಾಳೇಕರರು (ಸದರಿ ಪುಸ್ತಕದಲ್ಲಿ ನಮೂದಿಸಿರುವಂತೆ) ಮಹಾರಾಷ್ಟ್ರದವರೇ ಆದ ಡಾ|| ದೋಬೋಲ್ಕರ್ ಪ್ರಚಾರಪಡಿಸುತ್ತಿರುವಂತೆ (ಇವರು ಚಪ್ಪರದ ವಿನ್ಯಾಸ ಬದಲಿಸಿ ಅಧಿಕ ಸೂರ್ಯರಶ್ಮಿ ಬಳಸಿಕೊಂಡು ದ್ರಾಕ್ಷಿಯಲ್ಲಿ ದಾಖಲೆ ಬೆಳೆ ತೆಗೆದವರು) ಇದರ ಬಗೆಗಿನ ವಿವರಣೆಗಾಗಿ ನಾನು ೧೯೯೩ರಲ್ಲಿ ಬರೆದು ಪ್ರಕಟಿಸಿರುವ "ಉಳುಮೆ ಇಲ್ಲದೆ ಬೆಳೆ–ಸಹಜಕೃಷಿ" ಪುಸ್ತಕದ (ಓರಿಯಂಟ್ ಲಾಂಗ್ ಮನ್ ಪಬ್ಲಿಕೇಷನ್, ಬೆಂಗಳೂರು) ೨೧ ನೇ ಪುಟ ನೋಡಿ ಈ ಬಗ್ಗೆ ನೈಸರ್ಗಿಕ ಕೃಷಿ ಪುಸ್ತಕದಲ್ಲಿ ಈ ವಿವರಣೆ ಹೆಚ್ಚಾಗಿಯೇ ಇದೆ.

ಹೀಗಿರುವಾಗ ಗೆಳೆಯರೇ, ನೀವೇಕೆ ನಾಡಿನ ಹಿರಿಯ ಸಾವಯವ ಕೃಷಿಕರನ್ನು ಪತ್ರಿಕೆಗಳ ಮುಖೇನ

ಪಾಳೇಕರರ ಜೀವಾಮೃತ ತಯಾರಿಕೆ

ನಡುಬೀದಿಗೆಳೆದು ಮಾನವಂತರ ಮರ್ಯಾದೆ ಹರಾಜು ಹಾಕುತ್ತಿದ್ದೀರಿ? ಎಲ್ಲರೂ ರಾಸಾಯನಿಕದ ರಾಗ ಹಾಡುತ್ತಿದ್ದ ಕಾಲದಲ್ಲಿ ಸಾವಯವದ ಸೊಲ್ಲೆತ್ತಿದ್ದು ಅವರು ಮಾಡಿದ ಪಾಪದ ಕೆಲಸವೇ? ಕೃಷಿ ಮಾಡಿ ತೋರಿಸಿದ್ದು ಮೋಸವೇ?

ಈಗ ಹೇಳಿ, ನೀವು ತುದಿಗಾಲಮೇಲೆ ನಿಂತು ಪ್ರಚಾರಪಡಿಸುತ್ತಿರುವ ಪಾಳೇಕರರ ಕೃಷಿ, ಸಾವಯವ ಕೃಷಿಯೋ? ಇಲ್ಲ ನೈಸರ್ಗಿಕ ಕೃಷಿಯೋ? ಅಜ್ಜ ಫುಕುವೋಕರಿಂದ ಹಿಡಿದು ಪಾಳೇಕರರು ಪ್ರತಿಪಾದಿಸುತ್ತಿರುವ ಎಲ್ಲಾ ಕೃಷಿ ವಿಧಾನಗಳು, ಮೂಲಭೂತವಾಗಿ ರಾಸಾಯನಿಕ ರಹಿತವಾದ ಸಾವಯವ ಕೃಷಿ ಪದ್ಧತಿಗಳೇ. ಏಕೆಂದರೆ ಇವರೆಲ್ಲ ಒಳಸುರಿಗಳು ಸಾವಯವ ಮೂಲದವುಗಳೇ.

ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ ಎನ್ನುವುದು ಈ ಭೂಮಿಯ ಮೇಲೇನಾದರೂ ಇದ್ದರೆ ಅದು ತಾಯಿ ಪ್ರಕೃತಿ ಮಾಡುತ್ತಿರುವ ವೈವಿಧ್ಯಮಯವಾದ "ಕಾಡು" ಮಾತ್ರ.

ಕೃಷಿ ಮಾಡಲು ಮಾನವ ಶ್ರಮ, ಒಂದಷ್ಟು ತುಂಡು ಭೂಮಿ, ಕೃಷಿ ಒಳಸುರಿಗಳು, ಕೆಲವು ಸಂದರ್ಭಗಳಲ್ಲಿ ನೀರಾವರಿ ವ್ಯವಸ್ಥೆ, ಬೇಕೇ ಬೇಕಲ್ಲವೇ? ಇಲ್ಲಿ ನಾವು ಬಂಡವಾಳ ಹೂಡುವುದಿಲ್ಲವೇ? ಅದು ಹೇಗೆ ಶೂನ್ಯ ಬಂಡವಾಳದ ಕೃಷಿಯಾಗುತ್ತದೆ?

ಉಳುಮೆರಹಿತ ಸಹಜಕೃಷಿ ಸೋತಿದ್ದೇಕೆ?

ಇದು ಕೃಷಿಯ ಎಲ್ಲಾ ವಲಯಗಳನ್ನು ತಲುಪಲು ಸೋತಿದ್ದು ಮುಖ್ಯವಾಗಿ **ಕೃಷಿ ಭೂಮಿಗೆ ಉಳುಮೆಯೇ ಬೇಡ** ಎನ್ನುವ ಕಾರಣಕ್ಕೆ. ಏಕೆಂದರೆ ತೋಟದ ಬೆಳೆಗಳಲ್ಲಿ ಇದು ಒಂದಷ್ಟು ಸುಲಭ ಎನಿಸಿದರೂ, ಗದ್ದೆ, ಹೂಕೃಷಿ, ತರಕಾರಿ ತೋಟಗಳಲ್ಲಿ ಇದನ್ನು ಬಳಸುವುದು ಮಾತಾಡಿದಷ್ಟು ಸುಲಭವಲ್ಲ. ಈ ಸೂಕ್ಷ್ಮ ಬೆಳೆಗಳು ಬಲಿಷ್ಠ ಕಳೆಗಳ ಜೊತೆ ಸ್ಪರ್ಧಿಸಿ ಗೆಲ್ಲುವುದಿಲ್ಲ. ಇದಕ್ಕೆ ಒಂದೆರಡು ಅಪವಾದಗಳಿದ್ದರೂ ಪೂರ್ಣ ಪ್ರಮಾಣದಲ್ಲಿ ತರಕಾರಿ, ಹೂ, ಕೃಷಿ ಮಾಡಲು ಕನಿಷ್ಠ ಉಳುಮೆಯಾದರೂ ಬೇಕು. ಈ ರಗಳೆ ಬೇಡವೆಂದೇ ನಮ್ಮ ಹಿರಿಯರು ನೇಗಿಲಿಗೆ ಮೊರೆ ಹೋಗಿದ್ದು ಎನಿಸುತ್ತದೆ.

ಉಳುಮೆ ಮಾಡದ ಸಹಜ ಕೃಷಿಯ ಬಾಲ ಹಿಡಿದು ಹೊರಟ ನಮ್ಮಂಥವರು, ತೋಟ ಬಿಟ್ಟು (ಅದೂ ಸಣ್ಣ ಹಿಡುವಳಿಗಳು) ಹೊಲದ ಬಯಲಿಗೆ ಕಾಲಿಡಲಾಗಲಿಲ್ಲ. ತರಕಾರಿ, ಹೂ, ಕೃಷಿಯ ಕನಸು ಕಾಣಲಾಗಲಿಲ್ಲ. ನಿಜವಾದ ಕೃಷಿ ನಡೆಯಬೇಕಿರುವುದು ನಮ್ಮ ಬಡ ಬೋರೇಗೌಡನ ಹೊಲಗಳಲ್ಲಿ. ಮಳೆಯಾಶ್ರಿತ ಬಯಲಿನ ಹೊಲಗಳನ್ನು ತಲುಪಲು ಸೋಲುವ ಕೃಷಿ ಒಂದರ್ಥದಲ್ಲಿ ಕೃಷಿ ಪದ್ಧತಿಯೇ ಅಲ್ಲ.

ಪಾಳೇಕರರ ಕೃಷಿಯೊಳಗೊಂದು ಸುತ್ತು

ಮಾನ್ಯ ಸ್ವಾಮಿ ಆನಂದ್‌ರವರು ಪಾಳೇಕರರ ವಿಧಾನವನ್ನು ತಮ್ಮ ಪುಸ್ತಕದಲ್ಲಿ (ಸುಭಾಷ್ ಪಾಳೇಕರರ ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ, ಅಗ್ನಿ ಪ್ರಕಾಶನ, ಬೆಂಗಳೂರು) ವಿವರಿಸಿರುವಂತೆ ನಾನು ಅದರ ಆಶಯ ಮತ್ತು ತಂತ್ರಗಳನ್ನು ಗ್ರಹಿಸಿರುವಂತೆ ಅದರ ಕೆಲವು ಮುಖ್ಯ ಸಂಗತಿಗಳು ಕೆಳಗಿನಂತಿವೆ.

೧. ಯಾವುದೇ ಕೃಷಿ ಮಾಡಲು ಉಳುಮೆಯೇ ಬೇಡ, ಬೇಕಿದ್ದರೂ ಒಂದೇ ಸಾರಿ ಸಾಕು, ಮತ್ತೊಂದು ಬೇಡ.

೨. ಯಾವುದೇ ಬೆಳೆ ತೆಗೆಯಲು ಗೊಬ್ಬರ. ಬೇಡ, ಬೀಜಾಮೃತ ಮತ್ತು ಜೀವಾಮೃತವಷ್ಟೇ ಸಾಕು.

೩. ಎರೆಗೊಬ್ಬರವೂ ಬೇಡ. ಸಗಣಿ, ಗೊಬ್ಬರವೇ ಅಲ್ಲ (ಪುಟ–೧೩)

೪. ಕಳೆ ನಿರ್ಮೂಲನೆ ಬೇಡ. ಜೀವಂತ ಹೊದಿಕೆ ಇರಲಿ.

೫. ಒಂದೇ ನಾಡಹಸುವಿನ ಸಗಣಿ ಮತ್ತು ಗಂಜಲದಿಂದ ೩೦ ಎಕರೆ ಕೃಷಿ ಮಾಡಬಹುದು. (ಪುಟ೧೪).

೬. ಗಿಡಮರ ತಮ್ಮ ಆಹಾರವನ್ನು ಸೂರ್ಯ ರಶ್ಮಿ ಬಳಸಿ ತಾವೇ ತಯಾರಿಸುತ್ತವೆ.

೭. ಜೀವಾಮೃತ ಬಳಸಿ ಸೂಕ್ಷ್ಮಾಣುಜೀವಿಗಳನ್ನು ಬೆಳೆಯುವುದಷ್ಟೇ ನಮ್ಮ ಕೆಲಸ, ಉಳಿದದ್ದನ್ನು ನಿಸರ್ಗ ಮಾಡುತ್ತದೆ.

೮. ಭೂಮಿಯ ಸಾವಿರ ಅಡಿ ಆಳದಲ್ಲೂ ಪೋಷಕಾಂಶಗಳಿವೆ (ಪುಟ.೨೪).

೯. ಎಲ್ಲಾ ಬೆಳೆಗಳಿಗೆ ಹೊದಿಕೆ (ಮಲ್ಚಿಂಗ್) ಬೇಕು.

೧೦. ಪರಸ್ಪರ ಸಹಚರ್ಯೆಗೆ ಬೆಳ್ಳುಳ್ಳಿ, ನುಗ್ಗೆ, ಮೆಣಸಿನ ಗಿಡ ಮುಂತಾದವು ಬೆಳೆ ಜೊತೆ ಇರಬೇಕು. ಸದ್ಯಕ್ಕೆ ನನ್ನ ಮಾತಿಗೆ ದಕ್ಕಿದ್ದಿಷ್ಟು, ಬಿಟ್ಟಿದ್ದರೆ ಕ್ಷಮೆಯಿರಲಿ.

ನಾವೀಗ ಪಾಳೇಕರರ ವಿಧಾನ ಹಿಡಿದುಕೊಂಡು ಕೃಷಿ ಮಾಡಲು ಹೊರಡುತ್ತಿದ್ದೇವೆ.

೧. ತೋಟದ ಸಹಜ ಕೃಷಿ;

ಇಲ್ಲಿ ಉಳುಮೆ ಇಲ್ಲದಿದ್ದರೂ ಕಳೆಗಳಿಗೆ ಕೇರ್ ಮಾಡದೆ ಆಕಾಶಕ್ಕೆ ತಲೆ ಎತ್ತುವ ತೆಂಗು, ಅಡಿಕೆ, ಹಣ್ಣಿನ ಗಿಡಗಳು, ಬಾಳೆ, ಕಬ್ಬು, ಮರಮಂಡಿ, ಹೊಲದಲ್ಲಿ ಅವರೆ, ತೊಗರಿ, ಅರಳು ಮುಂತಾದವುಗಳ ಕೃಷಿ ಮಾಡಬಹುದು.

ನಾನು ಮೊದಲ ಹದಿನೈದು ವರ್ಷ ತೆಂಗು ಮತ್ತು ಬಾಳೆಯ ಸಹಜ ಕೃಷಿ ಮಾಡಿ (ಹನಿನೀರಾವರಿ) ತೆಂಗಿನಲ್ಲಿ ಸರಾಸರಿ ನೂರಿಪ್ಪತ್ತು ಕಾಯಿ, ಬಾಳೆಯಲ್ಲಿ ಮೊದಲ ೧೦ ವರ್ಷ ಸರಾಸರಿ ೧೨ ಕೆ.ಜಿ.ಯ ಬಾಳೆಗೊನೆಯನ್ನು ಯಾವ ಗೊಬ್ಬರವಿಲ್ಲದೆ ಬೆಳೆದಿದ್ದೇನೆ. ಮಿಶ್ರ ಬೆಳೆಗಳು ಮೇಲೆದ್ದಂತೆ ಇಳುವರಿ ಕುಸಿಯಿತಾದ್ದರಿಂದ ಈಗ ತುಸು

ಸಾವಯವ ಗೊಬ್ಬರ ನೀಡಬೇಕಾಗಿತ್ತು. ಈ ವಿಧಾನವನ್ನು ಪ್ರಚುರಪಡಿಸಲು ಪತ್ರಿಕೆ, ಪುಸ್ತಕಗಳು, ಸಂಘಟನೆಗಳ ಮುಖೇನ ತಿಣುಕಿದ್ದು ಲೆಕ್ಕಕ್ಕಿಲ್ಲ, ಆದರೂ ನಾಡಿನ ಉದ್ದಗಲಕ್ಕೆ ಈ ಕೃಷಿಗೆ ಒಲಿದದ್ದು ಬೆರಳೆಣಿಕೆಯಷ್ಟು ಜನ ಮಾತ್ರ. ಇದಕ್ಕೆ ಇಳುವರಿ ಕಾರಣವಲ್ಲ; ಬದಲು ತೋಟಗಳಿಗೆ ಉಳುಮೆ ಬೇಡ ಎಂದದ್ದು. ತೋಟ ಕಣ್ಣಿಗೆ ರಾಚುವಂತಿದ್ದರೂ ಜನ ಬರಲಿಲ್ಲ. ಕಾರಣ ಉಳುಮೆ ಇಲ್ಲ.

ನಾನು ಜೀವಾಮೃತ ನೀಡಿ ತೆಂಗಿನಲ್ಲಿ ಸಾವಿರ ಕಾಯಿ ಅಡಿಕೆಯಲ್ಲಿ ಹತ್ತುಗೊನೆ ಕೆಡವಿದರೆ ಆಗ ಜನ ಇತ್ತ ಬರಬಹುದೇನೋ? ಎಲ್ಲಾ ಬೆಳೆಗಳಿಗೂ ಇಳುವರಿಯಲ್ಲಿ ಗರಿಷ್ಠ ಮಿತಿಯಿರುತ್ತದೆ. (ಜೆನಿಟಿಕ್ ಲಿಮಿಟೇಶನ್) ಈ ಸಾಧ್ಯತೆಯನ್ನೇನೂ ನಾನು ಅಲ್ಲಗಳೆಯುತ್ತಿಲ್ಲ. ನಾನಿದನ್ನು ವಿನಯದಿಂದಲೇ ಹೇಳುತ್ತಿದ್ದೇನೆ. ಈ ರಾಸಾಯನ ತಯಾರಿಸಲು ಸಿದ್ಧತೆಯನ್ನಾಗಲೇ ಮಾಡಿಕೊಂಡಿದ್ದೇನೆ. ನಾನು ರೈತ, ನನಗೂ ಬಂಪರ್ ಇಳುವರಿ ಬೇಡವೇ, ನೋಡೋಣ. ಉಳುಮೆ ನಮ್ಮ ರೈತನ ರಕ್ತದಲ್ಲಿರುವುದರಿಂದ, ನಾವೆಷ್ಟು ಬಿಡು ಎಂದರೂ ಅವ ಬಿಡ.

ಮರೆತ ಮಾತು:

೧. ಉಳುಮೆ ಇಲ್ಲದ ಇಂತಹ ವಿಧಾನವನ್ನು ನೂರಾರು ಎಕರೆಯಲ್ಲಿ ಸುಲಭವಾಗಿ ಅಳವಡಿಸಬಹುದೇ?

೨. ಬೇಸಿಗೆಯಲ್ಲಿ ಒಣಗುವ ಕಳೆಗಳು ಮತ್ತು ಹೊದಿಕೆಗೆ ಬೆಂಕಿ ಬಿದ್ದರೆ ಏನು ಮಾಡುವುದು? (ನನ್ನದ್ದಕ್ಕೆ ಬಿದ್ದಿದೆ) ಮಲ್ಚಿಂಗ್ ಹೊಂದಿಸುವುದು ಸುಲಭದ ಮಾತಲ್ಲ.

೩. ಬರಿಗಾಲಿನಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಹಾವು, ಚೇಳು ಕಚ್ಚಿದರೆ ಹೇಗೆ? ಕೆಲಸ ಮಾಡುವ ಜನ ದೊರೆಯುವರೇ?

೪. ನೂರಾರು ಎಕರೆ ಭೂಪ್ರದೇಶಕ್ಕೆ ಬೇಸಿಗೆಯಲ್ಲಿ ನೀರು ನೀಡುವ ಬಗೆ ಹೇಗೆ? (ಡ್ರಿಪ್ ಪೈಪುಗಳನ್ನು ಇಲಿ ಹೆಗ್ಗಣ ಕಡಿಯುತ್ತವೆ.

೫. ಅಳಿಲು, ಇಲಿ ಮುಂತಾದವುಗಳಿಂದ ಬೆಳೆ ರಕ್ಷಣೆ ಹೇಗೆ? (ತಿನ್ನಲಿ ಬಿಡಿ ಎನ್ನುವುದು ಬರೆಯಲು ಸುಲಭ)

೬. ಹುಲ್ಲಿನೊಳಗೆ ನುಗ್ಗಿ ಬೆಳೆ ಕೊಯ್ಲು ಮಾಡುವ ಜನ ಬೇಕು. ಬೆಳೆದವನೇ ಹತ್ತಾರು ಎಕರೆಯಲ್ಲಿ ತಾನೊಬ್ಬನೇ ಈ ಕೆಲಸ ಮಾಡಬಹುದೇ? ಕೃಷಿ ಕೂಡಿ ಮಾಡುವ ಕೆಲಸ. ಇರಲಿ ಬಿಡಿ, ತೋಟಗಳ ಸಹಜ ಕೃಷಿ ಮಾಡಬಹುದು, ಒಂದಷ್ಟು ಬದಲಾವಣೆ ಮಾಡಿಕೊಂಡು, ಬದಲಾವಣೆಯನ್ನು ಅಜ್ಜನೂ ಪ್ರತಿಪಾದಿಸುತ್ತಾರೆ. ಯಾವುದೇ ಕೃಷಿ ಸ್ಥಳೀಯ ಪರಿಸರಕ್ಕೆ ಹೊಂದಿಕೊಂಡಿರಬೇಕು.

೨. ಭತ್ತದ ಕೃಷಿ:

ಪುಸ್ತಕದಲ್ಲಿ ಭತ್ತ ಬೆಳೆಯುವ ನೈಸರ್ಗಿಕ ವಿಧಾನ ಹೀಗಿದೆ. "ಅಕ್ಟೋಬರ್‌ನಲ್ಲಿ ಭತ್ತ ಕಟಾವು ಮಾಡುತ್ತೇವೆ. ಇದಕ್ಕೆ ೧೫ ದಿನ ಮುಂಚೆ ಉದ್ದು, ಅಲಸಂದೆ, ಮುಂತಾದವನ್ನು ಬಿತ್ತಬೇಕು.

ಕಟಾವಿನ ನಂತರ ನಾವು ನೀರು ಕೊಡುವುದಿಲ್ಲ. ಆದ್ದರಿಂದ ಉದ್ದು, ಅವರೆ, ಬೆಳವಣಿಗೆ ಕಷ್ಟ. ಬೇಸಿಗೆಯಲ್ಲಿ ಒಣಗಿಹೋಗಿರುತ್ತದೆ. ಇದರ ಮೇಲೆ, ಒಕ್ಕಣೆ ಮಾಡಿದ ಹುಲ್ಲನ್ನು ಬೇರೆ ಗದ್ದೆ ಮಡಿಯಲ್ಲಿ ಹರಡಿರುತ್ತೇವೆ.

ಈ ದೇಶ ನಿಂತಿರುವುದೇ ಈ ಕೃಷಿಯಿಂದ. ಬಡರೈತ ಜೀವ ಹಿಡಿದಿರು ವುದೇ ಇದರಿಂದ. ಇದೇ ನಿಜವಾದ ನಮ್ಮ ಕೃಷಿವಲಯ. ನಮ್ಮ ಕೃಷಿ ಭೂಮಿಯ ಶೇ. ೮೦ ರಷ್ಟು ಭಾಗ ಇದರಲ್ಲಿದೆ. ಹೊಲ ರೈತನ ಜೀವಾಳ. ಮಾನ್ಯ ಆನಂದ್‌ರವರು ಹೊಲಗಳನ್ನೆಲ್ಲಾ ಕಾಡು ಮಾಡಲು ಸೂಚಿಸುತ್ತಾರೆ. ಇಲ್ಲಿ ೮ ಅಂತರದಲ್ಲಿ ಹೆಬ್ಬೇವಿನ ಗಿಡನೆಟ್ಟು, ಅವುಗಳ ಕೆಳಗೆ ಅಥವಾ ಒಳಗೆ ಮುಂಗಾರಿನಲ್ಲಿ ರಾಗಿ, ಎಳ್ಳು, ಅವರೆ ಅಥವಾ ನೆಲಗಡಲೆ ಬೆಳೆಯಿರಿ ಎನ್ನುತ್ತಾರೆ. ಮುಂದುವರಿದು, ಹಿಂಗಾರಿನಲ್ಲಿ ಕಡ್ಲೆ, ಕೊತ್ತಂಬರಿ ಅಥವಾ ಹುರುಳಿ, ಹುಚ್ಚೆಳ್ಳು ಬೆಳೆಯಿರಿ ಎನ್ನುತ್ತಾರೆ.

ಮುಖ್ಯವಾಗಿ ನಾವು ಭತ್ತವನ್ನು ಬೆಳೆಯಬೇಕಾದ್ದು ನೀರಾವರಿ ಪ್ರದೇಶದ ಲಕ್ಷಾಂತರ ಎಕರೆಯಲ್ಲಿ, ಅದೂ ಬಯಲಿನಲ್ಲಿ. ಬೇಸಿಗೆಯಲ್ಲಿ ಇವುಗಳನ್ನು ಬೆಂಕಿ ದನ ಕರುಗಳಿಂದ ರಕ್ಷಿಸುವುದು ಹೇಗೆ? ನಾವು ಮುಂದಿನ ಜೂನ್‌ವರೆವಿಗೂ ಬಟ್ಟಬಯಲಿನಲ್ಲಿ ಈ ಮಲ್ಚಿಂಗ್ ಕಾಯುತ್ತಾ ಕೂರಬೇಕೆ?

೧. ಇಲ್ಲಿ ಮತ್ತೊಂದು ಮಾತು, ಭತ್ತ ಹುಲ್ಲಿನ ಜಾತಿಯದ್ದು, ಗದ್ದೆಯಲ್ಲಿರುವ ತೆಂಡೆಗಳು, ಮುಂದೆ ಬೀಳುವ ಪೂರ್ವ ಮುಂಗಾರು ಮಳೆಗೆ ಚಿಗುರಿರುತ್ತವೆ. ನಾವು ಅಲ್ಲಿ ಮುಂದಿನ ಬೆಳೆ ಬಿತ್ತುವುದು ಜೂನ್‌ನಲ್ಲಿ. ಇವುಗಳ ನಡುವೆ ಬೀಜ ಬಿತ್ತಿದರೆ ಅದು ಸರಿಯಾಗಿ ಬರುವುದಿಲ್ಲ. ನಾವೇನಾದರೂ ತಳಿ ಬದಲಾಯಿಸಿದರೆ ಕಲಬೆರಕೆ ಭತ್ತ ನಮ್ಮದಾಗಿರುತ್ತದೆ. ಇಷ್ಟೊಂದು ರಗಳೆಯ ವಿಧಾನ ಭಾರತದ ನೀರಾವರಿ ಗದ್ದೆ ಬಯಲುಗಳನ್ನು ಪ್ರವೇಶಿಸಲು ಸಾಧ್ಯವೇ?

೨. ಪುಟ ೬೦ರಲ್ಲಿ ಫುಕುವೋಕ ಗದ್ದೆಯಲ್ಲಿ ನೀರು ನಿಲ್ಲಿಸುತ್ತಾರೆಂದು ಬರೆಯಲಾಗಿದೆ. ನನಗೆ ತಿಳಿದಿರುವಂತೆ ಪ್ರಪಂಚದಲ್ಲಿಯೇ ಮೊದಲ ಬಾರಿಗೆ ಗದ್ದೆಗೆ ನೀರು ಬೇಡವೆಂದವರು ಅವರು. ತೆನೆಕಾಳು ಕಟ್ಟುವಾಗ ಮಾತ್ರ ನೀರು ನಿಲ್ಲಿಸಿ ಮತ್ತೆ ಬಸಿದುಬಿಡು–ಎನ್ನುತ್ತಾರವರು.

ಮಳೆಯಾಶ್ರಿತ ಹೊಲದ ಕೃಷಿ: (ಪುಟ–೮೬).

ಈ ದೇಶ ನಿಂತಿರುವುದೇ ಈ ಕೃಷಿಯಿಂದ. ಬಡ ರೈತಜೀವ ಹಿಡಿದಿರುವುದೇ ಇದರಿಂದ. ಇದೇ ನಿಜವಾದ ನಮ್ಮ ಕೃಷಿವಲಯ. ನಮ್ಮ ಕೃಷಿ ಭೂಮಿಯ ಶೇ. ೮೦ ರಷ್ಟು ಭಾಗ ಇದರಲ್ಲಿದೆ. ಹೊಲ ರೈತನ ಜೀವಾಳ. ಮಾನ್ಯ ಆನಂದ್‌ರವರು ಹೊಲಗಳನ್ನೆಲ್ಲಾ ಕಾಡು ಮಾಡಲು ಸೂಚಿಸುತ್ತಾರೆ. ಇಲ್ಲಿ ೮ ಅಂತರದಲ್ಲಿ ಹೆಬ್ಬೇವಿನ ಗಿಡನೆಟ್ಟು, ಅವುಗಳ ಕೆಳಗೆ ಅಥವಾ ಒಳಗೆ ಮುಂಗಾರಿನಲ್ಲಿ ರಾಗಿ, ಎಳ್ಳು, ಅವರೆ ಅಥವಾ ನೆಲಗಡಲೆ ಬೆಳೆಯಿರಿ ಎನ್ನುತ್ತಾರೆ. ಮುಂದುವರಿದು, ಹಿಂಗಾರಿನಲ್ಲಿ ಕಡ್ಲೆ, ಕೊತ್ತಂಬರಿ ಅಥವಾ ಹುರುಳಿ, ಹುಚ್ಚೆಳ್ಳು ಬೆಳೆಯಿರಿ ಎನ್ನುತ್ತಾರೆ.

ನೆನೆಪಿರಲಿ, ನಾವು ಇವುಗಳನ್ನು ಉಳುಮೆ ಮಾಡದೆ, ಬರಿ ಜೀವಾಮೃತ ಸಿಂಪಡಿಸುತ್ತಾ ಬೆಳೆಯಬೇಕು. ಅಲ್ಲಿ ಆವರಿಸಿರುವ ಕಳೆಗಳ ಮಧ್ಯೆ ಅವು ಬೆಳೆಯಬೇಕು. ಹೀಗೆ ಅವುಗಳನ್ನು ಬೆಳೆಯುವುದು ಇಲ್ಲಿ ಬರೆದಿರುವಷ್ಟು ಸರಳವಲ್ಲ. ಕಳೆಗಳೂ ಸಸ್ಯಗಳೇ. ಜೀವಾಮೃತ ಕುಡಿಯುವ ಇವೂ ಕೂಡ ರಾಕ್ಷಸರಾಗಿ ಬೆಳೆಯುತ್ತವೆ.

ಸಮಸ್ಯೆಗಳು:

೧. ಇಲ್ಲಿ ಬೀಜ ಬಿತ್ತಿ ಹದ ಮಳೆ ಬೀಳದಿದ್ದರೆ ಅರ್ಧ ಮೊಳಕೆ ಬಂದು ಸತ್ತುಹೋಗುತ್ತವೆ. ಅತಿ ಮಳೆ ಬಂದರೆ ಕೊಳೆತು ಅಥವಾ ಕೊಚ್ಚಿ ಹೋಗುತ್ತವೆ. ಬೆಳೆದರೂ ಕಳೆಯೊಂದಿಗೆ ಸೆಣೆಸಲಾರವು.

೨. ನೆಟ್ಟಕಾಡು ಗಿಡಗಳು ಬೆಳೆದು ನೆರಳು ಕವಿದಾಗ ಇವುಗಳನ್ನು ಬೆಳೆಯುವುದು ಹೇಗೆ? ೩. ಗದ್ದೆಯಿಂದ ಅತ್ತ ಅನ್ನವೂ ಇಲ್ಲ, ಇತ್ತ ರಾಗಿಯೂ ಇಲ್ಲ. ಮತ್ತೆ ಜನ ಪಾಳೇಕಾರರ ವಿಧಾನದಲ್ಲಿ. ಬೆಳೆದ ಸಾವಯವದ ಬಾಳೆಹಣ್ಣು ತಿಂದು ಕಬ್ಬು ಚೀಪಬೇಕೆ? ಇಲ್ಲಿ ಮರಗಳಿಂದ ಆದಾಯವಿದೆಯಲ್ಲಾ, ಆಗ ರಾಗಿ ಬೆಲೆ ಕೆ.ಜಿ. ೧೦೦ ರೂ ಆಗಿರುತ್ತೆ. ಇದು ವಾದಕ್ಕಾಗಿ ವಾದವಲ್ಲ, ವಾಸ್ತವ. ಹೊಲಗಳನ್ನು ಮರೆತರೆ ಕೃಷಿಯನ್ನೇ ಮರೆತಂತೆ.

೪. ಹಾಗಾದರೆ ಈ ಕೃಷಿ ನೀರಾವರಿಯಲ್ಲಿ ಭತ್ತ ಬಾಳೆ, ಕಬ್ಬು ಬೆಳೆಯುವ ಹಳ್ಳಿಯ ಗೌಡ, ಪಾಟೀಲರಿಗೋ, ಒಂದು ಮೊಳ ಭೂಮಿಗಾಗಿ ಇನ್ನೂ ಕಾಯುತ್ತಲೇ ಇರುವ ಬಡಜನರಿಗೋ

೪. ತರಕಾರಿ ಹೂ ಕೃಷಿ:

"ಹೂವು ಶ್ರೀಮಂತರ "ಸೊತ್ತು" ಇದಿಲ್ಲದೆಯೇ ಸಾಮಾನ್ಯನೊಬ್ಬ ಬದುಕಬಹುದು ಬಿಡಿ. ಕನಿಷ್ಠ ತರಕಾರಿ ಬೇಡವೇ, ಅಥವಾ ಮೇಲೆ ಹೊಲದಲ್ಲಿ ಬೆಳೆಯುವ ಕೊತ್ತಂಬರಿಯಷ್ಟೇ ಸಾಕೆ? ಆನಂದ್ ತಿಳಿಸಿರುವಂತೆ ಉಳುಮೆ ಇಲ್ಲದೇ ಇವುಗಳನ್ನು ಬೆಳೆಯುವ ವಿಧಾನ ಈ ಪುಸ್ತಕದಲ್ಲಿಲ್ಲ. ಬೇರೆ ಬೆಳೆಗಳನ್ನು ಬೆಳೆಯುವಾಗ ನೆಲಕ್ಕೆ ಹೊದಿಕೆ ಬೆಳೆಯಾಗಿ ಬೆಳೆಯಲೂ ತರಕಾರಿ ಬೆಳೆಗಳನ್ನು ತಿಳಿಸುತ್ತಾರೆ. ಹೂ ಕೃಷಿಯಂತೂ ಇನ್ನೂ ಸೂಕ್ಷ್ಮ

ಮರೆತಿರುವ ಮತ್ತಷ್ಟು ಮಾತುಗಳು:

೧. ಪುಟ ೮೧ರಲ್ಲಿ ಇವರು ತೋಟ ಮಾಡಲು ತಿಳಿಸುವ ಬಗೆ ಹೀಗಿದೆ. ೩೬x೩೬ ಅಡಿ

೧. ಅಂತರದಲ್ಲಿ ಬೆಳೆದ ತೆಂಗಿನ ನಡುವೆ

ತೆಂಗು–೪,
ಕೋಕೋ–೨೩,
ಅಡಿಕೆ–೧೮, ೮೧ ಗಿಡಗಳು
ನುಗ್ಗೆ/ಗ್ಲಿರಿಸಿಡಿಯ–೨೦ ಅಂತರ ೪.೫ ಅಡಿ
ಬಾಳೆ–೧೬

ಇಷ್ಟೂ ಗಿಡಗಳನ್ನು ಈ ಜಾಗದಲ್ಲಿ ನೆಡಬಹುದು. ಮೊದಲ ೪–೫ ವರ್ಷ ತೆಂಗು ಅಡಿಕೆ ಹೊರತುಪಡಿಸಿ ಬೇರೆಯವುಗಳಿಂದ ಬೆಳೆ ತೆಗೆಯಬಹುದು. ಅನಂತರದಲ್ಲಿ ತೆಂಗು ಅಡಿಕೆಗೆ ಬೆಳವಣಿಗೆಯಲ್ಲಿ ಸ್ಪರ್ಧೆ ಏರ್ಪಟ್ಟು ನಾಲ್ಕಾರು ಕಾಯಿ ಸಿಕ್ಕಿದರೇ ರೈತನ ಪುಣ್ಯ. ಇದು ರೈತರೆಲ್ಲರ ಅನುಭವ. ಇಷ್ಟೊಂದು ನೆರಳಿನಲ್ಲಿ ಬೆಳೆಯಬಹುದಾದ್ದು ಕೇವಲ ಸೊಪ್ಪನ್ನು ಮಾತ್ರ, ಕಾಯನ್ನಲ್ಲ. ಹೀಗೆ ತೆಂಗು ಅಡಿಕೆಗಳು ದಟ್ಟವಾದರೆ ಅವು ತಮ್ಮ ಇಡೀ ಸಾಮರ್ಥ್ಯವನ್ನು ಎತ್ತರಕ್ಕೆ ಬೆಳೆಯಲು (ಎಜಿಟೇಟೀವ್ ಗ್ರೋಥ್) ಉಪಯೋಗಿಸುತ್ತವೆಯೇ ಹೊರತು, ಕಾಯಿ ಬಿಡುವುದಿಲ್ಲ. ಬಿಟ್ಟರೂ ಅತೀ ಕಮ್ಮಿ.

ಪ್ರಕೃತಿಯಲ್ಲಿ ಗುಪ್ತವಾಗಿ ನಡೆದುಹೋಗುವ ದ್ಯುತಿ ಸಂಶ್ಲೇಷಣಕ್ರಿಯೆಯ ಬಗ್ಗೆ ಅಂಕಿ ಅಂಶಗಳು ಸಮೇತ

ಜೂಜಾಡುವ ಆನಂದ್‌ರವರು ಇಲ್ಲಿ ಅದನ್ನೇ ಮರೆತಿದ್ದೇಕೆ? ಕೃಷಿ ಎಂದರೆ ಸೂರ್ಯ ಶಕ್ತಿಯನ್ನು ಹಸಿರು ಮಾಧ್ಯಮದಲ್ಲಿ ದುಡಿಸಿ ಕಾಳಾಗಿಸುವುದು.

೨) "ಇಳುವರಿ"ಯ ಬೆನ್ನು ಹತ್ತಿ ರಾಸಾಯನಿಕದಲ್ಲಿ ಮಣ್ಣುಮುಕ್ಕಿದ್ದೇವೆ. "ನೈಸರ್ಗಿಕ" ಕೃಷಿಗೂ ಇದು ಬೇಕೆ? ಅಲ್ಲಿ ಇಳುವರಿಗೆ ಹೈಬ್ರಿಡ್, ರಸಗೊಬ್ಬರ, ಇಲ್ಲಿ ಹೆಚ್ಚು ಗಿಡಗಳು, ಜೀವಾಮೃತ.

೩) "ಯಾರು ಮುಳುಗಲು ಈ ಕೃಷಿ ಹೊಂಡ"?

ಇದು ಈ ಪುಸ್ತಕದ ೪೦ನೇ ಪುಟದಲ್ಲಿ ಇರುವ ಒಂದು ತಲೆಬರಹ. ಈಗಲೂ ವಾರ್ಷಿಕ ೩೦೦೦-೨೦೦೦ ಎಂ.ಎಂ. ಮಳೆ ಸುರಿಯುತ್ತಿರುವ ಮಲೆನಾಡಿನಲ್ಲಿ; ಸದಾ ನೀರು ಹರಿಯುವ ಪಂಜಾಬಿನಲ್ಲಿ ಅಂತರ್ ಜಲ ಕುಸಿದು ಹೋಗಿದೆ. ಬಯಲು ಸೀಮೆಯ ಜನರಂತೂ ಸಾವಿರ ಅಡಿ ತಳದಲ್ಲಿ ನೀರು ತಡಕುತ್ತಿದ್ದಾರೆ. ಕುಡಿಯಲು, ಕೃಷಿ ಮಾಡಲು ನೀರೆಂಬ ಭೂಮಿಯ ರಕ್ತ ಹೀರುತ್ತಿದ್ದೇವೆ. ನಮಗೆ ಕೃಷಿಗಿರಲಿ, ಕುಡಿಯಲೂ, ನೀರಿಲ್ಲ. ನಿಮಗೆಲ್ಲಾ ಗೊತ್ತಿದೆ, ಇಂಗು ಗುಂಡಿ ನಮ್ಮ ಬೋರುಗಳ "ತಾಯಿ"

೪) ಬಾಳೆ ಬೆಳೆಯಲ್ಲಿ ಬರುವ ಮರಿಗಳನ್ನು ಕಿತ್ತು ತೆಗೆಯಲು ಸಲಹೆ ಮಾಡುತ್ತಾರೆ. (ಪುಟ೭೮) ಹೀಗೆ ಮಾಡೀರಿ ಜೋಕೆ! ಬಾಳೆಗೆ ನಂಜು ರೋಗ ಬರುತ್ತದೆ. ಮೂರು ನಾಲ್ಕು ವರ್ಷಗಳಲ್ಲಿ ಬುಡಸಮೇತ ಬಾಳೆ ನೆಲಕ್ಕೆ ಒರಗುತ್ತದೆ.

೫) ನಾವಿಬ್ಬರೂ ಸ್ನೇಹಿತರು ದಿನಾಂಕ ೨೨-೧೧ ೨೦೦೫ ರಂದು ಬನ್ನೂರಿಗೆ ಮಾನ್ಯ ಕೃಷ್ಣಪ್ಪನವರ ಪೂರ್ವಾನುಮತಿ ಪಡೆದು ಹೋಗಿದ್ದೆವು. ಅವರ ಬಾಳೆ ಚೆನ್ನಾಗಿದೆ. ಆದರೆ ವಿವರ ನೀಡಲು ತೋಟದಲ್ಲಿ ನಮಗೆ ಅವರು ಸಿಕ್ಕಲಿಲ್ಲ. (ಅನಿವಾರ್ಯ ಇರಬಹುದು ಬಿಡಿ) ಮಾರನೇ ದಿನ ಫೋನಾಯಿಸಿ ಸತತ ೨೦ ನಿಮಿಷ ಮಾತಾಡಿದೆನಾದರೂ ಬಾಳೆ ವಿವರವೊಂದನ್ನು ಬಿಟ್ಟು ಮತ್ತೆಲ್ಲವನ್ನೂ ಅಂದರೆ ನಾರಾಯಣರೆಡ್ಡಿಯವರನ್ನು ಬೈದದ್ದು, ಚಂದ್ರಶೇಖರರನ್ನು ಹೀಯಾಳಿಸಿದ್ದು, ಹೇಳಿ, "ಈ ಬಗ್ಗೆ ತಲೆಕೆಡಿಸಿಕೊಳ್ಳಬೇಕಿಲ್ಲ" ಅನ್ನುತ್ತಾರಲ್ಲಾ! "ನಮ್ಮ ಬೋರುಗಳು ಬತ್ತಿದರೆ ನಮ್ಮ ಅಡಿಕೆಯ ಗತಿ ಏನು" ಅಂದೆ. ಅದಕ್ಕವರು ಅಡಿಕೆಗೆ ನೀರೇ ಬೇಡಾರಿ ಜೀವಾಮೃತ ಹೊಡೀರಿ" ಅಂದರು. ಇದೇ ಮಾತನ್ನು ತುಮಕೂರಿನ ಸಾವಯವ ಕೃಷಿಕ ನಂದಿಹಳ್ಳಿ ಮೃತ್ಯುಂಜಯಪ್ಪ (ಇವರಿಗೆ ೮ವರ್ಷದ ತೋಟದ ಸಾವಯವ ಕೃಷಿಗೆ ಸರ್ಕಾರ ನೀಡುವ ಜಿಲ್ಲಾ ಮಟ್ಟದ ಪ್ರಥಮ ಪ್ರಶಸ್ತಿ ಬಂದಿದೆ) ಕೃಷ್ಣಪ್ಪನವರ ಮಾತನ್ನು ಅನುಮೋದಿಸಿದರು (ಇಂಗು ಗುಂಡಿ ಬಗ್ಗೆ ನೀರಿಲ್ಲದ ಅಡಿಕೆಯನ್ನು ಊಹಿಸಲು ಸಾಧ್ಯವಿಲ್ಲ.

ಹಾಗಾದರೆ ಮಾನ್ಯ ಕೃಷ್ಣಪ್ಪನವರು ಮತ್ತು ಮೃತ್ಯುಂಜಯಪ್ಪನವರು ಈ ಬೇಸಿಗೆಯಲ್ಲಿಯೇ ತಮ್ಮ ಅಡಿಕೆಗೆ ನೀರು ನೀಡದೇ ನಮಗೆಲ್ಲಾ ಮಾರ್ಗದರ್ಶನ ಮಾಡಬಲ್ಲರೇ? ಆಗ ನಮಗೆ ಇಂಗು ಗುಂಡಿಯಿರಲಿ, ಬೋರೂ ಬೇಡ. ಕ್ಷಮಿಸಿ, ನಾನು ಯಾರ ಕೃಷಿಯನ್ನೂ ಅಲ್ಲಗಳೆಯಲು ಅಥವಾ ಮನಸ್ಸುಗಳನ್ನು ನೋಯಿಸಲು ಬರೆಯುತ್ತಿಲ್ಲ. ಸದಾ ಗಿಡ ಮುಟ್ಟುವವನ ಹೃದಯ ಎಂದೂ ಕಲ್ಲಾಗಿರುವುದಿಲ್ಲ. ಆದರೆ ಗಂಧ ತೀಡದಿದ್ದರೆ ಸತ್ಯ ಸೂಸುವುದಿಲ್ಲ-ಅದಕ್ಕಾಗಿ ಇಂದು ನಾವು ಕೃಷಿ ವಿಧಾನದ ಪರವೋ, ವಿರುದ್ಧವೋ ಕೂಗಾಡದೇ ಇಂದು ನಾವು ಈ ವಿಧಾನಗಳ



ಜೀವಾಮೃತದಿಂದ ಬೆಳೆಯಲಾದ ಬಾಳೆ

ಯಾವುದೋ ಒಂದು ಕೃಷಿ ವಿಧಾನದ ಬಾಲ ಹಿಡಿದು ಗೆದ್ದೇ ಎನ್ನುವುದು ವಿವೇಕವಲ್ಲ. ನಮ್ಮ ಹಿರಿಯರು ಶತಶತಮಾನಗಳಿಂದ ತಮ್ಮ ಪ್ರದೇಶಕ್ಕೆ, ತಮ್ಮ ಪರಿಸರಕ್ಕೆ ಹೊಂದುವ ಬೆಳೆ, ಬೆಳೆಯ ವಿಧಾನ, ಬೆಳೆಯ ಸಂಯೋಜನೆ, ರೋಗಕೀಟ ನಿಯಂತ್ರಣ, ಹೀಗೆ ಕೃಷಿಯ ಎಲ್ಲಾ ಒಳ ಹೊರಗುಗಳನ್ನು ಕರಗತ ಮಾಡಿಕೊಂಡಿದ್ದಾರೆ. ರಾಗಿಯಲ್ಲಿ ಏಕ ಬೆಳೆ ಇಲ್ಲ. ಅಕ್ಕಡೆ ಸಾಲಿನಲ್ಲಿ ಅವರೆ, ತೊಗರಿ, ಸಾರಜನಕ ಸ್ಥಿರೀಕರಣ ಗಿಡಗಳು. ರಾಗಿಯ ಕೊಯ್ಲಿನ ನಂತರ ಇವು ಬೆಳೆ ಬಿಡುತ್ತವೆ. ಜೋಳ-ದನಕ್ಕೆ ಮೇವು, ರೊಟ್ಟಿಗೆ ಹಿಟ್ಟು ಇದು ಎತ್ತರವಾಗಿದ್ದು ಹಕ್ಕಿ ಕೂರುತ್ತವೆ. ಹಕ್ಕಿ ಕೀಟ ನಿಯಂತ್ರಿಸುತ್ತವೆ. ಸಾಸುವೆ ಕೀಟನಾಶಕ, ರೋಗ ನಿರೋಧಕ. ಹುಚ್ಚೆಳ್ಳು ಎಣ್ಣೆಗೆ, ಹಳದಿ ಹೂ ಬಿಟ್ಟು ದುಂಬಿ ಕರೆದು, ಪರಾಗಕ್ರಿಯೆಗೆ ಸಹಕಾರಿ. ರಾಗಿ ಹೊಲದಲ್ಲಿಯೇ ಮೂಲಂಗಿ, ಕ್ಯಾಕರಿಕೆ, ದಂಟು, ಕೊತ್ತಂಬರಿ, ವೈವಿಧ್ಯಕ್ಕೆ ಇನ್ನೇನು ಬೇಕು?

ಪರಿಣಿತರು, ಕೆಲಸಮಾಡುತ್ತಿರುವ ಸಂಘಸಂಸ್ಥೆ, ವಿಜ್ಞಾನಿಗಳು, ನಮ್ಮಲ್ಲಿರುವ ಒಂದೆಡೆ ದೇಸಿ ವಿಧಾನದ ಹಳ್ಳಿಯ ಕೃಷಿ ಪಂಡಿತರನ್ನೊಳಗೊಂಡಂತೆ ಎಲ್ಲರೂ ಒಂದೆಡೆ ತಣ್ಣಗೆ ಕೂತು ವಿಚಾರ ಮಂಥನ ನಡೆಸಿ ಒಂದು ಗಟ್ಟಿಯಾದ ಸಾವಯವ ಕೃಷಿ ವಿಧಾನವನ್ನು ಕಂಡು ಹಿಡಿಯಬೇಕು. ಈಗ ಸರ್ಕಾರ ಸಾವಯವ ನೀತಿಯನ್ನು ಜಾರಿ ಮಾಡುತ್ತಿದೆ. ಅದಕ್ಕೆ ಹಿಂದೆ ಸಾವಯವ ಮಾಡುತ್ತಿರುವವರ ಕೊಡುಗೆಯೂ ಇದೆ. ಇದೇ ಸಮಯದಲ್ಲಿ ಸಾವಯವ ಕೃಷಿಯನ್ನು ವಿರೋಧಿಸುವ ಬಲಿಷ್ಠರ ದಂಡೇ ಇದೆ. ನಾವು ಬೀದಿಯಲ್ಲಿ ಬೈದಾಡುವುದು, ಒಂದೆರಡು ಬೆಳೆ ತೆಗೆದೇ ಬೀಗುವುದನ್ನು, ಬಿಟ್ಟು ಆತ್ಮೀಯವಾಗಿ ನಮ್ಮಲ್ಲಿ ಇರಬಹುದಾದ ಅಂಕುಡೊಂಕು ತಿದ್ದಿಕೊಂಡು ಮುನ್ನಡೆಯಬೇಕು, ಅಲ್ಲವೇ?

ಈಗ ಅಲ್ಲಲ್ಲಿ ಚಾಲನೆಯಲ್ಲಿರುವ ಸಹಜ ಸಾವಯವ, ನೈಸರ್ಗಿಕ, ಜೈವಿಕ, ಜೀವಚೈತನ್ಯ, ಮುಂತಾದ ಎಲ್ಲಾ ಕೃಷಿ ವಿಧಾನಗಳೂ, ಮೂಲಭೂತವಾಗಿ ಸಾವಯವ ಕೃಷಿ ವಿಧಾನಗಳೇ. ಇವೆಲ್ಲವಕ್ಕೂ ಇತಿಮಿತಿಗಳು ಹಿರಿಮೆ ಗರಿಮೆಗಳು ಇವೆ. ಇವುಗಳನ್ನು ಅರಿತು ಮುನ್ನುಗ್ಗುವುದಷ್ಟೇ ನಮ್ಮ ಜಾಣತನ.

ನನ್ನ ಪ್ರಾಮಾಣಿಕ ಅನಿಸಿಕೆಯೇನೆಂದರೆ, ಯಾವುದೋ ಒಂದು ಕೃಷಿ ವಿಧಾನದ ಬಾಲ ಹಿಡಿದು ಗೆದ್ದೇ ಎನ್ನುವುದು ವಿವೇಕವಲ್ಲ. ನಮ್ಮ ಹಿರಿಯರು ಶತಶತಮಾನಗಳಿಂದ ತಮ್ಮ ಪ್ರದೇಶಕ್ಕೆ, ತಮ್ಮ ಪರಿಸರಕ್ಕೆ ಹೊಂದುವ ಬೆಳೆ, ಬೆಳೆಯ ವಿಧಾನ, ಬೆಳೆಯ ಸಂಯೋಜನೆ, ರೋಗಕೀಟ ನಿಯಂತ್ರಣ, ಹೀಗೆ ಕೃಷಿಯ ಎಲ್ಲಾ ಒಳ ಹೊರಗುಗಳನ್ನು ಕರಗತ ಮಾಡಿಕೊಂಡಿದ್ದಾರೆ. ಉದಾಹರಣೆಗೆ: ಹೊಲದ ಬೆಳೆಯ ಅವರ ವಿಧಾನ ಎಷ್ಟು ವೈಜ್ಞಾನಿಕ ನೋಡಿ. ರಾಗಿಯಲ್ಲಿ ಏಕ ಬೆಳೆ ಇಲ್ಲ. ಅಕ್ಕಡೆ ಸಾಲಿನಲ್ಲಿ ಅವರೆ, ತೊಗರಿ, ಸಾರಜನಕ ಸ್ಥಿರೀಕರಣ ಗಿಡಗಳು. ರಾಗಿಯ ಕೊಯ್ಲಿನ ನಂತರ ಇವು ಬೆಳೆ ಬಿಡುತ್ತವೆ. ಜೋಳ-ದನಕ್ಕೆ ಮೇವು, ರೊಟ್ಟಿಗೆ ಹಿಟ್ಟು ಇದು ಎತ್ತರವಾಗಿದ್ದು ಹಕ್ಕಿ ಕೂರುತ್ತವೆ. ಹಕ್ಕಿ ಕೀಟ ನಿಯಂತ್ರಿಸುತ್ತವೆ. ಸಾಸುವೆ ಕೀಟನಾಶಕ, ರೋಗ ನಿರೋಧಕ. ಹುಚ್ಚೆಳ್ಳು ಎಣ್ಣೆಗೆ, ಹಳದಿ ಹೂ ಬಿಟ್ಟು ದುಂಬಿ ಕರೆದು, ಪರಾಗಕ್ರಿಯೆಗೆ ಸಹಕಾರಿ.

ರಾಗಿ ಹೊಲದಲ್ಲಿಯೇ ಮೂಲಂಗಿ, ಕ್ಯಾಕರಿಕೆ, ದಂಟು, ಕೊತ್ತಂಬರಿ, ವೈವಿಧ್ಯಕ್ಕೆ ಇನ್ನೇನು ಬೇಕು? ಇಲ್ಲಿ ನಿರ್ದಿಷ್ಟ ಅಂತರದಲ್ಲಿರುವ ಅಕ್ಕಡಿ ಸಾಲು ಗಳು ಹಿಂಡಾಗಿ ದಾಳಿ ಮಾಡುವ ಕೀಟಗಳಿಗೆ ತಡೆಯೊಡ್ಡು ತ್ತವೆ. ಅವರೆ-ನೆಲಕವಿದು ತೇವಾಂಶರಕ್ಷಿಸುತ್ತದೆ. ಹೊಲದ ತುಂಬೆಲ್ಲಾ ಇವು ವಿರಳವಾಗಿ ರಾಗಿಗೆ ತೊಂದರೆಯಾಗ ದಂತೆ (ಏಕೆಂದರೆ ಇದೇ ಇಲ್ಲಿ ಮುಖ್ಯ ಬೆಳೆ) ಅಲ್ಲಿಯ ಸೂಕ್ಷ್ಮ ವಾತಾವರಣ ಕಾಯುತ್ತವೆ. ಇದೆ ಬಹುಮಹಡಿ ಪದ್ಧತಿ ಬೆಳೆ ಸಂಯೋಜನ.

ನಮ್ಮ ಹಿರಿಯರು, ಅದೆಷ್ಟು ಜಾಣರೆಂದರೆ ನಾವು ಬೆರಗಾಗುವಷ್ಟು ಅವರ ಕೃಷಿ ಪಕ್ಕಾ ವೈಜ್ಞಾನಿಕ. ಅವರು ಕೃಷಿಯನ್ನೇ ಉಸಿರಾಡಿದವರು. ಅವರ ಮುಂದೆ ನಾವು ನೀವು 'ನಿಲ್' ಇವರ ಕೃಷಿ ವಿಧಾನ ಕಾಲದ ಪರೀಕ್ಷೆಯಲ್ಲಿ ಗೆದ್ದಿದೆ. ಅವರು ನೆಲೆ ನಿಂತಿರುವ ಕೃಷಿ ಹವಾಮಾನಕ್ಕೆ ಅನುಗುಣವಾಗಿದೆ. ಒಟ್ಟಾರೆ ನನ್ನ ಅಭಿಪ್ರಾಯವಿಷ್ಟೆ

೧. ತೋಟಗಾರಿಕೆ ಬೆಳೆಗಳಲ್ಲಿ ಉಳುಮೆಯ ಅಗತ್ಯ ಕಡಿಮೆ. ಇದರಿಂದ ಮುಖ್ಯ ಬೆಳೆಗೆ ಹೊಂದಿ

ಕೊಂಡಂತೆ ಮಿಶ್ರ ಬೆಳೆಗಳನ್ನು ಸಂಯೋಜಿಸುವುದರಿಂದ ಎಕರೆವಾರು ಉತ್ಪನ್ನವನ್ನು ಹೆಚ್ಚಿಸುವುದರ ಜೊತೆಗೆ, ಸಸ್ಯ ವೈವಿಧ್ಯತೆ ಕಾಪಾಡಿ, ರೋಗ ಕೀಟಗಳ ನಿಯಂತ್ರಣ ಸಾಧಿಸಬಹುದು.

ಹಿಡುವಳಿ ವಿಸ್ತಾರವಿದ್ದರೆ ಕಳೆ ನಿಯಂತ್ರಣಕ್ಕೆ ಒಂದೆರಡು ಉಳುಮೆ ಇದ್ದರೆ ಅದು ಅಪರಾಧವಲ್ಲ. ಇಲ್ಲಿ ನಿರ್ವಹಣೆ ಮುಖ್ಯವೇ ವಿನಾ ಪದ್ಧತಿಗಳಲ್ಲ.

೨. ಉಳುಮೆ ಇಲ್ಲದೇ ವಿಸ್ತಾರದ ಬಯಲಿನಲ್ಲಿ ಗದ್ದೆ ಮಾಡುವುದು ಕಷ್ಟ. ಇಲ್ಲಿ ಆಗಲೇ ಹೆಚ್ಚಿನ ಪ್ರಮಾಣದಲ್ಲಿ ಜಾರಿ ಆಗುತ್ತಿರುವ ಮಡಗಾಸ್ಕರ್ ಅಥವಾ ಶ್ರೀ ವಿಧಾನ ಸೂಕ್ತ. ಇದರಲ್ಲಿ ಕಡಿಮೆ ಬಿತ್ತನೆ, ಕಡಿಮೆ ನೀರು, ಉತ್ತಮ ನಿರ್ವಹಣೆ ಸಾಧ್ಯ. ಪೈರಿನ ನಡುವೆ ಅಂತರವಿರುವುದರಿಂದ ಬಂಪರ್ ಇಳುವರಿ ಬರುತ್ತದೆ. ಅತಿ ನೀರಿನಿಂದ ಚೌಳಾಗುತ್ತಿರುವ ನೀರಾವರಿ ಬಂಜರುಭೂಮಿಯಾಗುತ್ತಿರುವ ಗದ್ದೆಬಯಲುಗಳು ಉಳಿಯುತ್ತವೆ.

೩. ವಾಣಿಜ್ಯ ದೃಷ್ಟಿಯಿಂದ ತರಕಾರಿ ಮತ್ತು ಹೂವಿನ ಕೃಷಿ ಮಾಡುವವರು ರಾಕ್ಷಸ ಉಳುಮೆಗೆ ವಿದಾಯ ಹೇಳಿ, ಕಡಿಮೆ ಉಳುಮೆಯಿಂದ ಕಳೆ ನಿಯಂತ್ರಣದಿಂದ ಬೆಳೆ ತೆಗೆಯಲಿ, ಈ ಬೆಳೆಗಳಲ್ಲಿ ಪರಿಣಿತರಾದ ಜನಾಂಗವೇ ನಮ್ಮಲ್ಲಿದೆ. ಇವರ ನೆರವು ಇಲ್ಲಿ ಬೇಕು.

೪. ಹೊಲದ ಬೆಳೆಗಳಲ್ಲಿ ರೈತರು ಭಾರಿ ಯಂತ್ರಗಳ ಬದಲು ಸಣ್ಣಯಂತ್ರ ಅಥವಾ ನೇಗಿಲು ಬಳಸಿ, ಉಳುಮೆ ಮಾಡಿಕೊಳ್ಳುವುದು ಸೂಕ್ತ. ಏಕೆಂದರೆ ಇದು ಬಹಳ ವಿಸ್ತಾರದ ಭೂಮಿಯಲ್ಲಿ ನಡೆಯುವ ಕೆಲಸ. ನಮ್ಮ ಹಿರಿಯರು ತಮ್ಮ ಪ್ರದೇಶದ ಕೃಷಿ ಹವಾಮಾನ ಪರಿಸ್ಥಿತಿಗೆ ಅನುಗುಣವಾಗಿದ್ದ ಮಿಶ್ರ ಬೆಳೆ ಪದ್ಧತಿಯನ್ನು ಅನುಸರಿಸುತ್ತಿದ್ದರು. ಏಕ ಬೆಳೆ ಪದ್ಧತಿಗೆ ವಿದಾಯ ಹೇಳಿ ಮತ್ತೆ ಮಿಶ್ರ ಬೆಳೆ ಪದ್ಧತಿ ಜಾರಿಗೆ ಬರಲಿ.

೫. ಸಾವಯುವ ಕೃಷಿ ಮಾಡಲು ನಾವು ಮೊದಲು, ಸಾವಯವ ಗೊಬ್ಬರ ಬೆಳೆಯಬೇಕು.೧ ತೋಟ, ಹೊಲ, ಗದ್ದೆ, ಬದುಗಳ ಮೇಲೆ, ಗ್ಲಿರಿಸೀಡಿಯಾದಂತಹ ಸೊಪ್ಪು ನೀಡುವ ಗಾಳಿ ತಡೆ ಮಾಡುವ ಗಿಡಮರಗಳು, ಯಥೇಚ್ಛವಾಗಿ, ಬೆಳೆಯಲಿ. ಕೃಷಿ ವೃಕ್ಷಾಧಾರಿತವಾಗಲಿ. ಜೊತೆಗೆ ಎರೆಗೊಬ್ಬರ ನಡೆಪ್ ವಿಧಾನದ ಗೊಬ್ಬರ ತಯಾರಿಕೆ ಮುಂತಾದ ವೈಜ್ಞಾನಿಕ ಸಾವಯವಗೊಬ್ಬರ ತಯಾರಿಕಾ ವಿಧಾನಗಳು ಜಾರಿಗೆ ಬರಲಿ. ಒಟ್ಟಾರೆ ದೊರೆಯುವ ಎಲ್ಲಾ ಸಾವಯವ ಉಳಿಕೆ, ತ್ಯಾಜ್ಯಗಳ ಹಿಂಡಿಗಳನ್ನು ಪೌಷ್ಟಿಕ ಗೊಬ್ಬರವನ್ನಾಗಿ ತಯಾರಿಸುವ ವಿಧಾನಗಳು, ಅವಿಷ್ಕಾರಗೊಳ್ಳಲಿ. (ಇದ್ದಾವೆ, ನೋಡುವ ಮನಸ್ಸು ಬೇಕು) ಇದರ ಜೊತೆಗೆ ಬೀಜಾಮೃತ, ಜೀವಾಮೃತ, ಗಂಜಳ, ಮಜ್ಜಿಗೆ, ಸಾವಯವ ಔಷಧಗಳು, (ರೈತರೇ ತಯಾರಿಸಬಹುದಾದ) ಚಲಾವಣೆಗೆ ಬರಲಿ. ಇಲ್ಲಿ ರೈತ, ಕಂಪನಿಗಳು ತಯಾರಿಸುವ ಯಾವುದನ್ನೂ ಹೊರಗಿನಿಂದ ಕೊಳ್ಳಬಾರದು. ತಾನೇ ಇವುಗಳನ್ನು ತಯಾರಿಸಿಕೊಳ್ಳಬೇಕು.

೬. ನೀರು ಕೃಷಿಯ ಜೀವಾಳ. ಸುರಿವ ಮಳೆ ನೀರನ್ನು ರೈತರ ಹೊಲತೋಟಗಳಲ್ಲೇ ಇಂಗಿಸಲು ಇಂಗು ಗುಂಡಿಗಳು, ನಂತರದಲ್ಲಿ ಕೆರೆಕಟ್ಟೆಗಳು.

೭. ನಮ್ಮಲ್ಲಿ ನಾಟಿ ತಳಿಗಳ ಭಂಡಾರವೇ ಇದೆ. ಬೇಕಿದ್ದರೆ ಇವುಗಳ ಮೌಲ್ಯವರ್ಧನೆ ಮಾಡಿ (ವೈಜ್ಞಾನಿಕವಾಗಿ) ರೈತರಿಗೆ ನೀಡುವುದು ಅಗತ್ಯ.

ಚಾಲನೆಯಲ್ಲಿರುವ ಯಾವ ಕೃಷಿ ವಿಧಾನಗಳೂ ಪರಿಪೂರ್ಣವಲ್ಲ. ಅವುಗಳಲ್ಲಿರುವ ಎಲ್ಲಾ ಉತ್ತಮವಾದ ಅಂಶಗಳನ್ನು ಬಳಸಿಕೊಂಡು ಒಂದು ಸಮನ್ವಯದ, ರೈತನಿಗೆ ಅನುಕೂಲವಾದ, ಸರಳವಾದ ಅವನ್ನು ಸ್ವಾವಲಂಬಿಯಾಗಿಸುವ ಕೃಷಿಯತ್ತ ಕರೆದೊಯ್ಯುವುದು ಇಂದು ಸಾವಯವದ ಮಾತನಾಡುವವರೆಲ್ಲರ ಜವಬ್ದಾರಿಯೆಂದು ನಾನು ಭಾವಿಸುತ್ತೇನೆ.

ಒಟ್ಟಾರೆ ರಾಸಾಯನಿಕ ಕೃಷಿಗೆ ಪರ್ಯಾಯವಾದ ಸಾವಯವ ಗೊಬ್ಬರ, ಕೀಟ, ರೋಗ ನಿಯಂತ್ರಕಗಳು, ಸಸ್ಯಪ್ರಚೋದಕಗಳು, ಮುಂತಾದವನ್ನು ನಾವು, ಕಂಗಾಲಾಗಿರುವ, ಯಾವ ಕೃಷಿ ಮಾಡಿದರೆ ನಾನು ಬದುಕೇನು ಚಿಂತಿಸುತ್ತಾ ಗೊಂದಲದಲ್ಲಿರುವ ರೈತನಿಗೆ ನೀಡದಿದ್ದರೆ, ರೈತ ಸಾವಯವದತ್ತ ಬರಲಾರ. ರೈತ ಸಾಯುತ್ತಿದ್ದಾನೆ, ನಮ್ಮಿಂದ ಉಳಿಸಲಾಗದಿದ್ದರೆ ಬೇಡ, ನಾವು ಸಾಯಿಸಬಾರದಲ್ಲವೇ?

ನಾನು ಇದೆಲ್ಲವನ್ನೂ ಬಹಳ ಜವಬ್ದಾರಿ ಯಿಂದ ಬರೆಯುತ್ತಿದ್ದೇನೆ. ನನಗೆ ದಕ್ಕಿದಷ್ಟು ೨೨ ವರ್ಷಗಳ ಸಹಜ ಕೃಷಿ ಅನುಭವಗಳ ಹಿನ್ನೆಲೆ ಯಲ್ಲಿ ನಿಮ್ಮ ಮುಂದೆ ಪರಿಶೀಲನೆಗೆ ವಿನಯ ದಿಂದ ಮಂಡಿಸಿದ್ದೇನೆ. ಇಷ್ಟರ ನಡು ವೆಯೂ ಎಲ್ಲಾ ರೈತರಿಗೆ ತಮಗೆ ಇಷ್ಟವಾದ ಪದ್ಧತಿಯಲ್ಲಿ ಕೃಷಿ ಮಾಡುವ ಸ್ವಾತಂತ್ರ್ಯ ಇದ್ದೇ ಇದೆ ತಾನೇ? ಆಯ್ಕೆ ಅವರದು. □

ಸಂವಾದ

ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಅಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆ ಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಚರ್ಚೆ

'ಅಹಿಂದ'ದ ಹುಟ್ಟು ಯಾವ ಹಿನ್ನೆಲೆಯಲ್ಲೇ ಆಗಿರಲಿ, ಅದು ಈಚಿನ ದಿನಗಳಲ್ಲಿ ಪ್ರಕಟಪಡಿಸುತ್ತಿರುವ ಉದ್ದೇಶಗಳು ಏನೇ ಇರಲಿ; ಅದು ಸದ್ಯಕ್ಕೆ ಸಿದ್ಧರಾಮಯ್ಯನವರ ರಾಜಕೀಯ ಅಳಿವು ಉಳಿವಿನ ಹೋರಾಟದ ವೇದಿಕೆಯಾಗಿದೆ ಎಂಬುದನ್ನು ಮರೆಯದೆ, ನಮ್ಮ ಮಾತುಗಳನ್ನು ಆಡಬೇಕಾಗಿದೆ. ಏಕೆಂದರೆ ಇಂದು ಸಿದ್ಧರಾಮಯ್ಯನವರು ನಮ್ಮಂತಹ ಕೆಲವರಲ್ಲಿ ಬದಲೀ ರಾಜಕಾರಣದ ಆಸೆ ಹುಟ್ಟಿಸಿದ್ದಾರೆ. ಹಾಗಾಗಿ ಇಂದು ನಾವು ಆಡುವ ಮಾತುಗಳಿಗೆ ಸದ್ಯದ ರಾಜಕೀಯ ತುರ್ತು ಎಷ್ಟರಮಟ್ಟಿಗೆ ಇರುತ್ತದೋ ಅಷ್ಟರಮಟ್ಟಿಗೆ ಚಾರಿತ್ರಿಕ ಅರಿವು-ಎಚ್ಚರಗಳೂ ಇರಬೇಕಾಗುತ್ತದೆ.

○ಡಿ.ಎಸ್. ನಾಗಭೂಷಣ

ಅಹಿಂದ ಚರ್ಚೆ ಮತ್ತು ಕರ್ನಾಟಕದ ರಾಜಕಾರಣ

ಚಳವಳಿಗಳ ಬಳಿಕೇಳುವ ಜಾತಿ ಕಾರಣ!

ಹಿರಿಯರೇ ಮತ್ತು ಸ್ನೇಹಿತರೇ,

'ಅಹಿಂದ'ದ ಹುಟ್ಟು ಯಾವ ಹಿನ್ನೆಲೆಯಲ್ಲೇ ಆಗಿರಲಿ, ಅದು ಈಚಿನ ದಿನಗಳಲ್ಲಿ ಪ್ರಕಟಪಡಿಸುತ್ತಿರುವ ಉದ್ದೇಶಗಳು ಏನೇ ಇರಲಿ; ಅದು ಸದ್ಯಕ್ಕೆ ಸಿದ್ಧರಾಮಯ್ಯನವರ ರಾಜಕೀಯ ಅಳಿವು ಉಳಿವಿನ ಹೋರಾಟದ ವೇದಿಕೆಯಾಗಿದೆ ಎಂಬುದನ್ನು ಮರೆಯದೆ, ನಮ್ಮ ಮಾತುಗಳನ್ನು ಆಡಬೇಕಾಗಿದೆ. ಏಕೆಂದರೆ ಇಂದು ಸಿದ್ಧರಾಮಯ್ಯನವರು ನಮ್ಮಂತಹ ಕೆಲವರಲ್ಲಿ ಬದಲೀ ರಾಜಕಾರಣದ ಆಸೆ ಹುಟ್ಟಿಸಿದ್ದಾರೆ. ಹಾಗಾಗಿ ಇಂದು ನಾವು ಆಡುವ ಮಾತುಗಳಿಗೆ ಸದ್ಯದ ರಾಜಕೀಯ ತುರ್ತು ಎಷ್ಟರಮಟ್ಟಿಗೆ ಇರುತ್ತದೋ ಅಷ್ಟರಮಟ್ಟಿಗೆ ಚಾರಿತ್ರಿಕ ಅರಿವು-ಎಚ್ಚರಗಳೂ ಇರಬೇಕಾಗುತ್ತದೆ. ಏಕೆಂದರೆ ಕಳೆದ ೨೫-೩೦ ವರ್ಷಗಳಲ್ಲಿ ಇಂತಹ ವೇದಿಕೆ 'ಚಳುವಳಿ'ಗಳ ಮೂಲಕ ಸೃಷ್ಟಿಸಲಾದ ಕನಸುಗಳನ್ನು ನಾವು ನಮ್ಮ ತಪ್ಪು ಮಾತುಗಳಿಂದ, ಬೇಜವಾಬ್ದಾರಿ ನಡವಳಿಕೆಗಳಿಂದ, ಅವಸರದ ಕಾರ್ಯಕ್ರಮಗಳಿಂದ ಕೈಯಾರ ಕೆಡಿಸಿ ಹಾಕಿದ್ದೇವೆ. ಇದು, ನಿರ್ದಿಷ್ಟ ಉದಾಹರಣೆಗಳು ಅನಗತ್ಯವಾಗುವಷ್ಟು ಸ್ಪಷ್ಟವಾಗಿದೆ.

'ಅಹಿಂದ'ದ ಸದ್ಯದ ಅವಸ್ಥೆಯನ್ನು ಅಥವಾ ಆಶೋತ್ತರಗಳನ್ನಷ್ಟೇ ಗಮನಿಸಿ ಇಂದು ಮಾತಾಡಿದರೆ ಸಾಲದು. ಇಂದು 'ಅಹಿಂದ' ಕುರಿತು ನಮಗೆ ಪ್ರೀತಿ ಇದ್ದರೆ-ಅದು ನಮ್ಮದು ಎಂಬ ಭಾವನೆಯಿಂದ ನಾವು ಇಲ್ಲಿಗೆ ಬಂದಿದ್ದರೆ, ಅದಕ್ಕೆ ಕಾರಣ ಅದಕ್ಕೊಂದು ದೀರ್ಘ ಪರಂಪರೆ ಇದೆ-ಅದಕ್ಕೊಂದು ಆಳವಾದ, ವಿಶಾಲವಾದ ದರ್ಶನ ಅಂದರೆ ವಿಷನ್ ಇದೆ; ನಾವು ಅದಕ್ಕೆ ಹಕ್ಕುದಾರರು ಎಂಬುದೇ ಆಗಿದೆ. ಈ ಪರಂಪರೆಯನ್ನು ಸ್ಥೂಲವಾಗಿ ಅವೈದಿಕ ಪರಂಪರೆ ಎಂದು ಗುರುತಿಸಬಹುದು. ಅಂದರೆ, ಅದು ಬ್ರಾಹ್ಮಣೇತರ ಜಾತಿ ಪರಂಪರೆಯಷ್ಟೇ ಅಲ್ಲ. ಅದೊಂದು ಬದಲೀ ಚಿಂತನ ಕ್ರಮ. ಬದಲೀ ದೃಷ್ಟಿಕೋನ, ಮೌಲ್ಯ ಹಾಗೂ ಪಾವಿತ್ರ್ಯಗಳುಳ್ಳ ಪರಂಪರೆ. ಅದು ಯಾವುದೇ ಜಾತಿಗೆ ಅಥವಾ ಜಾತಿಗಳಿಗೆ ಸೀಮಿತವಾಗದ ಜಾತ್ಯತೀತ ಪರಂಪರೆ. ಹಾಗಾಗಿಯೇ ನಾವು ಬುದ್ಧ-ಬಸವ-ಗಾಂಧಿ, ಇತ್ತೀಚೆಗೆ ಕುವೆಂಪು ಅವರನ್ನು ಸೇರಿಸಿಕೊಂಡು ನಮ್ಮ ಪರಂಪರೆಯ ಮೈಲಿಗಲ್ಲುಗಳನ್ನು ಗುರುತಿಸಿಕೊಂಡಿದ್ದೇವೆ.

ಇದು ಬಹಳ ಸ್ಥೂಲವಾದ ಗುರುತಿಸುವಿಕೆ ಎಂದೇ ನನ್ನ ಭಾವನೆ. ಹಾಗೆ ನೋಡಿದರೆ ಈ ಪರಂಪರೆಯನ್ನು ಇನ್ನಷ್ಟು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಅದನ್ನು ಎರಡು ಧಾರೆಗಳನ್ನಾಗಿ, ಅವು ಪರಸ್ಪರ ಪ್ರತ್ಯೇಕವಲ್ಲದಿದ್ದರೂ, ನೋಡಬಹುದು. ಒಂದು ಅಧ್ಯಾತ್ಮಿಕ ಧಾರೆ, ಇನ್ನೊಂದು ಲೌಕಿಕ ಧಾರೆ. ಈ ಅಧ್ಯಾತ್ಮಿಕ ಧಾರೆ ಬುದ್ಧ-ಬಸವ-ವಿವೇಕಾನಂದ-ನಾರಾಯಣಗುರು ಮುಂತಾದ ಸಂತರಿಂದ-ಅವರ ತತ್ವ ಮೀಮಾಂಸೆಯ ಮೂಲಕ-ಗುರುತಿಸಲ್ಪಟ್ಟಿದ್ದರೆ; ಲೌಕಿಕ ಧಾರೆ ಮಹಾತ್ಮ ಫುಲೆ-ಶಾಹು ಮಹಾರಾಜ್-ಪೆರಿಯಾರ್-ಸಿ.ಆರ್.ರೆಡ್ಡಿ-ಪಂಬೂಚೆಟ್ಟಿ-ಕಾಂತರಾಜ ಅರಸ್-ದೇವರಾಜ ಅರಸರಂತಹ (ಉ.ಕರ್ನಾಟಕದಲ್ಲಿ ಅರಟಾಳ ರುದ್ರಗೌಡರು ಮತ್ತು ಸಿದ್ಧಪ್ಪ ಕಂಬಳಿ) ಹೋರಾಟಗಾರ-ಆಡಳಿತಗಾರರಿಂದ-ಅವರ ಕಾರ್ಯಕ್ರಮಗಳ ಮೂಲಕ ಗುರುತಿಸಲ್ಪಟ್ಟಿದೆ. ಗಾಂಧಿ-ಲೋಹಿಯಾ-ಅಂಬೇಡ್ಕರ್ ಈ ಎರಡೂ ಧಾರೆಗಳನ್ನು ಅವಿಭಾಜ್ಯವಾಗಿ ಜೋಡಿಸುವ ಪ್ರಯತ್ನ ಮಾಡಿದ ದ್ರಷ್ಟಾರರು ಎಂದು ಹೇಳಬಹುದು.

೨೦೦೫, ಈ ತಾರ್ಕಿಕ ಧಾರೆಯ ಇತಿಹಾಸದ ದೃಷ್ಟಿಯಿಂದ ವಿಶೇಷವಾಗಿ ಕರ್ನಾಟಕ ಚರಿತ್ರೆಯ ದೃಷ್ಟಿಯಿಂದ ಬಹುಮುಖ್ಯ ವರ್ಷ. ಈಗ್ಗೆ ನೂರುವರ್ಷಗಳ ಹಿಂದಷ್ಟೇ ಈ 'ಅಹಿಂದ'ದ ಮೂಲ ಬೀಜ ಬಿತ್ತಲ್ಪಟ್ಟಿದುದು. ೧೯೦೫ರಲ್ಲಿ ಮೈಸೂರು ಸಂಸ್ಥಾನದಲ್ಲಿ ಮೊಟ್ಟಮೊದಲ ಬ್ರಾಹ್ಮಣೇತರ ಸಂಘಟನೆ, ಲಿಂಗಾಯಿತರ ಸಂಘ ಸ್ಥಾಪನೆಯಾಯಿತು. ನಂತರದ ವರುಷಗಳಲ್ಲೇ ಒಕ್ಕಲಿಗರ ಸಂಘ, ಮುಸ್ಲಿಮರ ಸಂಘ, ಆದಿದ್ರಾವಿಡರ ಸಂಘ ಮುಂತಾಗಿ ಎಚ್ಚೆತ್ತ ಜಾತಿ-ಜನವರ್ಗಗಳ ಸಂಘಗಳು ಸ್ಥಾಪನೆಯಾದವು. ಇವು ಮೂಲತ: ರಾಜ್ಯಾಡಳಿತದ ಹೆಚ್ಚು ಕಡಿಮೆ ಎಲ್ಲ ಸ್ಥಾನಮಾನಗಳನ್ನು ಮೇಲ್ಜಾತಿಯವರೇ(ಬ್ರಾಹ್ಮಣರೇ) ಪಡೆದಿದ್ದಾರೆ ಎಂಬ ಸಾಮಾಜಿಕ ಅರಿವಿನಿಂದ ಹುಟ್ಟಿದ ಬ್ರಾಹ್ಮಣೇತರ ಜಾತಿ ಪ್ರಜ್ಞೆಯ ಕೂಸುಗಳು. ಇವುಗಳಲ್ಲೆದರ ಫಟನೇ ೧೯೧೭ ರ ಹೊತ್ತಿಗೆ ರಚನೆಯಾದ ಕರ್ನಾಟಕದ ಪ್ರಪ್ರಥಮ ಬ್ರಾಹ್ಮಣೇತರ ರಾಜಕೀಯ ಸಂಘಟನೆ ಪ್ರಜಾಮಿತ್ರ ಮಂಡಳಿ. ಆದರೆ ನಾವು ಗಮನಿಸಬೇಕಾದ್ದು ಇದಿಷ್ಟನ್ನೇ ಅಲ್ಲ; ಈ ಸಾಮಾಜಿಕ ಜಾಗೃತಿ ಉಂಟಾದದ್ದು ಬ್ರಿಟಿಷರು ಅಧಿಕಾರವನ್ನು ಹಂತಾನುಹಂತವಾಗಿ ಹಸ್ತಾಂತರ ಮಾಡಿದ ಪ್ರಕ್ರಿಯೆಯ ಆರಂಭದ ಮೊದಲ ಸುಳಿವು ದೊರಕಲಾರಂಭಿಸಿದ ಮೇಲೇ ಅವರಿಂದ ಹಸ್ತಾಂತರವಾಗುವ ಅಧಿಕಾರ ಯಾರ ಕೈಗೆ ಹೋಗಲಿದೆ ಎಂಬುದನ್ನು ಊಹೆ ಮಾಡಿಕೊಳ್ಳಲು ಸಾಧ್ಯವಾದಾಗಷ್ಟೇ.

ನಾವು ಇಂದು ಈ 'ಅಹಿಂದ'ವನ್ನು ಬೆಳೆಸುವ, ಅದಕ್ಕೊಂದು ದಿಕ್ಕು ತೋರಿಸುವ ಮಾತನಾಡುತ್ತಿರುವವರು, ಆ ದಿಕ್ಕಿನಲ್ಲಿ ನಡೆಯಲು ಸಜ್ಜಾಗಿರುವವರು ಮುಖ್ಯವಾಗಿ ಗಮನಿಸಬೇಕಾದದ್ದು, ಈ ಹಿಂದುಳಿದ ವರ್ಗಗಳ ಚಳುವಳಿ ಅಥವಾ ಸಂಘಟನೆಗೆ ಸ್ಫೂರ್ತಿ ಒದಗಿಸಿದ ಇಪ್ಪತ್ತನೇ ಶತಮಾನದ ಎರಡನೇ ದಶಕದಲ್ಲಿ ಆರಂಭವಾದ ಬ್ರಾಹ್ಮಣೇತರ ಜಾತಿಗಳ ಸಂಘಟನೆಯೂ ಮೂಲತಃ ಅಧಿಕಾರದ ಹಂಚಿಕೆಯಷ್ಟನ್ನೇ (ಅದರ ಶೀಲ ಮತ್ತು ಸ್ವರೂಪವನ್ನು ಬದಲಾಯಿಸುವುದಲ್ಲ) ದೃಷ್ಟಿಯಲ್ಲಿಟ್ಟುಕೊಂಡು ರೂಪುಗೊಂಡವು ಎಂಬುದು. ಇಂದು 'ಅಹಿಂದ'ವೂ ಅದೇ ದೃಷ್ಟಿಯನ್ನಿಟ್ಟುಕೊಂಡು ಮತ್ತು ಅದೊಂದೇ ದೃಷ್ಟಿಯನ್ನಿಟ್ಟುಕೊಂಡು ಮಾತನಾಡುತ್ತಿದ್ದರೆ, ಈ ಬ್ರಾಹ್ಮಣೇತರ ಚಳುವಳಿಯಿಂದ ಟಿಸಿಲೊಡೆದ ಈ ಹಿಂದುಳಿದ ವರ್ಗಗಳ 'ಚಳುವಳಿ' ಬೆಳೆದೇ ಇಲ್ಲ, ಚರಿತ್ರೆಯಿಂದ ಏನನ್ನೂ ಕಲಿತೇ ಇಲ್ಲ ಎಂದು ಹೇಳಬೇಕಾಗುತ್ತದೆ. ಹಾಗಾಗಿಯೇ ನಾನು ಮೊದಲಲ್ಲೇ ಪರಂಪರೆಯ ಮಾತೆತ್ತಿ, ಅದರ ಅಧ್ಯಾತ್ಮಿಕ ಹಾಗೂ ತಾರ್ಕಿಕ ಧಾರೆಗಳ ಪ್ರಸ್ತಾಪ ಮಾಡಿದ್ದು.

ಬುದ್ಧ ಎನ್ನುತ್ತೇವೆ, ಬಸವ ಎನ್ನುತ್ತೇವೆ, ಅವರು ಜಾತಿ ಪದ್ಧತಿ ವಿರುದ್ಧ ಹೋರಾಡಿದರು ಎಂದು ಬಿಡುತ್ತೇವೆ. ಆದರೆ ಜಾತಿ ಪದ್ಧತಿ ವಿರುದ್ಧದ ಅವರ 'ಹೋರಾಟ', ಬದುಕನ್ನು ಕುರಿತ ಅವರ ಯಾವ ದರ್ಶನದ ಒಂದು ಭಾಗವಾಗಿ ಬಂದಿತ್ತು ಎಂಬುದನ್ನು ನಾವು

ಯೋಚಿಸಿದ್ದೇವೆಯೇ? ಆ ದರ್ಶನದ ಭಿತ್ತಿ ಇಲ್ಲದೇ ಹೋಗಿದ್ದರೆ, ಜಾತಿಪದ್ಧತಿ ಕುರಿತ ಆ ತೀವ್ರ ನಿಲುವುಗಳು ಚರಿತ್ರೆಯಲ್ಲಿ ಇಷ್ಟು ಉಜ್ವಲವಾಗಿ ಉಳಿದು ಇಂದೂ ಮಾರ್ಗದರ್ಶಿಸಿಕೊಳ್ಳಲು ಸಾಧ್ಯವಿರುತ್ತಿತ್ತೆ? ಬುದ್ಧ ಬದುಕಿನ ಅಶಾಶ್ವತತೆಯ ಮೀಮಾಂಸೆಯನ್ನು ಮಂಡಿಸಿದ. ಜಗತ್ತು ಆಸೆಯಿಂದ ಹುಟ್ಟಿದದು ದುಃಖದಿಂದ ಕೂಡಿದೆ ಎಂದ. ಆ ದುಃಖದ ನಿವಾರಣೆಯ ಮಾರ್ಗದ ಅನಾವರಣ ಮಾಡಿದ. ಈ ಅನಾವರಣದ ಭಾಗವಾಗಿ ಜಾತಿ ಪದ್ಧತಿಯ ಅಸಂಬದ್ಧತೆಯ ಬಗ್ಗೆ ಮಾತನಾಡಿದ; ಜಾತಿ ಎಂಬುವುದಿಲ್ಲ ಎಂದ. ಬಸವಣ್ಣ 'ನಾನು ಮಾದಾರ ಚೆನ್ನಯ್ಯನ ಮಗ' ಎಂದೆನ್ನುತ್ತಾ ಜಾತಿ ಪದ್ಧತಿಯಲ್ಲಿ ಅಂತರ್ಗತವಾಗಿರುವ ಶ್ರೇಣೀಕರಣವನ್ನೇ ಘಾಸಿಗೊಳಿಸಿದ. ಜಾತಿಪದ್ಧತಿ ವಿರುದ್ಧದ ಕಾರ್ಯಕ್ರಮವಾಗಿ ಪ್ರತಿಯೊಬ್ಬರ ಆತ್ಮಗೌರವಕ್ಕೂ ಆಧಾರವಾಗಬಲ್ಲ ಕಾಯಾಕ ಗೌರವದ ಕಲ್ಪನೆಯನ್ನು ಮಂಡಿಸಿದ. ಹೆಚ್ಚು ಗಳಿಸಿದವರು ಇತರರೊಡನೆ ಹಂಚಿಕೊಂಡು ತಿನ್ನುವ ಕಲ್ಪನೆಯನ್ನು ಆಧರಿಸಿದ ದಾಸೋಹ ಪದ್ಧತಿಯನ್ನು ರೂಢಿಸಿಕೊಟ್ಟ. ಇವುಗಳ ಆಧಾರದ ಮೇಲೆ ಜಾತ್ಯತೀತವಾದ ಶರಣ ಸಂಸ್ಕೃತಿ ಕಟ್ಟಿದ.

ಇನ್ನು ನಾವು ವಿವೇಕಾನಂದ-ನಾರಾಯಣ ಗುರುಗಳ ಬಗ್ಗೆ ಮಾತನಾಡುವುದೇ ಇಲ್ಲ. ಇದು ದೊಡ್ಡ ಆಶ್ಚರ್ಯ. ಏಕೆಂದರೆ ಈ ಇಬ್ಬರೂ ನಮ್ಮ ಹತ್ತಿರದ ಚರಿತ್ರೆಗೆ ಸೇರಿದವರು -ಕಳೆದ ಶತಮಾನದ ಬ್ರಾಹ್ಮಣೇತರ ಚಳುವಳಿಗೆ ಅಧ್ಯಾತ್ಮಿಕ ಭಿತ್ತಿ ಒದಗಿಸಿದ್ದವರು. ವಿವೇಕಾನಂದರು ಹಿಂದೂ ಧರ್ಮದ ಪುನರುಜ್ಜೀವನದ-ಇದಕ್ಕಾಗಿ ಅವರು ವೈದಿಕ ಚೌಕಟ್ಟನ್ನು ಹಲವಾರು ಬಾರಿ ಮೀರಿನಿಂತರು-ಕಾರ್ಯಕ್ರಮದ ಅಂಗವಾಗಿ ಮುನ್ನೋಡಿದ ಶೂದ್ರ ಭಾರತದ ಪರಿಕಲ್ಪನೆ ಹಾಗೂ ಅದಕ್ಕೆ ಒತ್ತಾಸೆಯಾಗಿ ಮಂಡಿಸಿದ ಸಲಹೆ-ಸೂಚನೆಗಳ ಬಲವಿಲ್ಲದೆ ನಾವು ಇಂದು ಬಹುವಾಗಿ ಉಲ್ಲೇಖಿಸುವ ನಾಲ್ವಡಿ ಕೃಷ್ಣರಾಜ ಒಡೆಯರ 'ಶೂದ್ರ ಪ್ರಜ್ಞೆ' ಚಿಗುರೊಡೆಯುತ್ತಿರಲಿಲ್ಲ ಎಂಬುವುದನ್ನು ನಾವೇಕೆ ಗಮನಿಸುವುದಿಲ್ಲ? ಹಾಗೆಯೇ, ವಿವೇಕಾನಂದರ ಕೇರಳ ಯಾತ್ರೆಯೇ ಆಧುನಿಕ ಕಾಲದ ಶೂದ್ರಸಂತ ನಾರಾಯಣ ಗುರುಗಳ 'ಒಂದೇ ಕುಲ, ಒಂದೇ ದೈವ' ಚಳುವಳಿಗೆ ನಾಂದಿ ಹಾಡಿದ್ದು ಎಂಬುದನ್ನು ನಾವೇಕೆ ಮರೆಯುತ್ತೇವೆ? ಇಂತಹ ಮರೆವುಗಳೇ ಹಿಂದುಳಿದ ವರ್ಗಗಳ ಚಳುವಳಿಯನ್ನು ರಾಜಕೀಯ ಅಧಿಕಾರ-ಉದ್ಯೋಗ ಮೀಸಲಾತಿ ಎಂಬೆರಡು ಅಂಶಗಳ ಬೇಡಿಕೆಯನ್ನಾಧರಿಸಿದ ಕಾರ್ಮಿಕ ಸಂಘದ ಮಟ್ಟಕ್ಕೆ ತಂದು ನಿಲ್ಲಿಸಿರುವುದು ಇಂದು ಕಾರ್ಮಿಕ ಸಂಘಗಳಿಗೆ ಏನು ಗತಿ ಬಂದಿದೆ ಮತ್ತು ಏಕೆ ಈ ಗತಿ ಬಂದಿದೆ ಎಂದು ಯೋಚಿಸಿದರೆ, ಈ ಮರೆವು ಎಷ್ಟು ದುಬಾರಿ ಎಂಬುದು ಗೊತ್ತಾಗುತ್ತದೆ.

ಬುದ್ಧ-ಬಸವ-ವಿವೇಕಾನಂದ-ನಾರಾಯಣಗುರುಗಳನ್ನು ನೆನೆಸಿಕೊಳ್ಳುವುದು ಎಂದರೆ ಮುಖ್ಯವಾಗಿ ಎರಡು ವಿಷಯಗಳನ್ನು ನೆನೆಪಿಸಿಕೊಂಡಂತೆ. ಒಂದು ಅವರೆಲ್ಲರೂ ಇಡೀ ಸಮಾಜವನ್ನು ಮುನ್ನಡೆಸುವ 'ಇಡಿ' ನಾಯಕರಾಗಿದ್ದರು. ಎಂದೂ ವರ್ಗದ, ಸಮಾಜದ ಒಂದು ಭಾಗದ 'ಬಿಡಿ' ನಾಯಕರಾಗಿ ಗುರುತಿಸಿಕೊಂಡು ತಮ್ಮ ದರ್ಶನವನ್ನು ರೂಪಿಸಿಕೊಡಲಿಲ್ಲ. ಎರಡು, ಅವರು ಅಧ್ಯಾತ್ಮವಾದಿಗಳಾಗಿದ್ದರು. ಅಧ್ಯಾತ್ಮ ಎಂದರೆ ಕೆಲವರು ಹೇರುವಂತೆ ಅಮೂರ್ತ ಚಿಂತನೆ ಎಂದಲ್ಲ. ಬದಲಾಗಿ ಅಮೂರ್ತಗಳ

ಬುದ್ಧ-ಬಸವ-ವಿವೇಕಾನಂದ-ನಾರಾಯಣ ಗುರುಗಳನ್ನು ನೆನೆಸಿಕೊಳ್ಳುವುದು ಎಂದರೆ ಮುಖ್ಯವಾಗಿ ಎರಡು ವಿಷಯಗಳನ್ನು ನೆನೆಪಿಸಿಕೊಂಡಂತೆ. ಒಂದು ಅವರೆಲ್ಲರೂ ಇಡೀ ಸಮಾಜವನ್ನು ಮುನ್ನಡೆಸುವ 'ಇಡಿ' ನಾಯಕರಾಗಿದ್ದರು. ಎಂದೂ ವರ್ಗದ, ಸಮಾಜದ ಒಂದು ಭಾಗದ 'ಬಿಡಿ' ನಾಯಕರಾಗಿ ಗುರುತಿಸಿಕೊಂಡು ತಮ್ಮ ದರ್ಶನವನ್ನು ರೂಪಿಸಿಕೊಡಲಿಲ್ಲ.

ಮೂರ್ತಿ ಕಾಣದ ಸಾಹಸವದು. ಅಂದರೆ, ಅವರು ಎಲ್ಲವನ್ನೂ ಏಕೆ ಮತ್ತು ಹೇಗೆ ಎಂಬ ಪ್ರಶ್ನೆಗಳ ಆಧಾರದ ಮೇಲೆ ಅವುಗಳ ತಾಳಿಕೆ-ಬಾಳಿಕೆಗಳನ್ನು ನೋಡುವವರಾಗಿದ್ದರು. ಉದಾಹರಣೆಗೆ ಆಸ್ತಿ, ಅಧಿಕಾರಗಳು ಏಕೆ ಮತ್ತು ಹೇಗೆ ಎಂಬ ಪ್ರಶ್ನೆಗಳನ್ನು ಎದುರುಗೊಳ್ಳದೆ ಅದಕ್ಕೆ ಅಸ್ತಿತ್ವವೇ ಇಲ್ಲ ಎಂದು ಪ್ರತಿಪಾದಿಸುವವರಾಗಿದ್ದರು. ಹಾಗಾಗಿಯೇ ಅವರೆಲ್ಲರೂ ಅವರ ದಿನಗಳಲ್ಲಿ ಕಟು ಸಾಮಾಜಿಕ ವಾಸ್ತವವೆನಿಸಿದ್ದ ಜಾತಿ ಪದ್ಧತಿಯನ್ನು ಅಲ್ಲಗೆಳೆದೂ ಉಳಿದು ಬೆಳೆದರು. ನಮ್ಮ ತನಕವೂ ತಲುಪಿದರು. ಆದುದರಿಂದ ಇಂದು ಆಸ್ತಿ-ಅಧಿಕಾರಗಳ ನೆಲೆಗಳ ಮೇಲೆ ನಿಂತು ಬೆಳೆಯ ಬಯಸುತ್ತಿರುವ 'ಅಹಿಂದ' ತನ್ನ ಅಧ್ಯಾತ್ಮವಾದಿ ಪರಂಪರೆಯೊಂದಿಗೆ ತನ್ನನ್ನೂ ಜೋಡಿಸಿಕೊಂಡು ತನ್ನ ದಿಕ್ಕು-ದೆಸೆಗಳನ್ನು ನಿರ್ಧರಿಸಿಕೊಳ್ಳದೇ ಹೋದರೆ, ಬಹುಬೇಗನೆ ಕೊಳೆತು ಕಳೆದು ಹೋಗುವ ಅಪಾಯವನ್ನು ಎದುರಿಸುತ್ತದೆ.

ಕರ್ನಾಟಕದ ಹಿಂದುಳಿದ ವರ್ಗಗಳ ತಾಯಿ ಚಳುವಳಿ ಎನಿಸಿರುವ ಬ್ರಾಹ್ಮಣೇತರ ಚಳುವಳಿಯ ಮೊದಲ ಬಲಿ ಕನ್ನಡನಾಡು ಕಂಡ ಮಹಾಮೇಧಾವಿಯೂ, ಜಾತ್ಯತೀತರೂ, ದಕ್ಷರೂ ಆಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರು ಎಂಬುದನ್ನು ನಾವು ಮರೆಯದಿರೋಣ. ಅಂತಹ ಬಲಿಯನ್ನುಂಡ ಚಳುವಳಿಗೆ ಎಂತಹ ದೊಡ್ಡ ಜವಾಬ್ದಾರಿ ಇರಬೇಕಾಗುತ್ತದೆ! ಜಾತಿ ಎಂಬುದೇ ಬ್ರಾಹ್ಮಣೇತರರಿಗೆ, ನಿರ್ದಿಷ್ಟವಾಗಿ ಇಂದು ಹಿಂದುಳಿದ ವರ್ಗಗಳಿಗೆ ಅನ್ಯಾಯಕ್ಕೆ ಕಾರಣವಾಗಿದ್ದರೆ, ಅದನ್ನೇಕೆ ಬಿಟ್ಟು ಬಿಡಬಾರದು? ಜಾತಿಯ ಮರ್ಮವೇ ಅದು. ಅದರಲ್ಲಿನ ಶ್ರೇಣೀಕರಣದ ನೋವು-ಅವಮಾನ-ಅನ್ಯಾಯಗಳು ನಮಗೆ ಮಾತ್ರ; ನಮಗಿಂತ ತಳಗಿನವರಲ್ಲಿ ಅದು ಇನ್ನೂ ಹೆಚ್ಚು ನೋವು ಅವಮಾನ ಅನ್ಯಾಯಗಳನ್ನು ಎಸಗುತ್ತದೆ ಎಂಬುದನ್ನು ನಮ್ಮ ಅರಿವಿಗೇ ತರುವುದಿಲ್ಲ. ನಮ್ಮ ಕಣ್ಣು, ಶ್ರೇಣೀಕರಣದಲ್ಲಿ ನಮಗಿಂತ ಮೇಲಿರುವವರು ಪಡೆದಿರುವ ಹಕ್ಕು-ಅಧಿಕಾರ-ಸಂಪತ್ತುಗಳನ್ನು ನಾವು ಪಡೆಯುವ ಕಡೆಗಷ್ಟೇ. ಸಮಾಜ ದಲ್ಲಿ ಹಂಚಿ ಹರಡಿ ಹೋಗದಿದ್ದಲ್ಲಿ, ಆ ಹಕ್ಕು-ಅಧಿಕಾರ-ಸಂಪತ್ತುಗಳು ಕೆಡುಕನ್ನಷ್ಟೇ ಉಂಟುಮಾಡುವುವು ಎಂಬ ಪರಿವೇ ನಮಗಿಲ್ಲ. ಅಂದರೆ ಜಾತಿ ನಮ್ಮ ಮನಸ್ಸುಗಳನ್ನೇ, ನಮ್ಮ ಚಿಂತನಾಕ್ರಮವನ್ನೇ ಶ್ರೇಣೀಕರಿಸಿಗೊಳಿಸಿ ಬಿಟ್ಟಿದೆ. ಹಾಗಾಗಿಯೇ ಬ್ರಾಹ್ಮಣರ ಅಧಿಕಾರದ ಮೇಲಷ್ಟೆ ಕಣ್ಣಿಟ್ಟ ಕಳೆದ ಶತಮಾನದ ಬ್ರಾಹ್ಮಣೇತರ ಚಳುವಳಿಗೆ ಸಂಖ್ಯಾಬಲವಿದ್ದ ಜಾತಿಗಳಾಚೆಗೆ ಕಣ್ಣು ಹಾಯಿಸುವ ವ್ಯವಧಾನವೇ ಉಂಟಾಗಲಿಲ್ಲ. ಅಷ್ಟೇ ಅಲ್ಲ ಗಣನೀಯ ಸಂಖ್ಯಾಬಲವಿದ್ದ ದಲಿತರನ್ನು ತನ್ನವರೆಂದು ಭಾವಿಸುವ ಹೃದಯವನ್ನೇ ಪಡೆಯಲಿಲ್ಲ.

ಬ್ರಾಹ್ಮಣೇತರ ಚಳುವಳಿಯ ನಾಯಕರಲ್ಲಿ ಮುನ್ನೋಟವಿದ್ದ ಏಕೈಕ ನಾಯಕ ಸಿ.ಆರ್. ರೆಡ್ಡಿಯವರು ಬ್ರಾಹ್ಮಣೇತರರಿಗೆ ದೊರಕುವ ಸವಲತ್ತುಗಳು ದಲಿತರಿಗೂ ದೊರಕಬೇಕೆಂದಾಗ- ಅವರಿಗೆ ಶಾಲಾ ಪ್ರವೇಶದ ಹಕ್ಕನ್ನು ಪ್ರಸ್ತಾಪಿಸಿದಾಗ-ಬ್ರಾಹ್ಮಣೇತರರಿಂದಲೇ ಪ್ರಬಲ ವಿರೋಧವುಂಟಾಗಿ, ಅವರು ಹತಾಶಾರಾಗಿ ರಾಜ್ಯವನ್ನೇ ಬಿಟ್ಟು ಹೋದರು. ಆದರೆ ವಿವೇಕಾನಂದರಿಂದ ಅಧ್ಯಾತ್ಮಿಕ ಪ್ರೇರಣೆ ಪಡೆದಿದ್ದ ದೊರೆ ನಾಲ್ವಡಿಯವರ ಹಾಗೂ ಮೇಲ್ಜಾತಿಗಳನ್ನೇ ಮೇಲಕ್ಕೆ ತಂದು ಕೂರಿಸುವ ವಿಶ್ವೇಶ್ವರಯ್ಯನವರ ಕೈಗಾರಿಕಾ ಪ್ರಧಾನವಾದ ಆರ್ಥಿಕ ನೀತಿಗೆ ವಿರುದ್ಧವಾಗಿ ಕೃಷಿ ಮತ್ತು ಕೈಕಸುಬು ಪ್ರಧಾನವಾದ ಆರ್ಥಿಕ ಹಾಗೂ ಆಡಳಿತ ನೀತಿಯನ್ನು ಪ್ರತಿಪಾದಿಸಿ, ಬ್ರಾಹ್ಮಣೇತರ ಜಾತಿಗಳ ಸಹಾನುಭೂತಿ ಗಳಿಸಿದ್ದ ದಿವಾನ್ ಕಾಂತರಾಜ ಅರಸರ ತಾರ್ಕಿಕ ಪ್ರೇರಣೆಯ ಹಿಂದಿದ್ದ ದೃಢನಂಬಿಕೆಗಳಿಂದಾಗಿ ಪ್ರಭುತ್ವದ ಕಡೆಯಿಂದ ಅಸ್ಪೃಶ್ಯರನ್ನು ಜನಸಮುದಾಯದ ಮುಖ್ಯ ಧಾರೆಗೆ ತರುವ ವಿಧಾಯಕ ಕ್ರಮಗಳು ಮುಂದುವರೆದುವಾದರೂ ಅವಕ್ಕೆ ಬ್ರಾಹ್ಮಣೇತರ ಚಳುವಳಿಯ ಬೆಂಬಲ ಸಿಗಲಿಲ್ಲ. ಬ್ರಾಹ್ಮಣರ ಬೆಂಬಲವಂತೂ ಇಲ್ಲವೇ ಇಲ್ಲ. ವಿಚಿತ್ರವೆಂದರೆ ಮತ್ತೆ ಮೈಸೂರು ಸಂಸ್ಥಾನದಲ್ಲಿ ಇಂತಹ ವಿಧಾಯಕ ಕ್ರಮಗಳನ್ನು ಜನ ಸಮುದಾಯದ ಕಡೆಯಿಂದ ಕೈಗೆತ್ತಿಕೊಂಡವರೆಂದರೆ ನಂತರದ ದಿನಗಳಲ್ಲಿ ಗಾಂಧೀಜಿ ಯಿಂದ ಪ್ರೇರಣೆ ಪಡೆದ ಕುದ್ಮಲ್ ರಂಗರಾವ್ ಹಾಗೂ ನರಸಿಂಹ ಅಯ್ಯಂಗಾರ್‌ರಂತಹ ಬ್ರಾಹ್ಮಣರೇ.

ಹೀಗಾಗಿ ಬ್ರಾಹ್ಮಣೇತರ ಚಳುವಳಿ, ಸವಲತ್ತುಗಳು ಸಿಕ್ಕಂತೆಲ್ಲ ಬ್ರಾಹ್ಮಣೇತರರ ಜಾತಿವಾದಿ ಚಳುವಳಿಯಾಗಿ ಮಾರ್ಪಟ್ಟು ಜಾತಿಗುಂಪುಗಳ ಬಡಕು ರಾಜಕಾರಣವೇ ಮೇಲುಗೈ ಪಡೆದು ಅವುಗಳ ಮುಖಪಕ್ಷವಾದ ಪ್ರಜಾಮಿತ್ರ ಮಂಡಳಿಯೂ ದುರ್ಬಲಗೊಳ್ಳುತ್ತ ಹೋಗಿ ಅಂತಿಮವಾಗಿ ತನ್ನ ಚಹರೆಗಳನ್ನು ಮೈಸೂರು ಕಾಂಗ್ರೆಸ್‌ನಲ್ಲಿ ಕರಗಿಸಿಕೊಂಡಿತು. ಈ ಪ್ರವೃತ್ತಿಯ ಮುಂದುವರಿಕೆಯೇ

ಇಂದಿನ ಒಳಮೀಸಲಾತಿ ಪ್ರಸ್ತಾವನೆ. ಈ ಒಳಮೀಸಲಾತಿ ಕುರುಬ-ಈಡಿಗರಿಗಷ್ಟೇ ನಿಲ್ಲುವಂತಹುದೇ? ಅದಕ್ಕೆ ನಿಲುಗಡೆ ಎಂಬುದಿದೆಯೇ? ಆ ನಿಲುಗಡೆಯನ್ನು ಅದು ತಲುಪುವ ವೇಳೆಗೆ ಅದು ಸಮಾಜದ ಎಷ್ಟೋ 'ಒಳ'ಗಳನ್ನು ಕೊರೆಯುತ್ತ ಹೋಗಬಹುದು? ಈ ಕಡೆ ಗಮನವಿರದ ಯಾವುದೇ ಚಳುವಳಿ ಸಾಮಾಜಿಕ ಚಳುವಳಿ ಎನ್ನಿಸಿಕೊಳ್ಳಲಾರದು. ನಮ್ಮ ಕಣ್ಮುಂದೆಯೇ ಇತ್ತೀಚಿನ ದಾರುಣ ಉದಾಹರಣೆ ಇದೆ. ಕರ್ನಾಟಕ ಕಂಡ ಅತ್ಯಂತ ಸಮರ್ಥ ಹಾಗೂ ನ್ಯಾಯಯುತ ಚಳುವಳಿ ಎನ್ನಿಸಿಕೊಂಡಿದ್ದ ದಲಿತ ಚಳುವಳಿಯನ್ನು ಬಲಿತೆಗೆದುಕೊಂಡಿದ್ದಾದರು ಯಾವುದು?

ಜಾತಿ ಎಂದರೆ ತರತಮ. ಇದನ್ನಿಟ್ಟುಕೊಂಡು ಸಮಾನತೆಯಡೆಗೆ ಚಳುವಳಿ ನಡೆಸುವುದು ಸಾಧ್ಯವೆ? ಜಾತಿಯನ್ನಿಟ್ಟುಕೊಂಡೇ ಎಲ್ಲ ಜಾತಿಗಳಿಗೂ ಸಮಾನ ಅಧಿಕಾರ ಸಾಧ್ಯವೇ? ಅಧಿಕಾರವೆಂದರೇನು-ಅದೇನು ಅಂಕಗಣಿತದ ಆಟವೇ, ಲೆಕ್ಕಾಚಾರದಂತೆ ಹಂಚಲು? ದೇವರಾಜ ಅರಸರ ಹೆಸರು ಹೇಳುತ್ತೇವೆ. ಅದೇ ಉಸುರಿನಲ್ಲಿ ಅವರು ಹಿಂದುಳಿದ ಜಾತಿಗೆ ಸೇರಿದವರಲ್ಲ ಎಂದೂ ಹೇಳುತ್ತೇವೆ! ಅದೇನೇ ಇರಲಿ, ದೇವರಾಜ ಅರಸರ ಹಿಂದುಳಿದ ಜಾತಿಗಳ ಪ್ರಗತಿಪರ ರಾಜಕಾರಣ ಅವರ ಕಾಲದಲ್ಲೇ, ಅವರೇ ಅದಕ್ಕೆ ಬಲಿಯಾಗುವ ರೀತಿಯಲ್ಲಿ ಏಕೆ ಅವಸಾನವಾಯಿತು? ಅರಸರು ಒಂದು ಕಡೆ ಈ ಪ್ರಗತಿಪರ ರಾಜಕಾರಣ ನಡೆಸಲು, ಇನ್ನೊಂದೆಡೆ ಭ್ರಷ್ಟಾಚಾರವನ್ನು ಸಂಸ್ಥೀಕರಿಸುವ ಕೆಲಸವನ್ನು ಮಾಡುವ ಅನಿವಾರ್ಯತೆಗೂ ಈಡಾಗಬೇಕಾಯಿತು ಎಂಬುದನ್ನು ಮರೆಯದಿರೋಣ. ಇದರ ಪರಿಣಾಮ ಎಂತಹುದು ಎಂಬುದನ್ನು ಇಲ್ಲಿ ವಿವರಿಸುವ ಅಗತ್ಯವಿಲ್ಲ. ಶೀಲವಿಲ್ಲದ ಯಾವುದೇ ಚಳುವಳಿ ಬೆಳೆಯಲಾರದು. ಇದು ದೇವರಾಜ ಅರಸರ ರಾಜಕಾರಣದ ದುರಂತದಿಂದ ನಾವು ಕಲಿಯಬೇ ಕಾದ ಪಾಠ. ಸಾಮಾಜಿಕ ನ್ಯಾಯವೆಂಬುದು ಕೇವಲ ಸಮಾಜದ ಕೆಲವರ್ಗಗಳಿಗೆ ಕೆಲ ಸವಲತ್ತುಗಳನ್ನೋ, ಅಧಿಕಾರದ ನಾಯಕತ್ವವನ್ನೋ ಕಲ್ಪಿಸಿ ಕೊಡುವುದಲ್ಲ. ಇಡೀ ಸಮಾಜದ ಒಳಿತನ್ನು ಅನುಸಂಧಾನಿಸಿಕೊಂಡು ರೂಪಿಸಿಕೊಡಬೇಕಾದ/ಪಡೆಯಬೇಕಾದ ನ್ಯಾಯ.

ಇಂದು ಸಿದ್ಧರಾಮಯ್ಯನವರು ದೇವೇಗೌಡರ ಕುಟುಂಬ ರಾಜಕಾರಣದ ವಿರುದ್ಧ ಗುಡುಗುತ್ತಿದ್ದಾರೆ. ಅದೇ ತಮ್ಮ ಪದಚ್ಯುತಿಗೆ ಕಾರಣವಾಯಿತು ಎಂದೂ ಹೇಳುತ್ತಿದ್ದಾರೆ. ನಿಜವಿರಬಹುದು. ಕುಟುಂಬ ರಾಜಕಾರಣದ ನೆಲೆಗಳಾದರೂ ಯಾವುವು? ಜಾತಿ-ಹಣ-ಅಧಿಕಾರದ ಪರಸ್ಪರ ಸಂಬಂಧಗಳು ಯಾರಾದರೂ ತಮ್ಮ ಮಕ್ಕಳಿಗೇ ರಾಜಕೀಯ ವಾರುಸುದಾರಿಕೆಗಾಗಿ ಏಕೆ ಹಂಬಲಿಸುವರು? ಏಕೆಂದರೆ ಅಲ್ಲಿ ಹಣ-ಅಧಿಕಾರವಿದೆ; ಅದಕ್ಕೆ ಜಾತಿ ರಾಜಕಾರಣದ ಆಧಾರವಿದೆ; ಇದೊಂದು ಸಾಮಾಜಿಕ ಶ್ರೇಣೀಕರಣವಿರುವ ಊಳಿಗ ವ್ಯವಸ್ಥೆಯಿಂದ ಪೋಷಿಸಲ್ಪಟ್ಟ ಮತ್ತು ಅದರಿಂದ ಮಾತ್ರ ಉಳಿದುಕೊಳ್ಳಬಹುದಾದ ಸಾಮ್ರಾಜ್ಯ. ಆದುದರಿಂದ ಸಿದ್ಧರಾಮಯ್ಯನವರು 'ಅಹಿಂದ'ದ ನಾಯಕರಾಗಿ ಮೊದಲು ಮಾಡಬೇಕಾದ ಕೆಲಸ, ರಾಜಕಾರಣದಲ್ಲಿನ ಜಾತಿ-ಹಣ-ಅಧಿಕಾರಗಳ ಗುದಮುರಿಗೆಯನ್ನು ನಾಶ ಮಾಡುವ ಸಾಹಸಕ್ಕೆ ಕೈ ಹಾಕುವುದೇ ಆಗಿದೆ. ಇಲ್ಲದಿದ್ದರೆ ಸ್ವತಃ ಅವರೂ ಸಹಜವಾಗಿಯೇ ತಮ್ಮದೇ ಕುಟುಂಬ ರಾಜಕಾರಣಕ್ಕೆ ಬಲಿಯಾಗಬೇಕಾಗುತ್ತದೆ.

ಈ ಸಾಹಸಕ್ಕೆ ಕೈ ಹಾಕಬಯಸುವವರು ಒಂದು ಹೊಸ ರಾಜಕೀಯ ದರ್ಶನವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಇಲ್ಲದೇ ಹೋದರೆ ರಾಜಕೀಯ ಉಳಿವಿಗಷ್ಟೇ ಅನುಕೂಲಿತವಾದ ಪ್ರತಿಕ್ರಿಯೆಗಳಿಗೆ ಮೊರೆ ಹೋಗಬೇಕಾಗುತ್ತದೆ. ಉದಾಹರಣೆಗೆ ಇನ್‌ಫೋಸಿಸ್‌ನ ನಾರಾಯಣ ಮೂರ್ತಿ ಅವರ ಭೂದಾಹದ ಬಗ್ಗೆ ದೇವೇಗೌಡರು ಮಾಡಿದ ಟೀಕೆಯನ್ನು ನನ್ನ ಶತ್ರುವಿನ ಶತ್ರು ನನ್ನ ಮಿತ್ರ ಎಂಬ ಸರಳೀಕೃತ ರಾಜಕಾರಣದ ಆಧಾರದ ಮೇಲೆ ಖಂಡಿಸುವ ಅನಿವಾರ್ಯತೆಗೆ, ಇಕ್ಕಟ್ಟಿಗೆ ಸಿಕ್ಕಿಕೊಳ್ಳಬೇಕಾಗುತ್ತದೆ. ಸಿದ್ಧರಾಮಯ್ಯನವರು ಮಾಡಿದ್ದೂ ಅದನ್ನೇ. ಇಂದು ಜಾಗತೀಕರಣ ನಮ್ಮ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ ಬೇರುಗಳನ್ನೇ ಕತ್ತರಿಸಿ ಹಾಕುತ್ತಾ, ನಮ್ಮ ಕಾಲಕೆಳಗಿನ ನೆಲವನ್ನೇ ಜರುಗಿಸ ಹೊರಟಿದೆ. ಸರ್ಕಾರಿ ಕಾಮಗಾರಿ ಗುತ್ತಿಗೆದಾರರು, ನಂತರ ಹೆಂಡದ ದೊರೆಗಳು ನಡೆಸುತ್ತಿದ್ದ ಸಮಾನಾಂತರ ಸರ್ಕಾರಗಳನ್ನು ರೂಪಿಸುತ್ತಿದ್ದ ನಾವು ಈಗ ಐ.ಟಿ. ಉದ್ಯಮದ ಗುತ್ತೇದಾರರು ಕಟ್ಟುತ್ತಿರುವ ಸಮಾನಾಂತರ ಪ್ರಪಂಚವನ್ನು ಬೆರಗುಗಣ್ಣುಗಳಿಂದ ನೋಡುತ್ತಾ ಕೂತಿದ್ದೇವೆ.

ನೀವು ವಶಪಡಿಸಿಕೊಳ್ಳಲೆತ್ನಿಸುತ್ತಿರುವ ಸರ್ಕಾರಕ್ಕೆ ಈ ಸಮಾನಾಂತರ ಪ್ರಪಂಚದಲ್ಲಿ ಮೂರು ಕಾಸಿಗೂ ಬೆಲೆ ಇರಲಾರದು. ಇಷ್ಟು ಆಳವಾಗಿ ಅಥವಾ ದೀರ್ಘಕಾಲೀನವಾಗಿ ಯೋಚನೆ ಮಾಡುವಷ್ಟು ವ್ಯವಧಾನ 'ಅಹಿಂದ'ಕ್ಕೆ ಇನ್ನೂ ಸಿದ್ಧಿಸಿಲ್ಲವೆಂದೇ ಸದ್ಯಕ್ಕೆ ಇಟ್ಟುಕೊಳ್ಳೋಣ. ಆದರೆ ಭ್ರಷ್ಟಾಚಾರ ವಿರೋಧಿ ಕಾರ್ಯಾಚರಣೆಯಲ್ಲಿ ಎದುರಾಗಿರುವ ಅಸಹಾಯಕತೆ ಬಗ್ಗೆ ನ್ಯಾ.ವೆಂಕಟಾಚಲ ದಿನನಿತ್ಯ ಹಾಕುತ್ತಿರುವ ಒಂಟಿ ಕೂಗಿಗೆ ಒಂದು ಬೆಂಬಲದ

ಮಾತನ್ನು ಆಡಲಾಗದಷ್ಟು 'ಸಾಮಾಜಿಕ ನ್ಯಾಯ ರಾಜ
ರಣ'ದ ಗರ ಬಡಿದುಕೊಂಡಂತೆ, ಮಿಕ್ಕೆಲ್ಲದಕ್ಕೂ ಅಸೂ
ವಾಗಿ ಹೋಗಿರುವಂತೆ ತೋರುವ 'ಅಹಿಂದ'ದ ನಾ
ಕತ್ವಕ್ಕೆ ಮುಖ್ಯಮಂತ್ರಿ ಪದವಿ ಸಿಕ್ಕಿಯಾದರೂ ಫಲವೇನ
ಫಲವಿದ್ದರೂ ಅದನ್ನು ಉಣ್ಣುವವರು ಯಾರು? ಅದ
ನಾನು ಮೊದಲೇ ಹೇಳಿದ್ದು, ಅಧಿಕಾರದ ಪರಿಕಲ್ಪನೆಯ
ಅಧ್ಯಾತ್ಮೀಕರಿಸಿಕೊಳ್ಳದೆ-ಕನಿಷ್ಟ ಕಾಂತರಾಜೇ ಅರ
ಮಟ್ಟಕ್ಕಾದರೂ-ಅಂದರೆ ನನಗೆ ಅಧಿಕಾರ ಏಕೆ ಮ
ಹೇಗೆ ಪ್ರಶ್ನೆಗಳನ್ನು ಎದುರಿಸದೆ ಮಾಡುವ ಯಾವು
ರಾಜಕಾರಣ, ಅದು ಮುಂದುವರಿದವರೇ ಮಾಡ
ಹಿಂದುಳಿದವರೇ ಮಾಡಲಿ, ಅದರ ಫಲಾನುಭವಿಗ
ಕೆಲವೇ ಕೆಲವರು ಮಾತ್ರ, ಮಿಕ್ಕವರು ಕೊಸರಿಗ
ಕಾಯುತ್ತ ಕೂತಿರಲೇಬೇಕಷ್ಟೆ.

ಯಾರೇ ಏನೇ ಹೇಳಲಿ, ಹೊಸ ರಾಜಕಾರಣ
ಸುಪ್ತಬಯಕೆ ಜನರಲ್ಲಿಂದು ಒಡಮೂಡಿದೆ. ಅವ
ಹಳೇ, ಜಡ್ಡುಗಟ್ಟಿದ ರಾಜಕಾರಣದಲ್ಲಿ ಮುಳುಗಿದ
ತೋರುತ್ತಿದ್ದರೂ, ಹೊಸ ರಾಜಕಾರಣದ ನಾಯಕನಿಗ
ಕಾಯುತ್ತಿದೆ. ಆ ತವಕ ಇಂದಿನ ಸಾಮಾಜಿಕ ಅಶಾಂ
ಗೊಂದಲದ ವಾತಾವರಣದಲ್ಲಿ ಯಾವುದೋ ಒಂ
ತರಂಗಾಂತರದಲ್ಲಿ ಅನುರಣಿಸುತ್ತಿದೆ. ಈ ತರಂಗಾಂತ
ಕಿವುಡಾಗಿರುವವರಿಗೆ ಹಣ ಮತ್ತು ಜಾತಿ ಶಕ್ತಿಗಳಾಚೆ
ರಾಜಕಾರಣದ ಸಾಧ್ಯತೆಯೇ ಹೊಳೆಯಲಾರದು. ಅವ
ಹೊಸ ರಾಜಕಾರಣವನ್ನೂ ಮಾಡಲಾರರು. ಸಿದ್ಧರಾ
ಯ್ಯನವರಿಗೆ ಇದೊಂದು ಐತಿಹಾಸಿಕ ಸಂದರ್ಭ, ಹೊ
ರಾಜಕಾರಣದ ನಾಂದಿ ಹಾಡಲು. ಅಪಾರ ಹಣ ಹಾ
ಜಾತಿ ಲೆಕ್ಕಾಚಾರವಿಲ್ಲದ ಹೊಸ ರಾಜಕಾರಣ ಮಾಡು
ಧೈರ್ಯವನ್ನು ವಿವೇಕವನ್ನು ಅವರು ತೋರಬೇಕಿ
ಖಂಡಿತ ಕರ್ನಾಟಕ ಅವರಿಗೆ ಸ್ಪಂಧಿಸಲಿದೆ-ಅವರ
ಮುಖ್ಯಮಂತ್ರಿ ಮಾಡಿ ಬಿಡುತ್ತದೆ ಎಂದೇನೂ ನಾ
ಹೇಳುತ್ತಿಲ್ಲ. ಹಾಗೇ ಅವರು ಮುಖ್ಯಮಂತ್ರಿಯಾಗಲಾರ
ಎಂದೂ ಹೇಳುತ್ತಿಲ್ಲ. ಅದಕ್ಕಿಂತ ದೊಡ್ಡ ಸ್ಥಾನ ಅವ
ನೀಡಲಿದೆ. ಗೋಪಾಲಗೌಡರ ಉದಾಹರಣೆ ನ
ಮುಂದೆಯೇ ಇದೆ. ಆ ಸ್ಥಾನವನ್ನು ಕಲ್ಪಿಸಿಕೊಳ್ಳ
ತಾಕತ್ತು ಸಿದ್ಧರಾಮಯ್ಯ ಅವರಲ್ಲಿ ಸಂಚಯವಾಗಿ
ಎಂದು ಭಾವಿಸಿಯೇ ಇಷ್ಟು ಮಾತುಗಳನ್ನು ನಾ
ಆಡಿರುವೆ.

ಇಂತಹ ರಾಜಕಾರಣವು ಸಮಗ್ರವೂ, ಜಾ
ತೀತವೂ ಆಗಿರಬೇಕಾಗುತ್ತದೆ. ಗಾಂಧೀಜಿ ಅ
ಹೊಳಹು ಬಿಟ್ಟು ಹೋಗಿದ್ದಾರೆ. ಲೋಹಿಯಾ ಹಾ
ಅಂಬೇಡ್ಕರ್ ಅದನ್ನು ವಿಸ್ತರಿಸಿದ್ದಾರೆ. ನಮ್ಮದೇ ಸ್ಥಳೀ
ಪ್ರಯೋಗಗಳಾದ ದಲಿತ ಮತ್ತು ರೈತ ಚಳುವಳಿಗಳು
ವಿಸ್ತರಣೆಯ ಎಡರು-ತೊಡರುಗಳ ಕಡೆ ಬೆಟ್ಟು ಮಾಡಿ
ಇವುಗಳ ಆಧಾರದ ಮೇಲೆ ಕಟ್ಟಿದ ತಾತ್ವಿಕ ನೆಲೆಯ
ಸಿದ್ಧರಾಮಯ್ಯನವರು ರಾಜಕಾರಣ ಮಾಡುವುದಾ
'ಅಹಿಂದ'ಕ್ಕೆ ಜೀವ ಹಾಗೂ ಗೌರವ ಎರಡೂ ಒದಗೀ
ಇಲ್ಲವಾದರೆ 'ಅಹಿಂದ' ಮತ್ತು ಸಿದ್ಧರಾಮಯ್ಯ ಒಟ್ಟಿ
ಅವರಿಗೆ ಮುಖ್ಯಮಂತ್ರಿತ್ವ ದೊರಕಿದರೂ, ಅ
ಜೊತೆಗೇ-ಇತಿಹಾಸದ ಕಸದ ಬುಟ್ಟಿಗೆ ಎಸೆಯಲ್ಪಡುತ್ತಾ

('ಚಿಂತನ ಅಹಿಂದ'ವು ೧೩-೧೧-೨೦೦೫ ರಂ
ಬೆಂಗಳೂರಿನಲ್ಲಿ ಏರ್ಪಡಿಸಿದ್ದ 'ಅಹಿಂದ ಚಳುವಳಿ ಮ
ಸಾಮಾಜಿಕ ಮಾತುಗಳು ಕುರಿತ ವಿಚಾರ ಸಂಕಿರಣ
ಮೊದಲ ಗೋಷ್ಠಿಯ ಅಧ್ಯಕ್ಷ ಭಾಷಣದ ಬರಹ ರೂಪ.)

ದೇವರಾಜ ಅರಸರ ಹಿಂದುಳಿದ ಜಾತಿಗಳ ಪ್ರಗತಿಪರ ರಾಜಕಾರಣ ಅವರ ಕಾಲದಲ್ಲೇ, ಅವರೇ ಅದಕ್ಕೆ ಬಲಿಯಾಗುವ ರೀತಿಯಲ್ಲಿ ಏಕೆ ಅವಸಾನವಾಯಿತು? ಅರಸರು ಒಂದು ಕಡೆ ಈ ಪ್ರಗತಿಪರ ರಾಜಕಾರಣ ನಡೆಸಲು ಇನ್ನೊಂದೆಡೆ ಭ್ರಷ್ಟಾಚಾರವನ್ನು ಸಂಸ್ಥೀಕರಿಸುವ ಕೆಲಸವನ್ನು ಮಾಡುವ ಅನಿವಾರ್ಯತೆಗೂ ಈಡಾಗಬೇಕಾಯಿತು ಎಂಬುದನ್ನು ಮರೆಯದಿರೋಣ. ಇದರ ಪರಿಣಾಮ ಎಂತಹುದು ಎಂಬುದನ್ನು ಇಲ್ಲಿ ವಿವರಿಸುವ ಅಗತ್ಯವಿಲ್ಲ. ಶೀಲವಿಲ್ಲದ ಯಾವುದೇ ಚಳುವಳಿ ಬೆಳೆಯಲಾರದು. ಇದು ದೇವರಾಜ ಅರಸರ ರಾಜಕಾರಣದ ದುರಂತದಿಂದ ನಾವು ಕಲಿಯಬೇಕಾದ ಪಾಠ. ಸಾಮಾಜಿಕ ನ್ಯಾಯವೆಂಬುದು ಕೇವಲ ಸಮಾಜದ ಕೆಲವರ್ಗಗಳಿಗೆ ಕೆಲ ಸವಲತ್ತುಗಳನ್ನೋ, ಅಧಿಕಾರದ ನಾಯಕತ್ವವನ್ನೆ ಕಲ್ಪಿಸುವ ಕೊಡುವುದಲ್ಲ. ಇಡೀ ಸಮಾಜದ ಒಳಿತನ್ನು ಅನುಸಂಧಾನಿಸಿಕೊಂಡು ರೂಪಿಸಿ ಕೊಡಬೇಕಾದ/ಪಡೆಯಬೇಕಾದ ನ್ಯಾಯ.

ಇಕ್ಬಾಲ್

ದಲಿತ ಸಾಹಿತ್ಯ-ಒಂದು ಹಿನ್ನೋಟ

೧೯೭೦ ರ ದಶಕದ ಆದಿಭಾಗದಲ್ಲಿ ನ್ಯೂಯಾರ್ಕ್ ನಗರದ ಉತ್ತರ ಮ್ಯಾನ್‌ಹಾಟನ್ ಪ್ರಾಂತ್ಯದ ಹೇರ್‌ಲಮ್‌ನಲ್ಲಿ ಒಂದು ಮೌನ ಕ್ರಾಂತಿಯಾಯಿತು, ಅದೇ ಹೇರ್‌ಲಮ್ ರೆವಲ್ಯೂಷನ್ (Herlum Revolution). ಅದೊಂದು ಕೊಳಚೆ ಪ್ರದೇಶ (Getto) ಎಲ್ಲರಿಂದಲೂ ತಿರಸ್ಕರಕ್ಕೊಳಗಾಗಿದ್ದ ಪ್ರದೇಶ. ಆಫ್ರಿಕನ್ ಮೂಲದ ಕರಿಯ ನಿವಾಸಿಗಳು ತಮ್ಮ ತಾಯ್ನಾಡು ಮೂಲದ ಕಲೆ, ಸಂಸ್ಕೃತಿಯನ್ನು ಕಲೆಹಾಕಿ ಹಾಡಿ ಕುಣಿದು ಪ್ರದರ್ಶನ ನೀಡಿ ಬಿಳಿಯರನ್ನು ಹುಚ್ಚೆಬ್ಬಿಸುತ್ತಿದ್ದರು. ವಿಶ್ವವಿಖ್ಯಾತ ಜಾಝ್ (Jazz) ಸಂಗೀತ ಹುಟ್ಟಿದ್ದು ಅಲ್ಲಿಂದಲೇ. ಕವಿ ಡ್ಯೂಕ್ ಎಲ್ಲಿಂಗ್ಟನ್ ಮತ್ತಿತರರು ಬೆಳಗಾಗುವುದರೊಳಗೆ ಅಮೆರಿಕದ ತುಂಬಾ ಮನೆಮಾತಾಗಿ ಬಿಟ್ಟರು. ಅವರು ಯಾವ ಹೋರಾಟವನ್ನು ಮಾಡಲಿಲ್ಲ. ಯಾರಿಗೂ ಇಕ್ಕಲಿಲ್ಲ, ಒದೆಯಲಿಲ್ಲ. ಕೀಳರಿಮೆಯನ್ನು ತೊರೆಯಲು ತಮ್ಮ ತಾಯಿಬೇರುಗಳನ್ನು ಹುಡುಕುತ್ತಾ ಹೊರಟರು. ಅಮೆರಿಕಾ ತಲ್ಲಣಿಸಿತು. ಆ ಕ್ರಾಂತಿಯ ಫಲವೇ ಕರಿಯರ ಆರ್ಥಿಕ, ಶೈಕ್ಷಣಿಕ ಮುನ್ನಡೆ.

"ದಲಿತ" ಎಂಬ ಪದ ಈಗ ಹೆಚ್ಚು ಚಾಲ್ತಿಯಲ್ಲಿದೆ. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಈ ಪದ ಕರೆನ್ಸಿ, ಅಂದರೆ ಚಲಾವಣೆ ಪಡೆದುಕೊಂಡಿರುವ ಪದ. ಆದ್ದರಿಂದಲೇ ಏನೋ ಇತ್ತೀಚೆಗೆ ಎಲ್ಲಾ ಭಾಷೆಗಳಲ್ಲಿ ದಲಿತ ಸಾಹಿತ್ಯ, ದಲಿತ ಚಳವಳಿ ಕುರಿತ ವಿಚಾರ ಸಂಕಿರಣ, ಚರ್ಚೆಗಳು ನಡೆಯುತ್ತಿವೆ. ಕನ್ನಡದ ಮಟ್ಟಿಗೆ ದಲಿತ ಸಾಹಿತ್ಯಕ್ಕೆ ಮೂರು ದಶಕಗಳ ಇತಿಹಾಸವಿದೆ. ಮೊದಲನೆ ದಶಕದಲ್ಲಿ ಸಿದ್ಧಲಿಂಗಯ್ಯನವರ ಪ್ರಭಾವದಿಂದ ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸುವ ಉಮೇದಿನಲ್ಲಿ ಸಿಟ್ಟು ಆಕ್ರೋಶಗಳನ್ನು ಮೈದುಂಬಿಕೊಂಡು ಶೂದ್ರ ಭಾಷಿಕ ನೆಲೆಯಿಂದ (ದಯಲೆಕ್ಟ್) ಕಾವ್ಯ ಓತಪ್ರೋತವಾಗಿ ಹರಿದು ಬಂತು. ಅದರಲ್ಲಿ ಕವಿಗಳಲ್ಲದವರೂ ಕವಿಗಳಾಗಲು ಶ್ರಮವಹಿಸಿದರು. ಆದರೆ ಅವರು ಹೆಚ್ಚು ಕಾಲ ಉಳಿಯದಾದರು. ಸಾವಿರಾರು ವರ್ಷಗಳು ಮಣ್ಣಲ್ಲಿ ಮಣ್ಣಾಗಿದ್ದ ಹಸಿಯಾದ ಕಥೆಗಳನ್ನು ದೇವನೂರು ಹೊಸದಾಗಿ ಹೇಳಿ ಯಶಸ್ವಿಯಾದರು. ಚೆನ್ನಣ್ಣವಾಲೀಕಾರ, ಮುಳ್ಳೂರು ನಾಗರಾಜ, ಅರವಿಂದ ಮಾಲಗತ್ತಿ, ಮನಜ ಮುಂತಾದವರ ಒಂದು ಪಡೆಯೆ ನಿರ್ಮಾಣವಾಯಿತು.

ಎರಡನೇ ದಶಕದಲ್ಲಿ ಸಾಮಾಜಿಕ ತುಡಿತಗಳನ್ನು ವ್ಯಕ್ತಪಡಿಸುವ, ದಲಿತ ಲೋಕದ ತೀವ್ರವಾದ ನೋವು ನಲಿವುಗಳನ್ನು, ದಲಿತ ಬದುಕಿನ ಸೂಕ್ಷ್ಮ ಒಳನೋಟಗಳ ಅಭಿವ್ಯಕ್ತಿ ಸಶಕ್ತವಾಗಿ ಮೂಡಿಬಂದಿತು. ಕೆ.ಬಿ.ಸಿದ್ಧಯ್ಯ, ಮೂಡ್ನಾಕೂಡು ಚಿನ್ನಾಸ್ವಾಮಿ, ಸತ್ಯಾನಂದ ಪಾತ್ರೋಟ, ಎಲ್. ಹನುಮಂತಯ್ಯ, ಮೊಗಳ್ಳಿ ಗಣೇಶ ಅವರಂತಹ ಅನೇಕ ಲೇಖಕರು ಈ ನಿಟ್ಟಿನಲ್ಲಿ ಕೆಲಸ ಮಾಡಿದರು. ಈ ಮೂರನೇ ತಲೆಮಾರಿನ ಲೇಖಕರು ನವುರಾದ ಕುಸರಿ ಕೆಲಸದಲ್ಲಿ ತೊಡಗಿದ್ದಾರೆ ಎನ್ನುವುದು ಆಶಾದಾಯಕ ವಿಷಯವಾಗಿದೆ. ಎನ್.ಕೆ. ಹನುಮಂತಯ್ಯ, ಸುಬ್ಬು ಹೊಲೆಯಾರ್, ವಿನಯಾ ನಾಯಕ್ ಇನ್ನೂ ಮುಂತಾದವರ ಒಳ್ಳೆಯ ಲೇಖಕರ ಪಡೆಯೇ ಇದೆ.

೧೯೮೦ ರಲ್ಲಿ ಲಂಕೇಶ, ಅನಂತಮೂರ್ತಿ, ಕೆ. ಮರುಳಸಿದ್ಧಪ್ಪ, ಕಿ.ರಂ. ನಾಗರಾಜ, ಶೂದ್ರ ಶ್ರೀನಿವಾಸ್, ಜಿ.ಕೆ. ಗೋವಿಂದರಾವ್ ಮುಂತಾದವರ ಜೊತೆ ನಾವೆಲ್ಲ ಸೇರಿಕೊಂಡು ಜಾಗೃತ ಸಾಹಿತ್ಯ ಸಮ್ಮೇಳನವನ್ನು ಮಾಡಿದೆವು. ಆಗ ಡಿ.ಆರ್.ನಾಗರಾಜ್, ಯಾವುದೇ ಒಂದು ಚಳವಳಿಯ ಆಯಸ್ಸು ಸುಮಾರು ೧೫ ವರ್ಷಗಳು, ಈಗ ಬಂಡಾಯ ಸಾಹಿತ್ಯ ಚಳವಳಿಯ ಕಾಲ ಮುಗಿಯಿತು ಎಂದು ಹೇಳಿದರು. ಮುಂಬರುವ ಸಾಹಿತ್ಯದ ದಿಕ್ಕನ್ನು ಯಾರೂ ಗುರುತಿಸಲಾಗಲಿಲ್ಲ. ಆದರೆ ಬಂಡಾಯ ತೀಕ್ಷ್ಣವಾದಷ್ಟು ಹೆಚ್ಚು ದಲಿತವಾಗುತ್ತಾಹೋಯಿತು. ದಲಿತ ಸಾಹಿತ್ಯ ತನ್ನ ಜನಪದೀಯ

...ಷ್ಟಿಕೋನ

...ನಕ್ಷರಸ್ಥ ಸಮಾಜದಲ್ಲಿ
...ಾಹಿತ್ಯ ಸೃಷ್ಟಿ ಮಾಡು
...ವುದು ಕತ್ತಲೆ ಕೋಣೆ
...ಯಲ್ಲಿ ಕಪ್ಪು ಬೆಕ್ಕನ್ನು
...ಸೃಷ್ಟಿ ಮಾಡಿದಂತೆ.
...ರಿಣಾಮ ಶೂನ್ಯ.
...ಮ್ಮ ಸಾಹಿತ್ಯ ನಿರುಪ
...ಯೋಗಿ ಎನ್ನುವುದಕ್ಕೆ
...ರ್ನಾಟಕದಲ್ಲಿ ಅಕ್ಷರ
...ಾಸೋಹ ಕಾರ್ಯ
...ಮದ ಅಂಗವಾಗಿ
...ಧ್ಯಾಹ್ನದ ಬಿಸಿಯೂಟ
...ಯೋಜನೆ ಜಾರಿಗೆ
...ಂದಾಗ ಆದ
...ಅವಾಂತರಗಳೇ ಸಾಕ್ಷಿ.
...ಲ ಊರುಗಳಲ್ಲಿ ಊಟ
...ಮಾಡಿದ ಅಮಾಯಕ
...ಮಕ್ಕಳ ನಾಲಿಗೆಯನ್ನು
...ಬೇವಿನ ಎಲೆಯಿಂದ
...ತಿಕ್ಕಿದರು. ಇನ್ನು ಕೆಲವು
...ಕಡೆ ಮಕ್ಕಳಿಗೆ ಗಂಜಳ
...ಕುಡಿಸಿದರು. ಇದೊಂದು
...ಜ್ವಲಂತ ಉದಾಹರಣೆ.
...ಆದ್ದರಿಂದ ಸಾಹಿತ್ಯ ಸೃಷ್ಟಿ
...ಸಂಸ್ಕೃತಿಯ ಒಂದು
...ಭಾಗವಾಗಿ ಇದೆ.

...ಡಾ|| ಮೂಡ್ನಾಕೂಡು
ಚಿನ್ನಸ್ವಾಮಿ

ನೆಲೆಯನ್ನು ವಿಸ್ತರಿಸಿಕೊಳ್ಳುತ್ತಾ ಕಲಾತ್ಮಕತೆಯ ಕಡೆಗೆ ಹೆಚ್ಚು ಗಮನ ಕೊಟ್ಟಿತು. ಈಗ ದಲಿತ ಸಾಹಿತ್ಯ ಸಮೃದ್ಧವಾಗಿದೆ, ಜಗತ್ತಿನ ಗಮನವನ್ನು ಸೆಳೆಯುತ್ತಿದೆ. ಉತ್ತರದ ಹಿಂದಿ ಭಾಷೆಯಲ್ಲಿ ದಲಿತ ಚಳವಳಿಯಾಗಲಿ, ದಲಿತ ಸಾಹಿತ್ಯವಾಗಲಿ ಸಶಕ್ತವಾಗಿ ಬೆಳೆಯಲು ಸಾಧ್ಯವಾಗದೆಹೋಯಿತು. ಆ ರಾಜ್ಯಗಳಲ್ಲಿ ಇನ್ನೂ ಮೂಲಭೂತವಾದ, ಜಾತಿಪದ್ಧತಿ ಮತ್ತು ಅಸ್ಪೃಶ್ಯತೆ ಭೀಕರ ಸ್ವರೂಪದಲ್ಲಿ ಇರುವುದು, ಸಮಾಜ Oppressive ಆಗಿರುವುದು ಅದಕ್ಕೆ ಕಾರಣವಿರಬಹುದು. ಪ್ರಗತಿಪರತೆಯ ಮುಂಚೂಣಿಯಲ್ಲಿರುವ ಮರಾಠಿ ಸಾಹಿತ್ಯವು ಕೂಡಾ ಒಳ್ಳೆಯ ಕಾವ್ಯವನ್ನು ನೀಡಲಾಗಿಲ್ಲವೆಂದು ಹೇಳಲಾಗುತ್ತದೆ. ಅಲ್ಲಿ ಆತ್ಮಕಥೆಗಳದೆ ಭರಾಟೆ. ಕನ್ನಡದಲ್ಲಿ ಅತ್ಯಂತ ಸೃಜನಶೀಲ ಪ್ರಕಾರವೆನಿಸಿಕೊಂಡ ಕಾವ್ಯ ಮತ್ತು ಕಥೆ ಪ್ರಖರವಾಗಿ ಬೆಳೆದಿವೆ. ಇದು ಹೆಮ್ಮೆಯ ವಿಷಯ.

ದುಃಖದ ಸಂಗತಿ ಎಂದರೆ ಈ ಸಾಹಿತ್ಯ ಸೃಷ್ಟಿಯಿಂದ ಸಮಾಜದ ಮೇಲೆ ಯಾವುದೇ ರೀತಿಯ ಪರಿಣಾಮ ಆಗದಿರುವುದು. ಸಾಹಿತ್ಯ ಪರಿಣಾಮಕಾರಿಯಾಗಬೇಕಾದರೆ ಸಮಾಜ ಸಾಕ್ಷರವೂ ಆಗಿರಬೇಕು. ಈ ದೇಶದ ಸಾಕ್ಷರತೆಯ ಪ್ರಮಾಣ ಶೇ. ೪೦ ಅನ್ನು ಮೀರಿಲ್ಲ. ಕೇವಲ ತಮ್ಮ ಸಹಿ ಮಾಡುವುದನ್ನಷ್ಟೆ ಬಲ್ಲವರನ್ನು ಸಾಕ್ಷರ ವರ್ಗಕ್ಕೆ ಸೇರಿಸಿದೆ ಅಂದ ಮೇಲೆ ಸಾಹಿತ್ಯ ಅಭ್ಯಾಸ ಮಾಡುವವರ ಸಂಖ್ಯೆ ಈ ವರ್ಗದ ಶೇ. ೧ ಅಥವಾ ೨ ರಷ್ಟು ಇರಬಹುದು. ಆದ್ದರಿಂದ ಈ ದೇಶದಲ್ಲಿ ಸಾಹಿತ್ಯದಿಂದ ಸಾಮಾಜಿಕ ಕ್ರಾಂತಿ ಕನಸಿನ ಮಾತೆಂದಾಯಿತು. ನನ್ನ ಪ್ರಕಾರ ಇಂತಹ ಅನಕ್ಷರಸ್ಥ ಸಮಾಜದಲ್ಲಿ ಸಾಹಿತ್ಯ ಸೃಷ್ಟಿ ಮಾಡುವುದು ಕತ್ತಲೆ ಕೋಣೆಯಲ್ಲಿ ಕಪ್ಪು ಬೆಕ್ಕನ್ನು ಸೃಷ್ಟಿ ಮಾಡಿದಂತೆ. ಪರಿಣಾಮ ಶೂನ್ಯ. ನಮ್ಮ ಸಾಹಿತ್ಯ ನಿರುಪಯೋಗಿ ಎನ್ನುವುದಕ್ಕೆ ಕರ್ನಾಟಕದಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮದ ಅಂಗವಾಗಿ ಮಧ್ಯಾಹ್ನದ ಬಿಸಿಯೂಟ ಯೋಜನೆ ಜಾರಿಗೆ ಬಂದಾಗ ಆದ ಅವಾಂತರಗಳೇ ಸಾಕ್ಷಿ. ಕೆಲ ಊರುಗಳಲ್ಲಿ ಊಟ ಮಾಡಿದ ಅಮಾಯಕ ಮಕ್ಕಳ ನಾಲಿಗೆಯನ್ನು ಬೇವಿನ ಎಲೆಯಿಂದ ತಿಕ್ಕಿದರು. ಇನ್ನು ಕೆಲವು ಕಡೆ ಮಕ್ಕಳಿಗೆ ಗಂಜಳ ಕುಡಿಸಿದರು. ಇದೊಂದು ಜ್ವಲಂತ ಉದಾಹರಣೆ. ಆದ್ದರಿಂದ ಸಾಹಿತ್ಯ ಸೃಷ್ಟಿ ಸಂಸ್ಕೃತಿಯ ಒಂದು ಭಾಗವಾಗಿ ಇದೆ. ಸಾಹಿತಿಗಳು ಉದಾಹರಿಸಲ್ಪಡುವುದಕ್ಕಾಗಿ ಇದ್ದಾರೆ ಎಂದು ತಿಳಿದುಕೊಳ್ಳಬೇಕಾಗುತ್ತದೆ.

ದಲಿತ ಸಾಹಿತ್ಯ ಈಗ ವಾಸ್ತವವಾದಿ ನೆಲೆಯಿಂದ ಸ್ವಲ್ಪ ಮೇಲೆ ಜಿಗಿಯಬೇಕಾಗಿದೆ. ಅದಕ್ಕೆ ವಚನಸಾಹಿತ್ಯ ಪ್ರೇರಣೆಯಾಗಬೇಕು. ಅಲ್ಲಮನ ಅಲೌಕಿಕತೆ, ಬಸವಣ್ಣನ ಲೌಕಿಕ, ಅಕ್ಕಮಹಾದೇವಿಯ ಚೇತನವನ್ನು ಬಳಸಿಕೊಂಡು ಒಂದು ರೀತಿಯ ಅಂತರ್ಜಾತೀಯ ಸಾಹಿತ್ಯವನ್ನು ಸೃಷ್ಟಿಮಾಡಬೇಕಾಗಿದೆ. ಇಂಡಿಯಾ ದೇಶದಲ್ಲಿ ಅನುಭವ ಜಗತ್ತು ಜಾತಿನಿಷ್ಟವಾಗಿದೆ. ಆದ್ದರಿಂದ ನಮ್ಮ ಸಾಹಿತ್ಯ ಪರಂಪರೆಯು ಜಾತಿನಿಷ್ಟವಾಗಿದೆ. ವೈದಿಕ ಸಾಹಿತ್ಯ, ಜೈನ ಸಾಹಿತ್ಯ, ದಲಿತ ಬಂಡಾಯ ಸಾಹಿತ್ಯ ಇತ್ಯಾದಿ. ಅವೆಲ್ಲವೂ ಬೇರೆಬೇರೆಯಾಗಿವೆ ಎಂಬುದು ಗಮನಿಸಬೇಕಾದ ಅಂಶ. ಜಾತಿ ಮತಗಳಿಗೆ ಅಂತ: ಕರಣವಿರುವುದಿಲ್ಲ. ಅವುಗಳಿಗೆ ಜಾತಿ ಮತಗಳಷ್ಟೇ ಮುಖ್ಯ. ಅಂದರೆ ಜಾತಿಪದ್ಧತಿಯಲ್ಲಿ ಅಂತಸ್ಥವಾದ ಅಸಮಾನತೆಯನ್ನು, ಭೇದ ಭಾವಗಳನ್ನು ಕಟ್ಟುನಿಟ್ಟಾಗಿ ಕಾಪಾಡಿಕೊಳ್ಳುವುದೇ ಆಗಿದೆ. ಒಡೆದು ಆಳುವುದನ್ನು ಬ್ರಿಟಿಷರು ಕಲಿಸಿದರು ಎಂಬುದು ಒಂದು ವ್ಯಂಗ್ಯ ಮತ್ತು ವಿಪರ್ಯಾಸ. ಜಾತಿಪದ್ಧತಿಯ ಒಳ ಪ್ರವಾಹ (Under Current) ಮನುಷ್ಯನನ್ನು ಒಡೆಯುವುದು ಮತ್ತು ಅದರಂತೆ ಆಳುವುದು (ಭಾರತಕ್ಕೆ ಅನ್ಯರು ಧಾಳಿಯ ಮೂಲಕ ಆಗಮಿಸದಿದ್ದರೆ ಮನುವಿನ ಶಾಸನಗಳೇ ನಮ್ಮನ್ನು ಆಳುತ್ತಿದ್ದವು ಎಂದು ಕಾಣುತ್ತದೆ).

ಈ ವಾದವನ್ನು ಕೆಲವು ವರ್ಗಗಳು ಒಪ್ಪುವುದಿಲ್ಲವೆಂದು ನಾನು ತಿಳಿದಿದ್ದೇನೆ. ತಾರತಮ್ಯ ನೀತಿ ಜಗತ್ತಿನೆಲ್ಲೆಡೆ ಇದೆ ಎಂದು ವಾದಿಸುವವರು ಇದ್ದಾರೆ. ಅಮೆರಿಕಾದಲ್ಲಿ ಜನಾಂಗೀಯ ತಾರತಮ್ಯವಿದೆ ನಿಜ. ಆದರೆ ಅದು ಜಾತಿಪದ್ಧತಿಯ ಅಮಾನವೀಯ ಆಚರಣೆಯಿಂದ ಹೊರತಾಗಿದೆ. ಅಲ್ಲಿ ಅಸೂಯೆ ಇದೆ, ಇಲ್ಲಿ ಅಸಹ್ಯಭಾವನೆ ಇದೆ. ತಮಗಿಂತ ಕೀಳಾದ ಕೆಳಜಾತಿಯವನ ಮನೆಯಲ್ಲಿ ಉಣ್ಣುವುದು, ಹೋಗಲಿ ನೀರು ಕುಡಿಯುವುದು ಅಸಹ್ಯಕರ ವೆಂದು, ಅಪಚಾರವೆಂದು ಭಾವಿಸುವ ಜಾತಿನಿಷ್ಠರಿದ್ದಾರೆ. ಕರಿಯರೆ ಹೆಚ್ಚಾಗಿ ವಾಸಿಸುತ್ತಿದ್ದ ನ್ಯೂ ಆರ್ಲಿಯನ್ಸ್ ನಗರದ ಮೇಲೆ "ಕತ್ರಿನಾ" ಚಂಡ ಮಾರುತ ಅಪ್ಪಳಿಸಿದಾಗ ಒಬ್ಬ ಬಿಳಿಯ ಪ್ರೀಸ್ಟ್ "ಅವರ ಪಾಪದ ಕೊಡ ತುಂಬಿತ್ತು" ಎಂದು ಹೇಳಿದ. ಅಲ್ಲಿಯೂ ಪುರೋಹಿತಶಾಹಿ ಇದೆ. ಆದರೆ ಕರಿಯ ಎದುರಿಗೆ ಬಂದರೆ ಅಪಶಕುನವೆಂದು ತಿಳಿಯುವು







ದಿಲ್ಲ. ಸರ್ಕಾರದ ನೀತಿ ನಿರೂಪಣೆ ಮತ್ತು ಸಾಮಾಜಿ
ಸಮ್ಯಮ ಇರುವುದರಿಂದಲೇ ಕರಿಯ ಜನಾಂಗ ಅಪಾ
ಮುನ್ನಡೆಯನ್ನು ಸಾಧಿಸಿದೆ.

ಕಪ್ಪು ಚಳವಳಿ (Black Movement) ಶ
ಶಾಲಿಯಾಗಿದ್ದರಿಂದಲೇ ಕರಿಯರು Black Literatur
Black Music, Black Sports ಎಂಬ ತಮ್ಮದೇ ಅ
ಪ್ರಕಾರಗಳನ್ನು ನಿರ್ಮಿಸಿಕೊಂಡು ಅಮೆರಿಕಾದ ಧ್ವಜವನ
ಎತ್ತರಕ್ಕೆ ಏರಿಸಿದ್ದಾರೆ. ಬಿಳಿಯರ ಅಸೂಯೆಗೆ ಕಿ
ಹಚ್ಚಿದ್ದಾರೆ. ಟೋನಿ ಮಾರಿಸನ್ ಸಾಹಿತ್ಯದಲ್ಲಿ ನೋಬೆ
ಪ್ರಶಸ್ತಿ ಪಡೆದಿದ್ದರೆ, ಮ್ಯಾಜಿಕ್ ಜಾನ್‌ಸನ್ ಕ್ರೀಡೆ
ಉತ್ತುಂಗಕ್ಕೇರಿದ. ಮೈಕೆಲ್ ಜಾಕ್ಸನ್ ಕುರಿತು ಹೇಳಿದ
ಕಡಿಮೆ. ಇಡೀ ಜಗತ್ತನ್ನು ತನ್ನ ಕಾಲಿನ ಕಿರುಕುಣಿಕೆಯ
ಕುಣಿಸಿದನೆನ್ನಬಹುದು. ಜಗತ್ತಿಗೆ ಸ್ವಾತಂತ್ರ್ಯದ ಅಪೂವ
ಸಂದೇಶ ಕೊಟ್ಟ ಅಬ್ರಾಹಂ ಲಿಂಕನ್, ಧಾರ್ಮಿಕ ಸುಧಾ
ಣೆಯ ಹರಿಕಾರನಾದ ಮಾರ್ಟಿನ್ ಲೂಥರ್‌ಕಿಂಗ್ ಹೀ
ಜಗತ್ಪ್ರಸಿದ್ಧಿ ಹೊಂದಿದ ವ್ಯಕ್ತಿಗಳ ಹೆಸರುಗಳ ದೊಡ್ಡ ಪಟ್ಟಿ
ಇದೆ. ಇಂತಹ ಮಾನವ ಆವಿಷ್ಕಾರಗಳನ್ನು ಕಾಣಲು ದಲಿ
ಲೋಕಕ್ಕೆ ಇನ್ನೆಷ್ಟು ಕಾಲ ಬೇಕಾಗುತ್ತದೊ. ಸರ್ಕಾರದ ನೀ
ನಿರೂಪಣೆ ಇದ್ದರೂ ಜಾತಿ ವ್ಯವಸ್ಥೆಯ ಕಾರಣ ಸಾಮಾಜಿ
ಸಮ್ಯಮ ಇಲ್ಲದಿರುವುದರಿಂದ ಮತ್ತು ಅಕ್ಷರಸ್ಥ ಸಮಾಜ
ಮೌಢ್ಯದಿಂದ ಬಿಡಿಸಿಕೊಳ್ಳಲಾಗದಿರುವುದರಿಂದ ಅದು ಇ
ಸಾಧ್ಯವಾಗಲಿಲ್ಲವೆಂದು ಹೇಳಬಹುದು. ಆ ಮಾದರಿಂ
ಮುನ್ನಡೆಯನ್ನು ಇಂದು ಇಂಡಿಯಾದಲ್ಲಿ ಕಾಣಬೇಕಾಗಿದ

ಇಷ್ಟೆಲ್ಲಾ ಸಾಧನೆಯ ನಡುವೆಯೂ ದಲಿ
ಸಾಹಿತ್ಯದಲ್ಲಿ ಒಂದು ಮ್ಯಾಗ್ನಮ್ ಓಪಸ್ (Magnu
Opus) ಕೃತಿ ಬರಬೇಕಾಗಿದೆ. ದಲಿತರ ದೈತ್ಯ ಪ್ರತಿಭೆ ಇನ
ಕಾಣಿಸಿಕೊಂಡಿಲ್ಲವೆನಿಸುತ್ತದೆ. ಬಾಬಾಸಾಹೇಬ ಡಾ
ಬಿ.ಆರ್. ಅಂಬೇಡ್ಕರ್ ದಲಿತ ಲೋಕ
ಕೊಟ್ಟ ಕೊಡುಗೆ ಅಪಾರ ಮತ
ಅಪೂರ್ವ. ಆದರೆ ಅವರ ಸ್ಫೂರ್ತಿ
ದಲಿತ ಲೋಕದಲ್ಲಿ ನಗಣ್ಯವಾಗಿ
ವುದು ವಿಷಾದನೀಯವಾಗಿ
ಸರ್ಕಾರಿ ಮೀಸಲಾತಿಗಾ
ಹೋರಾಡುವುದೊಂದನ್ನು ಬಿಟ್ಟ
ದಲಿತ ಚಳವಳಿ ಅಂಬೇಡ್ಕ
ಚಾಚಿದ ಕಾರ್ಯಕ್ಷೇತ್ರಗಳಿ
ದೂರವಾಗಿಯೇ ಉಳಿಯುತ್ತ
ಸಾಹಿತ್ಯದಲ್ಲಿಯು ಅಂಬೇಡ್ಕರ್
ವರ ಆದರ್ಶಗಳು ಬಂದದ
ಕಡಿಮೆ. ಇವೆಲ್ಲದರ ನಡು
ತಮಿಳಿನ ಬಾಮಾ ಇಂಗ್ಲಿಷಿ
ಮರಾಠಿಯ ನರೇಂದ್ರ ಜಾಧ
ಫ್ರೆಂಚಿಗೆ, ಕನ್ನಡದಿಂದ ಮೂಡ
ಕೂಡು ಚೆನ್ನಸ್ವಾಮಿ ಸ್ಪ್ಯಾನಿಷ್
ತರ್ಜುಮೆ ಗೊಂಡು ಇತ
ದೇಶಗಳಲ್ಲಿ ಚರ್ಚೆಗೊಳಗಾಗು
ದ್ದಾರೆ. ಹಿಂದಿಯ ಚಂದ್ರಭಾ
ಪ್ರಸಾದ್ ಮತ್ತಿತರರು ಅಂತ
ರಾಷ್ಟ್ರೀಯ ಮಟ್ಟದಲ್ಲಿ ಹೆಸ
ಮಾಡುತ್ತಿದ್ದಾರೆ. ದಲಿತ ಸಾಹಿತ್ಯಕ್ಕೆ ಉಜ್ವ
ಭವಿಷ್ಯವಿದೆ ಎಂದು ಹೇಳಬಹುದು.

ಅಮ್ಮನ ಸೊಂಟವೇರಿ ನಾನು ಸಾಕಷ್ಟು ಬಾರಿ ಕುಡಾಲದ ಪೇಟೆಯನ್ನು ಹೊಕ್ಕಿದ್ದಿದೆ. ಆಗ ಅಮ್ಮ ನಮ್ಮನ ಕರುಳುಬಳ್ಳಿಯ ಬೀಳುಗಳೆಲ್ಲ ಕುಡಾಲದ ಪೇಟೆಯೊಳಗೇ ಹರಡಿಕೊಂಡಿದ್ದವಂತೆ. ಮನುಷ್ಯ ಸಂಬಂಧಗಳು ಕೂಡ ಆಗ ಈಗಿನಂತೆ, ತುಳುವ ಹಲಸಿನ ಹಣ್ಣಿನ ಸೋಳೆಗಳಂತೆ ದುರ್ಬಲವಾಗಿ ಕ್ಷೀಣಗೊಂಡಿರದ ಕಾಲ. ಅದುವೇ ನನ್ನ ಬಾಲ್ಯದ ಕಾಲ.

ನನ್ನ ಅಮ್ಮನಿಗಂತೂ, ಆಕೆಯ ನೆನಪಲ್ಲಿ, ಕನಸಲ್ಲಿ ಯಾವುದೇ ಅಕ್ಕತಂಗಿಯರ ಮುಖ ಸುಳಿದು ಬಂದರೆ ಸಾಕು ಅಮ್ಮ ಅಂದೇ ನನ್ನನ್ನು ಸೊಂಟಕ್ಕೇರಿಸಿಕೊಂಡು ಹೊರಟುಬಿಡುತ್ತಿದ್ದರು. ತನ್ನಮ್ಮನ ಕರುಳುಬಳ್ಳಿಯ ಚಿಗುರುಗಳನ್ನೊಮ್ಮೆ ಕಣ್ಣಲ್ಲೇ ಸವರಿ ಬರಲು.

ಅಮ್ಮ ನನ್ನನ್ನು ಸೊಂಟಕ್ಕೇರಿಸಿಕೊಂಡು ಪೇಟೆ ಕಡೆ ಹೊರಟು ನಿಂತಾಗಲೆಲ್ಲ ಅಪ್ಪ ಹೇಳುತ್ತಿದ್ದರು– 'ನಿನ್ನ ಚಂದಕ್ಕೆ ಕೊರಳಿಗೊಂದು ಆ ಕಾಸಿನ ಸರ ಸಾಕಾಗುವುದಿಲ್ಲಂತ ಸೊಂಟಕ್ಕೊಂದು ಈ ಪುಡಿ ಒಡವೆಯೋ...' ಅಂತಾ. ಅಪ್ಪ ನನ್ನ ಕೆನ್ನೆ ಹಿಂಡುತ್ತ ಈ ಮಾತನ್ನು ಅಮ್ಮನಿಗೆ ಹೇಳುವಾಗಲೆಲ್ಲ ನನಗರ್ಥವಾಗುತ್ತಿತ್ತು, ಇದು ನನ್ನನ್ನು ಸೊಂಟದಿಂದ ಇಳಿಸುವ ಮಸಲತ್ತು ಅಂತಾ. ನಾನು ಅಮ್ಮನನ್ನು ಮತ್ತಷ್ಟು ಬಲವಾಗಿ ತಬ್ಬಿ ಅಮ್ಮನ ಸೊಂಟವನ್ನು ಬಿಗಿ ಹಿಡಿದುಕೊಳ್ಳತ್ತಿದೆ. 'ನಡೀ ನಡೀ... ಮೈಯ್ಯದ್ದಿ ಬ್ಯಾರಿ ಗಟ್ಟ ಹತ್ತುವಾಗ ಬೆಲ್ಲದ ಕಟ್ಟಿನ ಜತೆ ಅಟ್ಟದ ಮೇಲಿನ ಜಿರಲೆಯೂ ಗಟ್ಟ ಹತ್ತಿತಂತೆ ಹಾಗಾಯ್ತು ಈ ಸೊಂಟದಲ್ಲಿರುವ ಮರಿಜಿರಲೆಯ ಕತೆ' ಅಂತ ನನ್ನನ್ನು ಮುದ್ದಿಸುತ್ತಲೇ ಮಿಸ್ಕಿತರ ಮೋಟಾರುಬಂಡಿಗೆ ನಮ್ಮನ್ನು ಹತ್ತಿಸಿ ಬರುತ್ತಿದ್ದರು.

ಹೀಗೆ ನಾನು ಅಮ್ಮನ ಸೊಂಟವೇರಿ, ಆ ದೇಹಕ್ಕೊಂದು ಒಡವೆಯೇನೋ ಎಂಬಂತೆ ಬಿಂಕದಿಂದ ಕುಡಾಲದ ಪೇಟೆಗೆ ಹೋಗಿ ಬಂದದ್ದು ಹಲವು ಬಾರಿ.

ಆದರೆ ಅಮ್ಮನ ಸೊಂಟದಿಂದಿ ಳಿದು ಅಮ್ಮನ ಕೈ ಮಾತ್ರ ಹಿಡಿದು ನನ್ನ ಸ್ವಂತ ಕಾಲಿನಿಂದಲೇ ಕಾಮತರ ಬಸ್ಸು ಏರುವ ಹೊತ್ತಿಗೆ ಮತ್ತು ಪೇಟೆ ಸುತ್ತುವ ಹೊತ್ತಿಗೆ ನಮ್ಮೂರಿಗೆ ಪಣಂಬೂರು ಬಂದರು ಯೋಜನೆ ದೆಹಲಿಯಿಂದ ಹಾರಿ ಬಂದಿತ್ತು. ಈ ಯೋಜನೆಗಾಗಿ ಪರವೂರುಗಳಿಂದ ದೊಡ್ಡ ದೊಡ್ಡ ಟೊಪ್ಪಿಗೆಯವರು ರೈಲೇರಿ ಬಂದು ಆ ಯೋಜನೆಯ ಕಾಮಗಾರಿಯನ್ನು ಆರಂಭಿಸುವಷ್ಟರಲ್ಲಿ ನನ್ನಿಷ್ಟದ ಪೇಟೆ 'ಕುಡಾಲದ ಪೇಟೆ'ಯ ಹೆಸರು ಸಂಪೂರ್ಣ ಅಳಿದು ಹೋಗಿ ಅಲ್ಲಿ ಪರವೂರಿಗರಿಗೆ ಕೇಳಲು ಇಂಪಾದ 'ಮಂಗಳೂರು ಪೇಟೆ' ಎಂಬ ಹೆಸರು ನೆಲೆಗೊಂಡಿತು.

ಬಡಗುದಿಕ್ಕಿನಿಂದ ಫಲ್ಗುಣಿ ನದಿ, ತೆಂಕು ದಿಕ್ಕಿನಿಂದ ನೇತ್ರಾವತಿ ನದಿ ಹಳ್ಳಿಗಳನ್ನು ಸುತ್ತುವರಿದು ಬಂದು ಕಡಲನ್ನು ಕೂಡುವಲ್ಲಿ ಅಥವಾ ನದಿ ಮುಖಜ ಭೂಮಿಯ ಮೇಲೆ ಎದ್ದು ಕೂತು ಆ ಪೇಟೆಗೆ 'ಕುಡಾಲದ ಪೇಟೆ' (ಕೂಡುವಲ್ಲಿನ ಪೇಟೆ) ಎಂದು ತುಳುವ ಮಂದಿ ಕಟ್ಟಿದ ಹೆಸರು ಪರವೂರಿಗರಿಂದ ನಿಧಾನಕ್ಕೆ ಲಯಗೊಳ್ಳುವ ಹೊತ್ತಿಗೆ ನಾನು ಅಮ್ಮನ ಸೆರಗಿನ ಮೋಹ ಬಿಡಿಸಿಕೊಂಡು ಅಕ್ಷರಾಭ್ಯಾಸಕ್ಕಾಗಿ ಶಾಲೆಯ ಮೆಟ್ಟಿಲನ್ನೇರುವ ಸಿದ್ಧತೆಯಲ್ಲಿದ್ದೆ.

ನಮ್ಮ ಊರು ಬೆಳೆಯುತ್ತಾ, ಕೈಗಾರೀಕರಣವೆಂಬ ಮಾರುತ, ಆಧುನೀಕತೆ ಎಂಬ ಮಂತ್ರದೊಂದಿಗೆ ಬೀಸಿ ಬರುತ್ತಿದ್ದಂತೆ ನಮ್ಮ ಹಳೆಯ ಕುಡಾಲದ ಪೇಟೆ 'ಮಂಗಳೂರು ಪೇಟೆ' ಎಂಬ ನಾಮ ಬದಲಾವಣೆಯ ಪ್ರಕ್ರಿಯೆಗೆ ಒಳಗಾಯಿತು. ಆದರೇನಂತೆ ನಮ್ಮ ಅಮ್ಮ ಮತ್ತು ಆಕೆಯ ಕುಟುಂಬ ಬಳ್ಳಿಗಳೊಳಗೆ ಮಾತ್ರ ಆ ಪೇಟೆ 'ಕುಡ್ಲದ ಪೇಂಟೆ' ಎಂದೇ ಉಳಿದುಕೊಂಡು ಬಿಟ್ಟಿತ್ತು.

ಶಾಲೆಯ ಮೆಟ್ಟಿಲು ಏರಿದ ನಂತರವು ನಾನು ಅಮ್ಮನ ಜತೆಗೆ 'ಕುಡ್ಲದ ಪೇಂಟಗೆ' ಹೋದದ್ದು ಹಲವು ಬಾರಿ. ನದಿಯ ಸೆರಗಲ್ಲಿ ನಿಂತು ಆ ಪೇಟೆಯ ಸಂಭ್ರಮವನ್ನು ಸವಿದದ್ದು ಪ್ರತೀ ಬಾರಿ.

ಕುಡಾಲದ ಪೇಟೆಗೆ ಹೊರಟು ನಿಂತಾಗಲೆಲ್ಲ ಅಮ್ಮನ ಕಣ್ಣುಗಳಲ್ಲಿ ತನ್ನ ಕುಟುಂಬದ ಬಳ್ಳಿಯ ಕವಲುಗಳನ್ನೆಲ್ಲ ಎಷ್ಟು ಹೊತ್ತಿಗೆ ಕಂಡೇನೋ ಎನ್ನುವ



ಗೇಣಿದಾರರ ಏಣಿಯಾಟ

ಡಾ॥ ಎಚ್.ನಾಗವೇಣಿ

ಲಹರಿ

ತೂಸುಧಾರಣಾ ಮಸೂ
ಿಯ ದೆಸೆಯಿಂದ
ಮುಡಿಗಟ್ಟಲೆ ಗದ್ದೆ
ಳೆದುಕೊಂಡ ಧಣಿಯ
ಲ್ಲಿ ನಮ್ಮ ಗುತ್ತಿನ
ಮೋಕು ಶೆಟ್ರೊ ಒಬ್ಬರು.
ಟಿಯ ಕಾಲಕ್ಕೆ ಸುರಿವ
ಮುಸಲಧಾರೆಗೆ ನದಿ
ಯಲ್ಲಿ ದಿಢೀರನೆ ನೆರೆ
ಏರಿ ಬಂದು, ನದಿ
ಸೆರಗಲ್ಲಿ ರುವ ಧಣಿ
ಅಂಗಳದ ತೆಂಗಿನಕಾಯಿ
ಗಳನ್ನು ಒಕ್ಕಲ ಮಕ್ಕಳ
ಅಂಗಳಕ್ಕೆ ಬಿಸುಟು
ಬರುವಂತೆ ಈ
ಮಸೂದೆಯೂ ದಿಢೀರನೆ
ಜಾರಿಗೆ ಬಂದು ಧಣಿಗಳ
ಅನೇಕ ಗದ್ದೆಗಳನ್ನು
ನೇರ ಗೇಣಿ ಮಕ್ಕಳ
ಪಾಲಾಗಿ ಸಿದ್ದು ಊರಲ್ಲಿ
ಧಣಿ ಗೇಣಿ ಸಂಬಂಧ
ವನ್ನು ಸಂಪೂರ್ಣ
ಕಡಿದು ಹಾಕಿತಲ್ಲದೆ
ಇಡಿಯ ಸಾಮಾಜಿಕ
ವ್ಯವಸ್ಥೆಯನ್ನೇ ಬಲ
ವಾಗಿ ಅಲುಗಾಡಿಸಿತು.

ಕಾತುರವಿದ್ದರೆ ನನ್ನ ಎಳೆಯ ಕಣ್ಣುಗಳಲ್ಲಿ ಇದ್ದ ಆತುರ-ಅದೆಷ್ಟು ಹೊತ್ತಿಗೆ ಚಿಕ್ಕಮ್ಮ, ದೊಡ್ಡಮ್ಮಗಳ ಅಂಗಳವೇರಿ, ಅಲ್ಲಿನ ಅಣ್ಣಂದಿರ ಹೆಗಲನ್ನೇರಿ ಕೂತು, ನದಿ ನೇತ್ರಾವತಿ-ಫಲ್ಗುಣಿಯರ ಸೆರಗಲ್ಲಿ ನಿಂತು ಸುತ್ತಲ ಪ್ರಕೃತಿಯ ಅಚ್ಚರಿಗಳನ್ನು ದಿಟ್ಟಿಸಿಯೇನು ಎನ್ನುವುದು.

ಅಮ್ಮ ನಮ್ಮನ ಕುಟುಂಬದ ಬಳ್ಳಿ-ಕವಲುಗಳೆಲ್ಲ ಆ ಚಂದದ ಕುಡಾಲದ ಪೇಟೆಯಲ್ಲಿ ನೆಲೆ ಕಂಡುಕೊಂಡಿದ್ದು ಪೇಟೆಯನ್ನು ಇಕ್ಕೆಡೆಗಳಿಂದಲೂ ಸುತ್ತಿಬರುವ ನೇತ್ರಾವತಿ-ಫಲ್ಗುಣಿಯರ ಸೆರಗಲ್ಲೇ ಆಗಿದ್ದುದರಿಂದ ನನಗಂತೂ ಕುಡುಲದ ಪೇಟೆ-ಆ ನದಿ ಸೆರಗೆಂದರೆ ಅಮ್ಮನಿಗಿಂತಲೂ ತುಸು ಹೆಚ್ಚೇ ಜೀವ.

ಆ ನದಿ ಸೆರಗುಗಳಲ್ಲಿ ಬಂದು ನಿಂತರೆ ಸಾಕು. ಅಯ್ಯಬ್ಬ... ನದಿ ಒಡಲಲ್ಲಿ ಅದೆಷ್ಟು ದೋಣಿಗಳು! ಅಕ್ಕಿ ಸಾಗಿಸುವ, ಬೈಹುಲ್ಲು ಸಾಗಿಸುವ, ಆವೆಮಣ್ಣಿ ಸಾಗಿಸುವ, ಕಟ್ಟಿಗೆ-ತೆಂಗಿನಕ್ಕಾ... ಹೀಗೆ ಏನೇನೋ ಸಾಗಿಸುವ ದೋಣಿಗಳು! ಆ ದೋಣಿಗಳ ಮಧ್ಯೆ ಮತ್ತೆ ಕೆಲವು ದೋಣಿಗಳು! ಕೆಲವು ಪ್ರಯಾಣಿಕರನ್ನು ಸಾಗಿಸುವ ದೋಣಿಗಳು ಮತ್ತೆ ಕೆಲವು ಮೀನಿಗೆ ಬಲೆ ಬೀಸುವ ದೋಣಿಗಳು.

ಹಿಂದೆಲ್ಲ ನಮ್ಮೂರಲ್ಲಿ ಹೀಗೆಯೇ ಅಂತೆ-ಒಂದೂರಿನಿಂದ ಮತ್ತೊಂದೂರಿಗೆ ಹೋಗಲು ನದಿಗಳಿಗೆ ಸೇತುವೆಗಳಿಲ್ಲದ್ದರಿಂದ ಇಂತಹ ದೋಣಿಗಳಲ್ಲೇ ಪಯಣ ಬೆಳಸಬೇಕಿತ್ತಂತೆ. ಹತ್ತು ಮೈಲು ದೂರದ ಅಪ್ಪನೂರಿಗೆ ಅಮ್ಮ ಪಯಣ ಬೆಳೆಸಬೇಕಾದರೆ ಆಗ ಎಂಟು ತಾಸು ಬೇಕಿತ್ತಂತೆ. ಆಗ ಮಿಸ್ಕಿತರ ಮೋಟಾರು ಬಂಡಿ ಇರಲಿಲ್ಲವಂತೆ. ಅಮ್ಮ ಎತ್ತಿನ ಗಾಡಿಯಲ್ಲಿ ಕೂತು ಅಪ್ಪನೂರಿಗೆ ಹೊರಟರೆ ದಾರಿಡೀ ಸಿಗುವ ತೋಡು-ನದಿಯ ಕೈಗಳನ್ನು ದಾಟುವುದು 'ನಾಯಿಕೆಲಸ' ಎಂದು ಅಮ್ಮ ಮುಖ ಹಿಂಡುತ್ತಿದ್ದುದು ಇನ್ನೂ ನನಗೆ ನೆನಪಿನಲ್ಲಿದೆ.

ದೋಣಿಗಳು ಸಾಗುತ್ತಿರುವ ಆ ನದಿಯ ಒಡಲಿಂದ ನನ್ನ ಎಳೆಯ ಕಣ್ಣಗಳನ್ನು ನದಿಸೆರಗತ್ತ ದೂರಕ್ಕೆ.... ಎಡಬಲಕ್ಕೆ ಹಾಯಿಸಿದರೆ ಅಲ್ಲಿ ಕಾಣಸಿಗುತ್ತಿದ್ದುದು ನನಗೆ ಮತ್ತೊಂದು ಅಚ್ಚರಿ ನೋಟ! ಆ ನದಿಗಳ ಸೆರಗಿಡೀ ಹೊಗೆ ಬಿಡುವ ಕಾರ್ಖಾನೆಗಳದ್ದೇ ಕಾರುಭಾರು. ಹಂಚಿನ ಕಾರ್ಖಾನೆ. ಗೇರುಬೀಜದ ಕಾರ್ಖಾನೆ, ಕಾಫಿ ಬೀಜದ ಕಾರ್ಖಾನೆ... ಹೀಗೆ ಏನೇನೋ ಕಾರ್ಖಾನೆಗಳು. ಅವೆಲ್ಲವನ್ನೂ ನಮ್ಮವರಿಗಾಗಿ ಪರಂಗಿದೊರೆಗಳು ಮಾಡಿಟ್ಟು ಹೋದದ್ದು ಎಂದು ಆಗಾಗ್ಗೆ ಅಮ್ಮ ಹೇಳುವುದಿತ್ತು. 'ಹೌದೌದು, ನಮ್ಮ ಬಾನಿಗಷ್ಟು ಹೊಗೆ ವಾಸನೆ ಕುಡಿಸುವುದಕ್ಕೆ, ನಮಗೆ ದಮ್ಮು ರೋಗ ಬರಿಸುವುದಕ್ಕೆ' ಎಂದು ಅಪ್ಪ ಆಗ ಅಮ್ಮನನ್ನು ಅಣಕಿಸುವುದಿತ್ತು.

ಅದುವರೆಗೂ ಕೇವಲ ಸಾಗುವಳಿ ಕೆಲಸ, ಮೀನುಗಾರಿಕೆ ಕೆಲಸ, ಜಾತಿಸಂಬಂಧಿ ವೃತ್ತಿ ಕೆಲಸಗಳನ್ನಷ್ಟೇ ನಂಬಿಕೊಂಡಿದ್ದ ನಮ್ಮೂರಿಗರಿಗೆ ಈ ಕಾರ್ಖಾನೆಗಳು ಒಂದು ಹೊಸದಾದ ಅನ್ನದ ದಾರಿಯನ್ನು ತೋರಿಸಿದ್ದರಿಂದ ಹಳ್ಳಿಗಳಿಂದ ಪೇಟೆಗೆ ವಲಸೆ ಹೊರಡುವವರ ಸಂಖ್ಯೆ ವೃದ್ಧಿಸತೊಡಗಿತ್ತು. ಕುಡಾಲದ ಪೇಟೆಯ ಕಾರ್ಖಾನೆಗಳು ಪೇಟೆಯ ಮಂದಿಗೆ ಮಾತ್ರವಲ್ಲ ನಮ್ಮ ಬದುಕಿಗೂ ಒಂದಷ್ಟು ಹೊಸಗಾಳಿಯನ್ನು ಬೀಸಬಲ್ಲವು ಎಂಬ ಆಸೆಯಿಂದ, ಬಡತನದ ಬಸಿರಲ್ಲೆ ಹುಟ್ಟಿ, ಬಡತನದ ತೊಟ್ಟಿಲಲ್ಲೆ ಬೆಳೆದು, ಮಳೆಯೊಂದಿಗೆ ನಿರಂತರ ಸೆಣಸಾಡುತ್ತ ಸಾಗುವಳಿ ಮಾಡುತ್ತಿದ್ದ ಊರಿನ ಹಲವು ಚಾಲಗೇಣಿ ಒಕ್ಕಲಿನ ಕುಟುಂಬಗಳು ಆ ಕಾರ್ಖಾನೆಗಳತ್ತಗುಳೇ ಎದ್ದು ಹೊರಟದ್ದು ಮಾತ್ರ ಊರಿನ ಭೂಹಿಡುವಳಿದಾರರಿಗೆ ನುಂಗಲಾರದ ತುತ್ತಾಗಿ ಪರಿಣಮಿಸ ತೊಡಗಿತ್ತು. ಪೇಟೆಯ ಕೈಗಾರೀಕರಣದ ಬಿಸಿಯು ನಮ್ಮ ಭೂಮಾಲೀಕರಿಗೆ ತಟ್ಟತೊಡಗಿದ್ದು ಹೀಗೆ.

ಒಂದೆಡೆ ನಮ್ಮ ಚಾಲಗೇಣಿಯ ಒಕ್ಕಲುಗಳು 'ಜೆಂಕಿ ಝುಳಕ್ಕೆ ಜೇನ್ನೊಣಗಳು ಹಾರಿ ಹೋಗುವಂತೆ' ಪೇಟೆಯತ್ತ ಹಾರುವ ದಾರಿ ಹಿಡಿದಿವೆ. ಇನ್ನೊಂದೆಡೆ ತಮ್ಮ ದಿನನಿತ್ಯದ ಸಾಗುವಳಿ ಕೆಲಸಕ್ಕೆ ಬರುತ್ತಿರುವ ಬಿಡಿ ಒಕ್ಕಲುಗಳೂ ಅದೇ ದಾರಿ ಹಿಡಿಯುವ ಹವಣಿಕೆಯಲ್ಲಿವೆ! 'ಎಷ್ಟು ದಿನಾಂತ ಹೀಗೆ ಹೊಟ್ಟೆ ಕಟ್ಟಿಕೊಂಡು, ಅಂಡಿಗೊಂದು ಕೋಮಣ, ತಲೆಗೊಂದು ಮುಟ್ಟಾಳೆ ಹಾಕಿಕೊಂಡು, ಗಂಜಿತಿಳಿ ಕುಡಿದುಕೊಂಡು ಬದುಕುವುದು ಮಾರಾಯ...., ನಾವು ಸುರಿಸಿದ ಬೆವರೆಲ್ಲ ಧಣಿಗಳ ಅಟ್ಟ ತುಂಬಿಸುವುದಕ್ಕೆ ಸರಿಯೋಯ್ತು' ಎಂದು ನಿಟ್ಟುಸಿರು ಬಿಡುತ್ತಾ, ಬಿಡಿ ಒಕ್ಕಲಿನವರೂ ಕಾರ್ಖಾನೆಗಳತ್ತ ಮುಖ ಮಾಡತೊಡಗಿದ್ದು ನಮ್ಮೂರಿನ ಪ್ರತಿಯೊಬ್ಬ ಭೂಮಾಲೀಕನ ಅಂಗಳಕ್ಕೊಂದು ಚಿಂತೆಯ ಮೂಟೆಯನ್ನೇ ಎಸೆದು ಬಿಟ್ಟಂಥಾಗಿತ್ತು. ಊರ ಭೂ ಹಿಡುವಳಿದಾರರು ಮುಂದೆ ತಮ್ಮ ಕೃಷಿ ಕೆಲಸದ ಪಾಡೇನು ಎಂಬ ಚಿಂತೆಯ ಚಿತೆಯಲ್ಲಿ ಬಿದ್ದು ಬೇಯ ತೊಡಗಿದ್ದರು.

ಒಕ್ಕಲಿನವರ ಬೆವರನ್ನ ಅಕ್ಕಿ ಮುಡಿಗಳ ರೂಪದಲ್ಲಿ ಅಟ್ಟಕೇರಿಸುತ್ತಿದ್ದ ಲೋಕು ಶೆಟ್ಟರ ಸಾಗುವಳಿ ಕೆಲಸಕ್ಕೆ ಕುಡಾಲದ ಪೇಟೆಯ ಕೈಗಾರೀಕರಣ ಬಿಸಿ ತಗಲತೊಡಗಿದಾಗ ಸ್ವಾತಂತ್ರ್ಯದ ಹಬ್ಬ ಬಂದು ಐದು ವರ್ಷವಾಗಿತ್ತು. ಕುಡಾಲದ ಪೇಟೆಯ ಕಾರ್ಖಾನೆಗಳು ನೆಮ್ಮದಿಯ ಅನ್ನ ದೊರಕಿಸಿಕೊಡುತ್ತವೆ-ಎಂಬ ಸುದ್ದಿಯನ್ನು ದನದ ದಲ್ಲಾಳಿ ಮೈಯದ್ದಿ ಬ್ಯಾರಿಯವರು ಊರು ಧಣಿಗಳ ಒಕ್ಕಲಿನ ಮಕ್ಕಳ ಕಿವಿಯ ಬೀಳಿಗೆ ತಲಪಿಸಿದ್ದೇ ತಡ, ಆ ಕಾರ್ಖಾನೆಗಳತ್ತ ಮುಖಮಾಡಿ ಮೊದಲು ನಡೆದವನು ಲೋಕುಶೆಟ್ರ ಚಾಲಗೇಣಿಯ ಒಕ್ಕಲಿನವನಾದ ತ್ಯಾಂಪ ಮೈಲಿ. ತ್ಯಾಂಪಮೈಲಿಯಿಂದ ತನಗೆ ಬರಬೇಕಾದ ಗೇಣಿ ರೂಪದ ಬಾಕಿ ಸಾಲ ವನ್ನು ಪಾವತಿಸುವಂತೆ ಧಣಿ ಶೆಟ್ಟರು ಗದರಿಸಿ ಕೇಳಿದಾಗ, ತನ್ನಿಬ್ಬರು ಗಂಡು ಮಕ್ಕಳನ್ನು ಇಂತಿಷ್ಟು ಕಾಲಕ್ಕೆ ಬಿಟ್ಟ ಒಕ್ಕ ಲೆಂದು ಪರಿಗಣಿಸಬೇಕೆಂದು ಪಂಚಾತಿಕೆ ಮಾಡಿಸಿ, ಮೈಯ್ಯದ್ದಿ ಬ್ಯಾರಿ ಜತೆ ಬಸ್ಸು ಏರಿ ಹೋದವನು ಮತ್ತೆ ಮರಳಿ ಬಂದಿದ್ದು ಎರಡು ತಿಂಗಳಿನ ನಂತರ ಮಡದಿ ಮಕ್ಕಳನ್ನು ಕರೆದೊಯ್ಯುವುದಕ್ಕೆ.

ಈ ರೀತಿ ಬಿಸಿ ತಟ್ಟಿಸಿಕೊಂಡವರಲ್ಲಿ ನಮ್ಮ ಊ ಗುತ್ತಿನ ಲೋಕು ಶೆಟ್ರೂ ಒಬ್ಬರು. ನೂರಾರು ಮು ಗದ್ದೆಗಳ ಒಡೆತನವಿರುವ ಈ ಲೋಕು ಶೆಟ್ರ ಕೈಯ ನಾಲ್ಕೈದು ಮೂಲಗೇಣಿ ಒಕ್ಕಲುಗಳಿದ್ದರೆ, ಚಾಲಗೇ ಒಕ್ಕಲುಗಳು ಹತ್ತಕ್ಕಿಂತಲೂ ಹೆಚ್ಚು. ಧಣಿ ಲೋಕು ಶೆಟ್ ಊರಿನ ಕೋಲ, ಕಂಬಳ, ಕೋಳಿ ಅಂಕ, ಪಟೇಲಿಕ ನ್ಯಾಯಪಂಚಾತಿಕೆ ಮುಂತಾದವುಗಳ ಮುಖ್ಯಸ್ಥಿಕೆ ವಹಿಸಿ ದ್ದರೆ ವಿನಹ ಅವರ ಗದ್ದೆ ತೋಟ ಸಾಗುವಳಿಯ ಜವಾ ಬ್ದಾರಿಯೆಲ್ಲ ಒಕ್ಕಲ ಮಕ್ಕಳದ್ದೆ. ತಮ್ಮ ಕೈಯಡಿ ಕೇವ ಹತ್ತು ಮುಡಿ ಗದ್ದೆಯನ್ನು ಮಾತ್ರವೆ ಇಟ್ಟುಕೊಂಡು ಬಿ ಒಕ್ಕಲಿನವರನ್ನು ಬಳಸಿ ಅದನ್ನು ಸಾಗುವಳಿ ಮಾಡಿಸುತ್ತಿ ಶೆಟ್ಟರು ಉಳಿದೆಲ್ಲ ಗದ್ದೆಗಳನ್ನು ಮೂಲಗೇಣಿ, ಚಾಲಗೇ ಒಕ್ಕಲುಗಳ ಕೊರಳಿಗೆ ಗೇಣಿಗೆ ಕಟ್ಟಿಕೊಟ್ಟಿದ್ದರು.

ಸದಾ ಬಿಳಿಯ ಪಂಚೆ ಹಾಗೂ ಬಿಳಿಯ ತುಂಬ ತೋಳಿನ ಗರಿಗರಿ ಜುಬ್ಬ ಧರಿಸಿ ತಲೆಗೆ ಮುಂಡಾಸು ಕಟ ಕೊಂಡು, ಹೆಗಲಲ್ಲೊಂದು ಹಸಿರು ಅಂಚಿನ ಬಿಳಿಯ ಎಲೆವಸ್ತ್ರವನ್ನು ಹಾಕಿಕೊಂಡು ಕೈಯಲ್ಲೊಂದು ಬೆಳ್ಳಿಯ ಜುಟ್ಟಿರುವ ನಾಗರಬೆತ್ತವನ್ನು ಬೀಸಿಕೊಂಡು ತಮ್ಮ ಒಕ್ಕ ಮಕ್ಕಳಿಗೆ ಬಾಯ್ತುಂಬ ಬೈಗಳ ದಮಕಿ ಹಾಕಬಲ್ಲರ ವಿನಹ ಒಂದು ದಿನವೂ ಇವರು ಕಾಲ ಹೆಬ್ಬೆಟ್ಟನ್ನು ಗದ್ದೆ ಸೋಕಿಸಿ ಉಳುಮೆ ಮಾಡಿದವರಲ್ಲ. ಅತಿವೃಷ್ಟಿಯಾಗಲಿ ಅನಾವೃಷ್ಟಿಯಾಗಲಿ, ಬೆಳೆದ ಬೆಳೆಗಳ ಮೇಲೆ ಬೊಂಬು ದಾಳಿ ಮಾಡಲಿ ಅಥವ ಗೇಣಿ ಒಕ್ಕಲಿನವರು ನಿರೀಕ್ಷಿ ದಷ್ಟು ಫಲ ಬರದೇ ಇರಲಿ... ಏನಾದರಾಗಲಿ ಯುಗಾದಿ ಹಬ್ಬದ ದಿನ ಶೆಟ್ಟರ ಅಂಗಳಕ್ಕೆ ಒಕ್ಕಲ ಮಕ್ಕಳ ಗೇಣಿಯ ಅಕ್ಕಿಮುಡಿಗಳು ಬಂದು ಉರುಳಲೇ ಬೇಕು.

ಒಕ್ಕಲಿನವರ ಬೆವರನ್ನ ಹೀಗೆ ಅಕ್ಕಿ ಮುಡಿಗಳ ರೂಪದಲ್ಲಿ ಅಟ್ಟಕೇರಿಸುತ್ತಿದ್ದ ಲೋಕು ಶೆಟ್ಟರ ಸಾಗುವಳಿ ಕೆಲಸಕ್ಕೆ ಕುಡಾಲದ ಪೇಟೆಯ ಕೈಗಾರೀಕರಣ ಬಿಸಿ ತಗ ತೊಡಗಿದಾಗ ಸ್ವಾತಂತ್ರ್ಯದ ಹಬ್ಬ ಬಂದು ಐದು ವರ್ಷವಾ ಗಿತ್ತು. ಕುಡಾಲದ ಪೇಟೆಯ ಕಾರ್ಖಾನೆಗಳು ನೆಮ್ಮದಿಯ ಅನ್ನ ದೊರಕಿಸಿಕೊಡುತ್ತವೆ-ಎಂಬ ಸುದ್ದಿಯನ್ನು ದನದ ದಲ್ಲಾಳಿ ಮೈಯದ್ದಿ ಬ್ಯಾರಿಯವರು ಊರು ಧಣಿಗಳ ಒಕ್ಕಲಿನ ಮಕ್ಕಳ ಕಿವಿಯ ಬೀಳಿಗೆ ತಲಪಿಸಿದ್ದೇ ತಡ, ಆ ಕಾರ್ಖಾನೆಗಳತ್ತ ಮುಖಮಾಡಿ ಮೊದಲು ನಡೆದವನು ಲೋಕುಶೆಟ್ರ ಚಾಲಗೇಣಿಯ ಒಕ್ಕಲಿನವನಾದ ತ್ಯಾಂ ಮೈಲಿ. ತ್ಯಾಂಪಮೈಲಿಯಿಂದ ತನಗೆ ಬರಬೇಕಾದ ಗೇ ರೂಪದ ಬಾಕಿ ಸಾಲವನ್ನು ಪಾವತಿಸುವಂತೆ ಧಣಿ ಶೆಟ್ಟರು ಗದರಿಸಿ ಕೇಳಿದಾಗ, ತನ್ನಿಬ್ಬರು ಗಂಡು ಮಕ್ಕಳನ್ನು ಇಂತಿಷ್ಟು ಕಾಲಕ್ಕೆ ಬಿಟ್ಟ ಒಕ್ಕಲೆಂದು ಪರಿಗಣಿಸಬೇಕೆಂದು ಪಂಚಾತಿಕೆ ಮಾಡಿಸಿ, ಮೈಯ್ಯದ್ದಿ ಬ್ಯಾರಿ ಜತೆ ಮಿಸ್ಕಿತ ಬಸ್ಸು ಏರಿ ಹೋದವನು ಮತ್ತೆ ಮರಳಿ ಬಂದಿದ್ದು ಎರಡು ತಿಂಗಳಿನ ನಂತರ ಮಡದಿ ಮಕ್ಕಳನ್ನು ಕರೆದೊ ಯ್ಯುವುದಕ್ಕೆ. ಹಾಗೆ ಹೋದವನು ಸರಿಯಾಗಿ ಒಂದ ವರುಷಕ್ಕೆ ಪೇಟೆಯಿಂದ ಮರಳಿ ಬಂದವನು, 'ಧಣಿಗಳಿ ಸಲ್ಲಬೇಕಾದ್ದ ಸಾಲವನ್ನು ತೀರಿಸಿ ತನ್ನ ಗಂಡು ಮಕ್ಕಳನ್ನು ಲೋಕುಶೆಟ್ರ ಒತ್ತೆಯಿಂದ ಬಿಡಿಸಿಕೊಂಡು ಮರಳಿದ್ದ. ಘಟನೆಯಿಂದ ಧಣಿ ಲೋಕುಶೆಟ್ರ ಅಕಲಿಗೆ ಒಂದರಗಳಿ ಮಂಕು ಕವಿದಂತಾಗಿತ್ತು. ಹೀಗೆ ಧಣಿಗಳಿಗೆಲ್ಲ ತಮ ಸಾಗುವಳಿ ಬಗ್ಗೆ ಚಿಂತೆ ಆರಂಭವಾಗಿದ್ದಿರಬೇಕಾದರೆ ಅ ರನ್ನು ಮತ್ತಷ್ಟು ದಿಕ್ಕೆಡಿಸುವ ಸುದ್ದಿಯೊಂದು ಕುಡಾಲ ಪೇಟೆಯಿಂದಲೇ ತೇಲಿಬಂದಿತು.

ಕುಡಾಲದ ಪೇಟೆಯಿರುವ ತೆಂಕಣ ದಿಕ್ಕಿನಿಂದ ಆ ಸುದ್ದಿ ನಮ್ಮ ಬಡಗು ದಿಕ್ಕಿಗೆ ಬೀಸಿ ಬರುವಾಗ ನಾನಿನ್ನೂ ಹುಟ್ಟಿರಲಿಲ್ಲ. ಆ ಸುದ್ದಿ ಬಂದಿದ್ದೇ ಕುಡಾಲದ ಪೇಟೆಯ ಮೇಲೆ ಮೊದಲ ಬಾರಿಗೆ ವಿಮಾನ ಹಾರತೊಡಗಿದ ದಿನದಿಂದಂತೆ. ಆ ಹೊತ್ತಿಗಾಗಲೇ ನಮ್ಮೂರಲ್ಲಿ ವಿಮಾನ ನಿಲ್ದಾಣವೊಂದು ಉದ್ಘಾಟನೆಯಾಗಿ ವಿಮಾನಗಳು ನಮ್ಮೂರಲ್ಲಿ ಹಾರಾಡತೊಗಿದರೂ ಯಾರಲ್ಲೂ ಪುಳಕವೆಂಬುದಿರಲಿಲ್ಲ. 'ವಿಮಾನ ಬಂದರೇನಂತೆ, ಅದನ್ನು ಹತ್ತುದಕ್ಕೆ ನಮಗೆಲ್ಲಿದೆ ತಾಕತ್ತು. ನಮ್ಮ ತುತ್ತಿನ ಚೀಲ ತುಂಬಿದರೆ ಸಾಕಪ್ಪ' ಎಂದು ದುಡಿಯುವ ವರ್ಗ ಬೆನ್ನು ಮುರಿಸಿಕೊಂಡು ದುಡಿಯಲು ಹೊರಟಂದೇ ಆ ಹೊಸ ಸುದ್ದಿ ಬಂದು ತಲುಪಿತಂತೆ. ಈ ಸುದ್ದಿ ತಂದವರು ಕೂಚಿಗುಡ್ಡೆಯ ಮ್ಯೊದಿನ್ ಬ್ಯಾರಿಯವರು.

"ಕುಡಾಲದ ಪೇಂಟೆಯಲ್ಲಿರುವ ಬೀಡಿ ಕಂಪನಿಗಳು, ಇನ್ನು ಮುಂದೆ ನಮ್ಮ ಹಳ್ಳಿ, ಹಳ್ಳಿಗೆ ಬಂದು ಬೀಡಿ ಬ್ರ್ಯಾಂಚು ತೆರೆದು, ಮನೆ ಮನೆಗೆ ಎಲೆ–ತಂಬಾಕು ಕೊಟ್ಟು ಬೀಡಿ ಕಟ್ಟಿಸುತ್ತವಂತೆ' ಹಸಿದ ಬಡವರ ಹೊಟ್ಟೆ ತಣಿಸುವಂತಹ ಸುದ್ದಿ ತಂದ ಮ್ಯೊದಿನ್ ಬ್ಯಾರಿಯವರೇ, ಮೊಟ್ಟ ಮೊದಲಿಗೆ ಬೀಡಿ ಕಂಪನಿಯೊಂದರ ಕಾಂಟ್ರ್ಯಾಕ್ಟ್ ಪಡೆದು ನಮ್ಮೂರಲ್ಲಿ ಬೀಡಿ ಬ್ರಾಂಚೊಂದನ್ನು ಆರಂಭಿಸಿಯೇ ಬಿಟ್ಟರು. ಈ 'ಬೀಡಿ' ಬ್ರಾಂಚು ಆರಂಭಗೊಂಡಿದ್ದು ನಮ್ಮೂರಿಗೆ ವಿಮಾನ ಬಂದ ವರ್ಷದಲ್ಲೇ ಅಂದರೆ ೧೯೫೨ ರಲ್ಲಿ.

'ಊರಿಗೆ ವಿಮಾನ ಬಂದು ನಮ್ಮೂರ ಭೂಹಿಡುವಳಿದಾರರ ನೆಮ್ಮದಿಯನ್ನೆಲ್ಲ ಹೊತ್ತೊಯ್ತ್ಯಿ ತೇನೋ' ಎಂಬಂತೆ ವಿಮಾನದ ಜತೆ ಜತೆಗೇನೇ ಹಾರಿ ಬಂದ ಬೀಡಿ ಎಂಬ ಉದ್ಯಮ ಊರ ಧಣಿಗಳ ನೆಮ್ಮದಿಯನ್ನು ಸಂಪೂರ್ಣ ಕದಡಿಬಿಟ್ಟಿತ್ತು.

ಹಿಂದೆ ಪರಂಗಿ ಸರಕಾರವಿದ್ದ ಕಾಲದಲ್ಲಿ, ಗಟ್ಟದ ಮೇಲಿಂದ ಆಮಿಷಗಳ ಮಾಲೆ ಹಿಡಿದು ಇಳಿದು ಬರುವ ಸೇರೆಗಾರರ ಹಿಂದೆ ತಮ್ಮ ಮೂಲದ ಹೊಲೆಯರು ಮತ್ತು ಬಿಸಿ ಒಕ್ಕಲ ಮಕ್ಕಳು, ಕಿಂದರಿ ಜೋಗಿಯ ಬೆನ್ನು ಹಿಡಿದು ಹೊರಟ ಇಲಿಗಳಂತೆ ಗಟ್ಟವೇರಿದ ಸಂದರ್ಭದಲ್ಲೂ ಈ ಧಣಿಗಳು ಅಷ್ಟೊಂದು ತಲೆಕೆಡಿಸಿಕೊಂಡಿರಲಿಲ್ಲ. 'ಗಟ್ಟದ ಮೇಲಿನ ಗೌಡ್ರುಗಳ ತೋಟಗಳಲ್ಲಿ ಕಾಸಿನ ಮಳೆ ಸುರಿಯುತ್ತೆ ಅಂತ ಆ ಸೇರೆಗಾರ ಇವರತ್ತ ಆಸೆಯ ಬಲೆ ಎಸೆದಿರಬೇಕು. ಅದಕ್ಕೆ ಇವು ಸಿಕ್ಕಾಕ್ಕೊಂಡು ಗಟ್ಟವೇರಿದ್ದಾವೆ. ನಾಳೆ ಕುಂಡೆಕೊಬ್ಬು ಕರಗಿದ ಮೇಲೆ ಗಟ್ಟ ಇಳಿದೇ ಇಳಿಯುತ್ತವೆ' ಎಂದು ತಮ್ಮ ಹೆಗಲಿನ ಮೇಲಿನ ಬೈರಾಸು ಕೊಡವಿ ಸುಮ್ಮನಿದ್ದ ಭೂಮಾಲೀಕರು, ಇದೀಗ ಕಾರ್ಖಾನೆ ಕೆಲಸಗಳಿಗಾಗಿ ಕುಡಾಲ ಪೇಟೆಯತ್ತ ಆಳುಗಳು ಗಂಟುಮೂಟೆ ಕಟ್ಟಿಕೊಂಡು ಹೊರಟಾಗ ಮಾತ್ರ ತೋರಿದ ಅಸಹನೆ, ಕೋಪ ಅಷ್ಟಿಷ್ಟಲ್ಲ. ಆಳುಮಕ್ಕಳಿಂದ ತಮಗೆ ಬಾಕಿ ಬರಬೇಕಾದ ಸಾಲ ತೀರಿಕೆಗಾಗಿ ಆ ಕುಟುಂಬ ಒಬ್ಬೊಬ್ಬರನ್ನು ಒತ್ತೆ ಇರಿಸಿಕೊಂಡ ನಂತರವಷ್ಟೇ ಆ ಕುಟುಂಬಗಳನ್ನು ಕೂಲೂರ ನದಿ ದಾಟಲು ಅನುವು ಮಾಡಿಕೊಟ್ಟವರು ಈ ಧಣಿಗಳು.

ಆದರೆ ಈ ಬೀಡಿ ಉದ್ಯಮ ಎಂಬುದು ಕುಡಾಲ ಪೇಟೆಯಿಂದ ನಮ್ಮೂರೊಳಗೆ ಕಾಲಿಟ್ಟು, ಎಂದಿಗೆ ಮನೆ ಮನೆಗೆ ಪ್ರವೇಶ ಪಡೆಯಿತೋ ಅಂದಿನಿಂದಲೇ ಧಣಿಗಳ ಪಕ್ಕೆಲುಬುಗಳು ಲಟ ಲಟನೆ ಮುರಿದಂತಾಗಿ ಹೋಯ್ತು. ಧಣಿಯರ ಸಾಗುವಳಿ ಕೆಲಸಕ್ಕೆ, ಮನೆ–ಅಂಗಳದ ಕೆಲಸಕ್ಕೆ ಬರುತ್ತಿದ್ದ ಹೆಣ್ಣಾಳುಗಳನ್ನು ಈ ಬೀಡಿ ಉದ್ಯಮ ಸಂಪೂರ್ಣ ಸೆಳೆಯಿತಲ್ಲದೆ, ಒಡೆಯರ ಹಂಗಿಲ್ಲದಂತೆ, ಅವರಿಗೊಂದೂ ದೊಗ್ಗು ಸಲಾಂ ಹಾಕದಂತೆ ಮರ್ಯಾದೆಯಿಂದ ತಮ್ಮ ತಮ್ಮ ಮನೆಯೊಳಗೆ ಕೂತು ಕಾಸು ಸಂಪಾದಿಸುವುದರ ಜತೆಗೆ, ಸ್ವಾಭಿಮಾನ, ಆತ್ಮವಿಶ್ವಾಸವನ್ನು ಸಂಪಾದಿಸುವ ಅವಕಾಶವನ್ನೂ ಅವರಿಗದು ಒದಗಿಸಿ ಕೊಟ್ಟಿತು. ಅದುವರೆಗೂ ಹಾವಿನ ಹೆಡೆಯಡಿಯ ಕಪ್ಪೆಯಂತೆ ಬದುಕುತ್ತಿದ್ದ ಕಾರ್ಮಿಕರಿಗೆ, ಅದರಲ್ಲೂ ಮಹಿಳಾ ಕಾರ್ಮಿಕರಿಗೆ ಬಿಡುಗಡೆಯ ಹಾದಿಯೊಂದನ್ನು ಕಲ್ಪಿಸಿ ಕೊಟ್ಟ ಈ ಬೀಡಿ ಉದ್ಯಮ, ಭೂಮಾಲೀಕರನ್ನು ಪರೋಕ್ಷವಾಗಿ ಸಂಕಷ್ಟದ ಅಥವಾ ಇಕ್ಕಟ್ಟಿನ ಹಾದಿಗೆ ಇಳಿಸಿಬಿಟ್ಟಿದ್ದು ಒಂದು ಐತಿಹಾಸಿಕ ಸತ್ಯ.

ಗದ್ದೆ ತೋಟ ಅಂಗಳಗಳಲ್ಲಿ ದುಡಿಯುವ ಹೆಣ್ಣಾಳುಗಳು, ನೆರಳಲ್ಲಿ ಕೂತು ಬೀಡಿ ಎಲೆ ಸುರುಟುವ ಕೆಲಸಕ್ಕೆ ಮುಂದಾದಾಗ ಸಹಜವಾಗಿಯೇ ಗಂಡಾಳುಗಳಿಗೆ ಬೇಡಿಕೆ ಏರಿತು. ಎರಡು ರೂಪಾಯಿ, ಎರಡು ಸೇರು ಅಕ್ಕಿ ಪಡಿ ಪಡೆಯುತ್ತಿದ್ದ ಗಂಡಾಳುಗಳು ನಾಲ್ಕು ಸೇರು ಅಕ್ಕಿ ಪಡಿ ನೀಡಬೇಕೆಂಬ ಬೇಡಿಕೆಯನ್ನು ಧಣಿಗಳ ಮುಂದಿಟ್ಟರು. ಧಣಿಗಳಿಗೆ ಸಕಾಲದಲ್ಲೇ ಸಾಗುವಳಿಯನ್ನು ಮುಗಿಸಬೇಕೆಂಬ ತುರ್ತಿದ್ದರಿಂದ ಗಂಡಾಳುಗಳ ಬೇಡಿಕೆಗಳಿಗೆ ಮಣಿಯಲೇಬೇಕಾಯಿತು. ಅಷ್ಟಾದರೆ ಧಣಿಗಳ ಸಮಸ್ಯೆ ಬಗೆಹರಿದಂತಾಯಿತೆ? ಇಲ್ಲ. ಗದ್ದೆ ಸಾಗುವಳಿ ಕೆಲಸದಲ್ಲಿ ಗದ್ದೆ ಉಳುವವನು ಮತ್ತು ಬೀಜ ಬಿತ್ತುವವನು ಗಂಡಸಾದರೆ, ಭತ್ತದ ಸಸಿ ನಾಟಿ ಮಾಡುವವಳು ಹೆಂಗಸು. 'ಗಂಟೆಗಟ್ಟಲೆ ಬೆನ್ನು ಬಾಗಿಸಿಕೊಂಡು ನಾಟಿ ಮಾಡುವ ಕೆಲಸ ಹೆಂಗಸರಿಂದಲ್ಲದೆ ಗಂಡಸರಿಂದ ಮಾಡಲಾಗದು; ಗಂಡಸರ ದೇಹ ಪ್ರಕೃತಿ ದೇಹ ರಚನೆಯೇ ಆ ಕೆಲಸಕ್ಕೆ ಒಗ್ಗುವಂತಹದಲ್ಲ' ಎಂದು ನಮ್ಮಮ್ಮ ದೊಡ್ಡ 'ಫಿಸಿಯೋ ಆಂಥ್ರೋಪಾಲಜಿಸ್ಟ್'ನಂತೆ ಆಗಾಗ್ಗೆ ಮಾತನಾಡುವುದನ್ನು ಅಮ್ಮನ ತೊಡೆಯಲ್ಲಿ ಕೂತೇ ನಾನು ಕೇಳಿಸಿಕೊಂಡಿದ್ದಿದೆ.

ಇದೀಗ ಈ ಬೀಡಿ ಉದ್ಯಮದ ದೆಸೆಯಿಂದಾಗಿ ಸಾಗುವಳಿಯ ನಾಟಿ ಕೆಲಸಕ್ಕೆ ಹೆಣ್ಣಾಳುಗಳ ಕೊರತೆಯುಂಟಾದಾಗ ಬೀಡಿ ಸುರುಟಲಾಗದ, ಬಲಿತ ಮುದಿ ಕೈಗಳು ಕೃಷಿಕೆಲಸಕ್ಕೆ ಲಭ್ಯವಾದರೂ, ಅವರೂ ತಮ್ಮ ಪಡಿಯನ್ನು ಹೆಚ್ಚಿಸಬೇಕೆಂಬ ಬೇಡಿಕೆಯನ್ನು ಧಣಿಗಳ ಮುಂದಿಟ್ಟರು. ಇವೆಲ್ಲವೂ ಸಾಗುವಳಿಯನ್ನು ನಂಬಿಕೊಂಡಿದ್ದ ಭೂಹಿಡುವಳಿದಾರರನ್ನು ಇನ್ನಷ್ಟು ಪೇಚುಗೀಡು ಮಾಡಿತು.

ಬೀಡಿ ಉದ್ಯಮದ ಪರೋಕ್ಷ ಆರ್ಥಿಕ ಬೆಂಬಲದಿಂದಾಗಿ ಅದುವರೆಗೂ ಅಸಂಘಟಿತವಾಗಿದ್ದ ಕೃಷಿಕಾರ್ಮಿಕ ವಲಯದಲ್ಲಿ, ಭೂಮಾಲೀಕರನ್ನು ಪ್ರಶ್ನಿಸುವ ಹಾಗೂ ಅವರಿಗೆ ಸಡ್ಡು ಹೊಡೆದು ನಿಲ್ಲುವ ಒಂದು ಪ್ರತಿಭಟನಾ ಶಕ್ತಿ ತನ್ನಿಂತಾನೆ ಹುಟ್ಟಿಕೊಂಡು ಬಿಟ್ಟಿತು. ಹಾಗೆಯೇ ಸ್ತ್ರೀ ಸಬಲೀಕರಣ ಎಂಬ ಪದವೇ ಚಾಲ್ತಿಯಲ್ಲಿಲ್ಲದ ಆ ಕಾಲದಲ್ಲಿ ಆ ಪ್ರಕ್ರಿಯೆಗೆ ಬೀಡಿ ಉದ್ಯಮ ನೀಡಿದ ಚಾಲನೆಯಿಂದಾಗಿ ನಮ್ಮೂರಿನ ಕೆಳವರ್ಗದ ಹಾಗೂ ಆರ್ಥಿಕವಾಗಿ ಕೆಳಪದರದಲ್ಲಿರುವ ಮೇಲ್ವರ್ಗದ ಮಹಿಳೆಯರಿಗೂ ಆರ್ಥಿಕ ಬಲ ಬಂದಂತಾಗಿ, ಆರ್ಥಿಕ ಬಲಾಢ್ಯರು ಮಾತ್ರವಲ್ಲ ಇಡೀಯ ಪುರುಷ ಲೋಕವನ್ನೇ ಎದುರಿಸುವ ಆತ್ಮಸ್ಥೈರ್ಯವೊಂದು ಅವರೊಳಗೆ ಪ್ರಾಪ್ತವಾಯಿತು.

ಕುಡಾಲದ ಪೇಟೆಯ ಹೆಣ್ಣು ಮಕ್ಕಳಲ್ಲಿ ಈ ಆತ್ಮಸ್ಥೈರ್ಯವೆಂಬುದು ಎಂದೋ ತುಂಬಿ ತುಳುಕಲಾರಂಭಿಸಿದೆ ಎಂದು ಅಮ್ಮನಮ್ಮ ಅಮ್ಮನಲ್ಲಿ ಹೇಳುತ್ತಿದ್ದರಂತೆ ಅವರ ಬಾಲ್ಯದಲ್ಲಿ. ನಾನು ಅಮ್ಮನ ಕೈಹಿಡಿದು ಕುಡಾಲ ಪೇಟೆಗೆ ಮಿಸ್ಕಿತರ ಅಥವಾ ಕಾಮರತ ಬಸ್ಸೇರಿ ಹೋಗುವ ಪ್ರತೀ ಸಂದರ್ಭದಲ್ಲೂ ಆ ಕುಡಾಲದ ಪೇಟೆಯ ಹೆಣ್ಣು ಮಕ್ಕಳನ್ನು ಕಂಡಾಗಲೆಲ್ಲ, ಅವರೆಲ್ಲ ನಮ್ಮೂರಿನ ಹೆಣ್ಣು ಮಕ್ಕಳಿಗಿಂತ ಬಹಳಷ್ಟು ಭಿನ್ನ ಎಂದು ನನ್ನ ಪುಟ್ಟ ಮನಸ್ಸು ಅನೇಕ ಬಾರಿ ಆ ವಿಚಾರವನ್ನು ತೂಗುತ್ತಿತ್ತು. ಹಾಗೆಯೇ ಪೇಟೆಯಲ್ಲಿಳಿದು, ಅಮ್ಮನ ಕೈ ಹಿಡಿದು ನದಿ ಸೆರಗಿನ ದಡದಲ್ಲಿ ಬಂದು ನಿಂತಾಗ ನನ್ನ ಕಣ್ಣೆದುರಿಗೆ ಕಾಣಿಸಿಕೊಳ್ಳುತ್ತಿದ್ದ ಚಿತ್ರಣ ಕೂಡ ನನ್ನ ಮನದಲ್ಲಿ ಅದೇ ಭಾವನೆಯನ್ನು ಹಾಗೂ ನನ್ನ ಎಳೆಯ ಕಣ್ಣುಗಳಿಗೆ ಒಂದು ಅಚ್ಚರಿಯ ಹೊದಿಕೆಯನ್ನೇ ಹೊದಿಸಿ ಬಿಡುತ್ತಿತ್ತು.

ಮುಂಜಾನೆ ಸರಿಯುತ್ತಿದ್ದಂತೆ ನದಿ ಸೆರಗಿನ ಮೇಲಿರುವ ಕಾರ್ಖಾನೆಗಳಿಗೆ ತರಾತುರಿಯಿಂದ ಕೈ ಚೀಲ ಹಿಡಿದುಕೊಂಡು ನಡೆಯುವವರು ಗಂಡಸರು, ಹೆಂಗಸರು ಎಷ್ಟು ಮಂದಿ! ಎಲ್ಲರಲ್ಲೂ ಒಂದಷ್ಟು ಅವಸರ, ಒಂದಷ್ಟು ಮುಗುಳ್ನಗು... ಒಂದಷ್ಟು ಆತ್ಮವಿಶ್ವಾಸ! ಸಂಪಾದನೆಯ ಕೈ, ಮನಸ್ಸೊಳಗೆ ಆತ್ಮವಿಶ್ವಾಸವನ್ನು ತುಂಬಿಸುವುದಂತೆ– ಇದು ಅಮ್ಮ ಹೇಳಿದ್ದು. ಒಂದು ಬಾರಿ ನದಿ ತೀರದಲ್ಲಿ ಹಾಗೆಯೇ ನೋಡುತ್ತ ಅಮ್ಮನ ಕೈಹಿಡಿದು ನಿಂತಿದ್ದೆ.

ಅಮ್ಮನ ದೃಷ್ಟಿಯೂ ದೂರದಲ್ಲಿರುವ ಗೇರುಬೀಜದ ಕಾರ್ಖಾನೆಯ ಅಗಲ ದಾರಿಯತ್ತ ನೆಟ್ಟಿತ್ತು. ಹಾಗೇ ಅಮ್ಮ ದೂರಕ್ಕೆ ನೋಡುತ್ತಿದ್ದಂತೆ... ಇಲ್ಲೇ ಅಮ್ಮನ ಕಾಲಬುಡಕ್ಕೆ ಯಾರೋ ಬಾಗಿದಂತಾಯಿತು. ಅಮ್ಮ ತಲೆ ಬಾಗಿಸಿ ನೋಡುತ್ತಾರೇನು ನಮ್ಮೂರಿನ ಚಾಲಗೇಣಿ ಒಕ್ಕಲಿನ ತ್ಯಾಂಪಮ್ಯೊಲಿಯ ಹಿರಿಮಗಳು ವಾರಿಜ ಮತ್ತು ಅವನ ಹೆಂಡತಿ ಪದುಮು! ಮಗಳು ವಾರಿಜ ಅಮ್ಮನ ಕಾಲಿಗೆ ರಗಿದ್ದಾಳೆ. ಅಮ್ಮನಿಗೆ ಒಂದೆಡೆ ಮುಜುಗರ; ಮತ್ತೊಂದೆಡೆ ಸಂತೋಷ! ಅಯ್ಯಬ್ಬ... ಅಮ್ಮನ ಸಂತೋಷಕ್ಕೆ ಪಾರವಿದೆಯೇ? ಎಷ್ಟೋ ಕಾಲದ ನಂತರದ ಮಿಲನವದು. ನಾನಂತೂ ಅವರಿಬ್ಬರನ್ನೂ ನೋಡಿದವಳಲ್ಲ. ನಾನು ಈ ಭೂಮಿಗೆ ಇಳಿದು ಅಂದಿಗೆ ಆಗಿದ್ದು ಕೇವಲ ನಾಲ್ಕುವರ

ಅಮ್ಮನ ಕೈ ಹಿಡಿದು ನದಿ ಸೆರಗಿನ ದಡದಲ್ಲಿ ಬಂದು ನಿಂತಾಗ ನನ್ನ ಕಣ್ಣೆದುರಿಗೆ ಕಾಣಿಸಿಕೊಳ್ಳುತ್ತಿದ್ದ ಚಿತ್ರಣ ಕೂಡ ನನ್ನ ಮನದಲ್ಲಿ ಅದೇ ಭಾವನೆಯನ್ನು ಹಾಗೂ ನನ್ನ ಎಳೆಯ ಕಣ್ಣುಗಳಿಗೆ ಒಂದು ಅಚ್ಚರಿಯ ಹೊದಿಕೆಯನ್ನೇ ಹೊದಿಸಿ ಬಿಡುತ್ತಿತ್ತು. ಮುಂಜಾನೆ ಸರಿಯುತ್ತಿದ್ದಂತೆ ನದಿ ಸೆರಗಿನ ಮೇಲಿರುವ ಕಾರ್ಖಾನೆಗಳಿಗೆ ತರಾತುರಿಯಿಂದ ಕೈ ಚೀಲ ಹಿಡಿದುಕೊಂಡು ನಡೆಯುವವರು ಗಂಡಸರು, ಹೆಂಗಸರು ಎಷ್ಟು ಮಂದಿ! ಎಲ್ಲರಲ್ಲೂ ಒಂದಷ್ಟು ಅವಸರ, ಒಂದಷ್ಟು ಮುಗುಳ್ನಗು... ಒಂದಷ್ಟು ಆತ್ಮವಿಶ್ವಾಸ! ಸಂಪಾದನೆಯ ಕೈ, ಮನಸ್ಸೊಳಗೆ ಆತ್ಮವಿಶ್ವಾಸವನ್ನು ತುಂಬಿಸುವುದಂತೆ–ಇದು ಅಮ್ಮ ಹೇಳಿದ್ದು.

ವರುಷ. ತ್ಯಾಂಪಮ್ಮೈಲಿ ಹಿರಿಮಗಳು ವಾರಿಜಳಿಗೆ ಇಪ್ಪತ್ತರ ಹರೆಯ. ನಾನು ಹುಟ್ಟುವುದಕ್ಕೆ ಹತ್ತು ವರುಷದ ಮೊದಲೇ ಅವರು ಚಾಲಗೇಣಿಯ ಬದುಕಿಗೆ ಎಳ್ಳುನೀರು ಬಿಟ್ಟು, ನಮ್ಮೂರಿನಿಂದ ಕುಡಾಲದ ಪೇಟೆಯ ಮುಳಿ ಗುಡಿಸಲಿಗೆ ಬಂದು ಸೇರಿದ್ದಾರೆ.

ಅಮ್ಮನನ್ನು ಕಂಡು ಅವರಿಗೂ ಕೂಡ ಸ್ವರ್ಗವೇ ಭೂಮಿಗೆ ಬಂದಂತಾಗಿತ್ತು. ಅಮ್ಮ ಮತ್ತು ಪದುಮುವಿಗೆ ಜಾತಿ, ಆಸ್ತಿ, ಅಂತಸ್ತಿನಲ್ಲಿ ಸಾಕಷ್ಟು ಅಂತರವಿದ್ದರೂ ಹಿಂದಿನಿಂದಲೂ ಅಮ್ಮನಿಗೆ ಆಕೆಯೆಂದರೆ ಏನೋ ಒಂಥರಾ ಪ್ರೀತಿ! ಬಾಯಲ್ಲಿದ್ದದನ್ನೇ ಕಚ್ಚಿ ಕೊಡುವಷ್ಟು ಪ್ರೀತಿ. ಒಕ್ಕಲು ಪರಂಪರೆಯಿಂದ ಬಂದ ಪದುಮು ಕೂಡ 'ಮನೆ ನೋಡಾ ಬಡವರು; ಮನ ನೋಡಾ ಸಂಪನ್ನರು' ಎಂಬಂತೆ ನಯ ವಿನಯ, ನೀತಿ ನಿಯಮ ನಿಷ್ಠೆಗಳನ್ನೆಲ್ಲ ಮಡಿಲಲ್ಲಿ ಕಟ್ಟಿಕೊಂಡೇ ಒಕ್ಕಲುತನದ ಕಷ್ಟಕೋಟಲೆಗಳನ್ನು ಸಹಿಸಿಕೊಂಡಾಕೆ. ನಾಕು ಮಂದಿಯ ನಿಷ್ಠುರದ ಮಾತುಗಳನ್ನು ಇತರರಿಂದ ನಾನು ಕೇಳೀ ಯಾಳೇ ವಿನಾ ತಾನು ಒಂದೂ ನಿಷ್ಠೂರದ ಮಾಗಳನ್ನು ಆಡಿದವಳಲ್ಲವಂತೆ. ಆಕೆಯ ಮನದಡಿಯ ನೆರಳಾಗಿ ಎಲ್ಲದರಲ್ಲೂ ತಾಯಿಗೆ ಸಮನಾಗಿ ಬೆಳೆದವಳು ಮಗಳು ವಾರಿಜ. ಇವರಿಬ್ಬರನ್ನು ಕಂಡರೆ ಅಮ್ಮನಿಗೆ ಅಂದೂ ಇಷ್ಟವಂತೆ-ಇಂದೂ ಆ ಇಷ್ಟ ಸಂತೋಷವನ್ನು ಮತ್ತು ಪದುಮುವನ್ನು ಅಪ್ಪಿಕೊಳ್ಳುವ ಮೂಲಕ ಅಮ್ಮ ನನಗೆ ವ್ಯಕ್ತಪಡಿಸಿಕೊಟ್ಟರು.

ಅಮ್ಮ ಪದುಮುವಿನ ಸುಖಕಷ್ಟ ವಿಚಾರಿಸುವಷ್ಟರಲ್ಲಿ ಹತ್ತಿಪ್ಪತ್ತು ಹೆಂಗಸರಿರುವ ಮೂರ್ನಾಕು ಹಿಂಡುಗಳು ನಮ್ಮೆದುರೇ ಹಾದು ಕಾರ್ಖಾನೆಯತ್ತ ಹೊರಟಿದ್ದವು. ಶಿಸ್ತಾಗಿ ತಲೆಸೂಡಿಗೆ ಅಬ್ಬಮಲ್ಲಿಗೆ, ಊರಮಲ್ಲಿಗೆ ಹೂ ಸುತ್ತಿಕೊಂಡಿದ್ದ ಆ ಮಹಿಳೆಯರ ಮಾತೇನು... ಕತೆ ಯೇನು... ನಗುವೇನು!... ಅವರ ನಗುವಲ್ಲಿರುವ ಅಬ್ಬರ ವೇನು? ಅವರ ನಡಿಗೆಯಲ್ಲಿರುವ ಜಬರ್ದಸ್ತೇನು! ಪದಮು ಮತ್ತು ಅವಳ ಮಗಳು ವಾರಿಜ ತಮ್ಮ ತಮ್ಮ ಜಡೆ, ಸೂಡಿಗೆ ಅಲಂಕಾರಕ್ಕೆ ಹಾಕಿಕೊಂಡಂತೆಯೆ ಆ ಹೆಂಗಸರಲ್ಲೂ ಕೆಲವರು ತಲೆಸೂಡಿಗೆ ಬೆಳ್ಳಿಯ ಗುಲಾಬಿ ಹೂ ಹಾಕಿಕೊಂಡಿದ್ದರೆ ಮತ್ತು ಕೆಲವರು ಬೆಳ್ಳಿಯ ಮಲ್ಲಿಗೆ ಮೊಗ್ಗು ಹಾಕಿಕೊಂಡಿದ್ದಾರೆ. 'ಈ ನದಿದಡದ ಕಾರ್ಖಾನೆ ಗಳು ಆ ಮಹಿಳಾ ಕಾರ್ಮಿಕರಿಗೆಲ್ಲ ಆತ್ಮ ಬಲವನ್ನು ಹೆಚ್ಚಿ ಸುವಂತಹ ಕಾಸಿನ ಬಲವನ್ನು ತಂದುಕೊಟ್ಟಿರುವ ಕಾರಣ ಅವರ ನಡಿಗೆಯಲ್ಲಿ, ಮಾತಿನಲ್ಲಿ ಎಲ್ಲದರಲ್ಲೂ ಒಂದು ಜಬದಸ್ತು ಕಾಣಿಸುತ್ತದೆ ಎಂದು ಅಮ್ಮ ಆ ನಂತರ ತಮ್ಮ ಅಣ್ಣನಲ್ಲಿ ಹೇಳಿಕೊಂಡಾಗ ಅಪ್ಪ ನಡುವೆ ಬಾಯಿ ಹಾಕಿ ಹೇಳಿದ್ದು ಹೀಗೆ. 'ಹೌದೌದು ಆತ್ಮಬಲ.. ಆರ್ಥಿಕ ಬಲ ಎಲ್ಲ ಕೊಡುತ್ತೆ.... ಅಷ್ಟೇ ಬೇಗ ಹೊಗೆ ಊದಿ ಊದಿ ಪೇಟೆಯವರಿಗೆಲ್ಲ ದಮ್ಮು ರೋಗವನ್ನು ಕೊಡುತ್ತೆ'... ಅಂತಾ.

ಅಪ್ಪ ಹೇಳಿದ್ದು ನಿಜವೇ ಅಂತೆ. ತ್ಯಾಂಪಮ್ಮೈಲಿಗೆ ದಮ್ಮುರೋಗ ಬಂದಿದ್ದೇ ಈ ಕಾರ್ಖಾನೆ ಕೆಲಸಕ್ಕೆ ಬಂದ ಮೇಲಂತೆ. ಅವನಿಗೆ ಹಂಚಿನ ಕಾರ್ಖಾನೆಯಲ್ಲಿ ಹೊಗೆ ಕೊಳವೆಯ ಹತ್ತಿರನೇ ಕೆಲಸವಿದ್ದದ್ದಂತೆ. ಈಗ ಅವ ಕಾರ್ಖಾನೆ ಕೆಲಸಕ್ಕೆ ಕಳುಹಿಸುತ್ತಿರುವುದಂತೆ ಹೋಗುವು ದನ್ನು ಕೈದು ಮಾಡಿ ಮಗಳು-ಮಡಿದಿಯನ್ನು ಗೇರು ಬೀಜದ ಕಾರ್ಖಾನೆ ಕೆಲಸಕ್ಕೆ ಕಳುಹಿಸುತ್ತಿರುವುದಂತೆ. ಈಗ ಅವನಿಗೆ ಬೋಜಪಂಡಿತನ ಅಪ್ಪನ ಕೈಮದ್ದಂತೆ. ಇದನ್ನೆಲ್ಲ ಹೇಳಿದ್ದು ಆತನ ಹೆಂಡತಿ ಪದುಮು. ಕುಡಾಲದ ಪೇಟೆಯ ಗಾಳಿಯೇ ಹಾಗಿರಬೇಕು! ಪೇಟೆ ಹತ್ತಿದ ಪದುಮು ಮತ್ತು ವಾರಿಜಳಲ್ಲೂ ಕೂಡಾ ಕುಡಾಲದ ಪೇಟೆಯ ಹೆಂಗಸರಂತೆ ನಡಿಗೆಯಲ್ಲಿ ಮಾತಿನಲ್ಲಿ ಒಂದು ರೀತಿಯ ಆತ್ಮವಿಶ್ವಾಸದ ಮೊರೆ ಕವುಚಿತ್ತು. ಆದರೆ ಅದಕ್ಕೆ ಅಹಂಕಾರದ ಗಿಲೀಟು ಮಾತ್ರ ಮೆದ್ದುಕೊಂಡಿರಲಿಲ್ಲ. ಇದೀಗ ಬೀಡಿ ಉದ್ಯಮದ ದೆಸೆಯಿಂದ ನಮ್ಮೂರಿನ ಹಳ್ಳಿಯ ಹೆಂಗಸರು ಕೂಡ ಹೀಗೆಯೇ ಪೇಟೆಯ ಹೆಂಗ ಸರಂತಾದರು.

ಸ್ವಾತಂತ್ರ್ಯ ಪೂರ್ವದಲ್ಲಿ ಕುಡಾಲದ ಪೇಟೆಯ ಬೀಡಿ ಕಂಪನಿಗಳಲ್ಲಿ ಗಂಡಸರು ಮಾತ್ರವೇ ತಮ್ಮ ಗಡಸು ಕೈಗಳಿಂದ ತಯಾರಿಸುತ್ತಿದ್ದ ಗ್ರೇಟ್ ದರ್ಬಾರ್ ಬೀಡಿ, ಸುವಾಸಿನಿ ಬೀಡಿ ಗಣೇಶ್ ಬೀಡಿಗಳಂತಹ ಬೀಡಿಗಳನ್ ಸೇದುತ್ತ ನೆಮ್ಮದಿಯ ಹೊಗೆ ಬಿಡುತ್ತಿದ್ದ ನಮ್ಮ ಧಣಿಗಳೇ ಈಗ ತಮ್ಮೂರ ಹೆಣ್ಣು ಮಕ್ಕಳು ವನಿರಾಗಿ ಸುರುಟಿ ಸುಂದರವಾದ ಬೀಡಿಗಳನ್ನು ಮಾತ್ರ ಕಣ್ಣೆತ್ತಿಯೂ ನೋ ಲಿಲ್ಲ. ಬದಲಿಗೆ ಆ ಬೀಡಿ ಸುರುಟುವ ಹೆಣ್ಣು ಮಕ್ಕ ಶೀಲದ ಬಗ್ಗೆಯೇ ಊರವರು ನಂಬುವಂತಹ ಹಲವ ಕಲ್ಪಿತ ಕತೆಗಳನ್ನು ಹೆಣೆದು ಗಾಳಿಗೆ ತೂರಿಬಿಟ್ಟರು.

ತಮ್ಮ ಹಳ್ಳಿಯಲ್ಲಿರುವ ಬೀಡಿ ಕಂಪನಿಯ ಬ್ರ್ಯಾಂಚುಗಳಿಂದ ನೂಲಿ ಎಲೆ ತಂಬಾಕು ತಂದು ತವ ಮನೆಯಂಗಳದಲ್ಲಿ ಕೂತು ಬೀಡಿ ಕಟ್ಟುವ ಹೆ ಮಕ್ಕಳೆಲ್ಲ, ತಾವು ಕಟ್ಟಿದ ಬೀಡಿಗಳನ್ನು ಮರಳಿ ಬೀ ಬ್ರ್ಯಾಂಚಿಗೆ ನೀಡಲು ಜಬರ್‌ದಸ್ತಿನಿಂದ ಲಕ್ಷಣವಾ ಹೊರಡುವುದೇ ಹಲವು ಮಂದಿಯ ಕಣ್ಣಿಗೆ ಮುಳ್ಳಾ ಪರಿಣಮಿಸತೊಡಗಿತ್ತು. 'ಈ ಹೆಣ್ಣು ಮಕ್ಕಳು ನಮ್ಮ ಕುಡ ಲದ ಪೇಟೆಯ ಹೆಣ್ಣುಮಕ್ಕಳಂತೆ ಸಿಂಗಾರ ಮಾ ಕೊಂಡು ಬಿಡಿಕಂಪೆನಿಗೆ ಹೋಗಿ ಬರುವುದು, ನವ ಊರಿಗೇನು ಒಳ್ಳೆಯ ಹೆಸರು ತರುವಂತಹದ್ದ ಮಾರಾಯ... ನಮ್ಮ ಬ್ಯಾರಿಮಕ್ಳು ಈ ಬೀಡಿ ಬ್ರ್ಯಾಂಚ ಗಳನ್ನೆಲ್ಲ ತಾವೇ ಕುಂತ್ರಾಟು (ಕಂಟ್ರಾಕ್ಟ್) ಹಿಡಿದದ ಇದಕ್ಕೇ...' ಎಂದು ಆರ್ಥಿಕ ಬಲಾಢ್ಯರು, ಅದರಲು ತಮ್ಮ ಸಾಗುವಳಿ ಕೆಲಸಕ್ಕೆ ಹೆಣ್ಣಾಳುಗಳ ಕೊರತೆಯನ ನುಭವಿಸಿದ ಲೋಕು ಶೆಟ್ಟರಂತಹ ಭೂಮಾಲೀಕರ ಹತ್ತಾರು ವರ್ಷಗಳಿಂದ ತಮ್ಮ ಹಲವಾರು ವ್ಯಾಪಾರಗ ಮುಂದೆ ಇದೇ ಮುಸ್ಲಿಂ ವ್ಯಾಪಾರಿಗಳಿಂದ ತೀವ್ರ ಪ ಪೋಟಿ ಅನುಭವಿಸುತ್ತಿರುವ ಚೇಳು ಕಾಮತರು, ಕೊ ಪೈಗಳಂತಹ ಹಲವು ಕೊಂಕಣಿ ವ್ಯಾಪಾರಸ್ಥರು ಕೂಡ ಸಾಕಷ್ಟು ಆಡಿಕೊಂಡು, ಹಳ್ಳಿಗಳಲ್ಲಿ ಬೀಡಿ ಕಂಟ್ರಾಕ್ಟುದಾರಿ ವಹಿಸಿಕೊಂಡು ಎಲ್ಲ ಮುಸ್ಲಿಂ ಗುತ್ತಿಗೆದಾರರ ಬಗ್ಗೆಯ ಹಲ್ಲು ಮಸೆದರು.

ಅಷ್ಟಕ್ಕೂ ಸುಮ್ಮನಾಗದ ಕೆಲವು ವಿಕಲ್ಪ ಮನಸ ಗಳು ಮುಸ್ಲಿಂ ಬೀಡಿ ಗುತ್ತಿಗೆದಾರ ಹಾಗೂ ಬೀಡಿ ಕಟ್ಟು ಹೆಣ್ಣು ಮಕ್ಕಳ ಪಾತ್ರಗಳನ್ನೇ ಸೃಷ್ಟಿಸಿ ಊರ

ನಾಟಕಗಳನ್ನು ಬರೆಸಿ ಆಡಿಸಿ ತೋರಿಸಲಾರಂಭಿಸಿದರು. ಹೀಗೆ ಇದ್ದಕ್ಕಿದ್ದಂತೆ ಬೀಡಿ ಕಂಪೆನಿಗಳ ಹಿಂಡು ಕುಡಾಲದ ಪೇಟೆಗೆ ಬಂದು ಸೇರಿಕೊಳ್ಳುವುದಕ್ಕೂ, ನಂತರ ನಿಧಾನಕ್ಕದು ಅಲ್ಲಿಂದ ಚದುರಿ ವಿವಿಧ ಬ್ರ್ಯಾಂಚುಗಳಾಗಿ ಹಳ್ಳಿ ಸೇರುವುದಕ್ಕೂ, ಹಾಗೆ ಹಳ್ಳಿ ಸೇರಿದ್ದ ಬೀಡಿ ಬ್ರ್ಯಾಂಚುಗಳ ಗುತ್ತಿಗೆಯನ್ನು ಹೆಚ್ಚಾಗಿ ಮುಸ್ಲಿಂ ಯುವಕರೇ ವಹಿಸಿಕೊಂಡದ್ದಕ್ಕೂ ಕೆಲವು ಬಲವಾದ ಆರ್ಥಿಕ ಕಾರಣಗಳಿದ್ದವು.

ಸ್ವಾತಂತ್ರ್ಯ ಪೂರ್ವದಲ್ಲಿ ಅಂದರೆ ೨೦ನೇ ಶತಮಾನದ ಎರಡನೇ ದಶಕದ ಆದಿಯಲ್ಲಿ ಕೇರಳದ ಮಲಬಾರ್ ಪ್ರದೇಶದ ತಲಚೇರಿ, ಕಣ್ಣೂರು ಹಾಗೂ ಅವಿಭಜಿತ ದಕ್ಷಿಣ ಕನ್ನಡದ ಭಾಗವೇ ಆಗಿದ್ದ ಕಾಸರಗೋಡು ಜಿಲ್ಲೆಯ ದಕ್ಷಿಣ ತುದಿಯಲ್ಲಿರುವ ತ್ರಿಕರಪುರವರೆಗೂ ಬಹಳವಾಗಿ ವ್ಯಾಪಿಸಿದ್ದ ಬೀಡಿ ಉದ್ಯಮದ ಪರಿಚಯ ಆಗ ಕುಡಾಲದ ಮಂದಿಗೆ ಅಷ್ಟೇನೂ ಇರಲಿಲ್ಲ. ಕೇರಳ ಪ್ರಾಂತ್ಯದಲ್ಲೆಲ್ಲ ಬೀಡಿ ಪ್ಯಾಕ್ಟರಿಗಳಿಗೇ ತೆರಳಿ, ಗಂಡಸರು ಮಾತ್ರವೇ ಬೀಡಿ ಕಟ್ಟಬೇಕಾಗಿದ್ದ ಆ ದಿನಗಳಲ್ಲಿ, ಉದ್ಯಮದ ಮಾಲೀಕರ ದಬ್ಬಾಳಿಕೆ, ಶೋಷಣೆಯಿಂದಾಗಿ ಬೇಸತ್ತ ಬೀಡಿ ಕಾರ್ಮಿಕರೆಲ್ಲ ಸಂಘಟಿತರಾಗಿ, ಆಗ ಕೇರಳದಲ್ಲಿ ಚಾಲ್ತಿಯಲ್ಲಿದ್ದ ಟ್ರೇಡ್ ಯೂನಿಯನ್ ಚಳುವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳತೊಡಗಿದರು.

ಮಾಲೀಕರ ದರ್ಪಗಳನ್ನು ಬಗ್ಗು ಬಡಿಯಲು, ತಮಗೆ ದಕ್ಕಬೇಕಾದ ಸವಲತ್ತುಗಳನ್ನು ದಕ್ಕಿಸಿಕೊಳ್ಳಲು ಕಾರ್ಮಿಕರು ಟ್ರೇಡ್ ಯೂನಿಯನ್ ಸೇರಿ ಹಲವು ಹೋರಾಟದ ಚಟುವಟಿಕೆಗಳನ್ನು ವಹಿಸಿಕೊಳ್ಳತೊಡಗಿದಾಗ ಬೀಡಿ ಮಾಲೀಕರೆಲ್ಲ ಒಟ್ಟಾಗಿ ತಾವು ಮೊದಲೇ ನಿರ್ಧರಿಸಿಕೊಂಡಂತೆ ರಾತೋರಾತ್ರಿ ತಮ್ಮ ಕಂಪೆನಿಗಳನ್ನು ಯಾವುದೇ ರಗಳೆಯಿಲ್ಲದ ಕುಡಾಲದ ಪೇಟೆಗೆ ಸ್ಥಳಾಂತರಿಸಿಕೊಂಡರು. ತಮ್ಮನ್ನು ಬಗ್ಗು ಬಡಿಯಲೆತ್ನಿಸಿದ ಕೇರಳದ ಬೀಡಿ ಕಾರ್ಮಿಕರನ್ನೆಲ್ಲ ಬೀದಿಪಾಲು ಮಾಡಿ ಕುಡಾಲದ ಪೇಟೆಗೆ ಬಂದ ಬೀಡಿ ಮಾಲೀಕರು, ಕೇರಳದಲ್ಲಿದ್ದಂತೆ ಪ್ಯಾಕ್ಟರೀ ಪದ್ಧತಿಯಲ್ಲೇ ಬೀಡಿ ತಯಾರಿಕೆಯನ್ನು ಮುಂದುವರಿಸಿಕೊಂಡು ಬಂದು ಮತ್ತೆ ಗಂಡಸರನ್ನೇ ಆ ಕೆಲಸಕ್ಕೆ ನೇಮಿಸಿಕೊಂಡರು. ಆದರೆ ಕುಡಾಲದ ಪೇಟೆಯಲ್ಲಿ ಈ ಬೀಡಿ ಮಾಲೀಕರ ನೆಮ್ಮದಿ ಬಹಳ ಕಾಲ ಬಾಳಲಿಲ್ಲ. ಕೇರಳದಲ್ಲಿ ಬೀಡಿ ಕೆಲಸ ಕಳೆದುಕೊಂಡು ಬೀದಿಗೆ ಬಿದ್ದಿದ್ದ ಕಾರ್ಮಿಕರೆಲ್ಲ ನಿಧಾನಕ್ಕೆ ಕುಡಾಲದ ಪೇಟೆಗೆ ಲಗ್ಗೆಯಿಟ್ಟು ತಮ್ಮ ಕಂಪೆನಿಗಳನ್ನು ಬದಲಾಯಿಸಿ ಮತ್ತೆ ಬೀಡಿ ಕೆಲಸಕ್ಕೆ ಸೇರಿಕೊಂಡರು. ಅಷ್ಟರಲ್ಲಿ ಕುಡಾಲದ ಪೇಟೆಯ ನದಿ ಸೆರಗಲ್ಲಿದ್ದ ಹಂಚಿನ ಕಾರ್ಖಾನೆಗಳಲ್ಲಿ ಟ್ರೇಡ್ ಯೂನಿಯನ್ ಚಟುವಟಿಕೆ ಉತ್ತುಂಗಕ್ಕೇರಿತು. ಇದೇ ಸಂದರ್ಭದಲ್ಲಿ ಕೇರಳದಿಂದ ಟ್ರೇಡ್ ಯೂನಿಯನ್ ಪ್ರಜ್ಞೆಯನ್ನು ಮೈಗೂಡಿಸಿಕೊಂಡು ಬಂದಿದ್ದ ಅಲ್ಲಿನ ಬೀಡಿ ಕಾರ್ಮಿಕರು ಮತ್ತೆ ಸಂಘಟಿತರಾಗಿ ತಮ್ಮ ಕೂಲಿ ಏರಿಕೆ ಮತ್ತು ಬೋನಸ್ ಬೇಡಿಕೆಯನ್ನು ಮುಂದಿಟ್ಟು ಮುಷ್ಕರಗಳನ್ನು ಆರಂಭಿಸಿದಾಗ ಬೀಡಿ ಮಾಲೀಕರು ತಮ್ಮ ರಕ್ಷಣೆಗಾಗಿ ಮತ್ತೊಂದು ಒಳದಾರಿಯನ್ನು ಕಂಡುಕೊಳ್ಳುವುದು ಅನಿವಾರ್ಯವಾಯಿತು.

ಬೀಡಿ ಕಂಪನಿಗಳು ಹಳ್ಳಿ ಹಳ್ಳಿಗಳಲ್ಲಿ ತಮ್ಮ ಕಂಪನಿಯ ಬ್ರ್ಯಾಂಚುಗಳನ್ನು ತೆರೆದು ಅದನ್ನು ತಮ್ಮ ನಿಷ್ಠಾವಂತ ಕಾರ್ಮಿಕರಿಗೇ ಗುತ್ತಿಗೆ ನೀಡಿತು. ಯಾವುದೇ ಟ್ರೇಡ್ ಯೂನಿಯನ್ ಕೆಲಸಗಳಿಗೆ ತಲೆ ಹಾಕದೆ, ನಿಷ್ಠೆಯಿಂದ ಬೀಡಿಕಟ್ಟಿ ಸೇವೆ ಸಲ್ಲಿಸಿದ ಹಲವು ಮುಸ್ಲಿಂ ಕಾರ್ಮಿಕರು ಕಂಪನಿಯ ಈ ಗುತ್ತಿಗೆಯ ಲಾಭವನ್ನು ಪಡೆಯವಲ್ಲಿ ಯಶಸ್ವಿಯಾದರು.

> **ಒಂದು ಕಾಲದಲ್ಲಿ ಧಣಿಯರಾಗಿ ಊರಾಳುತ್ತಿದ್ದ ಲೋಕುಶೆಟ್ಟರಂತಹ ದೊಡ್ಡ ಭೂಹಿಡುವಳಿದಾರರು ಭೂಸುಧಾರಣಾ ಮಸೂದೆಯ ಕಾರಣಕ್ಕಾಗಿ ಭೂಮಿ ಕಳೆದುಕೊಂಡು ಸಣ್ಣಪ್ರಮಾಣದ ಹಿಡುವಳಿದಾರರಾಗಿ ರೂಪುಗೊಂಡರು, ಹಲವು ತಲೆಮಾರುಗಳಿಂದ ತಮ್ಮ ಭೂಮಿಯಲ್ಲಿ ಗೇಣಿ ಒಕ್ಕಲಾಗಿ ಬದುಕಿದ್ದವರಿಗೆ ಸಮವಾಗಿ ಒಬ್ಬ ಸಾಮಾನ್ಯ ಹಿಡುವಳಿದಾರನಾಗಿ ಅವರು ಬದುಕಬೇಕಾದ ಪರಿಸ್ಥಿತಿ ಬರುವಷ್ಟರಲ್ಲಿ ನಾನು ಬಾಲ್ಯಾವಸ್ಥೆ ಕಳೆದು ಯೌವನಾವಸ್ಥೆಯನ್ನು ತಲುಪಿದ್ದೆ. ಅಷ್ಟು ಹೊತ್ತಿಗಾಗಲೇ ಪಣಂಬೂರು ಬಂದರು ರಾಷ್ಟ್ರದ ಸೇವೆಗಾಗಿ ಎದ್ದು ಕೂತಿತ್ತು; ನಮ್ಮೂರ ಧಣಿ ಗೇಣಿ ಏಣಿ ಮುರಿದು ಬಿದ್ದಿತ್ತು. ಆ ಧಣಿ–ಗೇಣಿ ಪದಗಳು ಎತ್ತಲೋ ಹಾರಿಹೋಗಿದ್ದವು. ಮತ್ತೆಂದೂ ಹಾರಿ ಬರದಷ್ಟು ದೂರಕ್ಕೆ.!**

ಬೆರಳೆಣಿಕೆಯಷ್ಟು ಕುಟುಂಬಗಳನ್ನು ಹೊರತುಪಡಿಸಿದರೆ, ಈ ತುಳುವ ಜಿಲ್ಲೆಯಲ್ಲಿ ಯಾವುದೇ ಗದ್ದೆ ತೋಟಗಳಿಲ್ಲದೆ, ಕೇವಲ ಪುಡಿ ವ್ಯಾಪಾರಗಳಿಂದ ಬದುಕು ದೂಡುತ್ತಿರುವ ಹಲವು ಮುಸ್ಲಿಂ ಕುಟುಂಬಗಳಿಗೆ ಈ ಬೀಡಿ ಬ್ರ್ಯಾಂಚುಗಳ ಗುತ್ತಿಗೆ ಕೆಲಸವು ಒಂದು ನೆಮ್ಮದಿಯಿಂದ ಬದುಕುವ ದಾರಿಯೊಂದನ್ನು ತೋರಿಸಿದ್ದಂತೂ ನಿಜ.

ಕಂಪನಿಯಿಂದ ಸರಬರಾಜಾಗುವ ನೂಲು, ಎಲೆ ತಂಬಾಕುಗಳನ್ನು ಬೀಡಿ ಕಾರ್ಮಿಕರಿಗೆ ನೀಡಿ, ಅವರಿಂದ ಇಂತಿಷ್ಟು ಬೀಡಿ ವಸೂಲಿ ಮಾಡಬೇಕೆಂಬ ಕಂಪನಿಯ ನಿಯಮವನ್ನು ಗುತ್ತಿಗೆದಾರ ಜಾರಿ ಮಾಡುವ ಸಂದರ್ಭದಲ್ಲೆಲ್ಲ ಕೆಲವೊಮ್ಮೆ ಪಕ್ಷಪಾತದ ಧೋರಣೆ ತೋರಿ ತಮಗಿಷ್ಟದ ಕೆಲವೇ ಮಹಿಳಾ ಕಾರ್ಮಿರ ಸುಖ ಕಷ್ಟಗಳಿಗೆ ಮಾತ್ರವೇ ಗುತ್ತಿಗೆದಾರ ಸ್ಪಂದಿಸಿದಾಗ ಅಲ್ಲಿ ಇತರ ಮನಸ್ಸುಗಳಲ್ಲಿ ಉಂಟಾದಂತಹ ಭಾವನೆ, ಮನಸ್ಸಿನ ವ್ಯಾಪಾರಗಳ ಕಿರಿಕಿರಿಗಳೇ ನಿಧಾನಕ್ಕೆ 'ಹಾದರದ ಕತೆಗಳಾಗಿ' ಹೆಣೆಯಲ್ಪಟ್ಟು ರೆಕ್ಕೆ ಪುಕ್ಕ ಸೇರಿಕೊಂಡು ಹಾರಾಡತೊಡಗುತ್ತಿದ್ದವು. ಈ ಕತೆಗಳು ನೇರವಾಗಿ ಊರಿನ ಹಲವು ಅತೃಪ್ತ ಮನಸ್ಸುಗಳಿಗೆ ತಲುಪಿದಾಗ ಅವು ಇನ್ನೂ ವರ್ಣರಂಜಿತವಾಗಿ ವರ್ಣಿಸಲ್ಪಟ್ಟು, ಬೀಡಿಕಟ್ಟುವ ಮಹಿಳೆಯರನ್ನೆಲ್ಲ ಅಂದಿನ ಸಂಪ್ರದಾಯ ಆ ಸಮಾಜ ತನ್ನದೇ, ಆದ ಒಂದು ವಿಶಿಷ್ಟವಾದ ನೈತಿಕತೆಯ ತಾಸಲ್ಲಿ ತೂಗತೊಡಗಿದ್ದು ಆ ದಿನಗಳ ಸಾಮಾಜಿಕ ವಿಪರ್ಯಾಸವೇ ಸರಿ.

ಬೀಡಿ ಉದ್ಯಮವೆಂಬುದು ಕುಡಾಲದ ಪೇಟೆಯಿಂದ ನಮ್ಮೂರಿಗೆ ಹಾರಿ ಬಂದು ಊರಿನ ದೊಡ್ಡ ಸಾಗುವಳಿದಾರರ ಪಕ್ಕೆಲುಬುಗಳು ಮುರಿವಂತಹ ಏಟನ್ನೆಂದು ಕೊಟ್ಟಿತೋ ಅಂದಿನಿಂದಲೇ ಭೂ ಒಡೆಯರೆಲ್ಲ ತಮ್ಮ ಭತ್ತದ ಗದ್ದೆಗಳಲ್ಲಿ ಹಲವು ಮುಡಿ ಗದ್ದೆಗಳನ್ನು ತೆಂಗಿನ ತೋಟ, ಅಡಿಕೆ ತೋಟಗಳನ್ನಾಗಿ ಪರಿವರ್ತಿಸತೊಡಗಿದ್ದರು. ತಮ್ಮ ಕೈಯೊಳಗಿರುವ ಭತ್ತದ ಗದ್ದೆಗಳನ್ನು ತಮ್ಮ ಒಕ್ಕಲ ಪರಂಪರೆಗೆ ನಿಷ್ಠರಾಗಿರುವವರಿಗೆ ಮೂಲಗೇಣಿಗೆ ಕಟ್ಟಿಕೊಟ್ಟು, ತಾವು ಹಾಯಾಗಿದ್ದು, ದಿನಕ್ಕಿಂತಿಷ್ಟು ಪಡಿಗೆ ಕೂಲಿಕಾರಾನ್ನಿಟ್ಟುಕೊಂಡು ತೋಟ ನಡೆಸತೊಡಗಿದ್ದರು.

ಹೀಗೆ ಬೀಡಿಯ ದೆಸೆಯಿಂದಾಗಿ ನಮ್ಮೂರಿನ ದೊಡ್ಡ, ಮಧ್ಯಮ ಹಿಡುವಳಿದಾರರು ಆಳುಗಳ ಕೊರತೆಯನ್ನು ಅನುಭವಿಸುತ್ತ, ಕೃಷಿಯ ಜತೆ ಏಗುತ್ತ ಸಾಗುತ್ತಿರುವಾಗ ನಮ್ಮೂರಿಗೆ ಪಣಂಬೂರು ಬಂದರು ಯೋಜನೆ ಮಂಜೂರಾಗಿ ಕಾಮಗಾರಿಯೂ ಆರಂಭಗೊಂಡಿತ್ತು. ಶಾಲೆಯ ಮುಖವನ್ನು ಆ ವರ್ಷವಷ್ಟೇ ಕಂಡ ನಾನು, ಸೋಜಮಾಸ್ತ್ರ ಕೈಯಿಂದ ಸುರುಳಿ ಬೆತ್ತದ ರುಚಿ ಗಿಟ್ಟಿಸಿಕೊಳ್ಳುತ್ತಾ ಕುಣಿಯುತ್ತ, ಕುಪ್ಪಳಿಸುತ್ತಾ ಈ ಕೆಳಗಿನ ಹಾಡನ್ನು... ಮನದುಂಬಿ, ಕಣ್ತುಂಬಿ ಹಾಡುತ್ತಿದ್ದ ನೆನಪು.

ನೀರಿನ ಮೇಲೆ ತೋರುತ ಲೀಲೆ
ಚೆಲುಮರಿ ಮೀನೊಂದು
ಆ ಚೆಲುಮೀನು ಈಜುತ ತಾನು
ಇದ್ದಿತು ಕೆರೆಯಲ್ಲಿ॥
ಬೆಸ್ತನು ಬಂದ ಬಲೆಯನು ತಂದ
ಬೀಸಿದ ನೀರಲ್ಲಿ
ಆ ಚೆಲು ಮೀನು ಕ್ಷಣದಲ್ಲಿ ತಾನು
ಬಿದ್ದಿತು ಬಲೆಯಲ್ಲಿ॥

ಹಾಗೆಯೇ ಕಣ್ಣುಂಬಿಕೊಂಡು ಹಾಡುತ್ತ ಹಾಡುತ್ತ ಹೈಸ್ಕೂಲು ಮೆಟ್ಟಿಲು ಏರುವಷ್ಟರಲ್ಲಿ, ರಾಷ್ಟ್ರದ ಈ ಪ್ರತಿಷ್ಠಿತ ಸರ್ವ ಋತು ಪಣಂಬೂರು ಬಂದರು ಇನ್ನೇನು ಉದ್ಘಾಟನೆಯ ಹಂತಕ್ಕೆ ಬಂತು ಎನ್ನುತ್ತಿರುವಾಗ, ನಮ್ಮೂರಲ್ಲಿ ಕುದುರೆಮುಖ ಯೋಜನೆ, ಮಂಗಳೂರು ರಾಸಾಯನಿಕ ರಸಗೊಬ್ಬರ ಕಾರ್ಖಾನೆಯ ಜತೆಗೆ ಇನ್ನಷ್ಟು ಕೈಗಾರಿಕೆಗಳ ಕಾಮಗಾರಿ ಆರಂಭತಗೊಂಡಿತ್ತು. ಆಗಲೇ ಬೈಕಂಪಾಡಿ ಕೈಗಾರಿಕಾ ಎಸ್ಟೇಟಿಗೂ ಕೂಡ ಅಡಿಪಾಯ ಹಾಕಲಾಯಿತು. ಈ ಎಲ್ಲ ಯೋಜನೆ, ಕಾರ್ಖಾನೆಗಳ ಕಾಮಗಾರಿ ಆರಂಭಗೊಂಡು ಆ ಕಾಮಗಾರಿ ಮುಂದುವರಿಯುವಷ್ಟರಲ್ಲಿ, ನಮ್ಮ ಗದ್ದೆಗಳ ಕೃಷಿ ಕೆಲಸಕ್ಕಾಗಲಿ, ಊರಿನ ಧಣಿಗಳ ಸಾಗುವಳಿಗಾಗಲೀ, ತೋಟಕ್ಕಾಗಲಿ, ಇನ್ನಿತರರ ಅಂಗಳದ ಕೆಲಸಕ್ಕಾಗಲೀ ಕೂಲಿಕಾರ್ಮಿಕರು ಸಿಗದಂತಹ ಪರಿಸ್ಥಿತಿಯೊಂದು ನಿರ್ಮಾಣವಾಯಿತು. ಇಂತಹ ಪರಿಸ್ಥಿತಿಯಲ್ಲಿ ಧಣಿ ಮನೆಯವರೆಲ್ಲ ಗೇಣಿ ಒಕ್ಕಲವರ ಮೇಲೆ ಒತ್ತಡ ತಂದು, 'ಧಣಿಯವರ ಸ್ವಂತ ಸಾಗುವಳಿಯಲ್ಲಿ ಗೇಣಿ ಒಕ್ಕಲಿನವರು ಕೈ ಜೋಡಿಸಬೇಕೆಂಬ' ಬೆದರಿಕೆಯನ್ನು ಒಡ್ಡತೊಡಗಿದ್ದ ಸಂದರ್ಭದಲ್ಲೇ ಗೇಣಿ ಮಕ್ಕಳನ್ನು ಬದುಕಿಸುವಂತಹ ಶಾಸನವೊಂದು ಸರಕಾರದಿಂದ ಹೊರಬಂದು, ಅದು ಧಣಿಕೂಟದ ಧ್ವನಿಯನ್ನೇ ಉಡುಗಿಸಿ ಬಿಟ್ಟಿತ್ತು! ಅದು ಗೇಣಿ ಮಕ್ಕಳಿಗೆ ಹೊಸ ಉಸಿರು ಕೊಟ್ಟಂತಹ ಭೂಸುಧಾರಣಾ ಮಸೂದೆ ಜಾರಿಗೆ ಬರುವಷ್ಟರಲ್ಲಿ ಕುಡಾಲದ ಪೇಟೆಯೆಂಬ ಹೆಸರು ಸಂಪೂರ್ಣ ಮಾಯವಾಗಿ ಮಂಗಳೂರು ಪೇಟೆಯೆಂಬ ಹೆಸರೇ ಚಾಲ್ತಿಗೆ ಬಂದಿತ್ತಲ್ಲದೆ ಪೇಟೆಯ ಸುತ್ತಲ ನದಿ ಸೆರಗಲ್ಲಿದ್ದ ಕಾರ್ಖಾನೆಗಳಲ್ಲಿ ಒಂದೆರಡನ್ನು ಬಿಟ್ಟು ಮಿಕ್ಕೆಲ್ಲವೂ ಮುಚ್ಚಿ ಹೋಗಿದ್ದವು.

ತ್ಯಾಂಪಮ್ಮೈಲಿ ಮತ್ತವನ ಮಡದಿ ಮದುಮು ಈ ಜಗತ್ತಿನ ವ್ಯಾಪಾರವನ್ನು ಮುಗಿಸಿದ್ದರಲ್ಲದೆ, ಅವರಿಬ್ಬರ ಮಗಳು ವಾರಿಜ ನಮ್ಮೂರ ಭೂಮಾಲೀಕ ಲೋಕುಶೆಟ್ರ ಮೂಲಗೇಣಿ ಒಕ್ಕಲಿನ ಓಬಯ್ಯ ಮ್ಯೊಲಿಯ ಮಗ ವಾಸುಮ್ಯೊಲಿಗೆ ಮಡದಿಯಾಗಿ, ಹುಟ್ಟಿದ ಮಣ್ಣಿಗೇ ಸೊಸೆಯಾಗಿ ಮರಳಿ ಬಂದಿದ್ದಳು.

೧೯೭೪ರ ಏಪ್ರಿಲ್ ನಿಂದ ಜಾರಿಗೆ ಬಂದ ಈ ಭೂಸುಧಾರಣಾ ಮಸೂದೆ ನಮ್ಮೂರಲ್ಲಿ ಧನಿ-ಒಕ್ಕಲುಗಳ ನಡುವಿನ ಸಾಮಾಜಿಕ ಸಂಘರ್ಷಕ್ಕೆ ಹಾದಿ ಮಾಡಿಕೊಟ್ಟಿತಲ್ಲದೆ, ಅದು ನಿಧಾನಕ್ಕೆ ಆರ್ಥಿಕ ಘರ್ಷಣೆಯ ರೂಪಕ್ಕೂ ತಿರುಗಿತು.

ಉಳುವವನನ್ನೇ ಹೊಲದೊಡೆಯನನ್ನಾಗಿ ಮಾಡುವ ಈ ಪುರೋಗಾಮಿ ಶಾಸನದಿಂದ ಭೂಮಾಲೀಕತ್ವದ ವಿಸರ್ಜನೆ ಬಲು ಸುಲಭವಾಯಿತು. ಭೂಮಾಲೀಕತ್ವದಿಂದಾಗಿ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಮೇಲಂತಸ್ತಿನಲ್ಲಿ ಇರುವ ಭೂ ಒಡೆಯರಿಗೆಲ್ಲ ಈ ಪುರೋಗಾಮಿ ಶಾಸನವನ್ನು ಪ್ರತಿಗಾಮಿಯಾಗಿ ಪರಿವರ್ತಿಸುವ ಸಾಮರ್ಥ್ಯ ಇದೆ ಎಂದು ಯೋಚಿಸಿದ ಸರಕಾರ, ಈ ಭೂಸುಧಾರಣಾ ಶಾಸನವನ್ನು ಪರಿಣಾಮಕಾರಿಯಾಗಿ ಪ್ರಯೋಗಿಸುವಂತೆ ಭೂಪಂಚಾಯ್ತಿಗಳೆಂಬ ಕಮ್ಯೂನಿಸ್ಟ್ ಕಲ್ಪನೆಯಾಗಿರುವ ಜನತಾ ನ್ಯಾಯಾಲಯಗಳನ್ನು ಆರಂಭಿಸಿತು. ಅದುವರೆಗೂ ಯಾಜಮಾನ್ಯ ಸಂಸ್ಕೃತಿ ಅಥವಾ ಉಳಿಗಮಾನ್ಯ ಸಂಸ್ಕೃತಿಗೆ ತಲೆಬಾಗಿ ಭಯದಿಂದ ಉಸಿರು ಬಿಗಿ ಹಿಡಿದೇ ಬದುಕಿ ಬಂದಿದ್ದ ಗೇಣಿದಾರ ಜನರು ತಮಗಾಗಿ ಜಾರಿಗೆ ಬಂದಂತಹ ಭೂಸುಧಾರಣಾ ಮಸೂದೆಯ ಬಲದಿಂದಾಗಿ ಧಣಿಗಳ ಎದುರು ಸೆಟೆದು ನಿಂತು ಕೈ ಕೈ ಮಿಲಾಯಿಸುವ ಮಟ್ಟಕ್ಕೆ ಬೆಳೆದುನಿಂತರು. ತಮ್ಮ ಉಳುಮೆಯ ಭೂಮಿಯ ಒಡೆತನ ಪಡೆಯುವ ಗೇಣಿದಾರರು ಜಮೀನಿನ ವಿವರ ಸಹಿತ ಅರ್ಜಿಸಲ್ಲಿಸಿ ಜನತಾ ನ್ಯಾಯಾಲಯದ ಮೊರೆ ಹೊಕ್ಕೊಡನೆ ಬಹುಪಾಲು ನ್ಯಾಯವು ಕೂಡ ಗೇಣಿದಾರರ ಕಡೆಗಾದಾಗ ಧಣಿಗಳಿಗೆಲ್ಲ ಗಂಟಲಲ್ಲಿ ತ್ಯಾಡೆ ಮೀನಿನ ಮುಳ್ಳು ಸಿಕ್ಕಿಕೊಂಡಂತಹ ಸ್ಥಿತಿ! ನ್ಯಾಯಾಲಯವು ಒಕ್ಕಲ ಮಕ್ಕಳ ಪರವಾಗಿ ನಿಂತು ತಮ್ಮತ್ರ ಪಕ್ಷಪಾತ ಧೋರಣೆ ತಳೆಯುತ್ತಿದೆ ಎಂದು ಮರೆಯಲ್ಲಿ ಧಣಿಯರು ಆಕ್ಷೇಪಿಸಿದರೂ, ಆ ತೀರ್ಪಿನ ವಿರುದ್ಧ ಮೇಲಿನ ನ್ಯಾಯಾಲಯಗಳಿಗೆ ಹೋಗಲು ಆಸ್ಪದವಿಲ್ಲದ ಕಾರಣ ಭೂಮಿ ಕಳೆದುಕೊಂಡ ಧಣಿಗಳು ಅವುಡುಕಚ್ಚಿಕೊಂಡು ತಮ್ಮ ದುಃಖ, ಕೋಪ, ಅಸಹನೆಯನ್ನು ನುಂಗಿಕೊಳ್ಳುವುದು ಅನಿವಾರ್ಯವಾಯಿತು.

ಈ ಭೂಸುಧಾರಣಾ ಮಸೂದೆಯ ದೆಸೆಯಿಂದ ಮುಡಿಗಟ್ಟಲೆ ಗದ್ದೆ ಕಳೆದುಕೊಂಡ ಧಣಿಯರಲ್ಲಿ ನಮ್ಮ ಗುತ್ತಿನ ಲೋಕು ಶೆಟ್ರೂ ಒಬ್ಬರು. ಆಟಿಯ ಕಾಲಕ್ಕೆ ಸುರಿವ ಮುಸಲಧಾರೆಗೆ ನದಿಯಲ್ಲಿ ದಿಢೀರನೆ ನೆರೆ ಏರಿ ಬಂದು,ನದಿ ಸೆರಗಲ್ಲಿರುವ ಧಣಿ ಅಂಗಳದ ತೆಂಗಿನಕ್ಯಾಗಳನ್ನು ಒಕ್ಕಲ ಮಕ್ಕಳ ಅಂಗಳಕ್ಕೆ ಬಿಸುಟು ಬರುವಂತೆ ಈ ಮಸೂದೆಯೂ ದಿಢೀರನೆ ಚಾಲ್ತಿಗೆ ಬಂದು ಧಣಿಗಳ ಅನೇಕ ಗದ್ದೆಗಳನ್ನು ನೇರ ಗೇಣಿ ಮಕ್ಕಳ ಪಾಲಾಗಿರಿಸಿದ್ದು ಊರಲ್ಲಿ ಧಣಿ ಗೇಣಿ ಸಂಬಂಧವನ್ನು ಸಂಪೂರ್ಣ ಕಡಿದು ಹಾಕಿತಲ್ಲದೆ ಇಡೀಯ ಸಾಮಾಜಿಕ ವ್ಯವಸ್ಥೆಯನ್ನೇ ಬಲವಾಗಿ ಅಲುಗಾಡಿಸಿತು.

ಒಂದು ಕಾಲದಲ್ಲಿ ಧಣಿಯರಾಗಿ ಊರಾಳುತ್ತಿದ್ದ ಲೋಕುಶೆಟ್ಟರಂತಹ ದೊಡ್ಡ ಭೂಹಿಡುವಳಿದಾರರು ಈ ಮಸೂದೆಯ ಕಾರಣಕ್ಕಾಗಿ ಭೂಮಿ ಕಳೆದುಕೊಂಡು ಸಣ್ಣಪ್ರಮಾಣದ ಹಿಡುವಳಿದಾರರಾಗಿ ರೂಪುಗೊಂಡರು, ಹಲವು ತಲೆಮಾರುಗಳಿಂದ ತಮ್ಮ ಭೂಮಿಯಲ್ಲಿ ಗೇಣಿ ಒಕ್ಕಲಾಗಿ ಬದುಕಿದ್ದವರಿಗೆ ಸಮವಾಗಿ ಒಬ್ಬ ಸಾಮಾನ್ಯ ಹಿಡುವಳಿದಾರನಾಗಿ ಅವರು ಬದುಕಬೇಕಾದ ಪರಿಸ್ಥಿತಿ ಬರುವಷ್ಟರಲ್ಲಿ ನಾನು ಬಾಲ್ಯಾವಸ್ಥೆ ಕಳೆದು ಯೌವನಾವಸ್ಥೆಯನ್ನು ತಲುಪಿದ್ದೆ. ಅಷ್ಟು ಹೊತ್ತಿಗಾಗಲೇ ಪಣಂಬೂರು ಬಂದರು ರಾಷ್ಟ್ರದ ಸೇವೆಗಾಗಿ ಎದ್ದು ಕೂತಿತ್ತು; ನಮ್ಮೂರ ಧಣಿ ಗೇಣಿ ಏಣಿ ಮುರಿದು ಬಿದ್ದಿತ್ತು. ಆ ಧಣಿ-ಗೇಣಿ ಪದಗಳು ಎತ್ತಲೋ ಹಾರಿಹೋಗಿದ್ದವು. ಮತ್ತೆಂದೂ ಹಾರಿ ಬರದಷ್ಟು ದೂರಕ್ಕೆ! □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

...ಕ್ಕೋಡಿಗೆ ಬಂದು
...ೀವ ರಾಯ ಕಂಪನಿ
...ಲಸಗಳನ್ನು ಆರಂಭಿ
...ದ. ಹ್ಯಾಂಡಬಿಲ್ಲು
...ುತ್ತು ಟಾಂಗಾಗಳಲ್ಲಿ
...ಳ್ಳಿ ಹಳ್ಳಿ ಅಡ್ಡಾಡಿ
...ಚಾರ ಮಾಡಲಾ
...ುತು. 'ಐದು ತಿಂಗಳಲ್ಲಿ
...ರಡು ಪಟ್ಟು ಹಣ' ಎಲ್ಲ
...ಡೆಗೆ ಧುಮುಧುಮಿಸ
...ತ್ತಿತು. ಆರಂಭದಲ್ಲಿ
...ಂದಿಷ್ಟು ಜನ ಕಂಪನಿ
...ಲ್ಲಿ ಹಣ ತೊಡಗಿಸಿ
...ರು. ಸರಿಯಾಗಿ ಐದು
...ಂಗಳಿಗೆ ಕರಾರುವಾ
...ಗಿ ಅವರು ಹಾಕಿದ
...ಣಕ್ಕೆ ಎರಡುಪಟ್ಟು ಹಣ
...ಂದಿತು. ಈ ಪಾವಾ
...ವನ್ನು ಈ ಹಿಂದೆ
...ವರೆಂದೂ ಕಂಡಿರಲಿಲ್ಲ.
...ವರನ್ನು ನೋಡಿ
...ನ್ನೂ ಕೆಲವರು
...ುಂದೆ ಬಂದರು. ಅವರ
...ಣವೂ ಐದು ತಿಂಗಳ
...ಲ್ಲಿ ಎರಡು ಪಟ್ಟಾ
...ುತು. ಈಗ ಜಿಲ್ಲೆಯಲ್ಲಿ
...ೇವರಾಯನ ಬಗ್ಗೆಯೇ
...ಮಾತಾಡಲಾರಂಭಿಸಿದರು.

೫

ಡಾ|| ಸರಜೂ ಕಾಟ್ಕರ್

ದೇವರಾಯ

ಬಹುರೂಪಿ

ಬಾಬಾಸಾಹೇಬರನ್ನು ಭೆಟ್ಟಿಯಾಗಲೆಂದು ದೇವರಾಯ ಪುಣೆಗೆ ಹೋದ. ಮನುಸ್ಮೃತಿಯ ಕರಾಳತೆಯನ್ನು ಬಿಂಬಿಸುವ ಮತ್ತು ಅದನ್ನು ವಿರೋಧಿಸುವ ಸಭೆಗೆ ಬಾಬಾಸಾಹೇಬರು ಬಂದಿದ್ದರು. ಸಭೆಗೆ ನಂತರ ದೇವರಾಯ ತನ್ನ ಪುಣೆಯ ಗೆಳೆಯರನ್ನು ಭೆಟ್ಟಿಯಾಗಲು ಹೊರಟ.

ಮಹಾರಾಷ್ಟ್ರದ ಸಾಂಸ್ಕೃತಿಕ ರಾಜಧಾನಿಯೆಂದೇ ಪುಣೆಗೆ ಹೆಸರು. ಛತ್ರಪತಿ ಶಿವಾಜಿ ಮಹಾರಾಜರು ಕಟ್ಟಿದ ಮರಾಠಾ ಸಾಮ್ರಾಜ್ಯ ಅವರ ನಿಧನಾಂತರ ಇಸ್ಪೇಟಿನ ಮನೆಯಂತೆ ಕುಸಿದುಹೋಗಿತ್ತು. ಅರಮನೆಯಲ್ಲಿ ಒಳ ಸಂಚುಗಳು ನಡೆದು, ಸಾಮ್ರಾಜ್ಯದ ಲಾಲಸೆಗಾಗಿ ವಿವಿಧ ರೀತಿಯ ಗುಂಪುಗಳು ಹುಟ್ಟಿಕೊಂಡವು. ಇದೇ ಕಾಲಕ್ಕೆ ಅಲ್ಲಿಯವರೆಗೆ ಮಹಾರಾಜರಿಗೆ ಸಾಮಂತರಾಗಿದ್ದ ಅನೇಕ ಸಂಸ್ಥಾನಿಕರು ತಾವು ಸ್ವತಂತ್ರ ರಾಜರೆಂದು ಘೋಷಿಸಿ ಸ್ವತಂತ್ರರಾದರು. ಶಿವಾಜಿ ಮಹಾರಾಜರು ಅಲ್ಲಲ್ಲಿ ನೇಮಿಸಿದ್ದ ಅವರ ಪ್ರತಿನಿಧಿಗಳು ತಾವೂ ಸ್ವತಂತ್ರರೆಂದು ಹೇಳಿಕೊಂಡರು. ಆಗ ಪುಣೆಯಲ್ಲಿ ಪೇಶ್ವೆಗಳಿದ್ದರು. ಶಿವಾಜಿ ಮಹಾರಾಜರ ನಿಧನಾನಂತರ ಪೇಶ್ವೆಗಳು ಸ್ವತಂತ್ರರಾದರು.

ಪೇಶ್ವೆಗಳು ಜಾತಿಯಿಂದ ಬ್ರಾಹ್ಮಣರಾಗಿದ್ದರೂ ಅವರು ಶಸ್ತ್ರವನ್ನು ಕೈಗೆತ್ತಿಕೊಂಡಿದ್ದರು. ಅವರಲ್ಲಿದ್ದ ಸೇನಾಪತಿ ಬಾಜಿಪ್ರಭು ದೇಶಪಾಂಡೆ ಅಪ್ರತಿಮ ಶೂರನಾಗಿದ್ದ. ಆತ ಎರಡೂ ಕೈಗಳಿಂದ ಖಡ್ಗವನ್ನು ತಿರುಗಿಸುತ್ತಿದ್ದ. ಮಹಾಕ್ರೂರಿಯೂ ಆಗಿದ್ದ. ಸಂಶಯ ಬಂದವರನ್ನು ಆತ ಆನೆಯ ಕಾಲಿಗೆ ನೂಕುತ್ತಿದ್ದ. ಹಲವು ಶತ್ರು ಬೇಹುಗಾರರನ್ನು ಜೀವಂತ ಗೋಡೆಯಲ್ಲಿ ಹುಗಿಸಿದ್ದ.

ಪೇಶ್ವೆಗಳು ಧರ್ಮಾಂಧರಾಗಿದ್ದರು. ವಿಲಾಸಿಗಳೂ ಆಗಿದ್ದರು. ಅವರ ವಿಲಾಸತೆಗೆ ಜಾತಿ ಧರ್ಮಗಳ ಕಟ್ಟಳೆಗಳು ಬರುತ್ತಿರಲಿಲ್ಲ. ವಿಲಾಸಿ ಜೀವನ ತಮ್ಮ ಜನ್ಮಸಿದ್ಧ ಹಕ್ಕು ಎಂಬಂತೆ ಅವರು ವರ್ತಿಸುತ್ತಿದ್ದರು. ಮಸ್ತಾನಿಯೆಂಬ ಮುಸಲ್ಮಾನ ಸುಂದರಿಯನ್ನು ಇಟ್ಟುಕೊಂಡಿದ್ದ ಪೇಶ್ವೆ ಅವಳಿಗಾಗಿ ಅರಮನೆಯನ್ನೇ ಕಟ್ಟಿಸಿಕೊಟ್ಟಿದ್ದರು. ಪೇಶ್ವೆಗೆ ಅನೇಕ ಉಪಪತ್ನಿಯರಿದ್ದರು.

ಪೇಶ್ವೆಗಳು ಮನುಸ್ಮೃತಿಯಂತೆಯೇ ರಾಜ್ಯದ ಆಡಳಿತ ನಡೆಸುತ್ತಿದ್ದರು. ಚಾತುರ್ವರ್ಣ್ಯವನ್ನು ಚಾಚೂ ತಪ್ಪದಂತೆ ಅನುಸರಿಸುತ್ತಿದ್ದರು. ತಮ್ಮ ಪ್ರಜೆಗಳು ಅದೇ ರೀತಿ ನಡೆಯಬೇಕೆಂದು ಅವರ ಆಶಯವಾಗಿತ್ತು. ರಸ್ತೆಗಳಲ್ಲಿ ದಲಿತರಿಗೆ ಪ್ರವೇಶ ನಿಷೇಧಿಸಲಾಗಿತ್ತು. ಅವರು ರಸ್ತೆಗೆ ಬಂದರೂ ಹಿಂದೆ ಕಸಬರಿಗೆ ಮತ್ತು ಕೊರಳಿಗೆ ಗಡಿಗೆ ಕಟ್ಟಿಕೊಂಡು 'ಜೋಹಾರ್ ಮಾಯ್ ಬಾಪ್' ಎಂದು ಕೂಗುತ್ತ ಬರಬೇಕಾಗಿತ್ತು. ಕಸಬರಿಗೆ ಅವರ ಹೆಜ್ಜೆಗಳನ್ನು ಅಳಿಸಿ ಹಾಕುತ್ತಿದ್ದರೆ ಗಡಿಗೆ ಅವರ ಉಗುಳನ್ನು ರಸ್ತೆಗೆ ಬೀಳದಂತೆ ಕೆಲಸ ಮಾಡುತ್ತಿತ್ತು. ಪೇಶ್ವೆಗಳ ರಾಜ್ಯದಲ್ಲಿ ದಲಿತರು ಅನನ್ಯ ಕಷ್ಟಗಳನ್ನು ಅನುಭವಿಸಿದರು. ಆದರೆ ಇದೇ ದಲಿತರು ೧೮೧೮ ರಲ್ಲಿ ಕೋರೆಗಾಂವದಲ್ಲಿ ನಡೆದ ಪೇಶ್ವೆ-ಇಂಗ್ಲಿಷ್ ಯುದ್ಧದಲ್ಲಿ ಪೇಶ್ವೆಗಳನ್ನು ಧೂಳೀಪಟ ಮಾಡಿ ಶತಶತಮಾನಗಳ ಸೇಡನ್ನು ತೀರಿಸಿಕೊಂಡರು. ಪೇಶ್ವೆಗಳ ಅಧಿಕೃತ ಅರಮನೆಯಾದ ಶನಿವಾರವಾಡಾದ ಮೇಲೆ ಬ್ರಿಟಿಷ್ ಧ್ವಜ ಹಾರಿಸುವ ಯತ್ನದಲ್ಲಿ ನೂರಕ್ಕೆ ನೂರರಷ್ಟು ಅವರು ಯಶಸ್ವಿಯಾಗಿದ್ದರು.

ಇತಿಹಾಸವನ್ನು ವರ್ತಮಾನದ ಕಣ್ಣಿನಿಂದ ನೋಡುತ್ತ ದೇವರಾಯ ಪುಣೆ ನೋಡುತ್ತಿದ್ದ. ಶನಿವಾರವಾಡಾದ ಅರಮನೆಯನ್ನು ನೋಡಿಕೊಂಡು ಬಂದ. ತನ್ನ ಪೂರ್ವಜರ ಬಗ್ಗೆ ಅವನಿಗೆ ಹೆಮ್ಮೆ ಉಂಟಾಯಿತು. ಕೋರೆಗಾಂವ ಯುದ್ಧದಲ್ಲಿ ಸತ್ತ ೨೧ ಜನ ದಲಿತ ಸೈನಿಕರನ್ನು ಮನದಲ್ಲಿಯೇ ನೆನೆಸಿಕೊಂಡ.

ಪುಣೆಯಲ್ಲಿ ಅವನಿಗೆ ಜ್ಯೋತಿಬಾ ಕಾಂಬಳೆ ಭೇಟಿಯಾದರು. ಕಾಂಬಳೆ ಚಳವಳಿಯಲ್ಲಿದ್ದವರು. ಐದನೆಯ ಈಯತ್ತೆವರೆಗೆ ಓದಿಕೊಂಡಿದ್ದ ಕಾಂಬಳೆ ಬಡ್ಡಿ ವ್ಯವಹಾರ ಮಾಡುತ್ತಿದ್ದರು. ಅಲ್ಪ-ಸ್ವಲ್ಪ ಆಸ್ತಿಯನ್ನೂ ಮಾಡಿಕೊಂಡಿದ್ದರು.

ದೇವರಾಯ ಈ ಹಿಂದೆ ನೋಡಿದ ಕಾಂಬಳೆಯವರಿಗೂ ಈಗಿನ ಕಾಂಬಳೆಯವರಿಗೂ ಅಜಗಜಾಂತರವಿತ್ತು. ಈಗ ಕಾಂಬಳೆಯವರು ಕಾರು ಕೊಂಡಿದ್ದರು. ಇಂಗ್ಲೆಂಡ್ ಮೂಲದ 'ಮನಿ ರೇನ್ ಕಂಪನಿ'ಯ ಪುಣೆಯ ಏಜೆಂಟರಾಗಿದ್ದರು. ಈ ಕಂಪನಿ ಯಲ್ಲಿ ಹಣ ತೊಡಗಿಸಿದವರಿಗೆ ಐದೇ ತಿಂಗಳಲ್ಲಿ ಎರಡು ಪಟ್ಟು ಹಣ ವಾಪಸ್ಸು ಬರುತ್ತಿತ್ತು. ಕಾಂಬಳೆಯವರು ಕಳೆದ ಒಂದು ವರ್ಷದಿಂದ ಈ ಕಂಪನಿಯ ಏಜೆಂಟರಾಗಿದ್ದರು. ಅನೇಕ ಜನರು ತಾವು ತೊಡಗಿಸಿದ ಹಣದ ಎರಡು ಪಟ್ಟು ಹಣವನ್ನು ತೆಗೆದು ಕೊಂಡು ಹೋಗಿದ್ದರು. ಕಾಂಬಳೆ ಈಗ ವ್ಯವಹಾರದಲ್ಲಿ ಎಷ್ಟು ವ್ಯಸ್ತರಾಗಿದ್ದರೆಂದರೆ ಅವರಿಗೆ ಬೇರೆಯವರ ಜೊತೆಗೆ ಮಾತಾಡುವಷ್ಟು ವೇಳೆ ಸಿಗುತ್ತಿರಲಿಲ್ಲ. ಜನರು ಅವರ ಕಡೆಗೆ ಹಣ ತೊಡಗಿಸಲು ಮುಗಿಬೀಳುತ್ತಿದ್ದರು. ಎಷ್ಟೋ ಸಂದರ್ಭಗಳಲ್ಲಿ ನಾಲ್ಕೆಂಟು ದಿನ ಕಾಯಿಸಿ ಅವರಿಂದ ಹಣ ಸ್ವೀಕರಿಸಿದ ಉದಾಹರಣೆಗಳೂ ಇದ್ದವು.

'ಇದೇನ್ ಮಾಯಾ ಬಜಾರ ಕಾಂಬಳೆ? ಐದು ತಿಂಗಳ ನಲ್ಲಿ ಅದ್ಹೇಗೆ ಹಣ ಎರಡು ಪಟ್ಟಾಗುತ್ತದೆ? ಈ ಮನಿ ರೇನ್ ಕಂಪನಿ ಹಣವನ್ನು ಎಲ್ಲಿ ತೊಡಗಿಸುತ್ತದೆ'? ಕೇಳಿದ ದೇವರಾಯ.

'ಅದೆಲ್ಲ ನನಗೆ ಗೊತ್ತಿಲ್ಲ; ಹಾಕಿದ ಹಣಕ್ಕೆ ಎರಡು ಪಟ್ಟು ಹಣವನ್ನು ಸರಿಯಾಗಿ ಐದು ತಿಂಗಳಿಗೆ ಕಂಪನಿ ಕೊಡುತ್ತದೆ. ನನಗೂ ಸಾಕಷ್ಟು ಕಮೀಶನ್ ಸಿಗುತ್ತದೆ' ಎಂದರು ಕಾಂಬಳೆ.

'ಹಾಗಲ್ಲ ನಾನು ಕೇಳೋದು. ಒಂದು ವೇಳೆ ಕಂಪನಿ ಎಲ್ಲ ಹಣವನ್ನು ಹಾಕಿಕೊಂಡು ಓಡಿ ಹೋಗಿ ಬಿಟ್ಟರೆ ಗತಿ ಏನು?' ತನ್ನ ಸಂಶಯವನ್ನು ವ್ಯಕ್ತಪಡಿಸಿದ ದೇವರಾಯ.

'ಹಾಗಾಗಲು ಸಾಧ್ಯವೇ ಇಲ್ಲ; ನಾನೇ ನನ್ನ ಕೈಯಾರೆ ಅನೇಕ ಸಾವಿರ ರೂಪಾಯಿಗಳನ್ನು ಈ ಕೈಯಿಂದ ತೆಗೆದು ಕೊಂಡಿದ್ದೇನೆ ಮತ್ತು ಅನೇಕ ಲಕ್ಷ ರೂಪಾಯಿಗಳನ್ನು ಆ ಕೈಯಿಂದ ಕೊಟ್ಟಿದ್ದೇನೆ. ಇದರಲ್ಲಿ ಹೆದರುವುದೇನೂ ಇಲ್ಲ' ಎಂದರು ಕಾಂಬಳೆ.

'ಅಲ್ಲ ದೇವರಾಯ; ನೀನು ನನಗಿಂತ ಹೆಚ್ಚು ಓದಿದವ. ಇಂಗ್ಲೀಷರು ಮಾತಾಡಿದಂತೆ ಇಂಗ್ಲಿಷ್ ಮಾತಾಡುವೆ. ನೀನೇಕೆ ಬೆಳಗಾವಿ ಜಿಲ್ಲೆಗೆ ಈ ಕಂಪನಿಯ ಏಜೆಂಟ್ ಆಗ ಬಾರದು? ಕಾಂಬಳೆ ಒಂದು ಹುಳುವನ್ನು ದೇವರಾಯ ನತ್ತ ಒಗೆದರು.

'ಆಗಬಹುದು; ಆದರೆ ನನಗೆ ಇಂಥ ಕಂಪನಿಯ ಮೇಲೆ ಸಂಶಯ. ಮನಿ ಸಕ್ಯುಲೇಟಿಂಗ್ ಅಂತ ಹೇಳುತ್ತ ಹೇಳುತ್ತ ಎಂದಾದರೂ ಒಂದು ದಿನ ಇವು ಓಡಿಹೋಗಿ ಬಿಡುತ್ತವೆ' ಎಂದ ದೇವರಾಯ.

'ಓಡಿ ಹೋದರೆ ಹೋಗಲಿ, ಅದರಿಂದ ನಮಗಾಗುವುದಾದರೂ ಏನು? ನಾವೇನೂ ಅದರ ಮಾಲಿಕರಲ್ಲವಲ್ಲ?' ನಿರ್ಭಿಡೆಯಿಂದ ಹೇಳಿದರು ಕಾಂಬಳೆ.

ಮನಿ ರೇನ್ ಕಂಪನಿಯ ಮುಖ್ಯ ಕಚೇರಿ ಲಂಡನ್‌ನಲ್ಲಿದ್ದರೂ ದಕ್ಷಿಣ ಭಾರತದ ಮುಖ್ಯ ಕಚೇರಿ ಪುಣೆಯಲ್ಲಿಯೇ ಇತ್ತು. ದೇವರಾಯ ಮತ್ತು ಕಾಂಬಳೆ ಇಬ್ಬರೂ ಕಚೇರಿಯ ಮುಖ್ಯಸ್ಥನನ್ನು ಭೇಟಿಯಾದರು. ದೇವರಾಯನ ಮಾತುಕತೆ, ಶೀವಿ ಮ್ಯಾನೇಜರ್‌ಗೆ ಹಿಡಿಸಿದವು. ದೇವರಾಯ ಕಂಪನಿಯ ಬೆಳಗಾವಿ ಜಿಲ್ಲೆಯ ಏಜೆಂಟ್‌ನಾಗಿ ನೇಮಕಗೊಂಡ.

ಚಿಕ್ಕೋಡಿಗೆ ಬಂದು ದೇವರಾಯ ಕಂಪನಿ ಕೆಲಸಗಳನ್ನು ಆರಂಭಿಸಿದ. ಹ್ಯಾಂಡ್‌ಬಿಲ್ಲು ಮತ್ತು ಟಾಂಗಾಗಳಲ್ಲಿ ಹಳ್ಳಿ ಹಳ್ಳಿ ಅಡ್ಡಾಡಿ ಪ್ರಚಾರ ಮಾಡಲಾಯಿತು. 'ಐದು ತಿಂಗಳಲ್ಲಿ ಎರಡು ಪಟ್ಟು ಹಣ' ಎಲ್ಲ ಕಡೆಗೆ ಧುಮುಧುಮಿಸಹತ್ತಿತು.

ಆರಂಭದಲ್ಲಿ ಒಂದಿಷ್ಟು ಜನ ಕಂಪನಿಯಲ್ಲಿ ಹಣ ತೊಡಗಿಸಿದರು. ಸರಿಯಾಗಿ ಐದು ತಿಂಗಳಿಗೆ ಕರಾರುವಾಕ್ಕಾಗಿ ಅವರು ಹಾಕಿದ ಹಣಕ್ಕೆ ಎರಡುಪಟ್ಟು ಹಣ ಬಂದಿತು. ಈ ಪಾವಾಡವನ್ನು ಈ ಹಿಂದೆ ಅವರೆಂದೂ ಕಂಡಿರಲಿಲ್ಲ. ಅವರನ್ನು ನೋಡಿ ಇನ್ನೂ ಕೆಲವರು ಮುಂದೆ ಬಂದರು. ಅವರ ಹಣವೂ ಐದು ತಿಂಗಳಿನಲ್ಲಿ ಎರಡು ಪಟ್ಟಾಯಿತು. ಈಗ ಜಿಲ್ಲೆಯಲ್ಲಿ ಎಲ್ಲರೂ ಮನಿ ರೇನ್ ಕಂಪನಿ ಮತ್ತು ದೇವರಾಯನ ಬಗ್ಗೆಯೇ ಮಾತಾಡಲಾರಂಭಿಸಿದರು.

ಜಿಲ್ಲೆಯಲ್ಲಿದ್ದ ಸಾವುಕಾರ ಜನರು ಈ ಹಿಂದಿನಿಂದಲೂ ಬಡ್ಡಿ ವ್ಯವಹಾರ ಮಾಡುತ್ತಿದ್ದರು. ಐದು ತಿಂಗಳಿನಲ್ಲಿ ಹಣ ದುಪ್ಪಟ್ಟು ಯೋಜನೆ ಅವರಿಗೂ ಅಚ್ಚರಿ ತಂದಿತು. ಒಂದಿಬ್ಬ ಸಾವುಕಾರರು ದೇವರಾಯನನ್ನು ಕರೆಸಿ ಇದರ ಮರ್ಮವೇನೆಂದು ಕೇಳಿದರು. ತನಗೂ ಈ ಬಗ್ಗೆ ಗೊತ್ತಿಲ್ಲವೆಂದು ಆತ ಪ್ರಾಮಾಣಿಕವಾಗಿಯೇ ಹೇಳಿದ.

ನಾಲ್ಕೆಂಟು ಜನ ಸಾವುಕಾರರು ಇದರಲ್ಲಿ ಹಣ ತೊಡಗಿಸಿದರು. ಐದು ತಿಂಗಳಿನಲ್ಲಿ ದುಪ್ಪಟ್ಟು ಹಣ ಬಂತು. ಅದೇ ಹಣವನ್ನು ಮತ್ತೆ ಅದರಲ್ಲಿಯೇ ತೊಡಗಿಸಿದರು. ಅವರು ತೊಡಗಿಸಿದರೆಂದು ಇವರು, ಇವರು ತೊಡಗಿಸಿದರೆಂದು ಅವರು, ದೇಶಪಾಂಡೆ ತೊಡಗಿಸಿದರೆಂದು ಪಾಟೀಲರು, ಪಾಟೀಲರು ತೊಡಗಿಸಿದರೆಂದು ದೇಶಪಾಂಡೆ–ಹೀಗೆ ಮನಿ

ಮನಿ ರೇನ್ ಕಂಪನಿಗೆ ಹಣ ಹೊಳೆಯಾಗಿ ಬರಲಾರಂಭಿಸಿದಾಗ 'ಇದು ಎಲ್ಲೋ ತಪ್ಪುತ್ತಿದೆ' ಎಂದು ದೇವರಾಯನಿಗೆ ಆತನ ಒಳಮನಸ್ಸು ಹೇಳಲಾರಂಭಿಸಿತು. 'ಇಷ್ಟೆಲ್ಲ ಹಣ ತೆಗೆದುಕೊಂಡು ಕಂಪನಿ ಓಡಿ ಹೋದರೇನು ಮಾಡೋದು?' ಈ ವೈಚಾರಿಕ ಸಂಘರ್ಷದಲ್ಲಿಯೇ ಆತ ದಲಿತರಿಂದ ಹಣ ತೆಗೆದುಕೊಳ್ಳುವುದನ್ನು ಬಂದ್ ಮಾಡಿದ. 'ಒಂದು ವೇಳೆ ಕಂಪನಿ ಓಡಿ ಹೋದರೂ ದಲಿತರ ಹಣ ದಂಡವಾಗಬಾರದು' ಎಂದು ಆತ ವಿಚಾರಿಸಿ ಆ ರೀತಿ ಮಾಡಿದ್ದ. ಆದರೆ ದಲಿತರಿಗೆ ಇದು ಅರ್ಥವಾಗಲಿಲ್ಲ. 'ಬ್ಯಾರೆ ಜಾತಿಯವರಿಗೆ ರೊಕ್ಕ ದುಪ್ಪಟ್ಟು ಮಾಡಿಕೊಡ್ತಾನೆ, ನಮಗೆ ಮಾತ್ರ ಇಲ್ಲ ಅಂತಾನೆ' ಎಂದು ಆತನ ಜೊತೆಯಲ್ಲಿದ್ದ ದಲಿತರೇ ಬಹಿರಂಗವಾಗಿ ಅವನನ್ನು ಟೀಕಿಸತೊಡಗಿದರು. ಮನಸ್ಸಿಗೆ ಕಿರಿಕಿರಿ ಅನ್ನಿಸಿದರೂ ದೇವರಾಯ ಸುಮ್ಮನಿರದೆ ಗತ್ಯಂತರ ವಿರಲಿಲ್ಲ.

ರೇನ್ ಕಂಪನಿಗೆ ಹಣದ ಮಳೆಯೇ ಆರಂಭವಾಯಿತು. ದೇವರಾಯನಿಗೆ ಸಾಕಷ್ಟು ಕಮೀಶನ್ ಬರಲಾರಂಭಿಸಿತು. ಈ ಹಣದಲ್ಲಿ ಆತ ಒಂದು ಕಾರನ್ನು ಕೊಂಡ. ಕಾರು ಚಿಕ್ಕೋಡಿ ರಸ್ತೆ ಮೇಲೆ ಓಡಿಯಾಡಲಾರಂಭಿದಾಗ ಅವನ ಜೊತೆಗಿನ ಜನ ಬಾಯಲ್ಲಿ ಬೆರಳು ಹಾಕುವಂತಾಯಿತು.

ಮನಿ ರೇನ್ ಕಂಪನಿಗೆ ಹಣ ಹೊಳೆಯಾಗಿ ಬರಲಾರಂಭಿಸಿದಾಗ 'ಇದು ಎಲ್ಲೋ ತಪ್ಪುತ್ತಿದೆ' ಎಂದು ದೇವರಾಯನಿಗೆ ಆತನ ಒಳಮನಸ್ಸು ಹೇಳಲಾರಂಭಿಸಿತು. 'ಇಷ್ಟೆಲ್ಲ ಹಣ ತೆಗೆದುಕೊಂಡು ಕಂಪನಿ ಓಡಿ ಹೋದರೇನು ಮಾಡೋದು?' ಎಂದು ಆತ ವಿಚಾರಿಸಹತ್ತಿದ. ಈ ವೈಚಾರಿಕ ಸಂಘರ್ಷದಲ್ಲಿಯೇ ಆತ ದಲಿತರಿಂದ ಹಣ ತೆಗೆದುಕೊಳ್ಳುವುದನ್ನು ಬಂದ್ ಮಾಡಿದ. 'ಒಂದು ವೇಳೆ ಕಂಪನಿ ಓಡಿ ಹೋದರೂ ದಲಿತರ ಹಣ ದಂಡವಾಗಬಾರದು' ಎಂದು ಆತ ವಿಚಾರಿಸಿ ಆ ರೀತಿ ಮಾಡಿದ್ದ. ಆದರೆ ದಲಿತರಿಗೆ ಇದು ಅರ್ಥವಾಗಲಿಲ್ಲ. 'ಬ್ಯಾರೆ ಜಾತಿಯವರಿಗೆ ರೊಕ್ಕ ದುಪ್ಪಟ್ಟು ಮಾಡಿ ಕೊಡ್ತಾನೆ, ನಮಗೆ ಮಾತ್ರ ಇಲ್ಲ ಅಂತಾನೆ' ಎಂದು ಆತನ ಜೊತೆಯಲ್ಲಿದ್ದ ದಲಿತರೇ ಬಹಿರಂಗವಾಗಿ ಅವನನ್ನು ಟೀಕಿಸತೊಡಗಿದರು. ಮನಸ್ಸಿ ಕಿರಿಕಿರಿ ಅನ್ನಿಸಿದರೂ ದೇವರಾಯ ಸುಮ್ಮನಿರದೆ ಗತ್ಯಂತ ವಿರಲಿಲ್ಲ.

ಮುಂದೆ ಹದಿನೈದೇ ದಿನಗಳಲ್ಲಿ ಆತ ಭಯಪಟ್ಟ ತೆಯೇ ಆಯಿತು. ಮನಿ ರೇನ್ ಕಂಪನಿ ದಿವಾಳಿಯ ಯಿತೆಂದು ಸುದ್ದಿ ಬಂತು. ಪುಣೆಯಲ್ಲಿದ್ದ ಅದರ ಕಛೇ ರಿಗೆ ಬೀಗ ಜಡಿಯಲಾಯಿತು. ಲಕ್ಷಾವಧಿ ರೂಪಾಯಿಗ ಅಫರಾತಫರಾ ಆಗಿತ್ತು. ಮಾಲೀಕರು ಹಣದ ಸಮೇ ನಾಪತ್ತೆಯಾಗಿದ್ದರು. ಮಾಲೀಕರ ವಿರುದ್ಧ ಪೊಲೀಸ್ ಕಂಪ್ಲೆಂಟ್ ದಾಖಲಿಸಲಾಯಿತು.

ಇಲ್ಲಿ ದೇವರಾಯನ ಪರಿಸ್ಥಿತಿ ತುಂಬ ಬಿಗಡಾಯಿ ಸಿತು. ಹಣ ತೊಡಗಿಸಿದ ಜನ ಅವನನ್ನು ಬೈಯ್ಯಲ ರಂಭಿಸಿದರು. ಈ ಹಿಂದೆ ಎರಡು ಪಟ್ಟು ಹಣ ಪಡೆದ ಆತನನ್ನು ಹೊಗಳಿದ ಜನರೇ ಈಗ ಅವನನ್ನು ಬೈಯು ತ್ತಿದ್ದರು. ದೇವರಾಯನ ವಿರುದ್ಧ ಒಂದಿಬ್ಬರು ಪೊಲೀಸ್ ಕಂಪ್ಲೆಂಟನ್ನೂ ದಾಖಲಿಸಿದರು. ಫೌಜದಾರ್ ದೇವರಾಯ ನನ್ನು ಕರೆ ಕಳಿಸಿದ.

'ಮಾಲೀಕರು ಹಣದ ಸಮೇತ ಓಡಿ ಹೋಗುತ್ತಾ ರೆಂದು ಗೊತ್ತಿದ್ದರೂ ನೀನು ಜನರಿಂದ ಹಣವನ್ನೇ ಪಡೆದೆ?' ಕೇಳಿದ ಫೌಜದಾರ್.

'ನನಗೆ ನಿಜವಾಗಿಯೂ ಗೊತ್ತಿರಲಿಲ್ಲ. ಒಂದು ವೇಳೆ ಅವರು ಓಡಿ ಹೋಗುತ್ತಾರೆಂದು ಗೊತ್ತಿದ್ದರೆ ನಾನು ಈ ಧಂದೆಗೆ ಇಳಿಯುತ್ತಿರಲಿಲ್ಲ' ಎಂದ ದೇವರಾಯ.

'ಹಾಗಾದರೆ ನೀನು ದಲಿತರಿಂದ ಹಣವನ್ನೇಕೆ ಪ ಯಲಿಲ್ಲ?' ಪಾಯಿಂಟ್ ಹಾಕಿದ ಫೌಜದಾರ್.

ಈ ಪ್ರಶ್ನೆಗೆ ದೇವರಾಯನ ಹತ್ತಿರ ಉತ್ತರವಿರಲಿಲ್ಲ. 'ಮಾಲೀಕರು ಓಡಿ ಹೋಗುತ್ತಾರೆಂದು ನಿನಗೆ ಗೊತ್ತಿತ್ತು ಈ ಸಂಚಿನಲ್ಲಿ ನೀನೂ ಭಾಗಿಯಾಗಿರುವೆ' ಹೇಳಿದ ಫೌ ದಾರ್.

ಜನರ ಹಣವನ್ನು ತಿರುಗಿ ಕೊಡಬೇಕೆಂದು ಫೌ ದಾರ್ ಆದೇಶಿಸಿದ. ಇದ್ದ ಕಾರನ್ನು ಮಾರಿ ಒಂದಿಬ್ಬ ಹಣವನ್ನು ವಾಪಸ್ಸು ಮಾಡಿದ ದೇವರಾಯ. ಜನ ತಗಾದೆ ಜಾಸ್ತಿಯಾದಾಗ ಆತ ಊರಿನಿಂದ ಮಾಯವಾದ.

ಹಣ ತೊಡಗಿಸಿದ ಸಾಹುಕಾರರು ಮತ್ತೆ ಪೊಲಿ ಸರಿಗೆ ದೂರು ನೀಡಿದರು. ದೇವರಾಯನ ಮೇಲೆ ಈ ಸರ್ಚ್ ವಾರಂಟ್ ಹೊರಡಿಸಲಾಯಿತು.

ಈ ವಿಷಯ ದೇವರಾಯನಿಗೆ ಗೊತ್ತಾದಾಗ ಆ ತುಂಬ ಅವಮಾನಿತನಾದ. ಈ ಸುದ್ದಿ ಬಾಬಾಸಾಹೇಬರಿ ಗೊತ್ತಾದರೆ ಅವರೆಷ್ಟು ನೊಂದುಕೊಳ್ಳಬಹುದೆಂದು ದುಃ ಸಿದ. ಆದರೆ ತಪ್ಪು ಮಾಡಿಯಾಗಿತ್ತು. ಪೊಲೀಸ ಕಾನಾನು ಇವುಗಳಿಂದ ಪಾರಾಗಬೇಕಿತ್ತು. ಇಲ್ಲಿಯವರೆ ಆತ ಗಳಿಸಿದ್ದ ಮಾ ಮರ್ಯಾದೆ ಮಣ ಪಾಲಾಗಿತ್ತು. ಸಣ್ಣ ಹುಡು ಗರಂತೆ ದೇವರಾಯ ಅತ್ತ. ಆತನಿಗೆ ಪರಿ ಯದ ಕ್ರಿಶ್ಚಿಯನ ಫಾದರ್‌ರೊಬ್ಬರು ಬೆಳಗ ವಿಯಲ್ಲಿದ್ದರು. ದೇ ರಾಯ ಅವರಿಗೆ ಭೇ ಯಾದ. ಆ ಕಾಲದ ಬೇರೆ ಧರ್ಮದಿಂ



ಿಯನ್‌ರಾಗಿ ಪರಿವರ್ತಿತರಾದವರಿಗೆ ಅನೇಕ ವಲತ್ತುಗಳನ್ನು ನೀಡಲಾಗುತ್ತಿತ್ತು. ಬೃರಿದು ವೇಳೆ ಆತ ಣ್ಣ ಪ್ರಮಾಣದ ಅಪರಾಧ ಮಾಡಿದ್ದರೆ ಅದನ್ನು ಮಾಫ್ ಾಡುವ ಅಧಿಕಾರ ಚರ್ಚಿಗಿತ್ತು. ಫಾದರ್ ದೇವರಾಯ ಗೆ ಈ ಸವಲತ್ತಿನ ಬಗ್ಗೆ ಹೇಳಿ ಆತ ಕ್ರಿಶ್ಚಿಯನ್‌ನಾದರೆ ರ್ಕಾರ ಅವನ ಅಪರಾಧಗಳನ್ನು ಮನ್ನಿಸಬಹುದೆಂದು ೇಳಿದರು. ಬೀಸುವ ದೊಣ್ಣೆ ತಪ್ಪಿದರೆ ಸಾವಿರ ವರ್ಷ ಯುಸ್ಸೆಂದು ದೇವರಾಯ ಈ ಸಲಹೆಗೆ ಒಪ್ಪಿದ. ರಡನೆಯ ದಿನ ಫಾದರ್ ಅವನನ್ನು ತುಮಕೂರಿಗೆ ಿಸಿದರು. ತುಮ ಕೂರಿನ ಚರ್ಚ್‌ದಲ್ಲಿ ದೇವರಾಯ ್ಚಿಯನ್‌ನಾಗಿ ದೀಕ್ಷೆ ಹೊಂದಿದ. ಆತನ ಹೆಸರನ್ನು ಎನ್ ದೇವರಾಯ ಇಂಗಳೆಯೆಂದು ಬದಲಾಯಿಸಲಾ ಿತು. ಆಗ ಇಸ್ವಿ ೧೯೩೨.

ದೇವರಾಯ ಕ್ರಿಶ್ಚಿಯನ್‌ನಾದ ಸುದ್ದಿ ಚಿಕ್ಕೋಡಿಗೆ ಿದಾಗ ಎಲ್ಲರೂ ಆಶ್ಚರ್ಯಚಕಿತರಾದರು. ಆದರೆ ಾರೂ ಏನೂ ಮಾಡುವಂತಿರಲಿಲ್ಲ. ದೇವರಾಯ ಮಕೂರಿನಿಂದ ಅನೇಕ ಕಡೆಗಳಲ್ಲಿ ಹೋಗಿ ಬಂದ. ಕ್ಕಮಗಳೂರಿನ ಚರ್ಚಿನಲ್ಲಿ ಧರ್ಮಬೋಧಕನಾಗಿ ಾದರ್) ಸೇರಿಕೊಂಡ. ಅನೇಕ ದಿನಗಳ ಕಾಲ ಚರ್ಚಿ ಲ್ಲಿ ಕ್ರಿಶ್ಚಿಯನ್ ಧರ್ಮದ ಬಗ್ಗೆ ಪ್ರವಚನಗಳನ್ನು ನೀಡಿದ.

೧೯೩೮ ರಲ್ಲಿ ದೇವರಾಯನ ಮೇಲಿನ ಖಟ್ಲೆ ನ್ನು ಸರ್ಕಾರ ವಾಪಸ್ಸು ಪಡೆಯಿತು. ಸುದ್ದಿ ತಿಳಿಯು ದ್ದಂತೆಯೇ ದೇವರಾಯ ಫಾದರ್ ಅರಿವೆಗಳನ್ನು ಕಳಚಿ ತ್ತೆ ಮೊದಲಿನ ದೇವರಾಯನಾದ. ಚಿಕ್ಕಮಗಳೂರಿನಿಂದ ರವಾಗಿ ತನ್ನೂರಿಗೆ ಬಂದಿಳಿದ. ಆತನ ಗೆಳೆಯರೆಲ್ಲರೂ ದು ಇವನನ್ನು ಒಂದು ವಿಚಿತ್ರ ಪ್ರಾಣಿಯಂತೆ ನೋಡ ಡಗಿದರು.

'ನಾನು ಕ್ರಿಶ್ಚಿಯನ್ ಧರ್ಮಕ್ಕೆ ಹೋಗಿದ್ದು ನಿಜ; ದರ ಮೇಲೆನ ಪ್ರೀತಿಗಾಗಿ ಅಲ್ಲ; ನನಗೆ ಪೊಲೀಸರಿಂದ ಪ್ಪಿಸಿಕೊಳ್ಳಬೇಕಾಗಿತ್ತು; ಅನಿವಾರ್ಯವಾಗಿ ನಾನು ಕ್ರಿಶ್ಚಿ ಎನ್ ಆದೆ' ಎಂದು ದೇವರಾಯ.

'ನಮ್ಮ ಧರ್ಮ ಬಿಟ್ಟು ಹೀಗೆ ಬೇರೆ ಧರ್ಮಕ್ಕೆ ೋಗುವುದು ಸರೀನಾ?' ಕೇಳಿದ ಕಲ್ಲಪ್ಪ ಮಿಣಜಗಿ.

ಆತನ ಪ್ರಶ್ನೆ ದೇವರಾಯನಿಗೆ ನಗು ತರಿಸಿತು. ಾವ ಧರ್ಮ ತಮ್ಮನ್ನೆಲ್ಲ ನಾಯಿ ನರಿಗಳಿಗಿಂತ ನಿಕೃಷ್ಟ ೀವನ ನೀಡಿದೆಯೋ ಆ ಧರ್ಮದ ಪರವಾಗಿ ಕಲ್ಲಪ್ಪ ಾತಾಡುತ್ತಿದ್ದಾನ. ಇಂತಹ ಕಾರಣಗಳಿಗಾಗಿಯೇ ನಾವು ೋಷಿಸಲ್ಪಡುತ್ತಿರಬೇಕು ಎಂದೆನ್ನಿಸಿತು ದೇವರಾಯನಿಗೆ. ವರೂ ಸಂಯಮ ಕಳೆದುಕೊಳ್ಳದೇ ಹೇಳಿದ,

'ಹಾಗಲ್ಲ ಕಲ್ಲಪ್ಪ, ಇಲ್ಲಿ ಧರ್ಮದ ಮಾತೇ ಬೇಡ. ಮೂ ಅಲ್ಲದೆ ಬಾಬಾಸಾಹೇಬರೇ ತಾವು ಹಿಂದೂ ರ್ಮ ತ್ಯಜಿಸುತ್ತೇನೆಂದು ಹೇಳಿದ್ದಾರೆ. ಅವರೇ ಆ ರೀತಿ ೇಳಿದ ನಂತರ ಆ ಬಗ್ಗೆ ಮಾತಾಡಲು ನಾವ್ಯಾರು?' ೀಗೆ ಸಮಜಾಯಿಸಿ ಹಾಕಿದ.

ಪೊಲೀಸ್ ಕೇಸ್‌ಗಳೆಲ್ಲವೂ ಮುಗಿದ ನಂತರ ೇವರಾಯ ಕ್ರಿಶ್ಚಿಯನ್ ಧರ್ಮ ತ್ಯಜಿಸಿದ.

'ಅಲ್ಲೋ ದೇವರಾಯ, ಒಂದು ಧರ್ಮ ಬಿಟ್ಟು ನ್ನೊಂದು ಧರ್ಮ ಸೇರಿದ ಮೇಲೆ ಅದನ್ನು ಬಿಡಲು ೇಗಾದೀತು? ಎಂದು ಕೇಳಿದ ವೃದ್ಧ ನಾಗಪ್ಪನಿಗೆ ದೇವ ಯ 'ಹೇಗೆ ಹೋಗಿದ್ದೆನೋ, ಹಾಗೇ ವಾಪಸ್ಸು ಬಂದೆ ಕಾ' ಎಂದು ಹೇಳಿ ದೊಡ್ಡದಾಗಿ ನಕ್ಕ □

(ಮುಂದುವರಿಯುವುದು)

ಯುಗಾದಿ



ನನ್ನ ಮನೆಯ ಬಾಗಿಲಿಗೆ
ಹಸಿರು ತೋರಣವಿಲ್ಲದಿದ್ದರೂ
ಮತ್ತೆ ಬಂತು ಯುಗಾದಿ
ಪ್ರತಿವರ್ಷ ಮಾವಿನೆಲೆ ತರುತ್ತಿದ್ದ
ನನ್ನಪ್ಪ ಸತ್ತು ಇಂದಿಗೆ ವರುಷ.

ನನ್ನೂರ ಪಟೇಲ ಗೌಡನ ಮಕ್ಕಳು
ಹೊಸ ಅಂಗಿ ಚೆಡ್ಡಿ ಹಾಕಿ ಲವಲವಿಕೆ
ನನ್ನಲಿಲ್ಲ. ಎಣ್ಣೆ ಕಾಣದ ತಲೆ
ಮಜ್ಜನವಿಲ್ಲದ ಮೈ

ಊರ ಮುಂದಲ ಗುಡಿಯಲ್ಲಿ
ಜನ ಕಿಕ್ಕಿರಿದು ಬ್ರಹ್ಮಚಾರಿ
ಆಂಜನೇಯನ ಮುಂದೆ ಸೆರಗೊಡ್ಡಿ
ವರವನು ಬೇಡುವ ಬಂಜೆಯರು.

ನನ್ನಮ್ಮನಿಗೆ ಕೊಟ್ಟ ಬೆಲ್ಲ ಬೇವು
ಬೇವಿನ ರುಚಿಯೇ ಹೊರತು ಬೆಲ್ಲ ಇಲ್ಲ
ಒಬ್ಬಟ್ಟಿನ ಘಮಘಮ ವಾಸನೆ
ಮೂಗಿಗೆ ಮಾತ್ರ ಮೀಸಲು
ಮಧ್ಯಾಹ್ನದ ಸುಡುಬಿಸಿಲಲ್ಲಿ
ಕೆಂಬಾರೆ ದಾರಿಯಲ್ಲಿ
ಮೇಕೆಯಿಂದ ಹೆಜ್ಜೆ ಹಾಕುತ್ತಾ,

ಸಂಜೆಯಾದೀತು ಎಲ್ಲೆಲ್ಲಾ ಸಂಭ್ರಮ
ಮೋಟು ಬೀಡಿಯ ಆಟಕ್ಕೆ ಇಸ್ಪೀಟಿನ ಚಟ
ಆಡುವವರು ಮೂರು ಮಂದಿ
ನೋಡುವವರು ನೂರು ಮಂದಿ.

ಊರ ರಸ್ತೆಯಂಚಿನ ಶಾಲೆ
ಬೇಸಿಗೆಯಲ್ಲಿ ಎಲ್ಲರಿಗೂ ಬೆತ್ತಲೆ
ಎಲ್ಲೆಂದರಲ್ಲಿ ಪಚ್ಚಿ ಕಾಸ್ನಾಟಗಳ
ಕಾರು ಬಾರು.
ಹದಿನಾರು ವರ್ಷದ ಪಡ್ಡೆ ಹುಡುಗರ
ಕೈಯ್ಯಲ್ಲಿ ನೋಟಿನೊಳಗಿನ
ಗಾಂಧಿ ಅಪ್ಪಚ್ಚಿಯಾಗಿ ಅಶಾಂತಿ
ಮಾಡದೇ ಶಾಂತಿಯಾಗಿದ್ದ,

ಯುಗಾದಿಯ ಮಾರನೇ ದಿನ
ಬಾಡಿನೂಟ ಮೇಕೆ ಮರಿಗಳ
ಸಾಲು ಸಾಲು ಮಾರಣ ಹೋಮ
ನಲ್ಲಿ ಮೂಳೆಗಳೂ ಮುದಿ ಹಲ್ಲಿಗೆ ಸವಾಲ್.

ಸ್ವರ್ಗದಲ್ಲಿ ಸತ್ತ ಮೇಕೆ
ಟಗರುಗಳ ಗುದ್ದಾಟ
ಏಕೆ ನೆನಪಿಗೆ ಬರುತ್ತಿದೇ ಇಂದೇ.
ಹಸಿರು ತೋರಣ ಕಟ್ಟುವ
ನನ್ನಪ್ಪ ನನಗೆ ದಕ್ಕಿಲ್ಲ
ಸಾಲ ಎಂಬ ನೆಪ ಹೇಳಿ ಯುಗಾದಿ
ಮುನ್ನಾ ದಿನವೇ ರೈತರ ಆತ್ಮ
ಹತ್ಯೆಯ ಸಾಲಿಗೆ ಸೇರಿ ಹೋದ.

ನನ್ನ ಮನೆಯ ಮುಂದಲ ಮುದುಕಿ
ನಾಲ್ಕು ಕಣ್ಣುಗಳ ರೆಪ್ಪೆ ಸಮೇತ
ಕಾಣದ ಚಂದುವನ್ನು ಹುಡುಕುವ ಪರಿ
ನಾನು ಸಿಹಿಯನ್ನು ತಡಕುವ ಪರಿ
ಒಂದೇ ಆಗಿತ್ತು.

ಈಗ ಹೇಳಿ ಹೊಸ ವರುಷವೇ
ಹೊಸ ಹರುಷವೇ.......

○ ಬ್ಯಾಡರಹಳ್ಳಿ ಶಿವರಾಜು

ಬಾಡೂಟಕ್ಕೊಂದು ಗುರಿ ಇದೆಯಾ?

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಆತ್ಮೀಯ ಸ್ನೇಹಿತರೇ ಮತ್ತು ತತ್ತ್ವಜ್ಞಾನಿಗಳೇ, ಅಭಿಮಾನಿಗಳೇ ಮತ್ತು ಟೀಕಾಕಾರರೆ, ಪ್ರಸಿದ್ಧರೇ ಮತ್ತು ಬಲಿಷ್ಠರೇ, ನನ್ನ ಹೆಂಡತಿ ಮತ್ತು ನಾನು ನಿಮ್ಮನ್ನೆಲ್ಲಾ ಬಾಡೂಟಕ್ಕೆ ಆಹ್ವಾನಿಸುತ್ತಿದ್ದೇವೆ. ಇದನ್ನು ಕೆ.ಪಿ.ಸಿಂಗ್‌ರವರ ಗೌರವಾರ್ಥವಾಗಿ ಏರ್ಪಡಿಸಲಾಗಿದೆ. ಈ ಕೂಟವು ಭಿನ್ನವಾಗಿ ಇದೆಯಾದರೂ, ಇದೂ ಕೂಡ ಅರಣ್ಯವೆಂಬ ಚರಿತ್ರಾ ಪುಟಗಳಲ್ಲಿ ಸೇರಿಕೊಳ್ಳುತ್ತದೆ. ಈ ಔತಣಕೂಟವು ಭವಿಷ್ಯದ ದಲಿತ ಕ್ಯಾಪಿಟಲಿಸಂ (ಬಂಡವಾಳಶಾಹಿ)ನ ಕುರಿತು ಚರ್ಚಿಸಲಿದೆ.

ದಲಿತ ಮತ್ತು ಬಂಡವಾಳ ಒಂದಕ್ಕೊಂದು ಸೇರುವುದಿಲ್ಲವಾದ್ದರಿಂದ, ಇದು ಸಾಮಾಜಿಕವಾಗಿ ಸರಿಯಲ್ಲವೆಂದು ತೋರಬಹುದು. ಆದರೆ ಈ ಬಾಡೂಟ ಯಾವುದೇ ರೀತಿಯಲ್ಲಿ ಚರಿತ್ರೆಯ ಸಾಮರ್ಥ್ಯ ವನ್ನು ಕ್ಷೀಣಿಸದು. ಆದರೂ ಭಾರತದ ಚರಿತ್ರೆ ಅನಾದಿ ಕಾಲ ದಿಂದಲೂ ದಲಿತರನ್ನು ತುಚ್ಛೀಕರಿಸುತ್ತಲೇ ಬಂದಿದೆಯಾದರೂ ನಾವು ಆ ರೀತಿ ಮಾಡಲಾರೆವು.

ಈ ಅನುಕಂಪವಿಲ್ಲದ ಸರ್ವಾಧಿಕಾರಿ ಚರಿತ್ರೆಯು ನಮ್ಮನ್ನು ಅಣಕಮಾಡಿ, ತೀಡುತ್ತಾ ಸ್ಪರ್ಶವಿಲ್ಲದ, ಕೇಳಲುಬಾರದ ಹಾಗೂ ಮಾತನಾಡಿಸಲಾಗದ ಸುಡುಗಾಡಿಗೆ ದೂಡಿದೆ.

ಚರಿತ್ರೆಯ ಅಂಟಾರ್ಕ್ಟಿಕಾದಲ್ಲಿ ಹಿಮಗೆಡ್ಡೆಯಾಗಿದ್ದರೂ ನಾವೀಗ ಕರಗಲು ತಯಾರಾಗಿದ್ದು ಬಂಡವಾಳಶಾಹಿ ವಿಮೋಚನಾ ಜಗತ್ತಿನಲ್ಲಿ ಲೀನವಾಗಲು ಬಯಸುತ್ತೇವೆ. ಹೀಗಿದ್ದರೂ ಇಸ್ಲಾಂ, ಕ್ರಿಶ್ಚಿಯನ್ ಮತ್ತು ಮಾರ್ಕ್ಸ್‌ವಾದಗಳು ಬಹುವಾಗಿ ಭಾರತೀಯಗೊಂಡಿರುವಂತೆ ಭಾರತದ ಬಂಡವಾಳವು ಸಹ ಭಾರತೀಕರಣಗೊಂಡಿದೆ. ಇದು ದುರಂತವೇ ಸರಿ! ಅಂದರೆ ಆಡಂ ಸ್ಮಿತ್‌ನೂ ಸಹ ಸಹಜ ವೆಂಬಂತೆ ಭಾಗತೀಯನಾಗಿ ಬಿಟ್ಟಿದ್ದಾನೆ.

ಆಯ್ಕೆಗಳು ಬಹುವಾಗಿಯೇನೂ ಇಲ್ಲ. ಉಳಿಗಮಾನ್ಯವಾದವು ಸೋತು ಸುಣ್ಣವಾದರೆ, ಸಮಾಜವಾದವು ತನ್ನೊಳಗೇ ಸಾಯುತ್ತದೆ. ಬಂಡವಾಳ ಶಾಹಿಯು ಕೈಗಾರಿಕೆಗಳಿಗೆ ಮತ್ತು ನಗರಗಳಿಗೆ ಕಾರಣವಾಗುತ್ತದೆಯಾದ್ದರಿಂದ ಅದು ಆಶಾಕಿರಣವಾಗಿಯೇ ಉಳಿಯುತ್ತದೆ.

ಈ ಆಪಾದನೆ ನಿಜವಾಗಿದೆ. ಬಂಡವಾಳಶಾಹಿಯು ಒಂದು ವಿಮೋಚಕ ದೊರೆಯಂತೆ ಚಕ್ರವ್ಯೂಹದ ರೀತಿಯಲ್ಲಿ ಭಾರತಕ್ಕೆ ತನ್ನ ಕೊಡುಗೆಯನ್ನು ನೀಡುತ್ತಿದೆ. ಆದರೂ ಏನೂ ಕಾರಣವಿಲ್ಲದೆ ಭಾರತೀಯ ಬಂಡವಾಳಶಾಹಿಯನ್ನು ದ್ವೇಷಿಸುತಿದ್ದೇವೆ.

ಇದು ದ್ವಂದ್ವಾತ್ಮಕವಾಗಿ ನಮ್ಮನ್ನು ಚಕಿತಗೊಳಿಸಿದೆ. ಯಾರು ಊಳಿಗಮಾನ್ಯವಾದವನ್ನು ಉತ್ಸಾಹದಿಂದ ಬಿಟ್ಟು ಹೊರಬರಲು ಇಚ್ಛಿಸುತ್ತಿದ್ದಾರೋ ಅವರೇ ಬಂಡವಾಳಶಾಹಿಯನ್ನು ದ್ವೇಷಿಸುತ್ತಿದ್ದಾರೆ ಏಕೆ? ಬಂಡವಾಳಶಾಹಿ ತನ್ನ ತಾಯ್ನಾಡಾದ ಯೂರೋಪಿನಲ್ಲಿ ದ್ವೇಷಕ್ಕೆ ಒಳಗಾಗಿಲ್ಲ. ಬದಲು ಅದನ್ನು ಪ್ರೀತಿಯಿಂದ, ಗೌರವದಿಂದ ಬರಮಾಡಿಕೊಳ್ಳಲಾಗಿದೆ. ಯೂರೋಪಿನಲ್ಲಿ ಮುಕ್ತ ಆರ್ಥಿಕತೆಗೆ ಅದು ಕಾರಣವಾದಂತೆ ಸಮಾಜವನ್ನೂ ಸಹ ಬಿಡುಗಡೆಯತ್ತ ಹೊಯ್ದಿದೆ.

ಈ ಬಂಡವಾಳಶಾಹಿಯು ತನ್ನ ಭಾರತೀಯ ಮುಖವಾಡದಲ್ಲಿ ಆಧುನಿಕತೆಯನ್ನು ಶಿಕ್ಷಿಸುತ್ತಾ ಸಂಪ್ರದಾಯವನ್ನು ವೈಭವೀಕರಿಸು ತ್ತಿದೆ. ಈ ಪ್ರಕ್ರಿಯೆಯಲ್ಲಿ ಅದು ಮುಂಜಾನೆಯ ವಿಹಾರಕ್ಕೆ ಹೋಗು ವವರನ್ನು ಕಮ್ಮಿಯಾಗಿಸಿ, ಸಂಜೆಯಲ್ಲಿ ಕೂಲಿಗಾಗಿ ಕೂಗುತ್ತಿರುವ ವರನ್ನು ಹೆಚ್ಚಿಸಿದೆ. ಹೀಗೆ ಇವೆರಡೂ ಒಂದಕ್ಕೊಂದು ತದ್ವಿರುದ್ಧವಾಗಿ ನಡೆದಿವೆ. ಹಾಗೇನಾದರೂ ಅವು ಒಂದಕ್ಕೊಂದು ಸಂಧಿಸಿದಲ್ಲಿ ಪರಸ್ಪರ ಅಗೌರವಕ್ಕೊಳಗಾಗುತ್ತವೆ ಯಷ್ಟೆ. ಆದ್ದರಿಂದ ದಲಿತ ಬಂಡಳವಾದವು ಚಾರಿತ್ರಿಕವಾಗಿ ಎರಡು ಬಗೆಯ ಕಾರ್ಯಗಳನ್ನು ಮಾಡ ಬೇಕಿದೆ – ಅದು ವಿಮೋಚನೆಗಾ ವಿಮೋಚಕನನ್ನೇ ಬಿಡುಗಡೆ ಗೊಳಿಸಬೇಕಾಗಿದೆ. ಇನ್ನೊಂದೆ ದಲಿತರು ಸಾಮಾಜಿಕ ಮಧ್ಯವರ್ತಿ ಗಳಾಗಲು ಅದು ಅವರನ ಒಂದು ವರ್ಗವನ್ನಾಗಿ ಮಾಡಬೇಕಾಗಿದೆ.

ದಲಿತರಲ್ಲಿ ಕೆಲವರು ಬಿಲಿಯನ್ನರುಗಳಾಗಿ, ನೂರಾ ದಲಿತರು ಕೋಟ್ಯಾದಿಪತಿಗಳಾಗಿ, ಸಾವಿರಾರು ಮಂದಿ ಲಕ್ಷ್ಯಾದಿಪ ಗಳಾದಾಗ ಭಾರತೀಯ ಮುಖವಾಡ ತೊಟ್ಟಿರುವ ಬಂಡವಾ ಶಾಹಿಯನ್ನು ತೊಲಗಿಸಿ, ಪ್ರಜಾಸತ್ತಾತ್ಮೀಕರಿಸ ಬಹುದಾಗಿದೆ. ಹಲ ಡಜನ್ ದಲಿತರು ಷೇರು ಮಾರುಕಟ್ಟೆಯಲ್ಲಿ ತಮ್ಮ ಕೈಚಳಕವನ ತೋರುವವರಾಗಿ, ಕೆಲವರು ಜೆಟ್ ವಿಮಾನದ ಮಾಲೀಕರಾ ಕೆಲವರು ಗಾಲ್ಫ್ ಟೋಪಿ ಧರಿಸುವವರಾದಾಗ ಪ್ರಜಾಸತ್ತಾ ಬಂಡಳವಾಳಶಾಹಿಯನ್ನು ಪ್ರೀತಿಸುವಂತಾಗುತ್ತದೆ.

ಹೀಗಾದಾಗ, ದಲಿತ ಬಂಡವಾಳಶಾಹಿಗಳು ತಮ್ಮ ಸಮುದ ಯಕ್ಕೆ ಮಾದರಿಗಳಾಗುತ್ತಾರೆ. ಇಂಥ ದಲಿತ ವರ್ಗವು ತಮ್ಮ ಕ ನೆನಪುಗಳನ್ನೆಲ್ಲ ಮರೆತು, ಹೊಸ ಬಂಡವಾಳಶಾಹಿ ಕ್ರಾಂತಿಗೆ ನಕಾ ಯನ್ನು ರೂಪಿಸುತ್ತಾರೆ.

ದಲಿತ ಕೈಗಾರಿಕೋದ್ಯಮಿಗಳ ಒಂದು ಗುಂಪು ಮತ್ತು ಸಿಐ ಒಟ್ಟು ಸೇರಿ ಒಂದು ಜಂಟಿ ಕಾರ್ಯಕ್ರಮವನ್ನು ಏರ್ಪಡಿಸುವ ದಿ ಬಂದಾಗ, ಅದು ಹೊಸ ಯುಗದ ಘೋಷಣೆಯೇ ಆಗುತ್ತದೆ–ಅ ಬಂಡವಾಳಶಾಹಿಯು ತನ್ನ ಹಿಂದಿನ ಪಕ್ಷಪಾತಿ ಧೋರಣೆಯಿಂ ಮುಕ್ತಿಯನ್ನು ಪಡೆದಂತಾಗುತ್ತದೆ.

ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಒಂದು ದಲಿ ಬಂಡವಾಳಶಾಹಿ ವ್ಯವಸ್ಥೆ ವಾಸ್ತವವಾದಲ್ಲಿ, ಅದು ಮತ್ತು ಇನ್ನೊಂದ ಸೇರಿ ನವಭಾರತದ ಉದಯವಾಗಿ, ಅದನ್ನು ಎಲ್ಲರೂ ಗೌರವಿ ತಮ್ಮದೆಂದು ಭಾವಿಸಲಾಗುತ್ತದೆ.

ಈ ಗ್ರಹಿಕೆಯಲ್ಲಿ ನನ್ನ ಔತಣಕೂಟವು ಅದಷ್ಟೇ ಕಲ್ಪನೆಯಿಂ ಕೂಡಿದ್ದರೂ ಭಾರತದ ಚರಿತ್ರೆಯನ್ನು ಹೊಸದಾಗಿ ಸೃಷ್ಟಿಸುವಂತ ಗುತ್ತದೆ. ಈ ಔತಣಕೂಟದಲ್ಲಿ ಭಾಷಣಗಳಿರುವುದಿಲ್ಲ. ಯಾರು ಎಷ ಪೆಗ್ ಕುಡಿಯುತ್ತಿದ್ದಾರೆಂಬುದನ್ನು ಗಮನಿಸಲು ಯಾರು ಇರುವುದಿಲ್ಲ.

ಹೀಗಿದ್ದರೂ, ಈ ಪಾರ್ಟಿಯಲ್ಲಿ ಕೆಲವು ವಿಶೇಷಗಳಿರುತ್ತವೆ – ಕೆ.ಪಿ.ಸಿಂಗ್‌ಗೆ ಸಾಂಪ್ರದಾಯಿಕವಾಗಿ ಪುಷ್ಪಗುಚ್ಛವನ್ನು ನೀಡುವುದಲ್ಲದ ಅವರು ಬಯಸಿದ್ದಲ್ಲಿ ಅವರೊಂದು ವಿಚಾರವನ್ನು ಮಂಡಿಸಬಹುದು

ಕೆಪಿಎಸ್ ಅಥವಾ ಕೆ.ಪಿ.ಸಿಂಗ್ ಉತ್ತರ ಪ್ರದೇಶದ ಅಲಿಘ ಜಿಲ್ಲೆಯಲ್ಲಿ ಹುಟ್ಟಿ, ನೆಹರು ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತ ಪದವಿ ಪಡೆದು, ಅಮೆರಿಕಾದ ವಿಕೊಸಿನ್ ಯೂನಿವರ್ಸಿಟಿಯಲ್ಲ ಪಿ.ಎಚ್.ಡಿ ಮಾಡಿದರು. ಈಗ ಅವರು ಸಿಯಾಟಲ್, ವಾಷಿಂಗ್ಟನ ಯೂನಿವರ್ಸಿಟಿಯಲ್ಲಿ ಬೋಧನೆ ಮಾಡುತ್ತಿದ್ದಾರೆ. ಅವರು ದಲಿತ ಎನ್‌ಆರ್‌ಐಗಳನ್ನು ಸಂಘಟಿಸುವ ಮೂಲಕ, ದೊಡ್ಡ ಮೂರ್ತಿ ಯಾಗಿ ಹೊರಹೊಮ್ಮುತ್ತಿದ್ದಾರೆ.

ದಲಿತ್ ಡೈರಿ

ದಲಿತರಲ್ಲಿ ಕೆಲವರು ಬಿಲಿಯನ್ನರುಗಳಾಗಿ, ನೂರಾರು ದಲಿತರು ಕೋಟ್ಯಾದಿಪತಿಗಳಾಗಿ, ಸಾವಿರಾರು ಮಂದಿ ಲಕ್ಷ್ಯಾದಿಪತಿಗಳಾದಾಗ ಭಾರತೀಯ ಮುಖವಾಡ ತೊಟ್ಟಿರುವ ಬಂಡವಾಳ ಶಾಹಿಯನ್ನು ತೊಲಗಿಸಿ, ಪ್ರಜಾಸತ್ತಾತ್ಮೀಕರಿಸ ಬಹುದಾಗಿದೆ. ಹಲವು ಡಜನ್ ದಲಿತರು ಷೇರು ಮಾರುಕಟ್ಟೆಯಲ್ಲಿ ತಮ್ಮ ಕೈಚಳಕವನ್ನು ತೋರುವವರಾಗಿ, ಕೆಲವರು ಜೆಟ್ ವಿಮಾನದ ಮಾಲೀಕರಾಗಿ, ಕೆಲವರು ಗಾಲ್ಫ್ ಟೋಪಿ ಧರಿಸುವವರಾದಾಗ ಪ್ರಜಾಸತ್ತಾತ್ಮಕ ಬಂಡಳ ವಾಳಶಾಹಿಯನ್ನು ಪ್ರೀತಿಸುವಂತಾಗುತ್ತದೆ. ಇಂಥ ದಲಿತ ವರ್ಗವು ತಮ್ಮ ಕಹಿ ನೆನಪುಗಳನ್ನೆಲ್ಲ ಮರೆತು, ಹೊಸ ಬಂಡವಾಳಶಾಹಿ ಕ್ರಾಂತಿಗೆ ನಕಾಶೆಯನ್ನು ರೂಪಿಸುತ್ತಾರೆ.

○ಅನು:ಡೊಮಿನಿಕ್.ಡಿ

2003ರಲ್ಲಿ ವ್ಯಾಕೋವರ್‌ನಲ್ಲಿ ನಡೆದ ಂತಾರಾಷ್ಟ್ರೀಯ ದಲಿತ ಸಮಾವೇಶದ ಮುಖ್ಯ ಾವಾರಿ ಕೆ.ಪಿ.ಎಸ್ ಆಗಿ ದ್ದಾರೆ. ಅವರ ಧ್ಯೇಯ ಮತ್ತು ರ್ಶ ಬಹು ವಿಶಾಲ ವಾಗಿದ್ದು, ಬರುವ ವರ್ಷ ಹಲಿಗೆ ಭೇಟಿ ನೀಡುವ ವರಿದ್ದು, ಜಾಗತಿಕ ಮಟ್ಟದ ಲಿತ ಸಮಾವೇಶಕ್ಕೆ ತಯಾರಿ ನಡೆಸುತ್ತಿದ್ದಾರೆ.

ಭವಿಷ್ಯದ ಧ್ಯೇಯವಾಗಲಿರುವ ದೆಹಲಿಯ ರ‍್ಯಾಲಿಗೆ ್ಯಾಯವಾದುದು ಬೇರೇನೂ ಇಲ್ಲ. ನೀಲಿ/ಕಪ್ಪು ಸೂಟ್ ರಿಯಾಗಿರುವ (ಪೈಜಾಮ, ಧೋತಿ ಅಥವಾ ಚಪ್ಪಲಿ ನ್ನು ಧರಿಸುವುದೇ ಇಲ್ಲ) ಅವರೊಡನೆ ಸುಮಾರು ಂದು ಲಕ್ಷ್ಯ ದಲಿತರು ದೆಹಲಿಯ ಬೀದಿಗಳಲ್ಲಿ ಕಪ್ಪು ಂಡೆಗಳನ್ನು ಹಿಡಿದು, ಘೋಷಣೆಗಳೊಡನೆ ತೆಯಲ್ಲಿದ್ದಾರೆ.

ಕೆ.ಪಿ.ಎಸ್‌ರವರ ವಿಚಾರಗಳನ್ನು ಕೆದಕಬಾರದಾ ೂ, ದಲಿತ ಬಂಡವಾಳವಾದ ಅವರಿಗೆ ಅತ್ಯಂತ ಪ್ರಿಯ ದುದು. ಇಂಥ ಶಕ್ತಿಯುತವಾದ ಗಳಿಗೆಯನ್ನು ಬದಿಗೆ ುವಂಥ ತರ್ಕವೇನಾದರೂ ಇದೆಯಾ? ಇರಲು ಧ್ಯವೇ ಇಲ್ಲ. ಹಾಗಾಗಿ ಎಲ್ಲರೂ ಬಾಡೂಟಕ್ಕೆ ಬನ್ನಿ.

'ಇನ್ಫೋಸಿಸ್'ನ ನಂದನ್ ನೀಲೇಕಣಿ

ಅಂದರೆ ಮೊದಲ ದಲಿತ ವೆಬ್‌ಸೈಟ್ **www.ambedkar.org/** ಸಹ ಅಮೆರಿಕದಲ್ಲೇ ಉದಯಿಸಿದ್ದು ಎಂದರೆ ಅಚ್ಚರಿಪಡಬೇಕಿಲ್ಲ. ಶಶಿಕಾಂತ್ ಚಂದ್ರಶೇಖರನ್ ತಾನೇನಾದರೂ ಒಂದು ಐಟಿ ಉದ್ಯಮವನ್ನು ಆರಂಭಿಸಿದಲ್ಲಿ ಕೋಟಿಗಟ್ಟಲೆ ಹಣ ಸಂಪಾದಿಸಬಹುದಿತ್ತು. ಅದರ ಬದಲು ಈ ವೆಬ್‌ಸೈಟ್‌ನ್ನು ಆರಂಭಿಸುವ ಮೂಲಕ ಸಾವಿರಾರು ಜನ ದಲಿತರು ದಿನಾ ವೀಕ್ಷಿಸುವಂತೆ ಮಾಡಿದ್ದಾರೆ. ಅಮೆರಿಕಾ ಮತ್ತು ಕೆನಡಾದಲ್ಲಿನ ದಲಿತ ಎನ್‌ಆರ್‌ಐಗಳು 2003 ರಲ್ಲಿ ವ್ಯಾಂಕೋವರ್‌ನಲ್ಲಿ ಮೊದಲ ಅಂತಾರಾಷ್ಟ್ರೀಯ ದಲಿತ ಸಮಾವೇಶವನ್ನು ಮಾಡಿದರು. ಭಾರತದಲ್ಲಿ ದಲಿತ ಮಕ್ಕಳ ಶಿಕ್ಷಣಕ್ಕಾಗಿ ಅನೇಕ ಶಾಲೆಗಳಿಗೆ ಈ ದಲಿತ ಎನ್‌ಆರ್‌ಐಗಳು ದೇಣಿಗೆ ನೀಡುತ್ತಿದ್ದಾರೆಂದು ಮತ್ತೆ ಹೇಳಬೇಕಾಗಿಲ್ಲ.

ಹಲವಾರು ಜನಾಂದೋಲನಗಳಿಗಾಗಿ ದಲಿತ ಎನ್‌ಆರ್‌ಐಗಳು ಚಲನಶೀಲರಾಗುತ್ತಿದ್ದಾರೆ. ಈ ಒಕ್ಕೂಟವು ಅವರಲ್ಲಿ ಹಲವಾರು ರೀತಿಯ ತಿರುವುಗಳಿಗೆ ದಾರಿ ಮಾಡಿಕೊಡುತ್ತಿದ್ದು, ಶಶಿಕಾಂತ್, ಡಾ॥ ಕೆ.ಪಿ.ಸಿಂಗ್ ಮತ್ತು ಬೆಂಜಮಿನ್ ಕೈಲ ಮುಂತಾದ ನಾಯಕರಿಗೆ ಅನುವು ಮಾಡಿಕೊಟ್ಟಿದ್ದು, ಅವರೆಲ್ಲ, ಭಿನ್ನ ಉದ್ದೇಶಗಳನ್ನು ಹೊಂದಿದ್ದರೂ, ಪರಸ್ಪರ ಹೊಂದಾಣಿಕೆಯಲ್ಲಿ ಕಾರ್ಯ ನಿರ್ವಹಿಸುವಂತೆ ಮಾಡಲಾಗಿದೆ. ಈ ಪಟ್ಟಿ ಇನ್ನೂ ಬೆಳೆಯುತ್ತದೆ. ಕ್ಯಾಲಿಫೋರ್ನಿಯಾದಲ್ಲಿರುವ ಸಾಫ್ಟ್‌ವೇರ್ ಇಂಜಿನಿಯರ್‌ಗಳಾದ ಬೆಂಜಮಿನ್ ಮತ್ತು ರಾಮಕೃಷ್ಣ ಭೂಪತಿಯವರು ಒಂದುಗೂಡಿ 2003 ರಲ್ಲಿ ಅಂಬೇಡ್ಕರ್ ಫೆಲೋಶಿಪ್ ಚಳುವಳಿಯನ್ನು ಆರಂಭಿಸಿದರು. ಈ ಕಾರ್ಯಕ್ರಮದಡಿ ಆಂಧ್ರಾದ ನೂರಾರು ಅರ್ಹ ದಲಿತ ವಿದ್ಯಾರ್ಥಿಗಳಿಗೆ ವಾರ್ಷಿಕ 5000 ರೂ.ಗಳನ್ನು ವಿದ್ಯಾರ್ಥಿ ವೇತನವನ್ನಾಗಿ ನೀಡಲಾಗುತ್ತಿದೆ. ಬಡದಲಿತ ವಿದ್ಯಾರ್ಥಿಗಳಿಗಾಗಿ ಸರ್ಕಾರ ನಡೆಸುತ್ತಿರುವ ಕಲ್ಯಾಣ ಹಾಸ್ಟೆಲ್‌ಗಳಿಂದ ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ದಲಿತ ಎನ್‌ಆರ್‌ಐಗಳಿಗೆ ಅಭಿನಂದನೆಗಳು

ಅಮೆರಿಕಾದ ಸ್ವಾತಂತ್ರ್ಯ ಯುದ್ಧ (1775–1783) ಗೂ ಫ್ರಾನ್ಸ್‌ನ ಕ್ರಾಂತಿ(1789–1793) ಇವುಗಳೆರಡು, ರ್ಕ್ವಿಸ್ ದೆ ಲಫಯೆಟ್ಟೆಯನ್ನು ನೆನಸಿಕೊಂಡು ಗೌರವ ಕ್ತಪಡಿಸದೆ ಇರಲಾರವು. ಲಫಯೆಟ್ಟೆ ಫ್ರಾನ್ಸಿವನಾದರೂ ರ್ಜ್ ವಾಷಿಂಗ್ಟನ್ ಸೈನ್ಯವನ್ನು ಸೇರಿ ಅಮೆರಿಕಾವನ್ನು ಟಿಷರಿಂದ ಮುಕ್ತಗೊಳಿಸಲು ಕಾರಣನಾಗುತ್ತಾನೆ. ಯ್ನಾಡಿಗೆ ಮರಳಿ ಬಂದು ಫ್ರಾನ್ಸನ ಕ್ರಾಂತಿಯೊಳಗೆ ರಿಕೊಂಡು ಪ್ರಜಾಪ್ರಭುತ್ವ ಮತ್ತು ಬಂಡವಾಳವಾದದ ರ್ತಕನಾಗುತ್ತಾನೆ.

ಚೀನಾ ಮಹಾ ಕ್ರಾಂತಿಯ (1949) ಪ್ರಸಿದ್ಧ ಐದು ಂದಿ ನಾಯಕರೆಂದರೆ ಮಾವೋತ್ಸೆತುಂಗಾ, ಚೌ–ಯಿನ್ ಾಯ್, ದೆಂಗ್–ಶಿಯಾವೋ–ಪಿಂಗ್, ಲಿಯುಶಾವೋ– ಮತ್ತು ಚು–ತೆ. ಇವರಲ್ಲಿ ಕೊನೆಯ ನಾಲ್ಕು ಮಂದಿ ೀಶಗಳಲ್ಲಿ ಶಿಕ್ಷಣ ಪಡೆದವರು. ಜಾರ್ಜ್ ವ್ಯಾಲೆಂಟಿನೊ ್ ಪ್ಲಕನೋವ(1856–1918), ತನ್ನ ರಷ್ಯಿಯಾದ ರ್ಕ್ಸ್‌ವಾದವನ್ನು ಬೆಳಸಿಕೊಂಡಿದ್ದು ಯೂರೋಪಿನಲ್ಲಿ ದೇಶಿಯಾಗಿದ್ದಾಗ. ಭಾರತೀಯ ನ್ಯಾಷನಲ್ ಕಾಂಗ್ರೆ ನ ಮೊದಲ 25 ಮಂದಿ ಅಧ್ಯಕ್ಷರಲ್ಲಿ 14 ಮಂದಿ ಂಗ್ಲೆಂಡಿನಲ್ಲಿ ಶಿಕ್ಷಣ ಪಡೆದವರು ಇಲ್ಲವೆ ಅಲ್ಲಿದ್ದವರು. ಲಿತರ ತತ್ವಜ್ಞಾನಿ ಮತ್ತು ವಿಮೋಚಕನಾದ ಡಾ. ಅಂಬೇ ್ ಸಹಾ ಅಮೆರಿಕಾ ಮತ್ತು ಯೂರೋಪ್‌ಗಳಲ್ಲಿ ಣ ಪಡೆದಿದ್ದಾರೆ. ಹಾಗೆಯೇ ಅಂಬೇಡ್ಕರ್ ನಂತರ ರತವೂ ಸಹ ಎರಡನೇ ಹಂತದ ದಲಿತ ಕ್ರಾಂತಿಗೆ ೇ ರೀತಿಯ ವಿದೇಶಿ ಹಸ್ತಗಳಿಗೆ ಕಾದು ಕೂತಿದೆ. ಂತಹ ಕನಸು ನಿಜವಾಗಿಸುವತ್ತ ಮೊದಲ ಗುಂಡನ್ನು ಸಿದ್ದು ಲಿಂಕನ್ ನೆಲದಲ್ಲಿ ನಿಂತ ಡಾ॥ ಲಕ್ಷ್ಮಿ ಬೆರ್ವ ಯಾಣಾದ ರೆವಾರಿ ಜಿಲ್ಲೆಯಲ್ಲಿ ಜನಿಸಿದ ಆತ ಷಿಂಗ್ಟನ್ ಡಿಸಿಯಲ್ಲಿರುವ ದಲಿತ ಡಾಕ್ಟರ್. ಅಂದಿನ ಾನಮಂತ್ರಿ ಶ್ರೀಮತಿ ಇಂದಿರಾಗಾಂಧಿ ಅಮೆರಿಕಾಕ್ಕೆ ಟಿ ನೀಡಿದ ಸಂದರ್ಭದಲ್ಲಿ, ಭಾರತದಲ್ಲಿ ದಲಿತರನ್ನು ಕಡೆಗಣಿಸಿದ್ದಕ್ಕಾಗಿ ಅಮೆರಿಕಾದ ರಾಜಧಾನಿಯ ಬೀದಿಗಳಲ್ಲಿ ಪ್ರತಿಭಟಿಸಿದ್ದರು.

ಡಾ॥ ಬೆರ‍್ವರವರ ಆ ಬಿಡಿ ಘಟನೆಯೊಂದು ಅಮೆರಿಕಾದಲ್ಲಿನ ದಲಿತ ಎನ್‌ಆರ್‌ಐಗಳ ಕಲ್ಪನೆಯಲ್ಲಿ ಸ್ಫೂರ್ತಿಯ ಕಿಚ್ಚನ್ನು ಹೊತ್ತಿಸಿತು– "ತಾಯ್ನಾಡಿನಲ್ಲಿನ ತಮ್ಮ ಜನಕ್ಕೆ ಏನಾದರೂ ಮಾಡಬೇಕು" ಎಂಬ ನಿರ್ಧಾರವನ್ನು ಕೈಗೊಳ್ಳುವಂತೆ ಮಾಡಿತು. ಅಂದಿನಿಂದಲೇ ಡಾ॥ ಅಂಬೇಡ್ಕರ್ ಜನ್ಮಜಯಂತಿಯನ್ನು ವ್ಯವಸ್ಥಿತವಾಗಿ ಆಚರಿಸ ತೊಡಗಿದರು. ಹೀಗೆ ಒಂದು ಚಳುವಳಿ ಉದಯಿಸಿತು.

ಭಾರತೀಯ ನ್ಯಾಷನಲ್ ಕಾಂಗ್ರೆಸ್‌ನ ಮೊದಲ 25 ಮಂದಿ ಅಧ್ಯಕ್ಷರಲ್ಲಿ 14 ಮಂದಿ ಇಂಗ್ಲೆಂಡಿನಲ್ಲಿ ಶಿಕ್ಷಣ ಪಡೆದವರು ಇಲ್ಲವೆ ಅಲ್ಲಿದ್ದವರು. ದಲಿತರ ತತ್ವಜ್ಞಾನಿ ಮತ್ತು ವಿಮೋಚಕನಾದ ಡಾ. ಅಂಬೇಡ್ಕರ್ ಸಹಾ ಅಮೆರಿಕಾ ಮತ್ತು ಯೂರೋಪ್‌ಗಳಲ್ಲಿ ಶಿಕ್ಷಣ ಪಡೆದಿದ್ದಾರೆ. ಹಾಗೆಯೇ ಅಂಬೇಡ್ಕರ್ ನಂತರ ಭಾರತವೂ ಸಹ ಎರಡನೇ ಹಂತದ ದಲಿತ ಕ್ರಾಂತಿಗೆ ಅದೇ ರೀತಿಯ ವಿದೇಶಿ ಹಸ್ತಗಳಿಗೆ ಕಾದು ಕೂತಿದೆ. ಅಂತಹ ಕನಸು ನಿಜವಾಗಿಸುವತ್ತ ಮೊದಲ ಗುಂಡನ್ನು ಸಿಡಿಸಿದ್ದು ಲಿಂಕನ್ ನೆಲದಲ್ಲಿ ನಿಂತ ಡಾ॥ ಲಕ್ಷ್ಮಿ ಬೆರ‍್ವ

ಈ ಪ್ರಕ್ರಿಯೆಗೆ ಸಾಕಷ್ಟು ಹಣ ಖರ್ಚಾಗುತ್ತದೆ. ಈ ವರ್ಷ ಈ ವಿದ್ಯಾರ್ಥಿ ವೇತನದ ಕಾರ್ಯಕ್ರಮವನ್ನು ಹೈದರಾಬಾದ್‌ನಲ್ಲಿ ಜನವರಿ 13ರಂದು ಆಯೋಜಿಸಲಾಗಿತ್ತು. 36 ವಿದ್ಯಾರ್ಥಿಗಳಿಗೆ ಈ ಫೆಲೋಶಿಪ್‌ನ್ನು ಡಾ॥ ಅಂಬೇಡ್ಕರ್ ಜೀವನ ಚರಿತ್ರೆಯೊಂದಿಗೆ ನೀಡಲಾಯಿತು. ಬೆಂಜಮಿನ್ ಈ ಚಳುವಳಿಯನ್ನು ಆರಂಭಿಸಿದಾಗ ಆತ ತನ್ನ ಜೇಬಿನಿಂದಲೇ 2 ಫೆಲೋಶಿಪ್ ಮಾತ್ರ ನೀಡಲಾರಂಭಿಸಿದ್ದ. ತಾನು ಮಾಡುತ್ತಿರುವುದನ್ನು ದಲಿತ ಎನ್‌ಆರ್‌ಐಗಳಿಗೆ ತಿಳಿಸಿ, ಅವರ ಬೆಂಬಲವನ್ನು ಕೋರಿದಾಗ 2004ರಲ್ಲಿ 20 ವಿದ್ಯಾರ್ಥಿಗಳಿಗೆ ನೆರವು ನೀಡಲು ಸಾಧ್ಯವಾಯಿತು. ಈ ಫೆಲೋಶಿಪ್ ಚಳುವಳಿಗಾಗಿ ಈಗ ಒಂದು ಸಾಂಸ್ಥಿಕ ಸ್ವರೂಪ ಬಂದಿದ್ದು, ಒಂದು ವೆಬ್‌ಸೈಟ್ ಅನ್ನು – **ambedkarscholarship@yahoo.com/** ಆರಂಭಿಸಲಾಗಿದ್ದು, ಎಲ್ಲವೂ ಪಾರದರ್ಶಕವಾಗಿರುವಂತೆ ಮಾಡಲಾಗಿದ್ದು, ನಿರ್ವಹಣೆಗಾಗಿ ಒಂದು ಸಮಿತಿಯನ್ನೂ ಸಹ ವ್ಯವಸ್ಥೆ ಮಾಡಲಾಗಿದೆ.

ಆತ ನನ್ನೊಡನೆ ಫೋನಿನಲ್ಲಿ ಮಾತನಾಡುತ್ತಾ ಹೇಳಿದ್ದೇನೆಂದರೆ, "ದಲಿತ ವ್ಯಕ್ತಿತ್ವದೊಳಗೆ ನಾನೊಂದು ಸಮಗ್ರ ಅಂಶವನ್ನು ಪರಿಚಯಿಸುತ್ತಿದ್ದೇನೆ. ಈ ನೀತಿಯಲ್ಲಿ

ನನ್ನದೊಂದು ಸಣ್ಣ ಪ್ರಯತ್ನ. ಪ್ರತಿಯೊಬ್ಬ ಅನೂಕಲಸ್ಥ ದಲಿತನು ಅಗತ್ಯವಿರುವ ಒಂದು ದಲಿತ ಮಗುವಿನ ಶಿಕ್ಷಣಕ್ಕೆ ದೇಣಿಗೆ ನೀಡಬೇಕು." ಕ್ಯಾಲಿಫೋರ್ನಿಯಾದಲ್ಲಿ ಸಾವಿರಾರು ದಲಿತೇತರರು ಐಟಿ ಕ್ಷೇತ್ರದಲ್ಲಿದ್ದು, ಬಿಲಿಯನ್ ಗಟ್ಟಲೆ ಗಳಿಸುತ್ತಿದ್ದಾರೆ. ಇವರೆಲ್ಲಾ ಮಿಲಿಯಗಟ್ಟಲೆ ಗೋ ಸಂರಕ್ಷಣೆಗೆ ವ್ಯಯಿಸುತ್ತಿದ್ದಾರೆ, ಆದರೆ ಅಂಬೇಡ್ಕರ್ ಫೆಲೋಶಿಪ್‌ಗೆ ಬಿಡಿಗಾಸು ನೀಡುತ್ತಿಲ್ಲ. ಭಾರತದಲ್ಲಿ ಇರುವ ಜಾತಿ ಪದ್ಧತಿ ಎನ್ನುವುದು-ಸಾಮಾಜಿಕ ಅಸ್ತಿತ್ವದಲ್ಲಿ ಪ್ರತ್ಯೇಕತೆ ಅದರ ಮೂಲವಾಗಿಬಿಟ್ಟದೆ.

ಜಾತಿಯ ಸಮಗ್ರವಾದ ಪರಿಚಯ ಆಧುನಿಕ ದಲಿತರಿಗೂ ಚೆನ್ನಾಗಿ ತಿಳಿದಿದೆ. ಕೋಟ್ಯಾದಿ ಪತಿಗಳಾಗಿರುವ ನಾರಾಯಣ ಮೂರ್ತಿ ಅಥವಾ ನಂದನ್ ನೀಲೇಕಣಿ ಅಂಥವರ್ಯಾರೂ ಅಂಬೇಡ್ಕರ್ ಫೆಲೋಶಿಪ್ ಅನ್ನು ಆರಂಭಿಸದೆ, ಒಬ್ಬ ಬೆಂಜಮಿನ್ ಅಥವಾ ಭೂಪತಿಯವರಂಥವರು ಆರಂಭಿಸುತ್ತಾರಷ್ಟೆ. ಒಬ್ಬ ದಲಿತ ವಿದ್ಯಾರ್ಥಿಗೆ ಅಗತ್ಯವಾಗಿ ಬೇಕಾಗಿರುವ ರೂ.5000 ನೀಡುವ ಅಥವಾ ಅದನ್ನು ಆಳವಾದ ಸಮುದ್ರಕ್ಕೆಸೆಯುವ ಆಯ್ಕೆಯನ್ನು ಇನ್ಫೋಸಿಸ್/ನಂದನ್‌ಗೆ ನೀಡಿದಲ್ಲಿ, ಅವರು ಖಂಡಿತ ಎರಡನೆಯದನ್ನು ಆಯ್ದುಕೊಳ್ಳುತ್ತಾರೆ. ಇದು ಡಾ॥ ಕೆ.ಪಿ. ಸಿಂಗ್ ವಿಚಾರವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ- "ದಲಿತರನ್ನು ರಕ್ಷಿಸಬೇಕಾದರೆ ದಲಿತ ಬಂಡವಾಳವನ್ನು ಸೃಷ್ಟಿಸಬೇಕಾಗುತ್ತದೆ." ದಲಿತ ಎನ್‌ಆರ್‌ಐಗಳಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸೋಣ.

ಬೆಂಗಳೂರಿನ ದಲಿತನಾಗಿರುವ ಜೆ. ಕೆ. ಕೃಷ್ಣ ದಲಿತ್ ಡೈರಿಯ ಬದ್ಧ ಓದುಗ. ಆತ ನನ್ನ ಅಭಿಮಾನಿಯೂ ಹೌದು. ಹೀಗಿದ್ದೂ ಜನವರಿ 7ರಂದು ಆತ ನನಗೆ ಹೀಗೆಂದು ಬರೆದಿದ್ದ. ಆತನ ಒಪ್ಪಿಗೆಯ ಮೇರೆಗೆ ನಾನದನ್ನು ಇಲ್ಲಿ ನೀಡುತ್ತಿದ್ದೇನೆ:

ಮಾನ್ಯರೇ,

ನನ್ನ ಕೆಲವು ಆಲೋಚನೆಗಳಿಗೆ ನಿಮ್ಮ ಪ್ರತಿಕ್ರಿಯೆ ಬೇಕಾಗಿದೆ. ಮೊದಲನೆಯದಾಗಿ, ಡಾ॥ಕೆ.ಪಿ. ಸಿಂಗ್‌ರ ಉದ್ದೇಶವನ್ನು ನಾನು ನಂಬುತ್ತೇನೆ. ಅವರ ಪ್ರಕಾರ ಭಾರತೀಯ ಸಂಪನ್ಮೂಲಗಳಲ್ಲಿ ದಲಿತರ ಪಾಲು ಸಿಗುವಂತಾಗಬೇಕಾದರೆ ಹೊಸ ಚಳುವಳಿಯ ಅಗತ್ಯವಿದೆಯೆಂಬುದನ್ನು ನಾನು ಒಪ್ಪುತ್ತೇನೆ.

ಇಲ್ಲಿ ಒಂದು ಸಂಗತಿ ನನ್ನನ್ನು ತೊಂದರೆಗೀಡು ಮಾಡಿದೆ – ಈ ಚಳುವಳಿಯು ನಗರದಲ್ಲಿರುವ ಸುಶಿಕ್ಷಿತ ದಲಿತರನ್ನು ಗ್ರಾಮೀಣ ದಲಿತರಿಂದ ಬೇರ್ಪಡಿಸುವುದಿಲ್ಲವೇ? ನಮಗೆ ಗೊತ್ತಿರುವ ಸಂಗತಿಯೆಂದರೆ ದಲಿತರಲ್ಲಿ ಶೇ.70ರಷ್ಟು ದಲಿತರು ಹಳ್ಳಿಗಳಲ್ಲಿ ಭೂರಹಿತ ಕಾರ್ಮಿಕರಾಗಿ ನರಳುತ್ತಿದ್ದಾರೆ.

ಅಲ್ಲದೆ, ಯಾವಾಗ ದಲಿತರ ಧರಣಿಯೊಂದು ನಡೆಯುತ್ತದೆಯೋ, ಆಗ ಈ ಜನರೇ ಅದರಲ್ಲಿ ಪಾಲ್ಗೊಳ್ಳುವುದು. ಹೀಗಿರುವಾಗ ಗ್ರಾಮೀಣ ಜನತೆಗೆ, ನಗರದ ಅನುಕೂಲಸ್ಥ ದಲಿತರು ಉಪ್ಪಿನಕಾಯಿಗಾಗಿ ಮಾತನಾಡುತ್ತಿದ್ದರೆ, ಅಲ್ಲಿ ಅವರು ಒಪ್ಪೊತ್ತು ಊಟಕ್ಕಾಗಿ ಬಡಿದಾಡುತ್ತಿದ್ದಾರೆಂಬ ಸಂಗತಿಯನ್ನು ಈ ಹೊಸ ಚಳುವಳಿಯು ಧ್ವನಿಸುತ್ತಿಲ್ಲವೇ?



ಕಾರ್ಲ್ ಮಾರ್ಕ್ಸ್

ಕೋಟ್ಯಾದಿ ಪತಿಗಳಾಗಿರುವ ನಾರಾಯಣ ಮೂರ್ತಿ ಅಥವಾ ನಂದನ್ ನೀಲೇಕಣಿ ಅಂಥವರ್ಯಾರೂ ಅಂಬೇಡ್ಕರ್ ಫೆಲೋಶಿಪ್ ಅನ್ನು ಆರಂಭಿಸದೆ, ಒಬ್ಬ ಬೆಂಜಮಿನ್ ಅಥವಾ ಭೂಪತಿಯವರಂಥವರು ಆರಂಭಿಸುತ್ತಾರಷ್ಟೆ. ಒಬ್ಬ ದಲಿತ ವಿದ್ಯಾರ್ಥಿಗೆ ಅಗತ್ಯವಾಗಿ ಬೇಕಾಗಿರುವ ರೂ.5000 ನೀಡುವ ಅಥವಾ ಅದನ್ನು ಆಳವಾದ ಸಮುದ್ರಕ್ಕೆಸೆಯುವ ಆಯ್ಕೆಯನ್ನು ಇನ್ಫೋಸಿಸ್/ನಂದನ್‌ಗೆ ನೀಡಿದಲ್ಲಿ, ಅವರು ಖಂಡಿತ ಎರಡನೆಯದನ್ನು ಆಯ್ದುಕೊಳ್ಳುತ್ತಾರೆ. ಇದು ಡಾ॥ ಕೆ.ಪಿ. ಸಿಂಗ್ ವಿಚಾರವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ – "ದಲಿತರನ್ನು ರಕ್ಷಿಸಬೇಕಾದರೆ ದಲಿತ ಬಂಡವಾಳವನ್ನು ಸೃಷ್ಟಿಸಬೇಕಾಗುತ್ತದೆ."

ಈ ಗ್ರಾಮೀಣ ಭಾರತದಲ್ಲಿ "ಇಂಡಿಯಾ ಶೈನಿಂಗ್" ಎಂಬ ಘೋಷಣೆಯೊಡನೆ ಬಿಜೆಪಿಯು ಮತಯಾಚಿಸಲು ಹೋದಾಗ ಏನಾಯಿತ್ತೆಂಬುದನ್ನು ನಿಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಆ ಘೋಷಣೆಯು ಸಂಕಷ್ಟದಲ್ಲಿರುವವರನ್ನು ಬೇರ್ಪಡಿಸಿತು. ಈ ಮಾತು ದಲಿತರಿಗೆ ಸಂಬಂಧಿಸಿದಂತೆ ನಿಜವಾದುದು.

ಮತ್ತೊಮ್ಮೆ ನಾನು ಹೇಳುವುದಾದರೆ, ದಲಿತರನ್ನು ಎಲ್ಲ ಕ್ಷೇತ್ರಗಳಲ್ಲೂ ಮಂಚೂಣಿಗೆ ತರಬೇಕೆಂಬ ಡಾ॥ ಕೆ.ಪಿ.ಸಿಂಗ್‌ರ ಧ್ಯೇಯದ ಬಗ್ಗೆ ನನಗೆ ದೃಢ ನಂಬಿಕೆಯಿದೆ.

ನನ್ನ ಆತಂಕವೆಂದರೆ ಅದು ದಲಿತರನ್ನು ವಿಭಾಗಿಸುವುದಿಲ್ಲವೇ?

ನಿಮ್ಮ ನಂಬುಗೆಯ,

ಜೆ. ಕೆ. ಕೃಷ್ಣ.

ಶ್ರೀ ಕೃಷ್ಣರ ಕಾಳಜಿಯನ್ನು ಗುರುತಿಸುತ್ತಲೇ ಜನವರಿ ರಂದು ಈ ಕೆಳಗಿನಂತೆ ನಾನು ಬರೆದೆ:

ಬ್ರದರ್ ಕೃಷ್ಣಗೆ ಧನ್ಯವಾದಗಳು.

ನಿನ್ನ ವಿಚಾರ ಮತ್ತು ಆ ಹೇಳಿಕೆಗಳ ಬಗೆ ನಿನ್ನ ಪ್ರಾಮಾಣಿಕತೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ಕ್ಕಾಗಿ ನಾನು ನಿನ್ನನ್ನು ಅಭಿನಂದಿಸುತ್ತೇನೆ.

ನೀನೊಬ್ಬ ವ್ಯಕ್ತಿಯಾಗಿ ಆಲೋಚಿಸಿ ಬರೆದಿರು ದನ್ನು ಒಂದು ವಿಭಾಗದ ದಲಿತರಲ್ಲಿನ ಆಳದ ವಿಚಾ ಳೆಂದು ನಾನು ಗ್ರಹಿಸುತ್ತೇನೆ. ಈ ಗ್ರಹಿಕೆಯಲ್ಲಿ ಇ ಸಾರ್ವಜನಿಕ ಪರಿಕಲ್ಪನೆಯೆಂದೇ ನನ್ನ ಭಾವನೆ. ಕ್ಷಣಕ್ಕೆ ನನ್ನ ಉತ್ತರವಿಷ್ಟೆ:

- ಹಾಗಾದರೆ ದಲಿತ ವ್ಯಕ್ತಿ ಐಎಎಸ್, ಐಪಿಎಸ್ ಐಆರ್‌ಎಸ್, ಐಎಫ್‌ಎಸ್ ಆಗಬಾರದಲ್ಲವೇ ಏಕೆಂದರೆ ಅದು ಸಾಮಾನ್ಯ ದಲಿತರಿಂದ ಅವರನ ಪ್ರತ್ಯೇಕಿಸುತ್ತದೆಯಲ್ಲವೇ?
- ಹಾಗಾದರೆ, ವೈಟ್ ಕಾಲರ್ ಹುದ್ದೆಗಳಿಗೆ ದಲಿತ ಸೇರಿದರೆ, ಅದೂ ಸಹ ಅವರನ್ನು ಸಾಮಾನ್ಯ ದಲಿ ರಿಂದ ದೂರವಾಗಿಸುತ್ತದಲ್ಲವೇ?
- ಹಾಗಾದರೆ, ದಲಿತನೊಬ್ಬ ಕಾರು/ಬೈಕ್ ಹೊಂ ದ್ದಲ್ಲಿ ಸಾಮಾನ್ಯ ದಲಿತರಿಂದ ದೂರವಾದಂತಲ್ಲವೇ
- ಹಾಗಾದರೆ ದಲಿತರಲ್ಲಿ ಯಾರೂ ಸಹ ಸಂಘಟಿ ಹೌಸಿಂಗ್ ಕಾಲೋನಿಗಳಲ್ಲಿ ಜೀವಿಸಿದ್ದಲ್ಲಿ ಅದು ಸಹ ಅವರನ್ನು ಸಾಮಾನ್ಯ ದಲಿತರಿಂದ ಬೇರ್ಪ ಸುತ್ತದೆಯಲ್ಲವೇ?
- ಹಾಗಾದರೆ, ದಲಿತರು ಇಂಗ್ಲಿಷ್ ಮಾತನಾಡಿದ ಸಾಮಾನ್ಯ ದಲಿತರಿಂದ ದೂರವಾಗುತ್ತಾರಲ್ಲವೇ?

ದಲಿತ ಬಂಡವಾಳವಾದದ ಬಗೆಗಿನ ಪ್ರಶ್ನೆಯ ಪರಿಹಾರವಾಯಿತ್ತೆಂದು ನಾನು ಭಾವಿಸುತ್ತೇನೆ.

ಇಂ

ಚಂದ್ರಭಾನ್ ಪ್ರಸಾದ

ಜನವರಿ 16ರಂದು, ಕೃಷ್ಣ ಮತ್ತೆ ಈ ಕೆಳಗಿನದ್ದನ ಬರೆದ:

"ದಲಿತರು ಐಎಎಸ್ ಅಧಿಕಾರಿಗಳಾಗಿ ಮ್ಯಾನೇಜರುಗಳಾಗಿ, ದಲ್ಲಾಳ್ ಬೀದಿಗಳಲ್ಲಿ ವಾಣಿಜ್ಯದ ತೊಡಗಬೇಕಾಗಿದೆ".

ನಿನ್ನ ಅಭಿಮಾನಿ

ಜೆ.ಕೆ ಕೃಷ್ಣ

ನಮ್ಮ ಸಂಭಾಷಣೆ ಹೀಗೆ ಕೊನೆಗೊಂಡಿತು. ಕೃ ದಲಿತ ಬಂಡವಾಳವಾದಕ್ಕಾಗಿ ಪ್ರಚಾರ ಕೈಗೊಂಡಿದ್ದಾನ ಆದರೂ ಪ್ರಶ್ನೆಯು ಪರಿಹಾರವಾದಂತೆ ಕಾಣುವುದಿಲ್ಲ ಕೃಷ್ಣನಂಥ ಜ್ಞಾನವಂತನಾದ, ವೃತ್ತಿಪರತೆಯಲ್ಲಿ ಅರ್ಹ ಯನ್ನು ಪಡೆದ ಹೊಸಯುಗದ ದಲಿತರೇಕೆ ಇಂಥ ಸಂ ತಿಗಳನ್ನು ಸಂದೇಹಿಸುತ್ತಿದ್ದಾರೆ? ನಾನು ಈ ಮೊದಲೆ ಹೇಳಿದಂತೆ ಇದು ದಲಿತರಲ್ಲಿ ಒಂದು ವಿಭಾಗದ ಒಳಕ ದಿಯೇ ಆಗಿದೆ. ಇವರೆಲ್ಲ ಪ್ರಾಮಾಣಿಕವಾಗಿ ದಲಿತರ ಬಗ ಕಾಳಜಿ ಇರುವವರೇ ಆಗಿದ್ದಾರೆ. ಪದೇ ಪದೇ ನಾನ ಎಲ್ಲರಿಗೂ ಹೇಳುತ್ತಿರುವುದೇನೆಂದರೆ, ದಲಿತ ಚಿಂತನ ಯೊಳಗೆ ಅನೇಕ ವೈರಸ್‌ಗಳು ನುಸುಳಿವೆ.

ದಲಿತ ಬಂಡವಾಳವಾದದ ಪ್ರಶ್ನೆ

ಸಮಾಜವಾದ ಅಥವಾ ಬಂಡವಾಳಶಾಹಿ?

ಇತ್ತೀಚೆಗೆ, ಹುಟ್ಟಿನಿಂದಲೇ ಬ್ರಾಹ್ಮಣನಾದ, ರರೂ ಸಿಪಿಎಂ ಮಾರ್ಕ್ಸ್‌ವಾದಿಯಾಗಿರುವ ದೆಹಲಿ ಯೂನಿವರ್ಸಿಟಿಯ ಪ್ರಾಧ್ಯಾಪಕರೊಬ್ಬರು ದಲಿತರು ಂಡವಾಳಶಾಹಿಗಳಾಗುವುದರ ಬಗ್ಗೆ ಸೆಮಿನಾರೊಂದರಲ್ಲಿ ಧಿತನಾಗಿ ಅತ್ತು ಬಿಟ್ಟನಂತೆ. ಆತ ದಲಿತ ಬಂಡವಾಳ ದದ ಉಗಮದ ಬಗ್ಗೆ ಹೆದರಿಬಿಟ್ಟಿದ್ದಾನೆ. ಇದು ಆತ ಹ್ಮಣನೆಂದಾಗಲೀ, ಅಥವಾ ಮಾರ್ಕ್ಸ್‌ವಾದಿಯೆಂದಾ ೀ ಹೇಳುತ್ತಿಲ್ಲ.

ಆದರೆ, ಗಮನಿಸಬೇಕಾದ ಸಂಗತಿಯೆಂದರೆ, ದಲಿ ತರರು ಒಂದು ಸಿದ್ಧ ಮಾದರಿಯ ದಲಿತ ಇಮೇಜ್ ದ್ದಾರೆ – ದಲಿತರೆಂದರೆ ಕಪ್ಪು ಬಣ್ಣದ, ಕಣ್ಣು ಹೂತು ೀಗಿರುವ, ಹಸಿದ, ಚಿಂದಿಯುಟ್ಟ ವಿಧೇಯವಾದವ . ಒಲ್ಲದ ಮನಸ್ಸಿನಿಂದಲೇ ಸಮಾಜದ ಬಹು ಪಾಲು ಕೆಲವು ದಲಿತ ಐಎಎಸ್ ಅಧಿಕಾರಿಗಳನ್ನು, ಅನೇಕ ಸ್ಪೆಕ್ಟರ್‌ಗಳನ್ನು, ಗುಮಾಸ್ತರನ್ನು ಮತ್ತು ಪೇದೆಗಳನ್ನು ದ್ದಾರೆ.

ಅಂದರೆ ಸಮಾಜದ ದೊಡ್ಡ ಭಾಗವೇ ದಲಿತರನ್ನು ಲೆಟ್‌ಗಳಾಗಿ ಪ್ಯಾಸೆಂಜರ್ ಜೆಟ್‌ಗಳನ್ನು, ಮೆರ್ಸಿಡಸ್ ಜ್ ಕಾರುಗಳನ್ನು ಓಡಿಸುತ್ತಿರುವುದನ್ನು, ದೊಡ್ಡ ರ್ಖಾನೆಯ ಮಾಲೀಕರಾಗುವುದನ್ನು, ಸಿನೇಮಾಗಳಲ್ಲಿ ಸುವುದನ್ನು, ದಲ್ಲಾಳ್ ಬೀದಿಯಲ್ಲಿ ತಿರುಗಾಡುವು ್ನು, ಬಂಗಲೆಗಳಲ್ಲಿ ವಾಸಿಸುವುದನ್ನು, ಐಶ್ವರ್ಯ ರೈಳ ಬಗ್ಗೆ ಂಗುಟ್ಟುವುದನ್ನು ಅಥವಾ ಸಿಗಾರ್ ಸೇದುವುದನ್ನು ಸಲಾರರು.

ಈ ಮೇಲಿನವುಗಳನ್ನು ದಲಿತನೊಬ್ಬ ಬಯಸಿದ್ದೆ ಲ್ಲಿ ಅದು ದಲಿತೇತರರಿಗೆ ವಾಕರಿಕೆ ಹುಟ್ಟಿಸುತ್ತದೆ.

ಈ ಪೂರ್ವಗ್ರಹಿಕೆಗಳು ಅಪ್ರಜ್ಞಾಪೂರ್ವಕವಾಗಿ ತರಲ್ಲಿ ಒಂದು ವಿಭಾಗವನ್ನು ಆವರಿಸಿದೆ. ದಲಿತ ಡವಾಳಶಾಹಿ ಎನ್ನುವುದೊಂದು ಹೊಸ ಚಳುವಳಿ ಾಗಿದೆ. ಇದನ್ನು ದಲಿತೇತರರು ವಿಧಿ ಎಂಬಂತೆ ಅಸ ಯಿಂದಲೇ ನೋಡಬೇಕಾಗುತ್ತದೆ.

ಅಂದರೆ ಸೂಟ್-ಬೂಟುಧಾರಿಗಳಾದ ದಲಿತರು ರಿಕೆಯಿಂದ ಇರಬೇಕಾಗುತ್ತದೆ.

ಲಂಡನ್ನಿನಲ್ಲಿರುವ ನನ್ನ ಆತ್ಮೀಯ ಜರ್ನಲಿಸ್ಟ್ ಹಿತ ನನಗೆ ಈ ರೀತಿ ಬರೆದ: "ಆದರೂ ಕಾಮ್ರೇಡ್, ಪೊಲಿಟಿಕ್ಸ್‌ನ ಬಗ್ಗೆ ನನಗೆ ಕೆಲವು ಪ್ರಶ್ನೆಗಳಿವೆ. ನೀನು ೋಟ್ ಮಾಡುತ್ತಿರುವ ದಲಿತ ಬಂಡವಾಳವಾದದ ನನಗೆ ಸಹಮತವಿಲ್ಲ."

"ರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧನಾಗಿರುವ ರಾಜ ುವಿಜ್ಞಾನಿಯೋರ್ವರು ಮೊನ್ನೆ ಹೀಗೆಂದರು, ಮಾನ್ಯವಾಗಿ ನಾನು ಪಾರ್ಟಿಗಳಿಗೆ ಹೋಗುವುದಿಲ್ಲ. ಪಾರ್ಟಿಗೆ ನಿಜವಾಗಿಯೂ ನಾನು ಬರುತ್ತಿದ್ದೆ. ರೆ ಆ ಪಾರ್ಟಿಯ ತೀವ್ರತರವಾದ ಐಡಿಯಾಲಾಜಿಕಲ್ ದಿಂದಾಗಿ ನಾನು ಬರಲಾಗುತ್ತಿಲ್ಲ. ನಾನು ವುದೇ ಕಾರಣಕ್ಕೂ ಬಂಡವಾಳಶಾಹಿಯನ್ನು ಬೆಂಬ ಾರೆ."

ದೇಶದಲ್ಲಿ ಕೆಲವು ಮಂದಿ ಹಿರಿಯ ದಲಿತರು ದಲಿತ ಬಂಡವಾಳಶಾಹಿಯ ವಿಚಾರಕ್ಕೆ ಆತಂಕ ಕ್ಕೊಳಗಾಗಿದ್ದರು. ಅವರಿಗೆ ಬಂಡವಾಳಶಾಹಿ ಸಮಾಜದ ಕಲ್ಪನೆಯೇ ವಿರೋಧಾಭಾಸವೆನ್ನಿಸಿತ್ತು.

ಮೇಲಿನ ನನ್ನ ಸ್ನೇಹಿತರನ್ನು ಯಾವುದೇ ಕಾರಣಕ್ಕೂ ಅಥವಾ ಕಲ್ಪನೆಯಲ್ಲೂ ಸಹ ದಲಿತ ವಿರೋಧಿಗಳೆಂದು ಭಾವಿಸಲಾಗದು. ಹಾಗೇನಾದರೂ ಬಿಕ್ಕಟ್ಟು ಉದ್ಭವಿಸಿದಲ್ಲಿ ಅವರೆಲ್ಲಾ ದಲಿತರೊಡನೆ ಇರುವ ವರೇ ಆಗಿದ್ದಾರೆ. ಆದರೂ ದಲಿತ ಬಂಡವಾಳಶಾಹಿ ಪರಿಕಲ್ಪನೆಯೇ ಅನೇಕರ ಮನಸ್ಸನ್ನು ತೀವ್ರವಾಗಿ ಬಾಧಿಸುತ್ತಿದೆ.

ದಲಿತ ಬಂಡವಾಳಶಾಹಿ ವಿಚಾರದ ಬಗ್ಗೆ ಟೀಕೆ ಇರುವುದು, ಸಮಾಜವಾದ ಅಥವಾ ಬಂಡವಾಳಶಾಹಿವಾದದ ಆಯ್ಕೆಯಲ್ಲಿ ಅಷ್ಟೆ. ಶೋಷಿತ ಸಮುದಾಯವಾದ ದಲಿತರೇಕೆ ಸಮಾಜವಾದದ ಬದಲು ಬಂಡವಾಳಶಾಹಿವಾದವನ್ನು ಬಯಸಬೇಕು? "ರಾಜ್ಯಾಂಗ ಮತ್ತು ಅಲ್ಪಸಂಖ್ಯಾತರು" ಎನ್ನುವ ಪಠ್ಯದಲ್ಲಿ ಡಾ॥ ಅಂಬೇಡ್ಕರ್ ಹೇಳಿದ ರಾಜ್ಯಾಂಗ ನಿಯಂತ್ರಿತ ಸಮಾಜವಾದವನ್ನು ಎತ್ತಿ ತೋರಿಸಿದಾಗ ಏನಾದೀತು? "ಬಾಬಾ ಸಾಹೇಬ್ ಒಬ್ಬ ಕಮ್ಯುನಿಸ್ಟ್ ಅಥವಾ ಸಮಾಜವಾದಿಯೇ?" ಎಂದು ನನ್ನ ವಿದ್ವಾಂಸ ಸ್ನೇಹಿತ ಡಿ ಶ್ಯಾಮ್ ಬಾಬು, ನಾನು ಆ ವಿಚಾರದಲ್ಲಿ ಮಾರ್ಗದರ್ಶನ ಬಯಸಿದಾಗ, ಕೇಳಿದ್ದರು. ಇದನ್ನು ತಿಳಿಯಬೇಕಾದರೆ ಬಾಬಾ ಸಾಹೇಬರು ಬದುಕಿದ್ದ ಯುಗವನ್ನು ಗಮನಿಸಬೇಕಾಗಿದೆ.



ದಲಿತ ಬಂಡವಾಳಶಾಹಿ ವಿಚಾರದ ಬಗ್ಗೆ ಅವರೆಲ್ಲರ ಟೀಕೆ ಇರುವುದು, **ಸಮಾಜವಾದ ಅಥವಾ ಬಂಡವಾಳಶಾಹಿವಾದದ** ಆಯ್ಕೆಯಲ್ಲಿ ಅಷ್ಟೆ. ಶೋಷಿತ ಸಮುದಾಯವಾದ ದಲಿತರೇಕೆ ಸಮಾಜವಾದದ ಬದಲು ಬಂಡವಾಳಶಾಹಿವಾದವನ್ನು ಬಯಸಬೇಕು? "ರಾಜ್ಯಾಂಗ ಮತ್ತು ಅಲ್ಪಸಂಖ್ಯಾತರು" ಎನ್ನುವ ಪಠ್ಯದಲ್ಲಿ ಡಾ॥ ಅಂಬೇಡ್ಕರ್ ಹೇಳಿದ ರಾಜ್ಯಾಂಗ ನಿಯಂತ್ರಿತ ಸಮಾಜವಾದವನ್ನು ಎತ್ತಿ ತೋರಿಸಿದಾಗ ಏನಾದೀತು?

"ಬಾಬಾ ಸಾಹೇಬ್ ಒಬ್ಬ ಕಮ್ಯುನಿಸ್ಟ್ ಅಥವಾ ಸಮಾಜವಾದಿಯೇ?" ಎಂದು ನನ್ನ ವಿದ್ವಾಂಸ ಸ್ನೇಹಿತ ಡಿ ಶ್ಯಾಮ್ ಬಾಬು, ನಾನು ಆ ವಿಚಾರದಲ್ಲಿ ಮಾರ್ಗದರ್ಶನ ಬಯಸಿದಾಗ, ಕೇಳಿದ್ದರು.

ಮೊದಲನೆಯದಾಗಿ, ಬಾಬಾ ಸಾಹೇಬರು ಬದುಕಿದ್ದ ಯುಗವನ್ನು ಗಮನಿಸಬೇಕಾಗಿದೆ. 1917ರ ಅಕ್ಟೋಬರ್ ಕ್ರಾಂತಿಯಾಗಿತ್ತು. ಅಲ್ಲದೆ, 2ನೇ ಮಹಾಯುದ್ಧದ ಹೊತ್ತಿಗೆ ಯೂರೋಪಿನ ಅರ್ಧ ಭಾಗವು ಕೆಂಪಾಗಿ ತಿರುಗಿತ್ತು. ಇತ್ತ 1949ರಲ್ಲಿ ಚೀನಾದ ಕ್ರಾಂತಿಯು ನಡೆದಿತ್ತು. ತನ್ನ ನಾಡಿನಲ್ಲಿ ಕಮ್ಯುನಿಸ್ಟ್ ಚಳುವಳಿಯು ದಿನೇ ದಿನೇ ಶಕ್ತಿಶಾಲಿಯಾಗಿ ಹೊರಹೊಮ್ಮುತ್ತಿತ್ತು. ಡಾ॥ ಅಂಬೇಡ್ಕರರು ಭಾರತೀಯ ಸಂವಿಧಾನವನ್ನು ಬರೆಯುತ್ತಿದ್ದಾಗ, ತೆಲಂಗಾಣದಲ್ಲಿ 'ಕಮ್ಯುನಿಸ್ಟ್ ಹೋರಾಟ' (1946–1951) ನಿರ್ಣಾಯಕ ಹಂತ ತಲುಪಿತ್ತು.

ಇದರೊಡನೆ, 20ನೇ ಶತಮಾನದ ಮಧ್ಯದ ಹೊತ್ತಿಗೆ, ಮಾರ್ಕ್ಸ್‌ವಾದವು ವಿಮೋಚನೆಯ ಅತ್ಯಂತ ಆಕರ್ಷಕ ತತ್ವವಾಗಿ ಹೊಮ್ಮಿತ್ತು. ಕಮ್ಯುನಿಸಂ, ಸೋಷಿಯಲಿಸಂ ಮುಂತಾದ ಪರಿಕಲ್ಪನೆಗಳು ಆ ಸಂದರ್ಭದ ಗೀಳಾಗಿದ್ದವು. ಭಾರತೀಯ ಬೂರ್ಜ್ವಾಗಳ ಕಣ್ಮಣಿಯಾದ ಜವಾಹರಲಾಲ್ ನೆಹರು ಸಹಾ ಮಾರ್ಕ್ಸ್‌ವಾದದಿಂದ ಸಮ್ಮೋಹಿತರಾಗಿದ್ದರು.

ತನ್ನ **ಡಿಸ್ಕವರಿ ಆಫ್ ಇಂಡಿಯಾ**ದಲ್ಲಿ ಹೀಗೆಂದು ಬರೆದಿದ್ದಾರೆ, "ಮಾರ್ಕ್ಸ್ ಮತ್ತು ಲೆನಿನ್‌ರ ಬಗೆಗಿನ ಓದು ಚರಿತ್ರೆ ಮತ್ತು ಪ್ರಸ್ತುತ ವಿದ್ಯಮಾನಗಳನ್ನು ಹೊಸದಾಗಿ ಕಂಡುಕೊಳ್ಳುವಷ್ಟು ನನ್ನ ಮೇಲೆ ಪ್ರಭಾವ ಬೀರಿದೆ"

"ಸೋವಿಯತ್ ಕ್ರಾಂತಿಯು ಮಾನವ ಸಮಾಜವನ್ನು ದೊಡ್ಡ ಮಟ್ಟದಲ್ಲಿ ಮುಂದುವರೆಯುವಂತೆ ಮಾಡಿದೆ ಎನ್ನುವುದರ ಬಗ್ಗೆ ನನಗೆ ಸಂದೇಹವೇ ಇಲ್ಲ. ಅಲ್ಲದೆ ಅದು ಹಚ್ಚಿರುವ ಉರಿಯನ್ನು ಯಾರೂ ಆರಿಸಲಾಗದು ಮತ್ತು ಜಗತ್ತು ಹೊಸ ನಾಗರೀಕತೆಯತ್ತ ಸಾಗಲು ಅಗತ್ಯವಾದ ತಳಹದಿಯನ್ನು ಅದು ಹಾಕಿದೆ" ಎಂದು ನೆಹರು ಹೇಳುತ್ತಾರೆ.

ಆದ್ದರಿಂದ, ಡಾ॥ ಅಂಬೇಡ್ಕರ್ ಜೀವಿಸುತ್ತಿದ್ದ ಯುಗವು ಮಾರ್ಕ್ಸ್‌ವಾದದ ಜಯಭೇರಿಯಿಂದ ವ್ಯಾಖ್ಯಾನವಾಗಿತ್ತು. ಅಲ್ಲಿ ಸೋಷಿಯಲಿಸಂ ಎನ್ನೋದು, ಮಹಾ ಫ್ರೆಂಚ್ ಕ್ರಾಂತಿಯ ಸಂದರ್ಭದಲ್ಲಿ ಪ್ರಜಾಪ್ರಭುತ್ವ ಆಕರ್ಷಕವಾಗಿದ್ದಂತೆ ಕಾಣುತ್ತಿತ್ತು.

ತಾನು ಹೇಗೆ ಭಾರತೀಯ ಸಾಮಾಜಿಕ ಕ್ರಾಂತಿಯ ಹರಿಕಾರನಾಗಿದ್ದನೋ ಹಾಗೆಯೇ ಡಾ.ಅಂಬೇಡ್ಕರ್‌ರವರು ಮಾರ್ಕ್ಸ್‌ವಾದ ಮತ್ತು ರಷ್ಯಾ-ಚೀನಾ ಕ್ರಾಂತಿಗಳಿಂದ ತೀವ್ರ ಪ್ರಭಾವಕ್ಕೊಳಗಾಗಿದ್ದರು. ಆದ್ದರಿಂದ ಅವರ ರಾಜ್ಯಾಂಗ ಸಮಾಜವಾದವು ನಾವಂದುಕೊಂಡಂತೆ ಮಾರ್ಕ್ಸ್‌ವಾದದ ಸಮಾಜವಾದವಲ್ಲ.

ನಾವೀಗ ಆಧುನಿಕ ಕಾಲದ ಬಹು ದೊಡ್ಡ ಪ್ರಶ್ನೆಯ ಬಗ್ಗೆ ಚಿಂತಿಸಲೇ ಬೇಕಾಗುತ್ತದೆ. ಅಂಬೇಡ್ಕರ್‌ರವರು ಸಮಾಜವಾದದ ಮಿತಿಗಳನ್ನು ಮೊದಲೇ ತಿಳಿದುಕೊಂಡಿದ್ದರೇ? ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅಂಬೇಡ್ಕರ್‌ರವರು ರಷ್ಯಾ ಕ್ರಾಂತಿಯ ಕುಸಿತವನ್ನು ಗಮನಿಸಿದ್ದರೇ? ಅಥವಾ ಚೀನಾದ ಸೋಷಿಯಲಿಸಂ ಅಂತಿಮವಾಗಿ ಬಂಡವಾಳಶಾಹಿಯತ್ತ ಪದವಿಯನ್ನು ಗಳಿಸಿಕೊಳ್ಳುತ್ತಿತ್ತೆಂಬುದನ್ನು ಮನಗಂಡಿದ್ದರೆ?

ಎಲ್ಲಾ ತತ್ವಜ್ಞಾನಿಗಳು ಚಿಂತಕರೇ ಸರಿ. ಆದರೆ ಎಲ್ಲಾ ಚಿಂತಕರು ತತ್ವಜ್ಞಾನಿಗಳಾಗಲು ಸಾಧ್ಯವಿಲ್ಲ. ಡಾ॥ ಅಂಬೇಡ್ಕರ್‌ರವರು ಮೊದಲ ವರ್ಗಕ್ಕೆ ಸೇರುತ್ತಾರೆ. ಅದಕ್ಕೆ ಇದೋ ಇಲ್ಲಿದೆ ಕೆಲವು ಪೂರಕ ಅಂಶಗಳು:

1951ರಲ್ಲಿ ಡಾ॥ ಅಂಬೇಡ್ಕರ್ ಪರಿಶಿಷ್ಟ ಜಾತಿಗಳ ಒಕ್ಕೂಟಕ್ಕಾಗಿ ಚುನಾವಣಾ ಪ್ರಣಾಳಿಕೆಯನ್ನು ರಚಿಸಿದ್ದರು. ಇದು ಅವರೇ ಸ್ಥಾಪಿಸಿದ ರಾಜಕೀಯ ಪಕ್ಷವಾಗಿತ್ತು. ಈ ಪ್ರಣಾಳಿಕೆಯಲ್ಲಿ ಬಡತನದ ಸಮಸ್ಯೆಯು ವಿಶೇಷ ಸ್ಥಾನವನ್ನು ಪಡೆದಿದೆ. ಈ ಪ್ರಣಾಳಿಕೆಯು ಅನೇಕ ಸಂಗತಿಗಳ ಬಗ್ಗೆ ಚರ್ಚಿಸುತ್ತದೆಯಾದರೂ ಈ ಕೆಳಗಿನ ಅಂಶಗಳನ್ನು ಗಮನಿಸಲೇ ಬೇಕಾಗುತ್ತದೆ:

- ಭಾರತದ ಶೀಘ್ರ ಕೈಗಾರೀಕರಣ
- ಸಣ್ಣ ಹಿಡುವಳಿದಾರರ ಬದಲು ದೊಡ್ಡ ತೋಟಗಳು
- ಯಾಂತ್ರೀಕೃತ ಬೇಸಾಯ
- ಹೈಬ್ರೀಡ್ ಬೀಜಗಳು, ಮತ್ತು
- ಜನನ ನಿಯಂತ್ರಣ

ಈ ಮೇಲಿನವುಗಳು ಒಂದು ಸೋಷಿಯಲಿಸ್ಟ್ ಮಾದರಿಯನ್ನು ತೋರುತ್ತವೆಯೇ ಅಥವಾ ಪಾಶ್ಚಾತ್ಯ ಮಾದರಿಯ ಬಂಡವಾಳಶಾಹಿಯನ್ನೇ?

ಮುಂದೆ ಸಾಗಿ ಆ ಪ್ರಣಾಳಿಕೆ ವಾದಿಸುವುದೇನೆಂದರೆ, "ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶದಿಂದ ಪರಿಶಿಷ್ಟ ಜಾತಿ ಒಕ್ಕೂಟವು ಯಾವುದೇ ಸಿದ್ಧಾಂತ ಅಥವಾ ಮಾದರಿಯಿಂದ ಬಂಧಿತವಾಗಿಲ್ಲ. ಕೈಗಾರಿಕಾ ಉದ್ಯಮಶೀಲ ಮಾದರಿಯು ಆಯಾ ಕಾಲ ಮತ್ತು ಸಂದರ್ಭದಿಂದ ಮಾತ್ರ ನಿಯಂತ್ರಣಕ್ಕೊಳಪಟ್ಟಿರುತ್ತದೆ. ಅಲ್ಲಿ ಯಾವುದೇ ಕೈಗಾರಿಕೆಯನ್ನು ಸಾಧ್ಯವಾದಲ್ಲಿ ಅಗತ್ಯವಾಗಿ ರಾಷ್ಟ್ರೀಕರಿಸಬೇಕಾಗುತ್ತದೆ. ಪರಿಶಿಷ್ಟ ಒಕ್ಕೂಟವು ಅಂತಹ ರಾಷ್ಟ್ರೀಕರಣವನ್ನು ಬೆಂಬಲಿಸುತ್ತದೆ. ಎಲ್ಲಿ ಖಾಸಗೀ ಉದ್ಯಮವು ಸಾಧ್ಯವೋ ಮತ್ತು ರಾಷ್ಟ್ರೀಕರಣ ಅಗತ್ಯವಿಲ್ಲವೋ, ಅಂತ ಕಡೆ ಖಾಸಗೀ ಉದ್ಯಮವನ್ನು ಸಮ್ಮತಿಸಬೇಕಾಗುತ್ತದೆ."

ಅದು 1951ರ ಡಾ॥ ಅಂಬೇಡ್ಕರ್‌ರವರ ವ್ಯಕ್ತಿತ್ವ. ಇಂದು 2006. ಬಾಬಾ ಸಾಹೇಬರ ಕಾಲದ ಖಾಸಗೀ ವಲಯ ಬಂಡವಾಳದಲ್ಲಿ ಪಾಲುದಾರಿಕೆ ಮತ್ತು ಕೈಗಾರೀಕೃತ, ನಗರೀಕೃತ ಭಾರತದಲ್ಲಿ ಪಾಲುದಾರಿಕೆಯನ್ನು ನಂಬಿರುತ್ತಿದ್ದಲ್ಲಿ ಏನಾಗುತ್ತಿತ್ತು? □



ಶ್ರಾವಣದ ಕೆರೆ ಕುಂಟೆಯಂತೆ
ತಿಳಿಯಾಗಲು ಎದೆ
ಮಲಗಿಬಿಡು
ಬರಲಿ ಬರದಿರಲಿ ಕನಸು.

ನಿದ್ದೆಯೇ ನೀನಾದ ಹಾಗೆ ನಿದ್ರಿಸು
ಎಚ್ಚರವಾದರೆ ಮಧ್ಯೆ
ತೊಳೆಯಲು ಮಂಪರಿನ ಕೊಳೆ
ನಡೆ ಗುಂಡುತೋಪಿಗೆ.

ಹಗಲ ಬೆಳದಿಂಗಳು ಮಂಜು
ಹಸುರು ತೊಟ್ಟ ಮುತ್ತು
ಮೆಲ್ಲನಲುಗಿಸು ಕೊಂಬೆ
ಎದೆಗಿಳಿವಂತೆ ತಂಪು ಪರಿಮಳದ ತೇವ

ಬಾ ಮನೆಗೆ ಹಲ್ಲುಜ್ಜು ಬಾಯಿ ಮುಕ್ಕಳಿಸು
ಬೇಕೆನಿಸಿದರೆ ಮೈತೊಳೆ
ಇದ್ದುದಾದರೆ ನಂಬಿಕೆ
ಹಚ್ಚು ಕರ್ಪೂರ ದೇವರಿಗೆ

ಅವಳ ಕೆಲಸಕ್ಕೆ ಮಡದಿಯ ಬಿಟ್ಟು
ಹೊತ್ತಿಸು ಒಲೆ
ಕಾಫಿ ಮಾಡಿ ಕುಡಿ
ಒಂದೊಂದೆ ಗುಟುಕು ಗಡಿಯಾರ
ನೋಡದೆ

ಬರಮಾಡಿಕೊ ನಿನ್ನ
ಇಷ್ಟದ ಹಕ್ಕಿ
ಕೊಡು ಹಾಲು ತುಂಬಿದ ಕಾಳು
ತೆರೆದ ಬಾಯಿಗೆ

ಹೃದಯ ಹೂಕುಂದದಲ್ಲಿ
ಬೇಟೆಯ ಅಂಜಿಕೆ ಇರದೆ
ಕೂಗಿತಾದರೆ

○ಸ.ರಘುನಾಥ್

ರತಿಗರಡಿ ಮಧುಕರ ಜೋಕೆ.





ತಾತಪ್ಪಗಳೇ
ಹೇಳಿ ಮಾಡಿಸಿದಂಥ ಮೈಕಟ್ಟು
ತೂಕ ಅಳತೆಗೆ ತಕ್ಕ ಅಂಗಾಂಗ
ಬೇಕಾದ ಪುಳಕ ಗಣಿ ಗಣಿಕಾದಂಡು
ನಿಮ್ಮ ಕರತಲ ರತಿ ದಾಳಿ ಇಂಗ್ಲಿಷು ದಲ್ಲಾಳಿ ಲಾಯದಲ್ಲಿ

ಲೋಕಾಲೋಕ ಗಣಿಕಾ ಭಗ ಪಕ್ಷಿಯಕ್ಷಿಗಳ
ಚಂದ್ರನಾಡಿ ಪುಳಕಿತ ನಾಲಿಗೆ, ತುರೀಯ ಲೋಲಕ
ಅದದೇ ಪುಳಕಗಳಿಗೆ ಜಡ್ಡಾಗಿದೆ.
ಥರ ಥರಾವರಿ ಕೆಚ್ಚಲ ಗೊಚ್ಚಲ ಮೂಸುತ್ತ
ತಿರು ತಿರುಗಿ ತಾತಾಗಿ ಎತ್ತು ದೊಡ್ಡಾಗಿದೆ.

ಕಾಲ ಕಾಲದ ವಿಟ ಜರಡಿ ಆಡಿ ಉಳಿದ
ರತಿಗರಡಿಯಲಿ ಬೆಳೆದ
ಕಳೆ ಕಳೆದ ಲಿಪಿ ಕ ಪಾಟು ಮೆದೆಗೆ
ಕಣ್ಣಿಂದಲೆ ಸರ್ವೇಂದ್ರಿಯ ದಾರಿಯೋ ನಿಮಗೆ!

ತಾತಗಳೇ, ನರೆಗಲ್ಲದಾ ಮೇಲೆ ಜೋತ
ನಿಮ್ಮ ತುಟಿ ಬಿಲ್ಲ ಜೇನೆಲ್ಲ
ಈಗ ಅದು ಜೇನಲ್ಲ ಜೊಲ್ಲಾಗಿದೆ.

ಹ್ಮ್.
ನಮ್ಮವಳು ಹೊಚ್ಚ ಹೊಸಕನ್ನೆ, ಸಾದಗಪ್ಪಿನ ಹುಡುಗಿ
ನೀವು ಮೆಚ್ಚುವ ಗಣಿಕೆ ಇವಳಲ್ಲ ತಾತರೇ
ನೀವು ಕೇಳೋ ಪುಳಕ ನೀಡಬಹುದೇ ನಮ್ಮ ಕಾಡಮಲ್ಲಿಗೆ!

ನಿಮ್ಮ ಲೋಲಕದ ನವಿರೆಬ್ಬು ವಾಟದಲಿ
ನಾವು ಗೆದ್ದು ಬರಲೇ ಬೇಕೆ ಸರ್ಕಾರ್
ಸ್ವಲ್ಪ ಹೇಳಿ ನಿಮ್ಮ ಇಸ್ಕೂಲಿನ ಪಾಯದ ಜಲ್ಲಿ
ಎಲ್ಲೆಲ್ಲಿಂದ ತರಿಸಿದ್ದೀರಿ ಸಾರ್?

ಓಹೋ ಬಟ್ಟೆಯೇ ತೊಡದ ಚಕ್ರವರ್ತಿಗಳೇ
ನೀವೇ ಮೆರೆದೇವರೋ
ನಿಮ್ಮ ಪರಾಕು ಪೂಜೆಗೆ ಬೆಂಕಿ ಬೀಳ
ನಿಮ್ಮ ಸುಳಿಗೆ ಸುಣ್ಣ ಮೆತ್ತ
ನಿಮ್ಮ ಗಾಡಿ ಮೂಕೆತ್ತಿಕೊಳ್ಳ
ನಿಮ್ಮ ತೂಕ ಅಳತೆಗೆ ತಕ್ಕ ಕೂಸುಗಳ ಹೆರಲಾರ್ರೋ ನಾವು.

○ರಾಮಲಿಂಗಪ್ಪ ಟಿ. ಬೇಗೂರು

ದುರಾಸೆಯ ಕೊಳಗ ಎಂದೂ ತುಂಬದು

ಒಮ್ಮೆ ಬುದ್ಧನನ್ನು ಸಂಧಿಸಿದ ಆನಂದ ಬುದ್ಧನನ್ನು ಉದ್ದೇಶಿಸಿ ದುರಾಸೆಯ ಬಗ್ಗೆ ಹೀಗೆ ಪ್ರಶ್ನಿಸುತ್ತಾನೆ:

"ಗುರುದೇವಾ, ಮನುಷ್ಯನ ಪಾಲಿನ ಭಾಗ್ಯ ಯಾವುದು? ಅಮೂಲ್ಯ ಕಾಣ್ಕೆ ಯಾವುದು?"

"ಎಲೈ ಆನಂದ, ಆರೋಗ್ಯಕ್ಕಿಂತ ದೊಡ್ಡ ಭಾಗ್ಯ ಮತ್ತೊಂದಿಲ್ಲ, ಹಾಗೆಯೇ ಸಂತೃಪ್ತ ಮನೋಭಾವನೆಗಿಂತ ಅಮೂಲ್ಯವಾದದ್ದು ಬೇರಿಲ್ಲ"

"ಗುರುದೇವಾ, ಸಂತೃಪ್ತಿ ಎಂದರೆ ಏನು? ಅದನ್ನು ಪಡೆಯುವ ಬಗೆ ಹೇಗೆ? ಅದರಿಂದ ನಾವು ಏನನ್ನು ಅರಿಯಬಹುದು?"

"ಎಲೈ ಆನಂದ, ಸಂತೃಪ್ತಿಯೇ ಧರ್ಮ, ಅದುವೇ ಸಂಪತ್ತು. ಅದುವೇ ಧರ್ಮದ ಮತ್ತೊಂದು ರೂಪ. ಹಾಗಾಗಿ ನಾನು ಸಂತೃಪ್ತಿಯೇ ಸಂಪತ್ತಿನ ಪರಮೋನ್ನತ ರೂಪ ಎಂದದ್ದು. ಯಾವಾತ ಬದುಕಿರುವಾಗಲೇ ಸಂತೃಪ್ತಿಯನ್ನು ಪಡೆದಿರುತ್ತಾನೋ ಅವನು ದುರಸೆಯನ್ನು ಗೆದ್ದಿರುತ್ತಾನೆ. ಯಾವಾತ ದುರಾಸೆಯನ್ನು ಗೆದ್ದಿರುತ್ತಾನೋ ಅವನು ವಿವೇಕಿಯಾಗಿರುತ್ತಾನೆ. ಅರಿವನ್ನು ಪಡೆದಿರುತ್ತಾನೆ. ಇದರಿಂದ ಅಂತವನ ಬದುಕು ಪ್ರಗತಿಪಥದತ್ತ ನಡೆಯುತ್ತಿದೆ ಎಂಬುದನ್ನು ಅರಿತುಕೊಳ್ಳಬಹುದು".

"ಗುರುದೇವಾ, ದುರಾಸೆಯ ಹುಟ್ಟಿನ ಮೂಲವೇನು?

"ಎಲೈ ಆನಂದ, ಅಧಿಕಾರವನ್ನು, ಸಾಮ್ರಾಜ್ಯವನ್ನು, ಸಂಪತ್ತನ್ನು ಸಂಪಾದಿಸಬೇಕೆಂಬ ಆಸೆಯಿಂದ ದುರಾಸೆ ಹುಟ್ಟಿಕೊಳ್ಳುತ್ತದೆ. ಸಂಪಾದನೆಯ ಆಸೆ ತೀವ್ರವಾದಾಗ ಸಂಗ್ರಹಿಸುವ, ಪಡೆಯುವ, ಅನುಭವಿಸುವ, ಆನಂದಿಸುವ ಕೊಡಿಟ್ಟುಕೊಳ್ಳುವ ಮನೋಪ್ರವೃತ್ತಿ ಬೆಳೆಯುತ್ತದೆ. ಅದನ್ನೇ "ಮೋಹ" ಎನ್ನುವುದು. ಈ ಮೋಹದ ತೀವ್ರತೆಯೇ ದುರಾಸೆಯ ಮೂಲ".

"ಗುರುದೇವಾ, ಈ ದುರಾಸೆಯ ಮುಂದಿನ ಪರಿ
ವೇನು"?

"ಎಲೈ ಆನಂದ, ಮಿತಿ ಮೀರಿದ ಸಂಪಾದನೆಯಿಂದ
ಪಡೆದ ಅಧಿಕಾರ, ಸಾಮ್ರಾಜ್ಯ ಮತ್ತು ಸಂಪತ್ತಿಗಾಗಿ ಅ
ಕಾಯಲು ಕಾವಲು ಬೇಕಾಗುತ್ತದೆ. ರಕ್ಷಣೆಬೇಕಾಗುತ್ತದೆ. ದು
ಎಲ್ಲಿರುತ್ತದೆಯೋ ಅಲ್ಲಿ ತೃಪ್ತಿ ಇರುವುದಿಲ್ಲ. ಮತ್ತು ಹೊಸ
ಅಸೆಗಳಿಗಾಗಿ ಹಾತೋರೆಯುತ್ತಲೇ ಇರುತ್ತದೆ. ಈ ಲೋ
ಆಸೆಯ ಕೊಳಗ, ಸುಖದ ಕೋಳಗ, ದುರಾಸೆಯ ಕೆ
ಎಂದಿಗೂ ತುಂಬುವುದೇ ಇಲ್ಲ!

ಇದನ್ನೇ ನಾನು ತಪ್ಪು ದಾರಿ ಎನ್ನುವುದು,
ಸತ್ಪಾಥ್ರರಿಗೆ ದಾನ ಮಾಡದೆ ಸದಾ ಸಂಗ್ರಹಿಸಿಡುವುದು ಅದ
ಎನ್ನುವುದು".

"ಗುರುದೇವಾ, ಈ ತೃಷ್ಣೆಯನ್ನು ಏಕೆ ಖಂಡಿಸಬೇಕು?"

"ಎಲೈ ಆನಂದ, ದುರಾಸೆಯು ಅನೇಕ ಕೆಟ್ಟ ಮತ್ತು
ಕೃತ್ಯಗಳಿಗೆ ಪ್ರೇರಣೆಯಾಗುತ್ತಡೆ. ಅವೆಂದರೆ ಅಸೂಯೆ, ಕ್ಷೋ
ನಿಂದನೆ, ಹೊಟ್ಟೆ ಕಿಚ್ಚು, ವಾದ-ವಿವಾದ, ಘರ್ಷಣೆ, ಗಾಯ
ಮತ್ತು ಸುಳ್ಳು ಹಾಗೂ ತಟವಟಗಳು ಹುಟ್ಟಿಕೊಳ್ಳುತ್ತವೆ.
ಕಾರಣಕ್ಕಾಗಿ ದುರಾಸೆಯ ಕೇಡುಗಳನ್ನು ಆರಿಯಬೇಕು. ದು
ಎಂಬುದು ಎಂದಿಗೂ ಬತ್ತಡ, ಬಾಡದ, ಹಿಂಗದ ಮತ್ತು
ಪಡೆದರೂ ತೀರದ ದಾಹ. ತುಂಬದ ಕೊಳಗ. ಹಾಗಾಗಿ
ಇದನ್ನು ಖಂಡಿಸಬೇಕು. ದುರಾಸೆಯನ್ನು ನೀಗಿಕೊ
ಸಂತೃಪ್ತಿಯನ್ನು ಪಡೆಯಬೇಕು, ಇದೇ ಧರ್ಮ!" ಎನ್ನುತ್ತಾನೆ.
ಆನಂದನು ಬುದ್ಧನನ್ನು ಉದ್ದೇಶಿಸಿ; "ಹೌದು ಗುರುದೇವಾ,
ಧರ್ಮದ ಅರ್ಥ ಅಪಾರ...! ಸಂತೃಪ್ತಿಯ ಬದುಕೇ ನಿನ್ನ ಧ
ಸಾರ...!! ಸಮಗ್ರತೆಯ ಅರಿವೇ ನಿನ್ನ ಧರ್ಮ...!!!" ಎನ್ನುತ್ತಾನೆ.

ದುರಾಸೆಯು ಅನೇಕ ಕೆಟ್ಟ ಮತ್ತು ದುಷ್ಟ ಕೃತ್ಯಗಳಿಗೆ ಪ್ರೇರಣೆಯಾಗುತ್ತಡೆ. ಅವೆಂದರೆ ಅಸೂಯೆ, ಕ್ಷೋಭೆ, ನಿಂದನೆ, ಹೊಟ್ಟೆ ಕಿಚ್ಚು, ವಾದ-ವಿವಾದ, ಘರ್ಷಣೆ ಗಾಯಗಳು ಮತ್ತು ಸುಳ್ಳು ಹಾಗೂ ತಟವಟಗಳು ಹುಟ್ಟಿಕೊಳ್ಳುತ್ತವೆ. ಆ ಕಾರಣಕ್ಕಾಗಿ ದುರಾಸೆಯ ಕೇಡುಗಳನ್ನು ಆರಿಯಬೇಕು. ದುರಾಸೆ ಎಂಬುದು ಎಂದಿಗೂ ಬತ್ತಡ, ಬಾಡದ, ಹಿಂಗದ ಮತ್ತು ಎಷ್ಟೇ ಪಡೆದರೂ ತೀರದ ದಾಹ. ತುಂಬದ ಕೊಳಗ. ಹಾಗಾಗಿ ನಾವು ಇದನ್ನು ಖಂಡಿಸಬೇಕು.

○ಸಿ.ಎಚ್.ರಾಜಶೇಖರ್

ನಿರಂತರ ಅಲೆಮಾರಿಯಾದ ಬುದ್ಧನು ತನ್ನ ಸಂಖ್ಯಾತ ಭಿಕ್ಷುಗಳೊಂದಿಗೆ ಊರಿಂದ ಊರಿಗೆ ತೆಯುತ್ತಿದ್ದ ಸಂದರ್ಭದಲ್ಲಿ ನೈತಿಕ ವ್ಯವಸ್ಥೆಯ ಬಗ್ಗೆ ಾವುದೇ ಗೊಂದಲವಿಲ್ಲದೆ ವಿವರಿಸುತ್ತಿದ್ದ ಅಂತಹ ಂದರ್ಭದಲ್ಲಿ ಒಬ್ಬ ಭಿಕ್ಷು ಸಹೋದರ ಬುದ್ಧನನ್ನು ುದ್ದೇಶಿಸಿ ಹೀಗೆ ಪ್ರಶ್ನಿಸಿದ;

“ಗುರುದೇವಾ, ಬಹುತೇಕರು ನೈತಿಕ ನಿಯಮವು ವ ಸಂಕಲ್ಪ ಎನ್ನುತ್ತಾರೆ, ಅದು ಸರಿಯೇ?”

“ಎಲೈ ಗೆಳೆಯಾ, ಅದು ಹೇಗೆ ಸಾಧ್ಯ? ದೊಂದು ಸಾಮಾಜಿಕ ನಿಯಮ!”

“ಗುರುದೇವಾ, ಅದು ಹೇಗೆ ಹುಟ್ಟಿತು? ಹೇಗೆ ನ್ನಡೆಯುತ್ತಿದೆ?”

“ಎಲೈ ಗೆಳೆಯಾ, ಅದು ಮನುಷ್ಯರಿಂದ ಹುಟ್ಟಿತು. ನುಷ್ಯರಿಗಾಗಿ ಹುಟ್ಟಿತು. ಮನುಷ್ಯನ ಒಳಿತಿಗಾಗಿ ಮನು ರಿಂದ ಮುಂದುವರಿಯುತ್ತಿದೆ!”

“ಗುರುದೇವಾ, ಈ ಭೌತಿಕ ಜಗತ್ತಿನ ಸೃಷ್ಟಿಯ ನ್ನೆಲೆಯಲ್ಲಿ ಒಂದು ವ್ಯವಸ್ಥೆ ಇದೆ ಎನ್ನುತ್ತೀರಾ? ಆ ವಸ್ಥೆ ಯಾವ ನಿಯಮದ ಆಧಾರದ ಮೇಲೆ ನಿಂತಿದೆ?”

“ಎಲೈ ಗೆಳೆಯಾ, ಈ ಭೌತಿಕ ಜಗತ್ತು ಯಾರ ಗಿಗೂ ಒಳಗಾಗಿಲ್ಲ. ಅದಕ್ಕೆ ತನ್ನದೇ ಆದ ವ್ಯವಸ್ಥೆ ದೆ, ನಿಯಮವಿದೆ, ಅದನ್ನೆ ನಾನು ವಸ್ತುಸ್ಥಿತಿ ಎಂದು ಯುವುದು. ಕಾರಣತಾವಾದ ಎಂದು ಕರೆಯುವುದು, ತುನಿಯಮ ಅಥವಾ ಬೀಜ ನಿಯಮ ಎನ್ನುವುದು”.

“ಗುರುದೇವಾ, ವಸ್ತುಸ್ಥಿತಿ ಎಂದರೆ ಏನು?”

“ಎಲೈ ಗೆಳೆಯಾ, ಈ ಭೌತಿಕ ಜಗತ್ತು ಯಾರ ಗಿಗೂ ಒಳಗಾಗಿಲ್ಲ ಎನ್ನುವುದು, ತನ್ನದೇ ಆದ ಯಮಕ್ಕೆ ಬದ್ಧವಾಗಿದೆ ಎಂಬುದು”

“ಗುರುದೇವಾ ಕಾರಣತಾವಾದ ಎಂದರೆ ಏನು?”

“ಎಲೈ ಗೆಳೆಯಾ, ಈ ಭೌತಿಕ ಜಗತ್ತಿನ ಪ್ರತಿ ವಸ್ತು ಥವಾ ಪದಾರ್ಥದ ಹಿನ್ನೆಲೆಯಲ್ಲಿ ತನ್ನದೇ ಅದ ರ್ಯಾ, ಕಾರಣ ಮತ್ತು ಸಂಬಂಧ ಇರುತ್ತದೆ ಂಬುದು. ಬೀಜವೊಂದು ಮರವಾಗಿ ಬೆಳೆಯುತ್ತದೆ. ಆ ರವು ಹಣ್ಣು ಕೊಡುತ್ತದೆ. ಮತ್ತೆ ಆ ಹಣ್ಣು ಉದುರಿ ಜವಾಗುತ್ತದೆ. ಮತ್ತೆ ಮರವಾಗುತ್ತದೆ.”

“ಗುರುದೇವಾ, ಋತುನಿಯಮ ಅಥವಾ ಬೀಜ ಯಮ ಎಂದರೆ ಏನು?”

“ಎಲೈ ಗೆಳೆಯಾ, ಇದನ್ನೆ ನಾನು ಋತು ನಿಯಮ ಥವಾ ಬೀಜ ನಿಯಮ ಎಂದದ್ದು. ಆದ್ದರಿಂದಲೇ ನು ಪ್ರತಿ ವಸ್ತುವು ಸಂಯುಕ್ತ ವಸ್ತುಗಳ ಸಂಯೋಜನೆ ದದ್ದು. ಭೂಮಿ, ನೀರು, ಬೆಂಕಿ ಮತ್ತು ಗಾಳಿಯೇ ಈ ಲ ಸಂಯುಕ್ತ ವಸ್ತುಗಳು. ಇವು ಕೂಡ ಶಾಶ್ವತವಲ್ಲ ತ್ತೇ ತನ್ನದೇ ನಿಯಮಕ್ಕೆ ಒಳಪಟ್ಟು ನಾಶವಾಗುತ್ತವೆ.”

“ಗುರುದೇವಾ, ದೇವರನ್ನು ನಾನು ಕಂಡಿಲ್ಲ. ರೆ ನೈತಿಕತೆಯೇ ದೇವರು ಎನ್ನಲು ಕಾರಣವೇನು?”

“ಎಲೈ ಗೆಳೆಯಾ, ಸಮಾಜದ ಸ್ವಾಸ್ಥ್ಯಕ್ಕೆ ತಿಕತೆಯೇ ಮೂಲ! ಹಾಗಾಗಿ ನೈತಿಕತೆಯೇ ದೇವರು ದದ್ದು! ನೈತಿಕತೆಯಿಂದಲೇ ಮಾನವೀಯತೆ ಜನ್ಮ ತಾಳುತ್ತದೆ ಮಾನವೀಯತೆಗಿಂತ ಮಿಗಿಲಾದ ದೈವವಿಲ್ಲ. ಆದ್ದರಿಂದ ದೇವರಿಗೆ ಬದಲಾಗಿ ಮಾನವೀಯತೆಯನ್ನು ಪ್ರತಿಪಾದಿಸಿದ್ದು ಈ ಕಾರಣಕ್ಕಾಗಿಯೇ, ನೈತಿಕತೆಯ ಮತ್ತೊಂದು ಮುಖವಾದ ಮಾನವೀಯತೆಗೆ ನಾವುಗಳು ಶರಣಾಗುವುದೇ ವಿಹಿತ!”

“ಗುರುದೇವಾ, ನಿನ್ನ ದೃಷ್ಟಿಯಲ್ಲಿ ಕರ್ಮ ಎಂದರೆ ಏನು?”

ಕರ್ತವ್ಯದ ಫಲ ಅಥವಾ ಕರ್ಮ ಕಟ್ಟಳೆ ಯಾವುದೇ ದೃಷ್ಟಿಯಿಂದ ನೋಡಿದರೂ, ಆಲೋಚಿಸಿದರೂ ದಾಕ್ಷಿಣ್ಯರಹಿತವಾದದ್ದು! ಏಕೆಂದರೆ ಕರ್ಮದ ಫಲ ಕರ್ಮಿಯನ್ನು ಅನುಸರಿಸಿ ಬರುತ್ತದೆ. ಹಗಲನ್ನು ಇರುಳು ಅನುಸರಿಸುವಂತೆ ಕುಶಲ ಕರ್ಮದ ಒಳ್ಳೆಯ ಪರಿಣಾಮಗಳನ್ನು ಯಾರು ಹೇಗೆ ಪಡೆಯುವರೊ, ಹಾಗೆಯೇ ಅಕುಶಲ ಕರ್ಮದ ಕೆಟ್ಟ ಪರಿಣಾಮಗಳನ್ನು ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ! ಆದ್ದರಿಂದ ಒಳಿತನ್ನೇ ಮಾಡಿ ಕೆಡುಕನ್ನು ನಿವಾರಿಸಿಕೊಳ್ಳಿ. ಇದರಿಂದ ಸಕಲ ಮಾನವ ಜನಾಂಗಕ್ಕೆ ಒಳಿತಾಗುತ್ತದೆ. ಅದೇ ಶ್ರೇಯಸ್ಕರವಾದದ್ದು!”

“ಎಲೈ ಗೆಳೆಯಾ, ತಾನು ಮಾಡುವ ಕರ್ತವ್ಯವೇ ಕರ್ಮ, ವಿಪಾಕ ಅಥವಾ ಫಲ ಎನ್ನುವುದು ಅದರ ಪರಿಣಾಮ. ಇದರ ಆಧಾರದ ಮೇಲೆಯೇ ಸಮಾಜ ನಿಂತಿರುವುದು. ಈ ಕರ್ಮಗಳಲ್ಲಿ ಎರಡು ವಿಧ, ಅದೆಂದರೆ; ಕುಶಲಕರ್ಮ ಮತ್ತು ಅಕುಶಲಕರ್ಮ.”

“ಗುರುದೇವಾ. ಇವುಗಳ ಭೇದ, ಅರ್ಥ ಮತ್ತು ಪರಿಣಾಮಗಳೇನು?”

“ಎಲೈ ಗೆಳೆಯಾ, ಯಾರು ಮಾಡುವ ಕರ್ತವ್ಯದ ಹಿಂದೆ ಮಾನವ ಜನಾಂಗದ ಹಿತಾಸಕ್ತಿ, ಉಪಕಾರ, ಕರುಣೆ ಮತ್ತು ಮಾನವೀಯತೆ ಅಡಗಿರುತ್ತದೋ ಅದೇ ಕುಶಲಕರ್ಮ ಯಾರು ಮಾಡುವ ಕರ್ತವ್ಯದ ಹಿಂದೆ ಮಾನವ ಜನಾಂಗದ ವಿನಾಶ, ಕ್ರೌರ್ಯ, ಹಿಂಸೆ ಮತ್ತು ಮಾನವೀಯತೆ ಅಡಗಿರುತ್ತದೋ ಅದೇ ಅಕುಶಲಕರ್ಮ! ಕರುಣೆ ಮತ್ತು ಅಮಾನವೀಯತೆ ಕರ್ಮದಿಂದ ನೈತಿಕ ವ್ಯವಸ್ಥೆ ಸಂತೋಷದಾಯಕವಾಗಿರುತ್ತದೆ. ವಿನಾಶ ಮತ್ತು ಹಿಂಸೆಯಿಂದ ಅಸಂತೋಷ ತಲೆದೋರುತ್ತದೆ. ಒಳಿತು ಅಥವಾ ಕೆಡಕು ಯಾವ ರೀತಿಯ ಕರ್ಮ ಮಾಡಿದ ಘಳಿಗೆಗೂ ಮತ್ತು ಅದರ ಫಲವನ್ನು ಅನುಭವಿಸುವ ಘಳಿಗೆಗೂ ಮಧ್ಯಂತರವಿರುತ್ತದೆ. ಇದರಲ್ಲಿ ಮೂರು ವಿಧವಿದೇ, ಅದೆಂದರೆ, ತಕ್ಷಣ ಪರಿಣಾಮದ ಕರ್ಮ, ದೂರದ ಪರಿಣಾಮದ ಕರ್ಮ ಮತ್ತು ಅಖಚಿತ ಪರಿಣಾಮದ ಕರ್ಮ”.

“ಗುರುದೇವಾ, ಕರ್ಮ ಮತ್ತು ಅಕರ್ಮಗಳ ನಡುವಿನ ಮಧ್ಯಂತರದ ಪರಿಣಾಮವೇನು? ಕರ್ಮ ಯಾವುದಾದರೂ ದಾಕ್ಷಿಣ್ಯಕ್ಕೆ ಅಥವಾ ರಿಯಾಯಿತಿಗೆ ಒಳಪಟ್ಟಿದೆಯೆ?”

“ಎಲೈ ಗೆಳೆಯಾ, ಕರ್ತವ್ಯದ ಫಲ ಅಥವಾ ಕರ್ಮ ಕಟ್ಟಳೆ ಯಾವುದೇ ದೃಷ್ಟಿಯಿಂದ ನೋಡಿದರೂ, ಆಲೋಚಿಸಿದರೂ ದಾಕ್ಷಿಣ್ಯರಹಿತವಾದದ್ದು! ಏಕೆಂದರೆ ಕರ್ಮದ ಫಲ ಕರ್ಮಿಯನ್ನು ಅನುಸರಿಸಿ ಬರುತ್ತದೆ. ಹಗಲನ್ನು ಇರುಳು ಅನುಸರಿಸುವಂತೆ ಕುಶಲ ಕರ್ಮದ ಒಳ್ಳೆಯ ಪರಿಣಾಮಗಳನ್ನು ಯಾರು ಹೇಗೆ ಪಡೆಯುವರೊ, ಹಾಗೆಯೇ ಅಕುಶಲ ಕರ್ಮದ ಕೆಟ್ಟ ಪರಿಣಾಮಗಳನ್ನು ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ! ಆದ್ದರಿಂದ ಒಳಿತನ್ನೇ ಮಾಡಿ ಕೆಡುಕನ್ನು ನಿವಾರಿಸಿಕೊಳ್ಳಿ. ಇದರಿಂದ ಸಕಲ ಮಾನವ ಜನಾಂಗಕ್ಕೆ ಒಳಿತಾಗುತ್ತದೆ. ಅದೇ ಶ್ರೇಯಸ್ಕರವಾದದ್ದು!”

“ಎಲೈ ಗೆಳೆಯಾ ಕೇಳು, ವ್ಯಕ್ತಿಗಳು ಬರುತ್ತಾರೆ, ಹೋಗುತ್ತಾರೆ. ಅದರೆ ಲೋಕದ ನೈತಿಕ ವ್ಯವಸ್ಥೆ ಇದ್ದೇ ಇರುತ್ತದೆ. ಹಾಗೆಯೇ ಅದನ್ನು ಬೆಂಬಲಿಸುವ ಕರ್ಮದ ನಿಯಮ ಕೂಡ. ಈ ಕಾರಣಕ್ಕಾಗಿಯೇ ನನ್ನ ಧರ್ಮದಲ್ಲಿ ನೈತಿಕತೆಗೆ ದೇವರ ಸ್ಥಾನವನ್ನು ಕೊಟ್ಟಿದ್ದೇನೆ” ಎನ್ನುತ್ತಾನೆ. ಆಗ ಆ ಭಿಕ್ಷುವು ತನ್ನ ಗುರು ಬುದ್ಧನನ್ನು ಉದ್ದೇಶಿಸಿ;

“ಹೌದು ಗುರುದೇವಾ....! ನಿನ್ನ ಧರ್ಮದ ಸಾರವೇ ನೈತಿಕತೆ! ನಿನ್ನ ಬೋಧನೆಯ ಒಪ್ಪಂದವೇ ಶೀಲಸಂಪನ್ನತೆ...!! ಹೌದು ಗುರುದೇವಾ, ನೀನೆ ಹೇಳುವಂತೆ ನೈತಿಕತೆಯೇ ದೇವರು....!!!” ಎಂದ. □

ದೇವರಿರುವನೋ ಇಲ್ಲವೋ? ನೈತಿಕತೆಯೇ ದೇವರು!

'SAMVADA' Kannada Monthly, MARCH 2006 RNI-KAR KAN/2002/9246 CPMG/KA/BGW-706/2006-
Office of Posting: RAJAJINAGAR HO, Date of Posting: 27-28 of Every Month

"ಪ್ರಜಾಪ್ರಭುತ್ವ ಕೇವಲ ಸರ್ಕಾರದ ಒಂದು ವ್ಯವಸ್ಥೆಯಲ್ಲ. ಅದು ಮೂಲತಃ ಸಹ ಜೀವನ ಶೈಲಿ ಮತ್ತು ಪರಸ್ಪರ ಸಂಪರ್ಕದಿಂದೊಡಗೂಡಿದ ಅನುಭವ ಮೇಲಾಗಿ ನಮ್ಮ ಸೋದರ ಬಂಧುಗಳಿಗೆ ನಾವು ತೋರಿಸುವ ಗೌರವ ಮತ್ತು ಪೂಜ್ಯ ಭಾವನೆಯ ಪ್ರತೀಕ.

–ಭಾರತರತ್ನ ಡಾ: ಬಿ.ಆರ್.ಅಂಬೇಡ್ಕರ್

ಸಾರ್ವಭೌಮ ಭಾರತ ಗಣರಾಜ್ಯದಲ್ಲಿ

ಸುವರ್ಣ ಕರ್ನಾಟಕ

೫೭ನೇ ಗಣರಾಜ್ಯೋತ್ಸವದ ಶುಭಾಶಯಗಳು

ಇಂದು ಭಾರತ ಜಗತ್ತಿನಲ್ಲೇ ಬೃಹತ್ ಸಾರ್ವಭೌಮ. ಪ್ರಜಾತಂತ್ರ. ಜಾತ್ಯಾತೀತ ಸ್ವತಂತ್ರ ಗಣರಾಜ್ಯವೆಂಬ ಹೆಮ್ಮೆ ನಮ್ಮೆಲ್ಲರದು. ವಿಶ್ವದಲ್ಲೇ ಅತ್ಯುತ್ತಮ ಸಂವಿಧಾನವನ್ನು ರಚಿಸಿಕೊಟ್ಟ ರಾಷ್ಟ್ರ ನಿರ್ಮಾತೃಗಳ ಪರಿಶ್ರಮವೇ ಈ ಹೆಗ್ಗಳಿಕೆಗೆ ಕಾರಣ.

ದೇಶದಲ್ಲಿ ಪ್ರಜಾಪ್ರಭುತ್ವ ಪ್ರಬಲವಾಗಿರುವಂತೆ ಎಚ್ಚರಿಕೆ ವಹಿಸಿದ ಅವರು ಅಭಿವೃದ್ಧಿ ಪಥದಲ್ಲಿ ಜಾತಿ, ಮತ, ವರ್ಣ ಲಿಂಗಗಳ ಹೆಸರಿನಲ್ಲಿ ತಾರತಮ್ಯಕ್ಕೆ ಎಡೆ ಮಾಡಿಕೊಡಲಿಲ್ಲ.

ರಾಷ್ಟ್ರದ ಸಮಗ್ರತೆ ಮತ್ತು ಸರ್ವತೋಮುಖ ಅಭಿವೃದ್ಧಿ ಕುರಿತು ಅವರ ದೂರದೃಷ್ಟಿ ಧೋರಣೆಗಳಿಂದಾಗಿ ನಾವೆಲ್ಲರೂ ಭಾವೈಕ್ಯತೆಯಿಂದ ಪ್ರಗತಿಯ ಉತ್ತುಂಗದತ್ತ ಸಾಗುತ್ತಿರುವೆವು. ಈ ಮಹಾನ್ ತ್ಯಾಗಿಗಳು ನಮಗೆ ಆದರ್ಶಪ್ರಾಯರು ಹಾಗೂ ಪ್ರಾತಃಸ್ಮರಣೀಯರು.

ಸಂವಿಧಾನ ನಿರ್ಮಾತೃಗಳ ಆಶಯಗಳಿಗೆ ಸ್ಪಂದಿಸುತ್ತಾ ಕರ್ನಾಟಕ ಇಂದು ಮಹಿಳಾ ಸ್ವಾವಲಂಬನೆ, ಸಾಕ್ಷರತೆ, ಅಧಿಕಾರಿ ವಿಕೇಂದ್ರಿಕರಣ ಮುಂತಾದ ಮಾದರಿ ಯೋಜನೆಗಳ ಹಾಗೂ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನಗಳಂತಹ ಆಧುನಿಕ ಕ್ಷೇತ್ರಗಳ ಮುಖಾಂತರ ದೇಶದ ಅಭಿವೃದ್ಧಿಗೆ ಅಮೂಲ್ಯ ಕೊಡುಗೆ ನೀಡುತ್ತದೆ.

ಹಕ್ಕುಗಳನ್ನು ಚಲಾಯಿಸಿ. ಕರ್ತವ್ಯಗಳನ್ನು ಪರಿಪಾಲಿಸಿ.

೫೦
ಕರ್ನಾಟಕ
KARNATAKA

ಕರ್ನಾಟಕ ವಾರ್ತೆ
Karnataka Information